ಶಾಂತವೇರಿ ಗೋಪಾಲಗೌಡರ ಸಾಂಪ್ರದಾಯಿಕ

ಮತ್ತು

ರಾಜಕೀಯ ಜೀವನ.

ಕನ್ನಡ ವಿಶ್ವ ವಿದ್ಯಾಲಯಕ್ಕೆ ಎಂ.ಫಿಲ್ ಪದವಿಗಾಗಿ ಅರ್ಪಿಸಿದ ನಿಬಂಧ

ಸಂಶೋಧಕರು

ಶ್ರೀಮತಿ ಅನಿತ ಕೆ.ಕೆ.

ಮಾರ್ಗದರ್ಶಕರು

ಡಾ. ಹೆಬ್ಬಾಲೆ ಕೆ. ನಾಗೇಶ್.

ಮುಖ್ಯಸ್ಥರು

ಜಾನಪದ ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವ ವಿದ್ಯಾಲಯ ಹಂಪಿ

ವಿದ್ಯಾರಣ್ಯ-583276

2008

ಶಾಂತವೇರಿ ಗೋಪಾಲಗೌಡರ ಸಾಂಪ್ರದಾಯಿಕ
ಮತ್ತು
ರಾಜಕೀಯ ಜೀವನ.

ಕನ್ನಡ ವಿಶ್ವ ವಿದ್ಯಾಲಯಕ್ಕೆ ಎಂ.ಫಿಲ್ ಪದವಿಗಾಗಿ ಅರ್ಪಿಸಿದ ನಿಬಂಧ

ಸಂಶೋಧಕರು

ಶ್ರೀಮತಿ ಅನಿತ ಕೆ.ಕೆ.

ಮಾರ್ಗದರ್ಶಕರು

ಡಾ. ಹೆಬ್ಬಾಲೆ ಕೆ. ನಾಗೇಶ್,

ಮುಖ್ಯಸ್ಥರು

ಜಾನಪದ ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವ ವಿದ್ಯಾಲಯ, ಹಂಪಿ.

ವಿದ್ಯಾರಣ್ಯ–583276

2008

ಘೋಷಣಾ ಪತ್ರ

'ಶಾಂತವೇರಿ ಗೋಪಾಲಗೌಡರ ಸಾಂಪ್ರದಾಯಿಕ ಮತ್ತು ರಾಜಕೀಯ ಜೀವನ' ನಿಬಂಧವು ನನ್ನ ಸ್ವತಂತ್ರ ಹಾಗೂ ಮೂಲ ಸಂಶೋಧನಾ ಕಾರ್ಯ. ಈ ಸಂಶೋಧನೆಯನ್ನೂ ಡಾ. ಹೆಬ್ಬಾಲೆ. ಕೆ. ನಾಗೇಶ್, ಮುಖ್ಯಸ್ಥರು, ಜಾನಪದ ಅಧ್ಯಯನ ವಿಭಾಗ, ಕನ್ನಡ ವಿಶ್ವ ವಿದ್ಯಾಲಯ, ಹಂಪಿ, ವಿದ್ಯಾರಣ್ಯ. ಇವರ ಮಾರ್ಗದರ್ಶನದಲ್ಲಿ 2008ನೇ ಸಾಲಿನಲ್ಲಿ ಕೈಗೊಂಡಿದ್ದೇನೆ. ಈ ಸಂಶೋಧನೆಯ ವಸ್ತು ವಿಷಯ ಹಾಗೂ ಫಲಿತಾಂಶಗಳನ್ನು ಬೇರೆಲ್ಲೂ, ಬೇರೆ ಯಾವುದೇ ಪದವಿ ಅಥವಾ ಡಿಪ್ಲೋಮೊ ಪಡೆಯಲು ಸಲ್ಲಿಸಿರುವುದಿಲ್ಲ ಎಂದು ಪ್ರಮಾಣಿಸುತ್ತೇನೆ.

Anitha. K.K

ದಿನಾಂಕ:29–09–2008.

(ಶ್ರೀಮತಿ ಅನಿತಾ ಕೆ.ಕೆ)

ಆರಗ, ತೀರ್ಥಹಳ್ಳಿ, ಶಿವಮೊಗ್ಗ.

ಡಾ. ಹೆಬ್ಬಾಲೆ ಕೆ. ನಾಗೇಶ್,

ಮುಖ್ಯಸ್ಥರು,

ಜಾನಪದ ಅಧ್ಯಯನ ವಿಭಾಗ,

ಕನ್ನಡ ವಿಶ್ವವಿದ್ಯಾಲಯ, ಹಂಪಿ,

ವಿದ್ಯಾರಣ್ಯ–583276.

ಪ್ರಮಾಣ ಪತ್ರ

ಶ್ರೀಮತಿ ಅನಿತಾ ಕೆ.ಕೆ. ರವರು ಜಾನಪದ ಅಧ್ಯಯನ ವಿಭಾಗದಲ್ಲಿ ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ 'ಶಾಂತವೇರಿ ಗೋಪಾಲಗೌಡರ ಸಾಮಾಜಿಕ ಮತ್ತು ರಾಜಕೀಯ ಜೀವನ' ನಿಬಂಧ ಅವರ ಸ್ವತಂತ್ರ ಹಾಗೂ ಮೂಲ ಸಂಶೋಧನಾ ಕಾರ್ಯ. ಈ ಸಂಶೋಧನೆಯನ್ನು 2008ನೇ ಸಾಲಿನಲ್ಲಿ ನನ್ನ ಮೇಲ್ವಿಚಾರಣೆ ಮತ್ತು ಮಾರ್ಗದರ್ಶನದಲ್ಲಿ ಕೈಗೊಂಡಿರುತ್ತಾರೆ. ಸಂಶೋಧನೆಯು ಎಂ.ಫಿಲ್ ಪದವಿ ಪ್ರಧಾನ ಮಾಡಲು ಅರ್ಹವಾಗಿದೆ. ಈ ನಿಬಂಧದ ಸಂಶೋಧನೆಯ ವಿಷಯ ಹಾಗೂ ಫಲಿತಾಂಶಗಳನ್ನು ಬೇರೆಲ್ಲೂ, ಯಾವುದೇ ಪದವಿ ಅಥವಾ ಡಿಪ್ಲಮೋ ಪಡೆಯಲು ಸಲ್ಲಿಸಿರುವುದಿಲ್ಲ.

ದಿನಾಂಕ:30–09–2008.

ವಿದ್ಯಾರಣ್ಯ–ಹಂಪಿ.

(ಡಾ. ಹೆಬ್ಬಾಲೆ ಕೆ. ನಾಗೇಶ್)

ಮಾರ್ಗದರ್ಶಕರು

ಪರಿವಿಡಿ

ಅಧ್ಯಾಯ — 1

ಅಧ್ಯಯನದ ಹಿನ್ನೆಲೆ ಮತ್ತು ಉದ್ದೇಶ

ಈ ಶತಮಾನದ ಕನ್ನಡ ಸಂಸ್ಕೃತಿಗೆ ಮಲೆನಾಡಿನ ತುಂಗಾ ತೀರದ ತೀರ್ಥಹಳ್ಳಿ ಪ್ರದೇಶ ನೀಡಿದ ಎರಡು ಮಹಾಪ್ರತಿಭೆಗಳು ಕುವೆಂಪು ಮತ್ತು ಶಾಂತವೇರಿ ಗೋಪಾಲಗೌಡ. ಪರಿಸರ ಪ್ರೇಮ, ಮಾನವ ಪ್ರೀತಿ ಮತ್ತು ಸಕಲರಿಗೂ ಸಮಬಾಳು ಇರುವಂಥ ವೈಚಾರಿಕ ನೆಲೆಗಟ್ಟಿನ ಮೇಲೆ ಹೊಸ ಸಾಂಸ್ಕೃತಿಕ ಸಮಾಜವನ್ನು ಕಟ್ಟುವ ಹಂಬಲವೇ ಕುವೆಂಪು ಕೃತಿಗಳ ಮೂಲ ಆಶಯ. ಈ ಆಶಯಗಳನ್ನೇ ಸಮಾಜವಾದಿ ರಾಜಕಾರಣದ ಮೂಲಕ ಈ ನೆಲದಲ್ಲಿ ಅನುಷ್ಠಾನಗೊಳಿಸಲು ಕ್ರಿಯಾ ಶೀಲರಾದವರು ಶಾಂತವೇರಿ ಗೋಪಾಲಗೌಡರು. ಕವಿಯೊಳಗೆ ಸದಾ ಕುದಿಯುತ್ತಿರುವ ಕ್ರಾಂತಿಕಾರಿಯೊಬ್ಬನಿರುವಂತೆ, ಕ್ರಾಂತಿಕಾರಿಯೊಳಗೆ ಸಮಾಜದ ಹಿತವನ್ನೇ ಧ್ಯಾನಿಸುವ ಕವಿಯೂ ಇರುತ್ತಾನೆ. ಕುವೆಂಪು ಮತ್ತು ಗೋಪಾಲ ಗೌಡರು ಪ್ರಕೃತಿ ಮತ್ತು ಮಾನವ ಜೀವಿಗಳ ಬಗ್ಗೆ ತುಂಬು ವ್ಯಾಮೋಹವನ್ನು ಹೊಂದಿದ್ದ ಒಂದೇ ಆತ್ಮದ ಎರಡು ದೇಹಗಳು. ಎಲ್ಲಾ ಬಗೆಯ ಮೌಢ್ಯ ಮತ್ತು ಸಂಕೋಲೆಗಳ ಕಡು ವಿರೋಧಿಯಾಗಿದ್ದ ಕುವೆಂಪು ತಮ್ಮ ಸೃಜನಶೀಲ ಕೃತಿಗಳಲ್ಲಿ ತನ್ನನ್ನು ಸದಾಕಾಲ ಧ್ಯಾನಿಸುತ್ತಾ ಬಂದರೋ, ಅದನ್ನೇ ಶಾಂತವೇರಿಯವರು ರಾಜಕಾರಣದ ಮೂಲಕ ಜಾರಿಗೆ ತರಲು ಹಂಬಲಿಸಿದರು. ಹೀಗೆ ಕುವೆಂಪುರವರ ಸೃಜನ ಶೀಲ ಮನಸ್ಸಿನಲ್ಲಿ ಗೋಪಾಲಗೌಡರು, ಗೋಪಾಲಗೌಡರ ಹೋರಾಟದ ರಾಜಕಾರಣದಲ್ಲಿ ಕುವೆಂಪುರವರು ಪರಸ್ಪರ ಒಬ್ಬರೊಳಗೊಬ್ಬರು ಬೆರೆತು ಈ ನಾಡನ್ನು ಸಮೃದ್ಧವಾಗಿ ಕಟ್ಟುವ ದಿಕ್ಕಿನಲ್ಲಿ ತಮ್ಮ ಪಯಣದ ಉದ್ದಕ್ಕೂ ಮುಡಿಪು ಕಟ್ಟಿಕೊಂಡು ದುಡಿದರು. (ಶಾಂತವೇರಿ ಗೋಪಾಲಗೌಡ ನೆನೆಪಿನ ಸಂಪುಟ). ಎಂಬುವುದಾಗಿ ತಮ್ಮ ಪ್ರಸ್ತಾವನೆಯಲ್ಲಿ ಕಾಳೇಗೌಡ ನಾಗವಾರ ಹಾಗೂ ಜಿ.ವಿ. ಆನಂದ ಮೂರ್ತಿ ಯವರು ಕುವೆಂಪು ಮತ್ತು ಗೋಪಾಲಗೌಡರ ವೈಚಾರಿಕ ತತ್ವತೆ ಮತ್ತು ಸಾಮಾಜಿಕ ಕಾಳಜಿಯ ಬಗ್ಗೆ ಬರೆದಿದ್ದಾರೆ.

ಜಾನಪದ ಜನಪದವಾಗಿ ಯಾವಾಗಲೂ ಸಾಮಾಜಿಕ ಹಿತವನ್ನು ರಕ್ಷಿಸುತ್ತಾ ಬಂದಿದೆ. ಒಂದು ಸಾಮಾಜಿಕ ವರ್ಗ ಪರಂಪರಾನುಗತವಾಗಿ ಅನುಸರಿಸುತ್ತಾ ಬಂದಿರುವ ಕ್ರಿಯಾ ವಿನ್ಯಾಸವನ್ನು (ಪ್ಯಾಟ್ರನ್ ಆಫ್ ಆ್ಯಕ್ಷನ್) ಸಂಪ್ರದಾಯ ಎಂದು ಕರೆಯಬಹುದು. ಒಂದು ಸಾಮಾಜಿಕ ವರ್ಗದಲ್ಲಿ ಒಬ್ಬೊಬ್ಬ ವ್ಯಕ್ತಿಯ ಅಭ್ಯಾಸವನ್ನು ಸಂಪ್ರದಾಯ ಎಂದು ಕರೆಯುವುದಿಲ್ಲ. ಅಂದರೆ ಸಂಪ್ರಾದಯ ಎಂಬುವುದು ಸಾಮೂಹಿಕವಾದುದು. .ಜನರು ಮಾಡುವುದು ಏನು ಎಂಬುದರ ವಿವರಗಳನ್ನು ತಿಳಿಸುವುದು ಆಚರಣೆ (ಜನಪದ ನಡೆನುಡಿ. ‘‘ಜನಪದ ಪುರಾಣಗಳು ಪುಟ ಸಂಖ್ಯೆ–21)

.ಜನಪದವನ್ನು (ಫೋಲ್ಕ್‌ಲ್ಯೂರ್) ಸರಿಯಾಗಿ ಅರ್ಥೈಸಬೇಕಾದರೆ ಕೇವಲ ಜಾನಪದದ ವಿದ್ವತ್ತು ಸಾಕಾಗುವುದಿಲ್ಲ. ವಿಜ್ಞಾನದ ಇತರ ಶಿಸ್ತುಗಳು (ಡಿಸಿಪ್ಲೈನ್ಸ್) ನೆರವು ಅಗತ್ಯವಾಗುತ್ತದೆ. ಮನೋವಿಜ್ಞಾನ, ಮಾನವ ವಿಜ್ಞಾನ, ಸಮಾಜ ವಿಜ್ಞನ, ಇತಿಹಾಸ ಮೊದಲಾದ ಶಿಸ್ತುಗಳ ನೆರವಿನಿಂದ ಜನಪದ ಸಂಪ್ರದಾಯಗಳನ್ನು ವಿಶ್ಲೇಷಣೆ ಮಾಡಿದಾಗ ಅನೇಕ ಕುತೂಹಲಕರವಾದ ಸಾಮಾಜಿಕ, ಸಾಂಸ್ಕೃತಿಕ ಅಂಶಗಳು ತಿಳಿದುಬರುತ್ತದೆ. (ಜನಪದ ನಡೆನುಡಿ ಪು.ಸಂ 20)

ಜನಪದದ ಆಶಯವನ್ನು ವಿವಿದ ಆಯಾಮಗಳಲ್ಲಿ ನೋಡಿದಾಗ ಅದರ ವಿಸ್ತಾರ ಮತ್ತು ವ್ಯಾಪ್ತಿಯ ಅರಿವಾಗಬಹುದು. ಒಂದು ಪರಂಪರೆಯಾಗಿ,ಒಂದು ಸಂಸ್ಕೃತಿಯಾಗಿ,ಒಂದು ಆಚರಣೆಯಾಗಿ ಎಲ್ಲಾ ವಿಷಯಗಳ ಆಕರವಾಗಿ ನೋಡುವ ಮನೋದೃಷ್ಠಿಕೋನವನ್ನು ಬೆಳೆಸಿ ಕೊಳ್ಳಬೇಕಾಗಿದೆ.

ಜಾನಪದ ಸಂರಕ್ಷಣೆಗೆ ಹೆಚ್ಚಿನ ಮಹತ್ವವನ್ನು ನೀಡಲಾಗಿದೆ. ಯುರೋಪು ಹಾಗೂ ಜರ್ಮನಿಯಲ್ಲಿ ಪ್ರೆಂಚ್ ಆಡಳಿತ ಮತ್ತು ಸಾಂಸ್ಕೃತಿಕ ಯಜಮಾನಿಕೆಯ ವಿರುದ್ಧ ಜನರನ್ನು ಒಗ್ಗೂಡಿಸಲು, ಫಿನ್ಲೆಂಡಿನ ಜನರು ಸ್ವಾತಂತ್ರ್ಯಗಳಿಸಲು, ಇಂಗ್ಲೀಷರ ಪರಂಪರೆಯ ಹೆಗ್ಗಳಿಕೆಯ ಪ್ರದರ್ಶನಕ್ಕೆ ರಷ್ಯಾ ಹಾಗೂ ಜರ್ಮನಿಯಲ್ಲಿ ಸ್ಟಾಲಿನ್ ಹಾಗೂ ಹಿಟ್ಲರ್ ಕಾಲದಲ್ಲಿ ರೆಡ್ ಇಂಡಿಯನ್ ಮತ್ತು ನೀಗ್ರೋಗಳ ಅಧ್ಯಯನದಲ್ಲಿ ಮುಂತಾದ ಕಡೆಗಳಲ್ಲಿ ಜಾನಪದ ಒಂದು ಶಕ್ತಿಯಾಗಿ ಹೋರಹೊಮ್ಮಿರುವುದನ್ನು ಗುರುತಿಸಬಹುದಾಗಿದೆ. 20ನೇ ಶತಮಾನದ ಮಧ್ಯಭಾಗದಿಂದ ಅನೇಕ ರಾಷ್ಟಗಳು ವಸಾಹತುಶಾಹಿ ಶಕ್ತಿಗಳಿಂದ ಬಿಡುಗಡೆಹೊಂದಿ ತಮ್ಮ ರಾಜಕೀಯ ಸ್ವಾತಂತ್ರವನ್ನು ಪಡೆಯಲು ಜನಪದ ಸಂಸ್ಕೃತಿ ಹೆಚ್ಚಿನ ಪ್ರಭಾವ ಬೀರಿದೆ.

ಭಾರತದಲ್ಲಿ ಜನಪದ ಸಂಗ್ರಹಕಾರ್ಯ ಮೊದಲ ಹಂತದಲ್ಲಿ ನಡೆದಿದ್ದು ಕ್ರೈಸ್ತ ಮಿಷನರಿಗಳು ಮತ್ತು ಬ್ರಿಟೀಷ್ ಅಧಿಕಾರಿಗಳಿಂದ, ಕ್ರಿಶ್ಚಿಯನ್ ಧರ್ಮಕ್ಕೆ ಭಾರತೀಯರನ್ನು ಮತಾಂತರಿಸುವಲ್ಲಿ ಜನಪದ ಚಳುವಳಿಗಳು ಉಪಯೋಗವಾಗಬಹುದು ಎಂಬ ನಿರೀಕ್ಷೆಯಲ್ಲಿ ಹಾಗೂ ಆಡಳಿತ ನಡೆಸುವ ಸಲುವಾಗಿ ಬ್ರಿಟೀಷ್ ಅಧಿಕಾರಿಗಳು ಇದರ ಅಧ್ಯಯನಕ್ಕೆ ಉತ್ತೇಜನ ನೀಡಿದರು. ಆದರೆ ರಾಷ್ಟ್ರೀಯವಾದ ವಿದ್ವಾಂಸರ ಉದ್ದೇಶವೇ ಬೇರೆಯಾಗಿತ್ತು. ವಿಶೇಷವಾಗಿ ಜನಪದ ಸಾಹಿತ್ಯವನ್ನು ಸಂಗ್ರಹಿಸಿ ಅಧ್ಯಯನ ಮಾಡುವುದರ ಮೂಲಕ ದೇಶಾಭಿಮಾನವನ್ನು ಮಾಡುವ ಆಶಯ ಇವರದಾಗಿತ್ತು.

ರಾಜ ಮಹಾರಾಜರ ಕಾಲದಲ್ಲಿ ಜನಪದಕ್ಕೆ ಮಹತ್ವ ದೊರೆತ್ತಿದ್ದ ಅಪರೂಪದ ನಿದರ್ಶನವೊಂದು ಚೀನಾದ ಇತಿಹಾಸದಲ್ಲಿ ಕಾಣಬಹುದಾಗಿದೆ. 'Hsia' ವಂಶದ 'Yui' ಎಂಬ ಚಕ್ರವರ್ತಿ ತನ್ನ ರಾಜ್ಯಭಾರ ಕ್ರಮ ಸರಿಯಾಗಿದೆಯೋ ಇಲ್ಲವೋ ಎಂಬುದನ್ನು ತಿಳಿಯುವ ಸಲುವಾಗಿ ತನ್ನ ಅಧಿಕಾರಿಗಳ ಮೂಲಕ ಆ ರಾಜ್ಯದ

ಪ್ರಜೆಗಳ ಹಾಡುಗಳು, ಕಥೆಗಳು ಮತ್ತು ಗಾದೆಗಳನ್ನು ಸಂಗ್ರಹಮಾಡಿ ಅದರ ವಿಶ್ಲೇಷಣೆಯ ಮೂಲಕ ವಾಸ್ತವ ಸ್ಥಿತಿ ತಿಳಿದುಕೊಂಡು ಜನರಿಗೆ ಅನುಕೂಲವಾಗುವಂತೆ ಆಡಳಿತದಲ್ಲಿ ಪರಿಷ್ಕರ ಮಾಡಿಕೊಳ್ಳುತ್ತಿದ್ದ.

ಜಾನಪದವೇ ಸ್ಫೂರ್ತಿ ನೀಡಿ ಸ್ವಾತಂತ್ರ್ಯ ಪಡೆಯಲು ಸಾಧ್ಯವಾದ ದೇಶವೆಂದರೆ ಫಿನ್‌ಲೆಂಡ್, 18ನೇ ಶತಮಾನದ ಪ್ರೆಂಚ್ ಕ್ರಾಂತಿಗೆ ಇಂಗ್ಲೆಂಡ್, ಪ್ರಾನ್ಸ್, ಸ್ಪೈನ್ ಮೊದಲಾದ ದೇಶಗಳು, ವಸಾಹತು ಶಾಹಿ ದೇಶಗಳನ್ನು ಆಳಲು ಜಾನಪದ ಒಂದು ರಾಜಕಾರಣವಾಗಿ ಸಹಾಯಾ ಮಾಡಿತು. ಜಾನಪದ ಕೇವಲ ಗ್ರಾಮೀಣ, ಅವಿದ್ಯಾವಂತ, ಅನಕ್ಷರಸ್ಥರಿಗೆ ಮಾತ್ರ ಸಂಬಂಧ ಪಟ್ಟಿದ್ದಲ್ಲ. ನಗರಗಳಲ್ಲಿರುವ ವಿದ್ಯಾವಂತ ಮೇಲುವರ್ಗದ ಜನರಿಗೂ ಸಂಬಂಧ ಪಟ್ಟಿದ್ದು, ಅದು ಎಂದೋ ಸೃಷ್ಠಿಯಾಗಿ, ಈಗ ಕೇವಲ ವ್ಯಕ್ತಿಯಿಂದ ವ್ಯಕ್ತಿಗೆ, ತಲೆಮಾರಿನಿಂದ ತಲೆಮಾರಿಗೆ ವರ್ಗಾವಣೆಗೊಳ್ಳುತ್ತಿಲ್ಲ. ಅದು ಈಗಲೂ ಕೂಡ ಸೃಷ್ಟಿಯಾಗುತ್ತಿದೆ. ಅದು ನಿತ್ಯ ಪರಿವರ್ತನ ಶೀಲವಾದುದು. ಜನಪದ ಎಂಬುದು ಯಾವುದೇ ಒಂದು ಗುಂಪು ಆಗಬಹುದು. ಆದರೆ ಆ ಗುಂಪಿನ ಜನರನ್ನು ಒಂದು ಗೂಡಿಸುವ ಯಾವುದಾದರೂ ಒಂದು ಸಾಮಾನ್ಯವಾದ ಅಂಶ ಇರಬೇಕು. ರಾಜಕೀಯವೂ ಸಹ ಒಂದು ವೃತ್ತಿ ವರ್ಗವಾಗುತ್ತದೆ. ಈ ವರ್ಗದ ಜನರನ್ನು ಒಂದು ಗೂಡಿಸುವ ಸಾಮಾನ್ಯ ಅಂಶಗಳಿವೆ. ರಾಜಕೀಯ ಮಾಡುವುದು, ಅಧಿಕಾರ ಪಡೆಯುವುದು, ಅಧಿಕಾರಕ್ಕೆ ಬಂದನಂತರ ಅದನ್ನು ಉಳಿಸಿಕೊಳ್ಳಲು ಹೋರಾಡುವುದು. ಅಧಿಕಾರ ಪಡೆಯುವ ಸಲುವಾಗಿ ತಾವು ಅಧಿಕಾರದಲ್ಲಿ ಇಲ್ಲದಿದ್ದಾಗ ಅಧಿಕಾರದಲ್ಲಿರುವವರನ್ನು ಕೆಳಗೆಳೆಯಲು ಸರ್ವಪ್ರಯತ್ನಗಳನ್ನು ಮಾಡುವುದು ಇವರ ಮುಖ್ಯ ಉದ್ದೇಶ. ತಾವು ಜನಗಳ ಸೇವೆಯನ್ನು ಮಾಡುತ್ತೇವೆ. ಎಂದು ಆದರ್ಶವನ್ನು ಹೇಳಿದರೂ ವಾಸ್ತವವಾಗಿ ಇವರು ಮಾಡುವುದು ಮೇಲೆ ಹೇಳಿರುವ ಕೆಲಸಗಳನ್ನೆ. ಇವೇ ಪ್ರದಾನ; ಜನಸೇವೆ ಮೊದಲಾದವು ಅನುಷಂಗಿಕ, ಒಂದು ಗುಂಪಾಗಿ ಇವರು ನಿರಂತರವಾಗಿ ಸೃಷ್ಟಿಸುವ ಜಾನಪದವನ್ನು ರಾಜಕೀಯ ಜಾನಪದ ಎಂದು ಕರೆಯಬಹುದು, ಇದರ ಅಧ್ಯಯನ ಕರ್ನಾಟಕದಲ್ಲಿ ಈ ವರೆಗೆ ನಡೆದಿಲ್ಲ. ಇದು ಕುತೂಹಲಕರವಾದ ಅಧ್ಯಯನ ಆಗಬಹುದು. ಇವರಿಗೆ ವಿಶಿಷ್ಟವಾದ ಜೋಕುಗಳಿರಬಹುದು, ಗಾದೆಗಳಿರಬಹುದು, ವೈಯಕ್ತಿಕ ಕಥನಗಳಿರಬಹುದು. ಇವರ ಗುಂಪಿನಲ್ಲಿಯೇ ಇವು ಪ್ರಚಲಿತವಾಗಿರುತ್ತವೆ. ಇವನ್ನು ಸಂಗ್ರಹಿಸಿ ಅಧ್ಯಯನ ಮಾಡುವುದು ಅಗತ್ಯ.........(ಜನಪದ: ನಡೆನುಡಿ/190).

ಇಂಗ್ಲೀಷರು ತಮ್ಮ ಪರಂಪರೆಯ ಹೆಗ್ಗಳಿಕೆಯ ಪ್ರದರ್ಶನಕ್ಕೆ ಜಾನಪದವನ್ನು, ಆದಿವಾಸಿಗಳನ್ನು ನಿಯಂತ್ರಿಸುವ ಸಲುವಾಗಿ ವಸಾಹತುಶಾಹಿ ಪ್ರಜ್ಞೆಯಿಂದ ಮಾನವ ವಿಜ್ಞಾನವನ್ನು, ಹೊಸದಾಗಿ ರೂಪುಗೊಂಡ ನಗರಜೀವನವನ್ನು ಅರ್ಥಮಾಡಿಕೊಳ್ಳುವ ಸಲುವಾಗಿ ಸಮಾಜ ವಿಜ್ಞಾನವನ್ನು ರೂಪಿಸಿದರು. ರಷ್ಯಾ ಹಾಗೂ ಜರ್ಮನಿಯಲ್ಲಿ ಜಾನಪದ, ರಾಜಕೀಯ ಉದ್ದೇಶಗಳಿಗೆ ಬಳಕೆಯಾಗಿದೆ. ಜಾನಪದದಲ್ಲಿ ಶೋಷಿತರು ಶೋಷಣೆ ಮಾಡಿದವರ ವಿರುದ್ಧ ಹೋರಾಡಿ ಗೆಲುವನ್ನು ಸಾಧಿಸುವ ಆಶಯಗಳಿವೆ. ಜಾನಪದ ಹಿಂದೆ ಸೃಷ್ಠಿಯಾದದ್ದು ಮಾತ್ರವಲ್ಲ, ಈಗಲೂ ಸೃಷಿಯಾಗುತ್ತಿದೆ,

ಮುಂದೆಯೂ ಸೃಷ್ಟಿಯಾಗುತ್ತದೆ. ಎಂಬುದಾಗಿ ಆಲನ್ ಡಂಡೆಸ್ ಪ್ರತಿಪಾದಿಸಿದರು. ವಿಶ್ವರಾಷ್ಟ್ರ ಸಂಸ್ಥೆ ಯುನೆಸ್ಕೋ 1999 ರಲ್ಲಿ ಅಂಗೀಕರಿಸಿದ ಜಾನಪದ ಸಂರಕ್ಷಣೆಯ ಶಿಫಾರಸ್ಸುಗಳಲ್ಲಿ ಅಭಿವೃದ್ಧಿಶೀಲ ರಾಷ್ಟ್ರಗಳ ಜನಪದ ಅಧ್ಯಯನಕ್ಕೆ ಹಾಗೂ ಕೆಳಗಿಳಿಸುವ ಪ್ರಯತ್ನ ಮುಂತಾದ ಸಾಮಾನ್ಯ ಅಂಶಗಳು ಈ ವೃತ್ತಿವರ್ಗದಲ್ಲಿ ನಾವು ಕಾಣಬಹುದಾಗಿದೆ.

ಹಾಗೆ ನೋಡಿದಾಗ ರಾಜಕೀಯ ಜಾನಪದ ಇತ್ತೀಚಿನದು ಮಾತಲ್ಲ. ತುಂಬಾ ಪುರಾತನ ಇತಿಹಾಸ ಇದಕ್ಕಿದೆ. ಇದರಲ್ಲಿ ರಾಜಕಾರಣಿಗಳಿಗೆ ಸಂಬಂಧಿಸಿದ ಸ್ವಾರಸ್ಯ ಸನ್ನಿವೇಶಗಳಿರಬಹುದು, ಗಾದೆಗಳಿರಬಹುದು, ವೈಯುಕ್ತಿಕ ರಸವಿಷಯಗಳಿರಬಹುದು.

16 ಮತ್ತು 17ನೇ ಶತಮಾನದಲ್ಲಿ ಯುರೋಪಿನ ಗ್ರಾಮೀಣ ಪ್ರದೇಶಗಳಲ್ಲಿ ಶ್ರೀಮಂತ ಜಮೀನುದಾರರು ಉಳುಮೆ ಮಾಡುತ್ತಿದ್ದ ರೈತರ ಜಮೀನನ್ನು ಅವರಿಂದ ಕಿತ್ತುಕೊಂಡ ಆನಂತರ ಅವರನ್ನು ಒರಾಟಗಾರರೂ ಮುಗ್ದರು ಮತ್ತು ಪ್ರಾಮಾಣಿಕರು ಎಂಬುದಾಗಿ ಚಿತ್ರಿಸಿದ್ದು ಗ್ರಾಮೀಣ ಜನರ ರೋಮ್ಯಾಂಟಿಕ್ ದೃಷ್ಟಿಕೋನದ ಜನಪದಕ್ಕೆ ಉದಾಹರಣೆಯಾಗಬಹುದಾಗಿದೆ. ಯುರೋಪಿನಲ್ಲಿ ಜನಪದದ ಪರಿಕಲ್ಪನೆ ಉದಯಿಸಿತ್ತಾದರೂ ಮುಖ್ಯವಾಗಿ ಜರ್ಮನಿಯ ಫ್ರೆಂಚ್ ಆಡಳಿತ ಹಾಗೂ ಸಾಂಸ್ಕೃತಿಕ ಯಜಮಾನಿಕೆಯ ವಿರುದ್ಧ ಜರ್ಮನ್ ಅನನ್ಯತೆಯನ್ನು ಸಾಧಿಸಿ ಹರಿದು ಹಂಚಿಹೋಗಿ ಕೀಳರಿಮೆಯಿಂದ ಬಳಲಿದ್ದ ಅವರನ್ನು ಒಗ್ಗೂಡಿಸುವ ಸಲುವಾಗಿ ಹರ್ಡರ್ ಜನಪದ ರಾಜ್ಯಕ್ಕೆ ಮಹತ್ವವನ್ನು ನೀಡಿದರು. ಮಣ್ಣಿಗೆ ಹತ್ತಿರವಾದ ಜನರಾದ ಗ್ರಾಮೀಣ ಪ್ರದೇಶದ ರೈತರು ಸೃಷ್ಠಿ ಮಾಡುವ ಕಾವ್ಯದಲ್ಲಿ ಜರ್ಮನ್ ಅನನ್ಯತೆಯನ್ನು ಗುರುತಿಸಿ ಅದರಿಂದ ಸ್ಫೂರ್ತಿಪಡೆಯುವಂತೆ ಜನರನ್ನು ಪ್ರೇರೇಪಿಸಿದರು.

ರಾಜಕೀಯ ಭಾಷಣಗಳನ್ನು ಒಂದು ಕಲೆಯೆಂದು ಬಹಳ ಹಿಂದಿನ ವರ್ಷಗಳಿಂದಲೂ ಪರಿಗಣಿಸಲಾಗಿದೆ. ಇದರ ಅಗತ್ಯವನ್ನು ಪ್ರಾಚೀನ ಗ್ರೀಕ್ ಮತ್ತು ರೋಮನ್ ರಾಜಕಾರಣಿಗಳು ತುಂಭಾ ಚೆನ್ನಾಗಿಯೇ ಅರ್ಥಮಾಡಿಕೊಂಡಿದ್ದರು. ಆದರೆ ರಾಜಕೀಯ ಭಾಷಣಗಳನ್ನು ಹಾಗೂ ರಾಜಕೀಯ ವ್ಯಕ್ತಿಗಳ ಜೀವನ ಕ್ರಮವನ್ನು ಜಾನಪದ ಪ್ರಕಾರವೇ ಎಂಬುದನ್ನು ಹೇಗೆ ಪರಿಗಣಿಸಬಹುದು ಎಂಬ ಬಗ್ಗೆ ತೀ.ನಂ. ಶಂಕರನಾರಾಯಣರವರು ಈ ಕೆಳಗಿನಂತೆ ಅಭಿಪ್ರಾಯ ಪಡುತ್ತಾರೆ.

‘‘ರಾಜಕೀಯ ಭಾಷಣಗಳನ್ನು ಜಾನಪದದ ಒಂದು ಪ್ರಕಾರ ಎಂದು ಪರಿಗಣಿಸಲು ಸಾದ್ಯವೆ? ಜಾನಪದ ಎಲ್ಲಿ, ರಾಜಕೀಯ ಭಾಷಣಗಳು ಎಲ್ಲಿ? ಒಂದಕ್ಕೊಂದು ಎಲ್ಲಿಯ ಸಂಬಂಧ? ಈ ಅನುಮಾನ ಮೂಡುತ್ತದೆ. ಜಾನಪದ ಎಂಬುದು ಗ್ರಾಮೀಣ ಅನಕ್ಷರಸ್ಥರಿಗೆ, ಅವಿದ್ಯಾವಂತರಿಗೆ ಮಾತ್ರ ಸಂಬಂಧಪಟ್ಟಿದ್ದು. ಜಾನಪದ ಯಾವುದೋ ಕಾಲದಲ್ಲಿ ರೂಪುಗೊಂಡಿದ್ದು, ಈಗ ತಲೆಮಾರಿನಿಂದ ತಲೆಮಾರಿಗೆ ಕೇವಲ ವರ್ಗಾವಣೆಯಾಗುತ್ತಿದೆ. ಅದು ಈಗ ಸೃಷ್ಠಿಯಾಗುತ್ತಿಲ್ಲ. ಈ ಕಲ್ಪನೆಗಳ ಆಧಾರದಿಂದ ರಾಜಕೀಯ ಭಾಷಣಗಳನ್ನು ಜಾನಪದದ ಒಂದು ಪ್ರಕಾರ ಎಂದು ಹೇಳುವುದು ಕಷ್ಟ. ಆದರೆ ಜಾನಪದದ ಬಗೆಗೆ ಇರುವ ಈ ಸಾಂಪ್ರದಾಯಿಕ ಕಲ್ಪನೆಯನ್ನು ಬದಲಾಯಿಸಿಕೊಳ್ಳಬೇಕಾದ

ಅಗತ್ಯವಿದೆ ಜಾನಪದದ ಬಗ್ಗೆ ಆಧುನಿಕ ಕಲ್ಪನೆ ಇದಕ್ಕಿಂತ ಭಿನ್ನವಾಗಿದೆ. ಪ್ರೊ. ಆಲನ್ ಡಂಡಸ್ ಅವರ ಪ್ರಕಾರ ಜಾನಪದ ಕೇವಲ ಗ್ರಾಮೀಣ ಅವಿದ್ಯಾವಂತ ಅನಕ್ಷರಸ್ಥರಿಗೆ ಮಾತ್ರ ಸಂಬಂಧಪಟ್ಟದ್ದಲ್ಲ. ನಗರಗಳಲ್ಲಿರುವ ವಿದ್ಯಾವಂತ ಮೇಲುವರ್ಗದವರಿಗೂ ಸಂಬಂಧಪಟ್ಟದ್ದಾಗಿದೆ. ರಾಜಕೀಯ ಮಾಡುವುದು, ಅಧಿಕಾರ ಪಡೆಯುವುದು, ಅಧಿಕಾರಕ್ಕೆ ಬಂದ ನಂತರ ಅದನ್ನು ಉಳಿಸಿಕೊಳ್ಳಲು ಹೆಣಗಾಡುವುದು, ಅಧಿಕಾರ ಪಡೆಯುವ ಸಲುವಾಗಿ ಅಧಿಕಾರದಲ್ಲಿರುವವರನ್ನು ಕೆಳಗೆಳೆಯಲು ಸರ್ವ ಪ್ರಯತ್ನಗಳನ್ನು ಮಾಡುವುದು ಇವರ ಮುಖ್ಯ ಉದ್ದೇಶ. ತಾವು ಜನಗಳ ಸೇವೆಯನ್ನು ಮಾಡುತ್ತೇವೆ ಎಂದು ಆದರ್ಶವನ್ನು ಹೇಳಿದರೂ ವಾಸ್ತವವಾಗಿ ಇವರು ಮೇಲೆ ಹೇಳಿರುವ ಕೆಲಸಗಳನ್ನೇ ಮಾಡುವುದು. ಇವೇ ಪ್ರದಾನ. ಜನಸೇವೆ ಮೊದಲಾದವು ಆನುಷಂಗಿಕ. ಒಂದು ಗುಂಪಾಗಿ ಇವರು ನಿರಂತರವಾಗಿ ಸೃಷ್ಟಿಸುವ ಜಾನಪದವನ್ನು ರಾಜಕೀಯ ಜಾನಪದ ಎಂದು ಕರೆಯಬಹುದು. ಇದರ ಅಧ್ಯಯನ ಕರ್ನಾಟಕದಲ್ಲಿ ಈ ವರೆಗೆ ನಡೆದಿಲ್ಲ. ಇದು ಕುತೂಹಲಕರವಾದ ಅಧ್ಯಯನ. ಇವರಿಗೆ ಕಥೆಗಳಿರಬಹುದು. ಇವರ ಗುಂಪಿನಲ್ಲಿಯೇ ಇವು ಪ್ರಚಲಿತವಾಗಿರುತ್ತವೆ. ಇವನ್ನು ಸಂಗ್ರಹಿಸಿ ಅಧ್ಯಯನ ಮಾಡುವುದು ಅಗತ್ಯ...." (ಜಾನಪದ ನಡೆನುಡಿ ಪುಟ 190).

ಜಾನಪದವನ್ನು ಕಾಲಮಿತಿಗೆ ಒಳಪಡಿಸುವ ಮತ್ತು ಯಾವುದೇ ಒಂದು ಸಮುದಾಯಕ್ಕೆ ಮೀಸಲಿರಿಸುವ ಪರಿಪಾಠಸಲ್ಲದು. ಪ್ರೋ. ಆಲನ್ ಡಂಡಸ್ ರವರ ಜನಪದದ ವ್ಯಾಪ್ತಿ ಅತ್ಯಂತ ಹಿರಿದಾದು, ಕಾಲ, ಸನ್ನಿವೇಶ, ಪರಿಮಿತಿಗಳ ಆಚೆನದು, ಜನಪದ ಕೇವಲ ಗ್ರಾಮೀಣ ಸಮಾಜ ಮಾತ್ರವಲ್ಲ. ಆದಿವಾಸಿಗಳು, ನಗರ ವಾಸಿಗಳು 'ಜನಪದ'ವಾಗಬಲ್ಲರು. ಸಮಾನವಾದ ಯಾವುದೇ ಒಂದು ಅಂಶವುಳ್ಳ ಗುಂಪು ಸಹ ಜನಪದವಾಗುತ್ತದೆ. ಭಾಷಿಕ ಗುಂಪುಗಳು, ಸಾಮಾಜಿಕ ಗುಂಪುಗಳು, ವಯಸ್ಸಿನ ಗುಂಪುಗಳು, ಆಚರಣೆಯ ಗುಂಪುಗಳು ಮುಂತಾದವುಗಳೆಲ್ಲ ಜನಪದವಾಗುತ್ತದೆ. ಪ್ರತಿಯೊಂದು ಕುಟುಂಬವು ಒಂದೊಂದು ಜನಪದ. ಜಾನಪದ ಕೇವಲ ಪ್ರಾಚೀನ ಕಾಲದ್ದು ಮಾತ್ರವಲ್ಲ. ಅದು ಈಗಲೂ ಮುಂದು ವರೆಯುತ್ತದೆ ಎನ್ನುವುದು ಪ್ರೋ. ತಿ.ನಂ. ಶಂಕರನಾರಾಯಣರವರು ಅಭಿಪ್ರಾಯ.

ಜಾನಪದವನ್ನು ಇಡಿಯಾಗಿ ಅರ್ಥೈಸಬೇಕಾದರೆ ಕೇವಲ ಜಾನಪದ ವಿದ್ವತ್ತು ಸಾಕಾಗುವುದಿಲ್ಲ. ವಿಜ್ಞಾನದ ಇತರ ಶಿಸ್ತುಗಳ ನೆರವೂ ಅಗತ್ಯವಾಗುತ್ತದೆ. ಮನೋವಿಜ್ಞಾನ, ಮಾನವವಿಜ್ಞಾನ, ಸಮಾಜ ವಿಜ್ಞಾನ, ಇತಿಹಾಸ ಮೊದಲಾದ ಶಿಸ್ತುಗಳ ನೆರವಿನಿಂದ ಜನಪದ ಸಂಪ್ರಾದಾಯಗಳನ್ನು ವಿಶ್ಲೇಷಣೆ ಮಾಡಿದಾಗ ಅನೇಕ ಕುತೂಹಲಕಾರಿಯಾದ ಸಾಮಾಜಿಕ, ಸಾಂಸ್ಕೃತಿಕ ಅಂಶಗಳು ತಿಳಿದುಬರುತ್ತದೆ.

.ಜನಪದ ಈಗಲೂ ಕೂಡ ಸೃಷ್ಟಿಯಾಗುತ್ತದೆ. ಅದು ನಿತ್ಯ ಪರಿವರ್ತನ ಶೀಲವಾದುದು. ಜನಪದ ಎಂಬುವುದು ಯಾವುದೇ ಒಂದು ಗುಂಪು ಆಗಬಹುದು. ಆದರೆ ಆ ಗುಂಪಿನ ಜನರನ್ನು ಒಂದು ಗೂಡಿಸುವ ಯಾವುದಾದರೂ ಸಾಮಾನ್ಯ ಅಂಶ ಇರಬೇಕಾಗುತ್ತದೆ. ಅದು ಭಾಷೆ, ಧರ್ಮ, ಜನಾಂಗ, ಜಾತಿ, ವಯಸ್ಸು, ವೃತ್ತಿ, ಇವುಗಳಲ್ಲಿ ಯಾವುದಾದರೂ ಒಂದು ಆಗಿರಬಹುದು. ಈ ದೃಷ್ಟಿಯಿಂದ ನೋಡಿದಾಗ ರಾಜಕಾರಣಿಗಳನ್ನು ಒಂದು ಜನಪದ ಎಂದು ಪರಿಗಣಿಸಬೇಕಾಗುತ್ತದೆ. ಇದು ವೃತ್ತಿ ವರ್ಗ. ರಾಜಕೀಯ ಮಾಡುವುದು, ಅಧಿಕಾರ ಪಡೆಯುವುದು, ಅಧಿಕಾರಕ್ಕೆ ಬಂದ ನಂತರ ಅದನ್ನು ಉಳಿಸಿಕೊಳ್ಳುವ ಪ್ರಯತ್ನ ಅಧಿಕಾರದಲ್ಲಿ ಇಲ್ಲದಾಗ ಅಧಿಕಾರದಲ್ಲಿರುವವರನ್ನು ಕೆಳಗಿಳಿಸುವ ಪ್ರಯತ್ನ ಹೀಗೆ ರಾಜಕೀಯ ಜಾನಪದದ ಅಂಶಗಳು ಪರಸ್ಪರ ಸಂಬಂಧ ಹೊಂದುತ್ತವೆ. ಈ ಹಿನ್ನೆಲೆಯಲ್ಲಿ ಶಾಂತವೇರಿ ಗೋಪಾಲಗೌಡರವರ ಜೀವನವನ್ನು ಜಾನಪದ ಮತ್ತು ರಾಜಕಾರಣೀಯ ನೆಲೆಯಲ್ಲಿ ಅರ್ಥೈಸುವ ಕಾರ್ಯವನ್ನು ಈ ಅಧ್ಯಯನದಲ್ಲಿ ಮಾಡಲು ಉದ್ದೇಶಿಸಲಾಗಿತ್ತು.

ಪ್ರಸ್ತುತ ಅಧ್ಯಯನವು ಈ ಕೆಳಕಂಡ ಉದ್ದೇಶಗಳನ್ನು ಸಾಧಿಸುವ ನಿರೀಕ್ಷೆಯಲ್ಲಿ ಅಧ್ಯಯನ ಕ್ರಮಾಗತಗೊಳಿಸಲಾಗಿತ್ತು.

ಅಧ್ಯಯನದ ಉದ್ದೇಶಗಳು :

1. ರಾಜಕೀಯ ಜೀವನ ಮತ್ತು ಜಾನಪದದ ನಡುವಿನ ಸಂಬಂಧದ ಪರಿಕಲ್ಪನೆ ಅರ್ಥೈಸುವುದು.
2. ಗೋಪಾಲಗೌಡರ ರಾಜಕೀಯ ನಡೆಯಲ್ಲಿ ಸಾಂಪ್ರದಾಯಿಕ ಅಂಶಗಳ ಪ್ರಭಾವದ ಅಧ್ಯಯನ.
3. ಜಾನಪದದ ಸೆಲೆ ಗೋಪಾಲಗೌಡರನ್ನು ರಾಜಕೀಯ ಶಕ್ತಿಯಾಗಿ ಪರಿವರ್ತಿಸಿದ ನೆಲೆಯನ್ನು ಅರ್ಥೈಸುವುದು.

ಊಹಿಸಿದ ಉದ್ದೇಶಗಳ ನಿರೀಕ್ಷಿತ ಸಾಧನೆಗೆ ಅಧ್ಯಯನವನ್ನು ಈ ಕೆಳಗಿನ ಅಧ್ಯಯನಗಳಲ್ಲಿ ವಿಂಗಡಿಸಿಕೊಳ್ಳಲಾಗಿದೆ. ಇದರಲ್ಲಿ ಒಟ್ಟು 5 ಅಧ್ಯಯನಗಳನ್ನು ಮಾಡಿಕೊಳ್ಳಲಾಗಿದೆ.

1. ಅಧ್ಯಯನದ ಹಿನ್ನೆಲೆ ಮತ್ತು ಉದ್ದೇಶ.
2. ಸಾಂಪ್ರದಾಯಿಕ ಜೀವನ.
3. ರಾಜಕೀಯ ಜೀವನದ ಹೆಜ್ಜೆಗಳು.
4. ಜನರ ಕಣ್ಣಲ್ಲಿ ಗೋಪಾಲ ಗೌಡ.
5. ಜನತೆಯ/ಜನಪದ ಶಕ್ತಿಯಾಗಿ ಗೋಪಾಲಗೌಡ.

ಅಧ್ಯಾಯ – 2

ಸಾಂಪ್ರದಾಯಿಕ ಜೀವನ

ಒಂದು ಸಾಮಾಜಿಕ ವರ್ಗ ಪರಂಪರಾನುಗತವಾಗಿ ಅನುಸರಿಸುತ್ತಾ ಬಂದಿರುವ ಕ್ರಿಯಾ ವಿನ್ಯಾಸವನ್ನು ಸಂಪ್ರದಾಯ ಎಂದು ಕರೆಯಬಹುದು. ಒಂದು ಸಾಮಾಜಿಕ ವರ್ಗದಲ್ಲಿ ಒಬ್ಬೊಬ್ಬ ವ್ಯಕ್ತಿಯ ಅಭ್ಯಾಸವನ್ನು ಸಂಪ್ರದಾಯವೆಂದು ಕರೆಯುವುದಿಲ್ಲ. ಅಂದರೆ ಸಂಪ್ರದಾಯವೆಂಬುದು ಸಾಮೂಹಿಕವಾದುದು. .ಜನರು ಮಾಡುವುದು ಏನು ಎಂಬುದನ್ನು ತಿಳಿಸುವುದು ಸಂಪ್ರದಾಯ. ಅದನ್ನು ಹೇಗೆ ಮಾಡುತ್ತಾರೆ ಎಂಬುದನ್ನು ತಿಳಿಸುವುದು ಆಚರಣೆ. (ಜನಪದ ನಡೆನುಡಿ ಪುಟ ಸಂಖ್ಯೆ 5) ಎಂಬುವುದಾಗಿ ತಿ.ನಂ. ಶಂಕರನಾರಾಯಣ ಅಭಿಪ್ರಾಯ ಪಡುತ್ತಾರೆ. ಒಂದು ಗುಂಪಿನ ಒಂದು ಸಮುದಾಯದ ಜೀವನ ಕ್ರಮ, ಪರಿಸರ ಹಾಗೂ ಅವರ ಆಚರಣೆಗಳು ಮತ್ತು ಆರ್ಥಿಕ ಪರಿಸ್ಥಿತಿ ಮುಂತಾದ ಅಂಶಗಳು ಪರಿಸರವನ್ನು ಬಿಂಬಿಸುತ್ತವೆ. ಒಬ್ಬ ವ್ಯಕ್ತಿ ಅಥವಾ ಸಮಾಜದ, ಜೀವನದ ಅಧ್ಯಯನ ಆ ಕಾಲದ ಸಮಾಜ ಘಟ್ಟದ ಹಲವಾರು ಕುತೂಹಲಭರಿತ ಮಾಹಿತಿಗಳು ಹಾಗೂ ಜೀವನ, ಸಾಮಾಜಿಕ ಪರಿಸರಗಳ ಪರಿಚಯವನ್ನು ಮಾಡುತ್ತವೆ. ಇದರೊಂದಿಗೆ ಅಂಧಕಾಲದ ಸಾಕಷ್ಟು ಮಾಹಿತಿಗಳ ಅರಿವು ಪ್ರಸ್ತುತ ಜೀವನಕ್ಕೆ ಲಭ್ಯವಾಗಬಹುದಾಗಿದೆ. ಈ ದೃಷ್ಟಿಯಲ್ಲಿ ಸಾಂಪ್ರದಾಯಿಕ ಜೀವನದ ಅಧ್ಯಯನ ಹಲವಾರು ಆಶಯಗಳಿಗೆ ಕಾರಣವಾಗುತ್ತದೆ. ಗೋಪಾಲಗೌಡರ ಬದುಕಿನ ಕಾಲದ ಘಟನೆಗಳ ಅಧ್ಯಯನವು ಮೇಲಿನ ಅಂಶಗಳಿಗೆ ಪುಷ್ಠಿನೀಡುವ ಸಾಧ್ಯತೆಯನ್ನು ಈ ಅಧ್ಯಯನದಲ್ಲಿ ಕಂಡುಕೊಳ್ಳಲಾಗಿದೆ.

ಅಪ್ಪಟ ಮಲೆನಾಡು ಎಂದು ಖ್ಯಾತಿ ಪಡೆದ ಸಹೃದಯ, ಸಾಂಸ್ಕೃತಿಕ ದಟ್ಟ ಪರಂಪರೆಯನ್ನು ಹೊಂದಿರುವ ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕು, ಸಾಹಿತ್ಯ, ಕಲೆ, ಸಂಸ್ಕೃತಿ ಹಾಗೂ ರಾಜಕೀಯವಾಗಿ ಸಾಕಷ್ಟು ರಾಜ್ಯ ಹಾಗೂ ರಾಷ್ಟ್ರಮಟ್ಟದ ನಾಯಕರನ್ನು ನೀಡಿರುವ ಒಂದು ತಾಲ್ಲೂಕು. ಭೌಗೋಳಿಕವಾಗಿ ವಿಸ್ತಾರ ಹೊಂದಿದ ತಾಲ್ಲೂಕು ಒಂದು ಪಟ್ಟಣ ಪಂಚಾಯತ್ ಹಾಗೂ 38 ಗ್ರಾಮ ಪಂಚಾಯತ್‌ಗಳನ್ನು, 247 ಗ್ರಾಮಗಳನ್ನು ಹಾಗೂ 1627 ಜನವಸತಿಗಳನ್ನು ಹೊಂದಿದ್ದು ಸುಮಾರು 1.50 ಲಕ್ಷ ಜನಸಂಖ್ಯೆಯನ್ನು ಹೊಂದಿದೆ.

ತೀರ್ಥಹಳ್ಳಿಯಿಂದ 9 ಕಿ.ಮೀ ದೂರ ಸಾಗರ ಮಾರ್ಗವಾಗಿ ಚಲಿಸಿದರೆ ಸಿಗುವುದೇ ಗೋಪಾಲಗೌಡ ಚೌಕ. ಇದೇ ಆರಗದ ಹೆಬ್ಬಾಗಿಲು. ಈ ಮಾರ್ಗದಲ್ಲಿಯೇ ಮುನ್ನಡೆದರೆ ಸಿಗುವುದೇ ಸಾಮಾನ್ಯ ಪೇಟೆಯಂತಿರುವ ಊರು, ಇದೇ ಆರಗ. ಎಲ್ಲಾ ವ್ಯವಸ್ಥೆಗಳನ್ನು ಹೊಂದಿರುವ ಪುಟ್ಟ ಊರು. ಇದು ಐತಿಹಾಸಿಕವಾಗಿಯೂ, ರಾಜಕೀಯವಾಗಿಯೂ ಹೆಸರು ಮಾಡಿದ ಸ್ಥಳ. ಹಿಂದಿನ ದಿನಗಳಲ್ಲಿ ಮಲೆಯ ಸಾಮ್ರಾಜ್ಯದ ಪ್ರಮುಖ ಪಟ್ಟಣ ಇದು (ಅನುಬಂಧ 5). ಈಗ ಈ ಊರನ್ನು ಸೇರುವ ಪೂರ್ವದ ಪ್ರವೇಶ ದ್ವಾರವೇ ಹಿಂದಿನ ಕೋಟೆಯ ಪೂರ್ವದ

ಮಹಾದ್ವಾರ. ಅದರ ಸ್ವಲ್ಪದೂರದಲ್ಲಿಯೇ ಸಿಗುವುದು ಒಂದು ಚಿಕ್ಕ ಕೆರೆ. ಅಪ್ಪಯ್ಯನಕೆರೆ ಎಂದು ಇದನ್ನು ಕರೆಯುತ್ತಾರೆ. ಕೋಟೆಯ ಬಾಗಿಲ ಹತ್ತಿರ ವಾಸವಾಗಿದ್ದ ಅಪ್ಪಯ್ಯನೆಂಬ ಶ್ರೇಷ್ಠಿಯು ಈ ಕೆರೆಯನ್ನು ಕಟ್ಟಿಸಿದನೆಂದು ಪ್ರತೀತಿ. ಇದರ ಮೇಲ್ಭಾಗದಲ್ಲಿ ಒಂದು ಚಿಲುಮೆಯಿದ್ದು ಇದರ ನೀರನ್ನು ಸತಿಸಹಗಮನ ಪದ್ಧತಿಯ ಮಾಸ್ತಿಕಲ್ಲುಗಳ ಪೂಜೆಗೆ ಬಳಸಲಾಗುತ್ತಿತ್ತು. 'ಮಾಸ್ತಿ' ಗೌಡರ ಮನೆಯ ದೇವರು. ಈ ಮನೆಯವರು ಮಾಸ್ತಿ ದೇವರ ಆರಾದಕರು. ಆರಗ ರಸ್ತೆಯ ಬಲಭಾಗದ ಬಯಲಿನಲ್ಲಿ ಅನೇಕ ವೀರಗಲ್ಲುಗಳು, ಮಾಸ್ತಿಕಲ್ಲುಗಳು, ಶಾಸನಗಳು ಮಣ್ಣಿನಲ್ಲಿ ಹೂತು ಹೋಗಿವೆ. ಸ್ವಲ್ಪ ದೂರ ಇದೇ ಮಾರ್ಗವಾಗಿ ಸಾಗಿದರೆ ಎಡಭಾಗದಲ್ಲಿ ಸಿಗುವುದೇ ಊರ ರಕ್ಷಕ ದೇವ ಆಂಜನೇಯನ ಗುಡಿ. ಕೆಳದಿ ಸದಾಶಿವ ನಾಯಕರು, ರಾಮರಾಜ ನಾಯಕರು, ಆರಗದ ಬೆನಕಪ್ಪ ಶೆಟ್ಟಿ, ದೇವಪ್ಪ ಶೆಟ್ಟಿ, ಬೊಂಮಣ್ಣ ಶೆಟ್ಟಿ ಮುಂತಾದ ಪ್ರಜೆಗಳಿಗೆ ಕೊಟ್ಟ ಧರ್ಮಶಾಸನ (ಎಫಿಗ್ರಫಿಯ ಆಫ್ ಕರ್ನಾಟಕ–8, ತೀರ್ಥಹಳ್ಳಿ ಶಾಸನ 15) ಇಲ್ಲಿಂದ ಸ್ವಲ್ಪ ದೂರ ಇದೇ ಮಾರ್ಗವಾಗಿ ಮುನ್ನೆಡೆದರೆ ಬಲಭಾಗದಲ್ಲಿ ಮತ್ತೊಂದು ವೀರಾಂಜನೇಯಗುಡಿ, ಮುಂದೆ ಸಾಗಿದರೆ ಪೇಟೆ. ರಸ್ತೆಯ ಎಡಭಾಗದಲ್ಲಿ ಶ್ರೀ ವೀರಭದ್ರಸ್ವಾಮಿಯ ದೇವಸ್ಥಾನ. "ಸಲ್ವ" ಶ್ರೀ ಶ್ರೀ ಮನ್ಮಹಾರಾಜಾಧಿರಾಜ ರಾಜಪರಮೇಶ್ವರ ಶ್ರೀ ವೀರ ಬುಕ್ಕರಾಯರ ಕುಮಾರ ಶ್ರೀ ವೀರ ಹರಿಹರರಾಯರ ರಾಜ್ಯದ್ಭುದ ಯದಲು ಶಕ ವರುಶ 1298ರಲ್ಲಿ........ ಪದುಮಲ ದೇವಿಯ ಮಗನ ಶ್ರೀ ವೀರಬುಕ್ಕರಾಯನ ಕೊಮಾರ ವೇದಗಿರಿ ವಿರೂಪರಾಯನ ರಾಣಿವಾಸ ಮಂಜಾದೇವಿ ಆರಗದ ಶ್ರೀ ವೀರಭದ್ರ ದೇವರಿಗೆ......... ಆಚಂದ್ರಾರ್ಕ ಸ್ಥಾಯಿಯಾಗಿ ಮಾಡಿಸಿದಳು" (ಎಫಿಗ್ರಫಿ ಆಫ್ ಕರ್ನಾಟಕ 8, ತೀರ್ಥಹಳ್ಳಿ ಶಾಸನ 16). ಹಾಗೆಯೇ ಮುಂದೆ ಸಾಗಿದರೆ ಸಿಗುವುದೇ ಇಟ್ಟುಗುಂಡಿ ಎಂಬ ಊರು. ಇಲ್ಲಿ ವಿಠಲನ ಗುಡಿಯೊಂದಿದೆ. ಇದನ್ನು ವಿಜಯನಗರದ ರಾಜ ಪ್ರತಿನಿಧಿ ವಿಠ್ಠಣ್ಣ ಕಟ್ಟಿಸಿರಬಹುದೆಂದು ಪ್ರತೀತಿ ಇದೆ (ಎಫಿಗ್ರಫಿ ಆಫ್ ಕರ್ನಾಟಕ 8, ತೀರ್ಥಹಳ್ಳಿ ಶಾಸನ 11). ಇಲ್ಲಿ ಪುರಂದರ ದಾಸರು ಹುಟ್ಟಿರ ಬಹುದೆಂದು ಪ್ರತೀತಿ. ಪಕ್ಕದಲ್ಲಿಯೇ ಮುತ್ತಿನ ಕೇರಿ. ವಿಜಯನಗರದ ಅರಸರ ಕಾಲದಲ್ಲಿ ಮುತ್ತು ರತ್ನಗಳನ್ನು ಇಲ್ಲಿ ಮಾರುತ್ತಿದ್ದ ಕೇರಿಯಾಗಿತ್ತೆಂದು ಮಾತು. ವರ್ತಕರ ಕೇರಿಯಾಗಿದ್ದಿರ ಬಹುದಾದ ವರ್ತೇಕೇರಿ, ಉಪ್ಪಿನ ಕೇರಿ, ಅಗಸರ ಕೇರಿ ಮುಂತಾದವುಗಳನ್ನು ಇಲ್ಲಿ ನೋಡಬಹುದಾಗಿದೆ.

ರಸ್ತೆಯ ಪಶ್ಚಿಮದಲ್ಲಿ ಕಾಳಮ್ಮನ ಗುಡಿ ಎಂಬ ಊರೊಂದಿದೆ. 'ಕಾಳಿಕಾ ದೇವತೆ'ಯ ಗುಡಿ ಇಲ್ಲಿದೆ (ಎಫಿಗ್ರಫಿ ಆಫ್ ಕರ್ನಾಟಕ 8, ತೀರ್ಥಹಳ್ಳಿ ಶಾಸನ 32). ಇದು ಮಾಂಡಲೀಕನ ಕುಲದೇವತೆಯಾಗಿದ್ದು ಇದು ಕೋಟೆಯ ಅಂತಃಪುರದ ಸಮೀಪದಲ್ಲಿದೆ. ಈ ಗುಡಿಯ ಹಿಂಬಾಗದಲ್ಲಿ ದೇವಸ್ಥಾನಕ್ಕೆ ದತ್ತಿಯಾಗಿ ಬಿಟ್ಟ ಗದ್ದೆಕೋಗು, ಅಡಿಕೆ ತೋಟಗಳು, ಬಲಮುರಿ ಎಂಬ ಗೋಪಿನಾಥ ಹಳ್ಳ ಇಲ್ಲಿದೆ.

ಪೇಟೆಯ ಬೀದಿಯಲ್ಲಿಯೇ ಮುಂದುವರೆದರೆ ರಸ್ತೆ ಕವಲೊಡೆಯುತ್ತದೆ. ಎಡಭಾಗದಲ್ಲಿ ನಗರಕ್ಕೆ ಹೋಗುವ ರಸ್ತೆ. ಬಲಭಾಗಕ್ಕೆ ಸಾಗಿದರೆ ಕಲಾನಾಥ ದೇವಸ್ಥಾನ. ಇದು ಕಲಿನಾಶೇಶ್ವರ-ಕಲಿನಾಥೇಶ್ವರ-ಕಲಾನಾಥೇಶ್ವರ ಆಗಿ ಕಲಾನಾಥ ಆಗಿರಬಹುದು). "ಸ್ವಸ್ತಿ ಶ್ರೀ ಶಕವರುಶ 1325, ಶ್ರೀಮಂನ್ ಮಹಾರಾಜಾಧಿರಾಜ ರಾಜಪರಮೇಶ್ವರ ಶ್ರೀ ವೀರಪ್ರತಾಪ ಹರಿಹರ ಮಹಾರಾಯರು ವಿಜಯನಗರ ಆಳುತ್ತಿರುವಾಗ ಆರಗದ ರಾಜ್ಯವನ್ನು ರಾಮಪ್ಪಯ್ಯರ ವೀರಪ್ಪ ಒಡೆಯರು ಪಾಲಿಸುತ್ತಿಹಲ್ಲಿ......... ಆರಗದ ಮೂಲ ಸ್ಥಾನ ಶ್ರೀ ಕಲಿನಾಥ ದೇವರ ಅಮೃತ ಪಡಿಗೆ..... ಬಂದ್ಯಾ ಗ್ರಾಮವನ್ನು ದಾನ ಪೂರ್ವಕವಾಗಿ ಧಾರೆಯೆರೆದುಕೊಟ್ಟರು" (ಎಪಿಗ್ರಫಿ ಆಫ್ ಕರ್ನಾಟಕ 8, ತೀರ್ಥಹಳ್ಳಿ ಶಾಸನ 9).

ಕಲಾನಾಥೇಶ್ವರ ದೇವಸ್ಥಾನದಲ್ಲಿ ಹಿಂಭಾಗದಲ್ಲಿಯೇ "ಅಮೃತೇಶ್ವರ ಅಥವಾ ಅಖಂಡೇಶ್ವರ ದೇವಸ್ಥಾನ" ಇದೆ. "1344ನೇ 14 ಸೋಮವಾರ ಶಿವರಾತ್ರಿಯ ಪುಣ್ಯಕಾಲದಲ್ಲಿ ಶ್ರೀ ಮನ್ಮಹಾರಾಜಾಧಿರಾಜ ರಾಜಪರಮೇಶ್ವರ ಶ್ರೀ ವೀರಪ್ರತಾಪ ಹರಿಹರ ಮಹಾರಾಯರ ಕುಮಾರ ದೇವರಾಯ ಮಹಾರಾಯರು ವಿಜಯನಗರದಲ್ಲಿ..... ಆರಗದಲ್ಲಿ ಸಿರಿಗಿರಿನಾಥ ಒಡೆಯರು ಆಳುತ್ತಿದ್ದ ಕಾಲದಲ್ಲಿ......... ಅಖಂಡಬ್ರಹ್ಮೇಶ್ವರ ದೇವರಿಗೆ ಅಮೃತಪಡಿ ನಂದಾದಿ.....ಗಳ ಬಗ್ಗೆ ದಾನಧಾರಾ ಪೂರ್ವಕವಾಗಿ ಕೊಟ್ಟ ಶಾಸನ" (ಎಪಿಗ್ರಫಿಯಾ ಆಫ್ ಕರ್ನಾಟಕ-8 ತೀರ್ಥಹಳ್ಳಿ ಶಾಸನ 14). ಇಲ್ಲಿನ ವಿಗ್ರಹವು ಅಖಂಡಾಕೃತಿಯ ಶಿಲೆಯಲ್ಲಿ ನಿರ್ಮಾಣವಾಗಿದೆ. ಈ ಹೆಸರಿನ ದೇವಸ್ಥಾನವು ಮಲೆನಾಡಿನ ಯಾವ ಭಾಗದಲ್ಲೂ ಇಲ್ಲೆಂಬ ಹೆಗ್ಗಳಿಕೆ. ಈ ಗುಡಿಯಿಂದ ಮುಂದಕ್ಕೆ ಹೋದಲ್ಲಿ ಪಾಳುಬಿದ್ದ ಜೈನ ಬಸದಿ. ಅದರ ಪಕ್ಕದಲ್ಲಿ ಒಂದು ಕೊಳ ಇದೆ. ಹಿಂದೆ ಆರಗವನ್ನು ಹುಂಬುಚದ ಶಾಂತಾರರು ಆಳಿರಬಹುದು. ಇದರಿಂದ ಮುಂದಕ್ಕೆ ಸಾಗಿದರೆ ಮಲೆನಾಡಿನ ವಿಶಿಷ್ಠ ದೇವತೆ ಬನಶಂಕರಿ-ವನಶಂಕರಿ ದೇವಾಲಯವಿದೆ. ಇದೇ ಚೌಡಮ್ಮ ದೇವತೆ. "1327ರಲ್ಲಿ ವಿಜಯನಗರದಲ್ಲಿ ವಿರೂಪಾಕ್ಷ ಮಹಾರಾಯರು ಆಳುತ್ತಿದ್ದಾಗ..... ಆರಗದಲ್ಲಿ ಆಳುತ್ತಿದ್ದ ವಿಠ್ಠಣ್ಣಗಳು........ ಆರಗದ ಹಿರಿಯಂಗಡಿಯ ಶ್ರೀ ಬನದದೇವಿಯರಮೃತ ಪಡಿಗೆ ಕೊಟ್ಟ..... ಭೂದಾನ ಶಿಲಾಶಾಸನ" (ಎಪಿಗ್ರಫಿಯಾ ಆಫ್ ಕರ್ನಾಟಕ ತೀರ್ಥಹಳ್ಳಿ ಶಾಸನ 13). ಇಲ್ಲಿ ಅನೇಕ ಅಪೂರ್ವವಾದ ಶಾಸನಗಳಿದ್ದು ಮಣ್ಣಿನಡಿಯಲ್ಲಿ ಹೂತುಹೋಗಿವೆ.

ಕವಲೊಡೆದ ಪೇಟೆ ರಸ್ತೆಯಿಂದ ಅಂಬುತೀರ್ಥ ರಸ್ತೆಯ ಕಡೆಗೆ ಸಾಗಿದರೆ ಬಲಭಾಗಕ್ಕೆ ಆನೆಮಹಲ್. ಇದು ಆನೆಗಳನ್ನು ಕಟ್ಟುವ ಸ್ಥಳ ಆಗಿತ್ತಂತೆ. ಇದರ ಕೆಳಭಾಗದಲ್ಲಿ ಸಾಂತವೇರಿಯ ವಿಶಾಲವಾದ ಗದ್ದೆಕೋಗು. ಇದರ ಪಕ್ಕದಲ್ಲಿ ಎಡಮುರಿ ಹೊಳೆ ಕುಶಾವತಿ ನದಿ. ಆನೆಗಳನ್ನು ಈ ನದಿಯಲ್ಲಿ ಮೈತೊಳೆಯುತ್ತಿದ್ದರಂತೆ. ಇದೇ ರಸ್ತೆಯಲ್ಲಿ ಮುಂದೆ ಸಾಗಿದರೆ ದೊಡ್ಡದಾದ ಕೆರೆ 'ಹಿರಿಕೆರೆ' ಸಿಗುತ್ತದೆ. ಇದನ್ನು 'ವಿರೂಪಾಸಮುದ್ರ' ಎಂದೂ ಕರೆಯುತ್ತಾರೆ.

ವಿಜಯನಗರದ ಅರಸರಾದ 'ವಿರೂಪಾಕ್ಷ' ಮಹಾರಾಜರು ಇದನ್ನು ಕಟ್ಟಿಸಿರಬಹುದು. ಕೆರೆಯ ದಡದಲ್ಲಿ ಅಗ್ರಹಾರವಿದ್ದು ಇದನ್ನು 'ಸದಾಶಿವ ಅಗ್ರಹಾರ' ಎಂದು ಕರೆಯುತ್ತಾರೆ. 1495ರ ಶುದ್ಧ 15 ಆದಿವಾರದಲ್ಲು ರಾಮನಾಯಕರು... ಆರಗ ಗುತ್ತೀ ರಾಜ್ಯ ಅಗ್ರಹಾರಗಳಿಗೆ ಯಜಮಾನ ಸದಾಶಿವಪುರವೆಂದು ಹೆಸರಿಟ್ಟರು (ಎಫಿಗ್ರಫಿ ಆಫ್ ಕರ್ನಾಟಕ-8 ತೀರ್ಥಹಳ್ಳಿ ಶಾಸನ 5). ಈ ಅಗ್ರಹಾರವನ್ನು "ಕೆಳದಿಯ ಸದಾಶಿವರಾಯ ನಾಯಕರ ಪ್ರಧಾನ ಮಾದಪ್ಪಯ್ಯ" (ಎಫಿಗ್ರಫಿ ಆಫ್ ಕರ್ನಾಟಕ-8 ತೀರ್ಥಹಳ್ಳಿ ಶಾಸನ 5). ನಿರ್ಮಾಣ ಮಾಡಿದ್ದನಂತೆ. ಇಲ್ಲಿ ಸದಾಶಿವ ದೇವಸ್ಥಾನವೂ ಹಾಗೂ ಅತ್ಯಂತ ಹಳೆಯ ಕಾಲದ ಮಾಧ್ಯಮಿಕ ಶಾಲೆಯೊಂದು ಇಲ್ಲಿದೆ.

'ವಿರೂಪಾಸಮುದ್ರ'ದ ಉತ್ತರದಲ್ಲಿ 'ದೇವರಗುಡಿ' ಎಂಬ ಊರಿದೆ. ಇಲ್ಲಿ ರೇಣುಕಾಂಬೆ ಅಥವಾ ಗುತ್ತಮ್ಮ ದೇವತೆಯ ಗುಡಿ ಇದೆ. ಈ ದೇವಸ್ಥಾನದ ಬಗ್ಗೆ ಕಥೆಯೊಂದಿದೆ. ಶಂಕರಾಚಾರ್ಯರು ಸಿದ್ಧಿ ಸಾಧನೆಯ ಮೂರು ಯಂತ್ರಗಳಲ್ಲಿ ಒಂದನ್ನು ಕೊಲ್ಲೂರು ಮೂಕಾಂಬಿಕೆಯಲ್ಲಿಟ್ಟು ಉಳಿದೆರಡರೊಂದಿಗೆ ಬರುವಾಗ ಸಂಜೆಯಾಯಿತು. ಆಹ್ನಿಕವನ್ನು ಪೂರೈಸಲು ಈ ಯಂತ್ರಗಳನ್ನು ವಿರೂಪಾಸಮುದ್ರದ ದಂಡೆಯ ಮೇಲಿನ ಮರದ ಕೊಂಬೆಯ ಮೇಲಿಟ್ಟು ಸ್ನಾನಕ್ಕಿಳಿದರಂತೆ. ಆಹ್ನಿಕವನ್ನು ಪೂರೈಸಿ, ಪ್ರಯಾಣಕ್ಕೆ ಸಿದ್ದರಾಗಿ ಯಂತ್ರವನ್ನು ಹುಡುಕುತ್ತಿದ್ದಾಗ ಅದರಲ್ಲಿ ಒಂದು ಇಟ್ಟಜಾಗದಲ್ಲಿ ಇರಲಿಲ್ಲ. ಆಗ ಅವರು ತಮ್ಮ ದಿವ್ಯದೃಷ್ಠಿಯಿಂದ ನೋಡಿದಾಗ ಆ ಯಂತ್ರ ಕೆರೆಯಿಂದ ಮೇಲಕ್ಕೆ ತೇಲುತ್ತಾ ಹೋಗುತ್ತಿರುವುದನ್ನು ಕಂಡರು. ಸಿಟ್ಟಿನಿಂದ "ನೀನು ನನ್ನ ಕೈಜಾರಿ ಹೋಗುತ್ತಿರುವುದರಿಂದ ಅನ್ಯಾಹಾರ ತಿನ್ನುವವರೇ ನಿನ್ನ ಅರ್ಚಕರಾಗಲೀ" ಎಂದು ಶಾಪನೀಡಿದರಂತೆ. ಆ ಯಂತ್ರವು ಕೆರೆಯ ದಡದ ಒಂದು ಕೇದಿಗೆ ಹಿಂಡಲಿನಲ್ಲಿ ಸೇರಿಕೊಂಡಿತಂತೆ. ಈಗ ಇದೇ ಇಂದು 'ಗುತ್ತಮ್ಮ ದೇವತೆ' ಉದ್ಭವ ಸ್ಥಾನವಾಗಿದ್ದು ಒಕ್ಕಲಿಗರೇ ಇದರ ಅರ್ಚಕರಾಗಿದ್ದಾರೆ. ಕೆಳದಿ ನಾಯಕರ ಕಾಲದಲ್ಲಿ ಆರಗದ ನಾಡು 'ಗುತ್ತಿ ರಾಜ್ಯ' ಎನ್ನುವಷ್ಟರ ಮಟ್ಟಿಗೆ ಉಚ್ಛ್ರಾಯ ಸ್ಥಿತಿಗೇರಿತ್ತು ಮತ್ತು ಈ ಸೀಮೆಯ ನ್ಯಾಯ ಪಂಚಾಯತಿಯು ಈ ದೇವಸ್ಥಾನದಲ್ಲಿಯೇ ನಡೆಯುತ್ತಿತ್ತು. ಈಗಲೂ ಈ ದೇವಸ್ಥಾನದಲ್ಲಿ ನಾಲ್ಕು ಒರಗುಗಂಬಗಳಿದ್ದು ಒಂದೊಂದು ಕಂಬವು ಒಬ್ಬೊಬ್ಬ ನ್ಯಾಯಮೂರ್ತಿಯನ್ನು ಸಂಕೇತಿಸುತ್ತದೆ. ಆ ನ್ಯಾಯ ಪಂಚಾಯತಿಯ ಊರ ಗೌಡರ ಹಕ್ಕು ಸ್ಥಾನದ ಸದಸ್ಯರಲ್ಲಿ ಸಾಂತವೇರಿ ಮನೆತನದವರೂ ಒಬ್ಬರಾಗಿದ್ದರು. ದೇವರ ಗುಡಿಯ ಪಕ್ಕದ ಊರು 'ಅಗಳಬಾಗಿಲು'. ಅದು ಕೋಟೆಯ ಉತ್ತರಕ್ಕಿರುವ ಬಾಗಿಲು 'ಅಗಸೇಬಾಗಿಲು' ಇಂದು ಅಗಳಬಾಗಿಲಾಗಿದೆ. ಈ ಊರಿನ ಮೇಲ್ಪಭಾಗದಲ್ಲಿ ವಿಶಾಲವಾದ ಮೈದಾನವಿದ್ದು 'ರಾಯರ ಬಿಡಾರದ ಹಕ್ಲು' ಎಂದು ಕರೆಯುತ್ತಿದ್ದರು. ಹಿಂದೆ ಇದು ಸೈನ್ಯ ಕವಾಯಿತು ಮಾಡುವ ಸ್ಥಳವಾಗಿತ್ತು.

ಪೇಟೆಯ ಮಧ್ಯಭಾಗ ಮೊದಲು ಭದ್ರವಾದ ಮಣ್ಣಿನ ಕೋಟೆಯಾಗಿತ್ತು. ಅದು ಸುಮಾರು ಒಂದು ಮೈಲಿ ವಿಸ್ತೀರ್ಣವನ್ನು ಪಡೆದಿತ್ತು. ಸುತ್ತ ಕಂದಕ. ಇದು ಪಾಂಡವರ ವಾಸಕ್ಕಾಗಿ ಕೌರವರು ಕಟ್ಟಿಸಿದ 'ಅರಗಿನ ಮನೆ' ಎಂಬುದು ಹಳ್ಳಿಗರ ಭಾವನೆ. "ಎಡಮುರಿ ಬಲಮುರಿ ಎಂಬ ನದಿಯಿಲ್ಲ, ಅಖಂಡೇಶ್ವರ ಎನ್ನುವ ದೇವಸ್ಥಾನವಿಲ್ಲ, ಆರಗ ಎಂಬ ಊರಿಲ್ಲ" ಎಂಬುವುದು ಇಲ್ಲಿಯ ಊರಿನವರ ಅಭಿಮಾನದ ಮಾತು. ಕೋಟೆಯ ದಕ್ಷಿಣಕ್ಕೆ ಅರುಣಗಿರಿ–ಅಣ್ಣಯ್ಯನಗಿರಿ–ಹಣ್ಣೆಗಿರಿಯ ಬೆಟ್ಟ. ಇಲ್ಲಿ ತಿರುಪತಿ ತಿಮ್ಮಪ್ಪನ ಅಣ್ಣ ಅಣ್ಣಯ್ಯನ ಗುಡಿ ಇಲ್ಲಿದೆ. ಇಲ್ಲಿಂದ ಸೂರ್ಯೋದಯ, ಸೂರ್ಯಾಸ್ತಗಳು ಅತ್ಯಂತ ಮನಮೋಹಕ.

ಆರಗವನ್ನು ಆರಂಬದಲ್ಲಿ ಪಾಳೇಗಾರನೊಬ್ಬನು ಆಳುತ್ತಿದ್ದನಂತೆ. ನಂತರ ಹುಂಬುಚದ ಶಾಂತಾರರ ಆಳ್ವಿಕೆಗೆ ಒಳಪಟ್ಟು ನಂತರ ಹೊಯ್ಸಳರ ಪಾಲಾಯಿತು. ಹೊಯ್ಸಳರ ಅರಸ ಬಲ್ಲಾಳ ಈ ನಗರ ಆಳಿದ ಕುರುಹುಗಳು ಇಲ್ಲಿವೆ. ಇಲ್ಲಿನ ಕಲಾನಾಥ ದೇವಾಲಯ ಪ್ರಾಕಾರದಲ್ಲಿ 'ಹುಲಿಯೊಂದಿಗೆ ಹೋರಾಡುವ ವೀರನೊಬ್ಬನ ಲಾಂಛನ' ಕಾಣಬರುತ್ತದೆ. "ಮಲೆಯ ರಾಜ್ಯ" ಎಂದು ಹೆಸರು ಬಂದಿರುವುದೂ ಈ ಕಾಲದಲ್ಲಿಯೇ. ಆನಂತರ ಕಂಪಿಲನ ಮಗ ಕುಮಾರ ರಾಮ ಆರಗವನ್ನು ಹೊಯ್ಸಳರಿಂದ ಗೆದ್ದುಕೊಂಡಿರಬೇಕು. ಈ ಭಾಗದಲ್ಲಿ ಕುಮಾರ ರಾಮನ ಪ್ರಭಾವ ಆತನ ಆಳ್ವಿಕೆಗೆ ಒಳಪಟ್ಟ ಕುರುಹುಗಳು ಈ ಮಲೆನಾಡಿನ ಭಾಗದಲ್ಲಿ ಇಂದಿಗೂ ಸಿಗುತ್ತದೆ. ಕುಮಾರ ರಾಮ ಈ ಭಾಗದ ಗ್ರಾಮದೇವತೆ. ಆತನ ಹಬ್ಬ, ಹುಣ್ಣಿಮೆಗಳು ವಿಶೇಷ. ಆತನ ಬಗ್ಗೆ ಇರುವ ವೀರಗಲ್ಲುಗಳೂ ಸಿಗುತ್ತವೆ. ಈ ಕೋಟೆಯ ಸಮೀಪದಲ್ಲಿಯೇ ಅಂಥದೊಂದು ವೀರಗಲ್ಲು ಇದೆ. ಕುಮಾರ ರಾಮನನ್ನು ಸೋಲಿಸಿದವನು ಹೊಸನಗರ ತಾಲ್ಲೂಕಿನ ಕಳಲೆ ಗ್ರಾಮದ ಒಬ್ಬ ನಾಯಕ ಎಂಬ ಪ್ರತೀತಿಯೂ ಇದೆ.

1336ರ ನಂತರ ಈ ಮಲೆಯ ರಾಜ್ಯದ ಪ್ರದೇಶ ವಿಜಯನಗರದ ವಶವಾಯಿತು. ಈ ರಾಜ್ಯಕ್ಕೆ ಆರಗವನ್ನು ಕೇಂದ್ರವನ್ನಾಗಿ ಮಾಡಿಕೊಂಡು ವಿಜಯನಗರದ ಅರಸರು, ಸಾಮಂತರು ಆಳಿದ್ದು ಸುಸ್ಪಷ್ಟ. ವಿಜಯನಗರದ ಅರಸ ರಾಮರಾಯನ ತಮ್ಮ ವಿಠಲರಾಯ ಇಲ್ಲಿದ್ದುಕೊಂಡು ದಕ್ಷಿಣದಲ್ಲಿ ನಡೆದ ದಂಗೆಗಳನ್ನು ಅಡಗಿಸಿ ಕೆಳದಿಯ ದೊಡ್ಡ ಸಂಕಣ್ಣ ನಾಯಕನೊಂದಿಗೆ ಸೇರಿ, ಅನೇಕ ಯುದ್ಧ ಮಾಡಿ, ವಿಜಯನಗರ ಸಾಮ್ರಾಜ್ಯವನ್ನು ವಿಸ್ತರಿಸಿದ. ಅಲ್ಲದೇ ಬಹುಮನಿ ರಾಜರುಗಳ ಮೇಲೆ ಕೆಲವು ಸಲ ಯುದ್ಧಮಾಡಿ ಸಂಪತ್ತನ್ನೆಲ್ಲಾ ಕೊಳ್ಳೆ ಹೊಡೆದು ಆಗಿನ ಕಾಲದ ಆ ರಾಜ್ಯದ ನಾಣ್ಯಗಳಾದ ಇಪ್ಪಲಕ್ಷ "N" ಗುರುತಿನ ಹಣವನ್ನು ತಂದು ಈ ಕೋಟೆಯ ಒಂದು ಗುಪ್ತ ಸ್ಥಳದಲ್ಲಿ ಹೂತಿಟ್ಟಿದ್ದಾನೆಂದು ಪ್ರತೀತಿ. ಮುಂದೆ ಬಹುಮನಿಯ ಮುಸಲ್ಮಾನ ರಾಜರೆಲ್ಲರೂ ಒಟ್ಟಾಗಿ ಸೇರಿ 1565ರಲ್ಲಿ ವಿಜಯನಗರದ ಮೇಲೆ ಯುದ್ಧ ಸಾರಿದಾಗ ಅಣ್ಣ ರಾಮರಾಯನ ಸಹಾಯಕ್ಕೆ ಆತ ತಾನೇ ಖುದ್ದಾಗಿ ಸೈನ್ಯವನ್ನು ತೆಗೆದುಕೊಂಡು ಹೋಗಿ ಅಣ್ಣನ ಮರಣಾನಂತರ ಬೆನ್ನತ್ತಿ ಬಂದು ಶತ್ರು ಸೈನಿಕರನ್ನು ಎದುರಿಸಿ, ತನ್ನ ಕೋಟೆಗೆ

ವಾಪಾಸಾಗುತ್ತಾನೆ. ಆಗ ಮುಸಲ್ಮಾನ ಸೈನಿಕರು ಇವನನ್ನು ಬೆನ್ನಟ್ಟುತ್ತಾರೆ ಆಗ ಈತ ಈ ಕೋಟೆಯ ಪಕ್ಕದಲ್ಲಿರುವ 'ವಿಠಲನಗುಡಿ'ಯಲ್ಲಿ ಬಂದು ಅವಿತುಕೊಳ್ಳುತ್ತಾನೆ. ಶತ್ರು ಸೈನಿಕರು ಆತನನ್ನು ಪತ್ತೆಹಚ್ಚಿ, ಗುಡಿಗೆ ನುಗ್ಗಿ, ಆತನ ತಲೆಯನ್ನು ಅಲ್ಲಿಯೇ ಕಡಿದು ಹಾಕಿ ಆ ವಿಗ್ರಹವನ್ನು ಚೂರು ಮಾಡುತ್ತಾರೆ. ಅಲ್ಲಿಂದ ಸ್ವಲ್ಪಕಾಲ ವಿಜಯನಗರದ ವೆಂಕಟಪತಿ ಇದ್ದಿರಬಹುದು. ಆತ ಅರುಣಗಿರಿಯಲ್ಲಿರುವ ತಿರುಪತಿ ತಿಮ್ಮಪ್ಪನ ಅಣ್ಣನಾದ 'ಶ್ರೀನಿವಾಸ ದೇವರ' ಗುಡಿಯನ್ನು ಕಟ್ಟಿಸಿರಬಹುದು. ಅಲ್ಲಿಂದ ಆರಗವು ವಿಜಯನಗರದವರ ಆಳ್ವಿಕೆಯಿಂದ ಕೆಳದಿಯ ಅರಸರ ವಶವಾಯಿತು. ಕೆಳದಿಯ ವೆಂಕಟಪ್ಪನು 'ಮಲೆಯ ರಾಯರ ಒಡೆಯ'ನೆಂಬ ಖ್ಯಾತಿ ಪಡೆಯುತ್ತಾನೆ. ಆತ ಈಗಿನ ಕವಲೇದುರ್ಗದ ಕೋಟೆಯನ್ನು ಬಲಪಡಿಸಿ "ಭುವನಗಿರಿ ದುರ್ಗ"ವೆಂದು ಹೆಸರಿಡುತ್ತಾನೆ. ಅದನ್ನು ಆಡಳಿತದ 2ನೇ ರಾಜಧಾನಿಯನ್ನಾಗಿ ಮಾಡಿಕೊಳ್ಳುತ್ತಾನೆ. ಈ ಕಾಲದಲ್ಲಿ ವೈಭವದಿಂದ ಮೆರೆದ ಆರಗ ಪಟ್ಟಣದ ಅಭಿವೃದ್ಧಿಗೆ ಹಿನ್ನಡೆ ಉಂಟಾಗುತ್ತದೆ. ಇದರ ಮಹತ್ವವನ್ನು ಕವಲೇದುರ್ಗ ಪಡೆದುಕೊಳ್ಳುತ್ತದೆ. 1763ರಲ್ಲಿ ಹೈದರಾಲಿ ಬಿದನೂರಿನ ಜೊತೆಗೆ ಈ ನಾಡನ್ನೂ ವಶಪಡಿಸಿಕೊಳ್ಳುತ್ತಾನೆ. ಹೀಗೆ ಕೆಳದಿ ಪತನಾನಂತರ ಇವುಗಳೆಲ್ಲ ತಮ್ಮ ಹಿರಿಮೆಯನ್ನು ಕಳೆದುಕೊಂಡು ಅವನತಿಯ ಪಥವನ್ನು ಹೊಂದುತ್ತದೆ.

ಆರಗದ ಮುಖ್ಯ ಪೇಟೆಯಿಂದ ಎರಡನೇ ಹನುಮಂತನ ಗುಡಿಯ ಪಕ್ಕದಲ್ಲಿ ಒಂದು ಕೊರಕಲು ಗಾಡಿದಾರಿ. ಇಂದು ಅಲ್ಲಿ ಟಾರ್ ರಸ್ತೆ ಆಗಿದೆ. ಅದರಲ್ಲಿ ಸ್ವಲ್ಪ ದೂರ ಸಾಗಿ ಎಡಭಾಗಕ್ಕೆ ತಿರುಗಿದರೆ ಮೂರು ಮನೆಗಳ ಒಂದು ಊರು. ಇಂದು ಊರು ದೊಡ್ಡದಾಗಿ ಬೆಳೆದು ಏಳೆಂಟು ಮನೆಗಳಾಗಿವೆ. ಈ ಊರೇ ಸಾಂತವೇರಿ. ಇಂದು ಗೋಪಾಲ ಗೌಡರಿಂದಾಗಿ ಅದು "ಶಾಂತವೇರಿ" ಎಂದಾಗಿದೆ. ಸಾಂತವೇರಿ ಮನೆ ಹೆಸರೇ ಹೊರತು ಊರ ಹೆಸರಲ್ಲ ಎನ್ನುವುದಕ್ಕೆ ಆಧಾರಗಳಿಲ್ಲ. ಸಂತಕೇರಿ–ಸಂತೇರಿ–ಸಾಂತೇರಿ–ಸಾಂತವೇರಿ–ಶಾಂತವೇರಿ ಆಗಿರಬಹುದು.

"ಸಾಂತವೇರಿ" ಎಂಬ ಊರು ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ ತಾಲ್ಲೂಕಿನ ಬಾಬಾಬುಡನ್ ಗಿರಿಯ ಹತ್ತಿರ "ಕಾಮನದುರ್ಗ"ದ ಸಮೀಪದಲ್ಲಿದೆ. ಈ ಕಾಮನದುರ್ಗದ ಕೋಟೆಯನ್ನು ಪ್ರಖ್ಯಾತ ತರೀಕೆರೆ ಪಾಳೇಗಾರರು ಆಳಿದ್ದಾರೆ. ಬಹುಶಃ ಈ ಊರಿನಿಂದ ಬಹಳ ಹಿಂದೆ ಈ ಕುಟುಂಬದವರು ಆರಗ ಉಚ್ಛ್ರಾಯ ಸ್ಥಿತಿಯಲ್ಲಿದ್ದಾಗ ಸೈನಿಕರಾಗಿ ಬಂದು ಇಲ್ಲಿ ನೆಲಸಿರಬಹುದು. ಅದರ ನೆನಪಾಗಿ ಈ ಕುಟುಂಬ ಅಭಿಮಾನದಿಂದ "ಸಾಂತವೇರಿ ಕುಟುಂಬ" ಎಂದು ಹೆಸರಿಟ್ಟುಕೊಂಡಿರಬಹುದು ಅಥವಾ ಆರಗವನ್ನು ಕೆಲಕಾಲ ಆಳಿದ ಹುಂಬುಚದ "ಶಾಂತಾರರ" ವಂಶಸ್ಥರೇನಾದರೂ ಆಗಿರಬಹುದು. ಆದರೆ ಶಾಂತವೇರಿ ಗೋಪಾಲಗೌಡರು ತಮ್ಮ ಪೂರ್ವಿಕರು ತರೀಕೆರೆಯ ಸಾಂತವೇರಿಯಿಂದ ಬಂದವರೆಂದು ಹೇಳಿಕೊಳ್ಳುತ್ತಿದ್ದರಂತೆ. ಇದೇ ಮಾತನ್ನು ಅವರ ಮನೆತನದ ಕೆಲವರು ಈಗಲೂ ಆಡಿಕೊಳ್ಳುತ್ತಾರೆ.

ಪಾಳೆಗಾರಿಕೆಯನ್ನು ವಂಶಪಾರಂಪರ್ಯವಾಗಿ ಹೊಂದಿದ ಗೌಡರ ಕುಟುಂಬಕ್ಕೆ ಆರಗ ಸೀಮೆಯಲ್ಲಿ ಹಿಂದಿನಿಂದಲೂ ಪ್ರಾಮುಖ್ಯತೆ ಇದ್ದೇಇತ್ತು. ಜನರು ಅವರ ಮನೆತನಕ್ಕೆ ಗೌರವದಿಂದ ನಡೆದುಕೊಳ್ಳುತ್ತಿದ್ದರು. ಅವಿಭಕ್ತ ಕುಟುಂಬವಾದ ಗೌಡರ ಹಿರಿಯರ ಮನೆ, ಕುಟುಂಬ ಸದಸ್ಯರಿಂದ ತುಂಬಿ ತುಳುಕುತ್ತಿತ್ತು. 25 ಎಕರೆ ಗದ್ದೆ, 3 ಎಕರೆ ಅಡಿಕೆ ತೋಟ, ವಿಫುಲವಾದ ಆಹಾರ ಬೆಳೆ ಹಾಗೂ ಜಾನುವಾರುಗಳು ಮನೆಯಲ್ಲಿ ತುಂಬಿ ತುಳುಕುತ್ತಿತ್ತು. ಊರ ಪಟೇಲಿಕೆಯ ಅಧಿಕಾರದ ಜೊತೆಗೆ ಪರಂಪರೆಯಿಂದ ಬಂದ ಊರಸೀಮೆಯ ನ್ಯಾಯಪೀಠದ ಹಕ್ಕುದಾರಿಕೆಯುಳ್ಳ ಈ ಕುಟುಂಬ ಶ್ರೀಮಂತಿಕೆಯೊಂದಿಗೆ ಸುಮಾರು 100 ಜನರಿಗಿಂತಲೂ ಮಿಗಿಲಾದ ಕೂಡು ಕುಟುಂಬವಾಗಿತ್ತು.

ಜಟ್ಟೇಗೌಡ, ರಂಗಣ್ಣ–ರಾಮಣ್ಣ, ತಿಮ್ಮೇಗೌಡ–ವೀರೇಗೌಡರ ಅವಿಭಕ್ತ ಕುಟುಂಬ 1895ರ ಹೊತ್ತಿಗೆ ಮೂರು ಕವಲಾಗಿ ಒಡೆದು ತಿಮ್ಮೇಗೌಡರು ಈಗಿನ ಶಾಂತವೇರಿಗೆ ಬಂದು ನೆಲಸಿ ದೊಡ್ಡದಾದ ಮನೆಯೊಂದನ್ನು ಕಟ್ಟಿಸಿದ್ದರು. ಈ ವೇಳೆಗೆ ಹಿರಿಯ ಮಗ ಲೋಕಣ್ಣಗೌಡರು ಪ್ರವರ್ಧಮಾನಕ್ಕೆ ಬಂದಿದ್ದರು. ಲೋಕಣ್ಣಗೌಡ, ಕೊಲ್ಲೂರಯ್ಯಗೌಡ ಮತ್ತು ಮಂಜಪ್ಪಗೌಡ ಎಂಬಿಬ್ಬರು ತಮ್ಮಂದಿರನ್ನು ಹೊಂದಿದ್ದರು. 1895 ರಿಂದ 1912ರ ವರೆಗೆ ಶಾಂತವೇರಿಯ ಈ ಕುಟುಂಬಕ್ಕೆ ಲೋಕಣ್ಣಗೌಡರವರೇ ಯಜಮಾನರಾಗಿದ್ದರು.

ಲೋಕಣ್ಣಗೌಡರು ಅಜಾನುಭಾವು, ಕೆಂಪು ಮುಖ, ತಿರುವಿದ ಗಿರಿಜೇಮೀಸೆ, ಕಾಲಿಗೆ ಗೀಕಿನ ಮೆಟ್ಟು, ಕಚ್ಚೆಯಪಂಚೆ, ಕೋಟು, ತಲೆಗೆ ರೇಷ್ಮೆಯ ಮುಂಡಾಸು, ವಿಶಾಲವಾದ ಎದೆ, ಬಲವಾದ ನಡುಕಟ್ಟು, ರಕ್ತವರ್ಣದ ಕಣ್ಣು ಎಂತವರೂ ಹೆದರುವಂತಹ ದೃಷ್ಠಿ, ಹುಲಿಯಂತಹ ದೈರ್ಯ, ಬಲಗೈಯಲ್ಲಿ ಬಲಗೀ ದೊಣ್ಣೆ, ಗತ್ತಿನ ನಡಿಗೆ, ತಾನು ಹೇಳಿದಂತೆ ಕೇಳಬೇಕೆಂಬ ಹಟ. ಆಗದಿದ್ದವರನ್ನು ಕಂಡರೆ ಅಸಡ್ಡೆ, ಕ್ರೌರ್ಯ, ದೊಡ್ಡಸ್ಥಿಕೆ ಇದು ಗೋಪಾಲಗೌಡರ ದೊಡ್ಡಪ್ಪರಾದ ಲೋಕಣ್ಣಗೌಡರ ವ್ಯಕ್ತಿತ್ವ. ಮನೆಯ ಹಿರಿಯರು, ಪಟೇಲರು, ಸೀಮೆಯ ನ್ಯಾಯ ಪೀಠದ ಹಕ್ಕುದಾರ ಎಂಬ ಮುಂತಾದ ಪದವಿಯಲ್ಲಿದ್ದ ಇವರಿಗೆ ಸೀಮೆಯ ಶ್ರೀಮಂತರೆಲ್ಲರೂ ಪರಿಚಿತರಾಗಿದ್ದರು. ಅವರ ದೊಡ್ಡಸ್ಥಿಕೆಯ ದರಬಾರು ಅಂಧಕಾರದ ಪ್ರತಿಬಿಂಬವಾಗಿತ್ತು. ಸುಮಾರು 1905ರ ಹೊತ್ತಿಗೆ ಮನೆಗೆ ಬೆಂಕಿಬಿದ್ದು ದೊಡ್ಡಮನೆ ನಾಶವಾಯಿತು. ಕಷ್ಟನಷ್ಟಗಳಿದ್ದಾಗಿಯೂ ಸಹ ಪುನಃ ದೊಡ್ಡಮನೆಯನ್ನೇ ಕಟ್ಟಿಸಿದ್ದರು.

ಆಗ ಮಲೆನಾಡು ಮಲೇರಿಯಾದ ಮಾರಿ ಆರ್ಭಟಕ್ಕೆ ತುತ್ತಾಗಿ ಪ್ರತೀ ಮನೆಯೂ ಸ್ಮಶಾನವಾಗಿತ್ತು. ಈ ಪಿಡುಗಿಗೆ ಬಲಿಯಾಗುತ್ತಿದ್ದವರಲ್ಲಿ ಗಂಡಸರಿಗಿಂತ ಮಹಿಳೆಯರೇ ಹೆಚ್ಚು. ಅದರಲ್ಲಿ ಗರ್ಭಿಣಿ ಮಹಿಳೆಯರ ಸಂಖ್ಯೆ ಜಾಸ್ತಿ. ಹೀಗಾಗಿ ಪ್ರತೀ ಗಂಡಿಗೂ ಮೂರು–ನಾಲ್ಕು ಮದುವೆಯಾಗುತ್ತಿತ್ತು. ಹಾಗೆಯೇ ಗೌಡರ ದೊಡ್ಡಪ್ಪರಾದ ಲೋಕಣ್ಣಗೌಡರಿಗೂ ಮೂರು ಮದುವೆಯಾಗಿತ್ತು. ಮನೆಯಲ್ಲಿ ದುಡಿಮೆ ಕಡಿಮೆಯಾಗಿ ಆದಾಯಕ್ಕಿಂತ ಖರ್ಚು ಅಧಿಕವಾಗತೊಡಗಿತು. ಇವರ ದರ್ಪ–ಕ್ರೌರ್ಯಕ್ಕೆ ಆಳುಕಾಳುಗಳು ಬಲಿಯಾಗುತ್ತಿದ್ದರು. ಸರಿಯಾದ ಸಮಯಕ್ಕೆ ಆಳುಗಳು ಬರದಿದ್ದಲ್ಲಿ ಅವರನ್ನು ಎಳೆಸಿಕೊಂಡು ಬಂದು "ಭೇಟಿಯ ಕಂಬಕ್ಕೆ ಕಟ್ಟಿ ಚಾಟಿಯಿಂದ

ಹೊಡೆಯಿಸುತ್ತಿದ್ದರು". ಇದಕ್ಕೆ ನಿದರ್ಶನವಾಗಿ ಗೌಡರು ಊರಿಗೆ ಬಂದಾಗಲೆಲ್ಲಾ ಆವಧಾನಿ ಎಂಬಾತ ನಮ್ರನಾಗಿ ಕೈಜೋಡಿಸಿ ನಿಲ್ಲುತ್ತಿದ್ದ. ಈ ಎಲ್ಲಾ ದರ್ಪ, ದೌರ್ಜನ್ಯ ಹಾಗೂ ಸಿರಿವಂತಿಕೆಯ ಅಂದಕಾರದ ಜೀವನ ಗೌಡರ ಮನೋಪಠಲದಲ್ಲಿ ಅಚ್ಚಳಿಯದೇ ಪ್ರಭಾವಬೀರಿರಬಹದು. ಇಂಥಹ ಘಟನೆಗಳೇ ಗೋಪಾಲ ಗೌಡರಲ್ಲಿ ದೀನ ದಲಿತರ ಬಗೆಗಿನ ಅನುಕಂಪ ಮತ್ತು ಅಂಥವರ ಉತ್ಥಾನದ ಸಂಕಲ್ಪಕ್ಕೆ ಹೋರಾಟದ ಕವಚ ಧರಿಸುವುದಕ್ಕೆ ಮನ ಪ್ರೇರೇಪಿಸಿತು. ಲೋಕಣ್ಣಗೌಡರ ಗೌಡಿಕೆ ಆ ಕುಟುಂಬವನ್ನು ಕ್ರಮೇಣ ದುಃಸ್ಥಿತಿಗೆ ತಳ್ಳಿತು.

ಗೋಪಾಲಗೌಡರ ತಂದೆ ಕೊಲ್ಲೂರಯ್ಯಗೌಡರು. ಕೊಲ್ಲೂರಯ್ಯಗೌಡರು ಐದು ಕಾಲು ಅಡಿ ಎತ್ತರದ ದಪ್ಪ ಆಳು, ಸೌಮ್ಯ ಮುಖ, ಕಪ್ಪು ಬಣ್ಣ, ತಲೆಗೆ ಬಿಳಿ ಮುಂಡಾಸು, ಸರಳ ಹೃದಯದ ಮುಗ್ಧ ಮನಸ್ಸಿನ ಸಾಧು ಸ್ವಭಾವದ ಪ್ರಾಮಾಣಿಕ ವ್ಯಕ್ತಿ. ಸಾಮಾನ್ಯ ವಿದ್ಯಾವಂತ. ಅಂಚೆ ಪೇದೆಯಾಗಿ ಹನ್ನೊಂದು ರೂಪಾಯಿ ಸಂಬಳಕ್ಕೆ ಆರಗ ಮತ್ತು ಅದರ ಸುತ್ತಮುತ್ತಲಿನ ಹಳ್ಳಿಗಳಿಗೆ ಅಂಚೆ ಪತ್ರ ವಿತರಿಸುತ್ತಿದ್ದರು.

ಗೋಪಾಲಗೌಡರ ತಾಯಿ ಶೇಷಮ್ಮ. ಅವರದ್ದು ಛಲ ಸ್ವಭಾವ, ಆಳುವ ಪ್ರವೃತ್ತಿ, ವಾಚಾಳಿ, ಸಹನೆ ಕಡಿಮೆ, ದುಂದುವೆಚ್ಚ, ಅಥಿತಿ ಸತ್ಕಾರ ವಿಶೇಷ, ಇವರ ಊರು ಬಿಜ್ಜಳ. ಅಜ್ಜಿ ಕವಲೇದುರ್ಗದ ಮಂಜಪ್ಪ ನಾಯ್ಕರ ಮನೆತನದವರು. ಈ ನಾಯಕರ ವಂಶಸ್ಥರು ತರೀಕೆರೆ ಪಾಳೆಗಾರರಲ್ಲಿ ದಂಡನಾಯಕರಾಗಿದ್ದವರು. ಆನಂತರ ಕೆಳದಿಯ ಸೈನ್ಯದಲ್ಲಿ ದಂಡನಾಯಕರಾಗಿ ಸೇರಿ ಕವಲೇದುರ್ಗ ಕೆಳದಿಯ ಎರಡನೇ ರಾಜಧಾನಿಯಾದ ಮೇಲೆ ಅವರು ಇಲ್ಲಿ ಬಂದು ನೆಲಸಿದ್ದರು. ಹೀಗಾಗಿ ತಂದೆ ಮತ್ತು ತಾಯಿಯ ಕಡೆಯಿಂದಲೂ ಸಹ ಗೌಡರಲ್ಲಿ ಒಂದು ರೀತಿಯ ವೀರ ವಂಶವಾಹಿನಿ ಸೇರಿಕೊಂಡಿತ್ತು. ಆಗಾಗ ಅವರ ವರ್ತನೆಗಳಲ್ಲಿ ಇದನ್ನು ಗಮನಿಸಬಹುದಾಗಿತ್ತು.

ಲೋಕಣ್ಣಗೌಡರ ಧರ್ಪ, ದುಂದುಗಾರಿಕೆ, ಶೇಷಮ್ಮನವರ ಹಠದ ಸ್ವಭಾವದಿಂದ ಸಂಸಾರದಲ್ಲಿ ಬಿರುಕುಬಿಟ್ಟು 1912ರಲ್ಲಿ ಮನೆ ಒಡೆಯಿತು. ಮನೆಯ ಆಸ್ಥಿಪಾಸ್ಥಿ ಇಬ್ಭಾಗವಾಯಿತು. ಆಸ್ಥಿಯ ವಿಷಯದಲ್ಲಿಯೂ ಕೊಲ್ಲೂರಯ್ಯಗೌಡರಿಗೆ ಅನ್ಯಾಯವಾಗಿತ್ತು. ಅಲ್ಲದೇ ಈ ಜಮೀನುಗಳ ಖಾತೆ ಹಿರಿಯ ಅಣ್ಣ ಲೋಕಣ್ಣಗೌಡರ ಹೆಸರಿನಲ್ಲಿಯೇ ಇತ್ತು. ಲೋಕಣ್ಣಗೌಡರ ದರ್ಭಾರಿಗೆ ಶೀರ್ನಾಳಿ ಸಾಹುಕಾರರಿಂದ ಮಾಡಲಾದ ಸಾಲ ತೀರಿಸಲಾಗದೇ ಸಾಲದ ಬಾಕಿಗಾಗಿ ಕುಟುಂಬದ ಆಸ್ಥಿ ಜಪ್ತಿಯಾಗಿ ಆಸ್ತಿಯೆಲ್ಲಾ ಶೀರ್ನಾಳಿ ಸಾಹುಕಾರರಿಗೆ ಕ್ರಯವಾಗಿಬಿಟ್ಟಿತು. ಹೀಗಾಗಿ ಈ ಕುಟುಂಬ 1932ರ ಹೊತ್ತಿಗೆ ಗೇಣಿದಾರರಾಗಿ ಉಳಿದುಕೊಳ್ಳಬೇಕಾಯಿತು. ಜಮೀನಿನಲ್ಲಿ ಉತ್ಪತ್ತಿಗಿಂತ ಅಧಿಕ ಗೇಣಿ ಮತ್ತು ಖರ್ಚು ಜಾಸ್ತಿಯಾದುದರಿಂದ ಕೊಲ್ಲೂರಯ್ಯಗೌಡರು ಕೃಷಿಯ ಬಗ್ಗೆ ನಿರ್ಲಕ್ಷ್ಯ ಮಾಡಿದರು.

ಕೊಲ್ಲೂರಯ್ಯಗೌಡರಿಗೆ ಮೂರು ಜನ ಮಕ್ಕಳು. ಮೊದಲನೆಯವರು ಧರ್ಮೇಗೌಡರು, ಎರಡನೆಯವರು ಸಿದ್ದಮ್ಮ. ಲೋಕಣ್ಣಗೌಡರ ಮಗ ಧರ್ಮಣ್ಣಗೌಡರ ಮನೆಯ ಮುಂಭಾಗದ ಕಣ. ಅದರ ಪಕ್ಕದಲ್ಲಿ ಒಂದು ಭಾವಿ. ಅದರ ಸಮೀಪದಲ್ಲೊಂದು ಬಚ್ಚಲುಮನೆ. ಅದರ ಒಂದು ಅಂಕಣಕ್ಕೆ ಸುತ್ತ ಮಣ್ಣಿನಗೋಡೆ ಹಾಕಿಸಿದ್ದ ಅವಶೇಷ. ಆ

ಗುಡಿಸಲಿನಲ್ಲಿಯೇ ಕೊಲ್ಲೂರಯ್ಯಗೌಡರ ವಾಸ. ಆ ಬಚ್ಚಲು ಮನೆಯಲ್ಲಿಯೇ 1923ನೇ ಮಾರ್ಚ್ 14ರಂದು ಶಾಂತವೇರಿ ಗೋಪಾಲಗೌಡರು ಜನಿಸಿದರು (ಅನುಬಂಧ 1).

ತಾಯಿಯ ಪ್ರೀತಿಯೊಂದಿಗೆ ಬಾಲ್ಯ ಸಹಜ ಆಟ–ಪಾಟ ಚೆಂಡು, ಬುಗುರಿ, ಪೆಟ್ಲು, ನೀರಾಟಗಳೊಂದಿಗೆ ಹಾಗೂ ಮನೆಯ ಸುತ್ತಲಿನ ಪ್ರಕೃತಿ ಸೌಂದರ್ಯದೊಂದಿಗೆ ಗೌಡರ ಮೈ ಮತ್ತು ಮನಸ್ಸು ಬಲಿಯಿತು. ಗೌಡರ ಪ್ರಾಥಮಿಕ ಶಿಕ್ಷಣ ತಮ್ಮ ಏಳನೆಯ ವಯಸ್ಸಿನಿಂದ ಆರಗದ ಪೇಟೆಯ ಪ್ರೈಮರಿ ಶಾಲೆಯಲ್ಲಿಯೇ ನಡೆಯಿತು. ನಂತರ ಮಾಧ್ಯಮಿಕ ಶಾಲೆಯ ಓದು ಅಗ್ರಹಾರದಲ್ಲಿ ಮುಂದುವರೆಯಿತು. ಓದಿನಲ್ಲಿ ವಿಶೇಷ ಆಸಕ್ತಿ ಇತ್ತು. ಆದರೆ ಸಂಸಾರದ ಆರ್ಥಿಕ ಪರಿಸ್ಥಿತಿ ಸಂಕಷ್ಟದಲ್ಲಿತ್ತು. ಕೊಲ್ಲೂರಯ್ಯಗೌಡರಿಗೆ ಹಿರಿಯ ಮಗನ ವಿದ್ಯಾಭ್ಯಾಸ ಮುಂದುವರೆಸುವುದು ಅದರೊಂದಿಗೆ ಕಿರಿಯವನ ವಿದ್ಯಾಭ್ಯಾಸ ಮುಂದುವರೆಸುವುದು ಕಷ್ಟವಾಯಿತು. ಹೀಗಾಗಿ ಗೌಡರಿಗೆ ಓದುವುದರೊಂದಿಗ ಜಮೀನಿನ ಕೃಷಿಯ ಬಗ್ಗೆಯೂ ಗಮನಕೊಡಬೇಕಾಗಿ ಬಂತು. ಗದ್ದೆಯ ಹೂಟಿ, ಸೊಪ್ಪುಸೆದೆ ತಂದು ಹಾಕುವ ಕಾಯಕ. ಅಪ್ಪರ ಜೊತೆಗೆ ಗೋಪಾಲ ಗೋಪಾಲಕನೂ ಆಗಿ ಕೆಲಸ ಮಾಡುವ ಪರಿಸ್ಥಿತಿ ಬಂದಿತ್ತು. ಮನೆಯಲ್ಲಿ ಒಬ್ಬ ಓದಿದರೆ ಸಾಕು, ಇನ್ನೊಬ್ಬ ಮನೆಯ ಕಡೆಗೆ ನೋಡಿಕೊಳ್ಳಲಿ ಎಂಬುದು ಗೌಡರ ತಂದೆಯ ಆಸೆಯಾಗಿತ್ತು. ಆದರೆ ಗೌಡರು ಛಲದಿಂದ ತಮ್ಮ ವಿದ್ಯಾಭ್ಯಾಸ ಅಲ್ಲಿಗೆ ನಿಲ್ಲಿಸದೇ ತಮ್ಮ ಅಣ್ಣನ ಸಹಾಯದಿಂದ 1941ರಲ್ಲಿ ಶಿಕಾರಿಪುರದಲ್ಲಿ ಲೋಯರ್ ಸೆಕೆಂಡರಿ ಪರೀಕ್ಷೆ ಮುಗಿಸಿದರು (ಅನುಬಂಧ 2).

ನಂತರದ ದಿನಗಳಲ್ಲಿ ಪುನಃ ಗೌಡರ ವಿದ್ಯಾಭ್ಯಾಸ ನಿಲ್ಲಿಸುವ ಸಂದರ್ಭ ಬಂತು. ಈ ಸಂದರ್ಭದಲ್ಲಿ ನೆರವಿಗೆ ಬಂದವರು ಅವರ ಜೀವನ ಚಿತ್ರಣವನ್ನೇ ಬದಲಾಯಿಸಿದ ಕಾರಣೀಕ ಪುರುಷ ಬಸವರಾಜ ಶಾಸ್ತ್ರಿಗಳು. ಐದು ಅಡಿ ಎತ್ತರದ ಬಡಕಲು ಶರೀರ, ಕಪ್ಪುಬಣ್ಣ, ಆಯುರ್ವೇದ ಪಂಡಿತ, ಭವಿಷ್ಯ ಶಾಸ್ತ್ರ ಪ್ರವೀಣ, ಭೂಗತ ಚಟುವಟಿಕೆಯಲ್ಲಿ ನಿಸ್ಸೀಮ, ಅಲೆಮಾರಿ, ಸಾಹಿತ್ಯ ಸಂಗೀತದಲ್ಲಿ ಅಭಿರುಚಿ ಹಾಗೂ ಸ್ವಾತಂತ್ರ್ಯ ಪ್ರೇಮಿಯಾದ ಬಸವರಾಜ ಶಾಸ್ತ್ರಿಯವರು ಗೌಡರ ಸಹಾಯಕ್ಕೆ ನಿಂತರು. ಗೌಡರಲ್ಲಿ ಧೈರ್ಯತುಂಬಿ, ವಿಶ್ವಾಸ ಹುಟ್ಟಿಸಿ ಅವರ ತಂದೆಯವರಲ್ಲಿ ಮಾತನಾಡಿ ಅವರನ್ನು ಒಪ್ಪಿಸಿ ವಿಧ್ಯಾಬ್ಯಾಸ ಮುಂದುವರೆಸುವಂತೆ ಮಾಡಿದರು.

ಗೌಡರದ್ದು ಎತ್ತರದ ನಿಲುವು, ಗಂಭೀರ, ಕೆಂಪುಮಿಶ್ರಿತ ಕಪ್ಪುಬಣ್ಣದ ದೃಢಕಾಯ ಶರೀರ, ಪ್ರಶಾಂತವಲ್ಲದಿದ್ದರೂ ಉಗ್ರವಲ್ಲದ ಮುಖಕ್ಕೆ ಒಪ್ಪುವ ದೊಡ್ಡ ಕಣ್ಣುಗಳು, ವಿಶಾಲವಾದ ಹಣೆ, ಬಹುತೇಕ ಬೋಳಾಗಿಯೇ ಕಾಣುವ ತಲೆಯಲ್ಲಿ ತೆಳುವಾಗಿ ಹರಡಿದ ಕೂದಲು. ವಿಸ್ತಾರವಾದ ಎದೆ. ನೀಳವಾದ ಕೈಗಳು, ಮೈಮನಗಳೆರಡೂ ಸಾಗರ ಗಾಂಭೀರ್ಯದಿಂದ ಕೂಡಿದ ಗಟ್ಟಿಮುಟ್ಟಾದ ಕಟ್ಟಾಳು. ಒಮ್ಮೆ ನೋಡಿದರೆ ಮತ್ತೊಮ್ಮೆ ನೋಡಬೇಕೆನಿಸುವ ಆಕರ್ಷಕ ನಿಲುವು.

ಗೋಪಾಲಗೌಡರಿಗೆ ಚಿಕ್ಕಂದಿನಿಂದಲೂ ಕಲೆ, ಸಾಹಿತ್ಯದ ಬಗ್ಗೆ ಆಸಕ್ತಿ ಇತ್ತು. ಚಿಕ್ಕಂದಿನಲ್ಲಿ ದನಕಾಯುವಾಗ ಕೊಳಲು ನುಡಿಸುವುದು, ಹಾಡುವುದು, ಯಕ್ಷಗಾನ ನೋಡುವುದು ಮುಂತಾದ ಕಲಾ ಸಾಹಿತ್ಯಾರಾಧಕದಲ್ಲಿ ತೊಡಗಿದ್ದರು. ಇದರೊಂದಿಗೆ ಬಸವರಾಜ ಶಾಸ್ತ್ರಿಯವರಲ್ಲಿ ಸಂಗೀತ ಜ್ಞಾನ ಪಡೆದರು. ಕುಮಾರವ್ಯಾಸ ಭಾರತ, ಜೈಮಿನಿ ಭಾರತ, ಹರಿಶ್ಚಂದ್ರ ಕಾವ್ಯ, ಆಧುನಿಕ ಭಾವಗೀತೆಗಳನ್ನು ಗೌಡರು ಸುಶ್ರಾವ್ಯವಾಗಿ ಹಾಡಬಲ್ಲವರಾಗಿದ್ದರು. ಜೈಮಿನಿ ಭಾರತದಲ್ಲಿ ಸೀತಾಪರಿತ್ಯಾಗವನ್ನು ಹಾಡುತ್ತಿದ್ದರೆ ಕೇಳುಗರು ಭಾವಪರವಶರಾಗಿ ಕಣ್ಣೀರು ಸುರಿಸುತ್ತಿದ್ದುದನ್ನು ಅವರ ಒಡನಾಡಿಗಳು ನೆನಪಿಸಿಕೊಳ್ಳುತ್ತಾರೆ.

ಒಮ್ಮೆ ಗೆಳೆಯರಿಬ್ಬರು ಮನೆಯ ಎದುರುಗಡೆಯ ಕುಶಾವತಿ ನದಿಯಲ್ಲಿ ಬಟ್ಟೆ ಒಗೆಯುತ್ತಿದ್ದರಂತೆ. ಈ ದೃಶ್ಯವನ್ನು ಕಂಡ ದಾವೂದ್ ಸಾಹೇಬರು "ಶಾಸ್ತ್ರಿಗಳೇ, ನೀವು ಉತ್ತಮ ಜಾತಿಯವರು ಮಿಗಿಲಾಗಿ ವಯಸ್ಸಿನಲ್ಲಿ ಹಿರಿಯರು ಜಾತಿಯಲ್ಲಿ ಕೀಳಾದ ಗೌಡರ ಹುಡುಗ ನಿಮ್ಮ ಬಟ್ಟೆ ಒಗೆಯುವುದು ನ್ಯಾಯ ಆದರೆ ನೀವು ಅವನ ಬಟ್ಟೆ ಒಗೆಯುವುದು ಸರಿಯೇ?" ಎಂದು ಕೇಳಿದರಂತೆ. ಅದಕ್ಕೆ ಶಾಸ್ತ್ರಿಯವರು ನಾನು ಈ ಹುಡುಗನ ಬಟ್ಟೆ ಒಗೆಯುವುದು, ಸೇವೆ ಮಾಡುವುದೇನು ಮಹಾ? ಮುಂದೆ ಎಂಥೆಂಥ ಮಹನೀಯರುಗಳು ಆತನ ಸೇವೆಗೆ ಕಾದಿದ್ದಾರೆಯೋ? ಅಂಥ ರಾಜಲಕ್ಷಣ ಆತನದು. ಅವನ ಭವಿಷ್ಯದ ಯೋಗ್ಯತೆ ನಿಮಗೇನು ಗೊತ್ತು? ಅವರಿಗೆ ರಾಜಯೋಗ ಇದೆ ಎಂದು ಆಗಲೇ ಭವಿಷ್ಯ ನುಡಿದಿದ್ದರು. ಎಂಬುದಾಗಿ ದಾವೂದ್ ಸಾಹೇಬರು ನೆನಪಿಸಿಕೊಳ್ಳುತ್ತಾರೆ.

1941ರಲ್ಲಿ ಗೋಪಾಲಗೌಡರು ಹೈಸ್ಕೂಲ್ ವಿದ್ಯಾಭ್ಯಾಸಕ್ಕೆ ತೀರ್ಥಹಳ್ಳಿಯ ಸರ್ಕಾರಿ ಶಾಲೆಯನ್ನು ಸೇರಿದರು. ಆರಂಭದಲ್ಲಿ ಆರಗದಿಂದ ತೀರ್ಥಹಳ್ಳಿಗೆ ಕಾಲುನಡಿಗೆಯಲ್ಲಿ ಹೋಗಿಬರುತ್ತಿದ್ದರು. ಈ ಸಂದರ್ಭದಲ್ಲಿ ಕೊಲ್ಲೂರಯ್ಯಗೌಡರು ಹಿರಿಯ ಮಗ ಧರ್ಮಣ್ಣಗೌಡರೊಂದಿಗೆ ಶಿಕಾರಿಪುರದಲ್ಲಿ ವಾಸ ಮೊಡಲು ಆರಂಭಿಸಿದರು. ಅದೃಷ್ಟವಶಾತ್ ಗೌಡರಿಗೆ ಈ ಸಮಯದಲ್ಲಿ ಸ್ಕಾಲರ್‌ಷಿಪ್ ಮಂಜೂರಾಯಿತು. ಇದರಿಂದಾಗಿ ಅವರು ಒಕ್ಕಲಿಗರ ವಿದ್ಯಾರ್ಥಿ ನಿಲಯಕ್ಕೆ ಸೇರಿಕೊಂಡು ಸಂಪೂರ್ಣ ಓದಿಗಾಗಿ ಈ ಅವಕಾಶ ಬಳಸಿಕೊಂಡರು. ಪಠ್ಯಪುಸ್ತಕದ ಬದಲಿಗೆ ಇತರ ಪುಸ್ತಕಗಳನ್ನು ಪಟ್ಟಾಗಿ ಹಿಡಿದು ಓದಿ ಮುಗಿಸುತ್ತಿದ್ದರು.

ಬಡತನದ ಬೇಗೆ ಇದ್ದರೂ ಜ್ಯೂನಿಯರ್ ಇಂಟರ್ ಪ್ರವೇಶ ಪಡೆದಿದ್ದರು. ವಾಸ್ತವ್ಯಕ್ಕೆ ಎಲ್ಲಿ ಎಂದು ಯೋಚಿಸಿದವರಿಗೆ ನೆನಪಿಗೆ ಬಂದದ್ದು ಆಗಿನ ತೀರ್ಥಹಳ್ಳಿಯಲ್ಲಿದ್ದ ಒಕ್ಕಲಿಗರ ಹಾಸ್ಟೆಲ್. ಭರವಸೆ ಮೂಡಿಸಿದ್ದು ಹೈಸ್ಕೂಲ್ ಸಹಪಾಠಿ ಎನ್. ಕಿಟ್ಟಪ್ಪಗೌಡ ಮ್ಯಾನೇಜರ್ ಎಂಬ ಕಾರಣಕ್ಕಾಗಿ. ಹಾಸ್ಟೆಲ್‌ಗೆ ಅಡ್ವಾನ್ಸ್ ಕೊಟ್ಟರೆ ಮಾತ್ರ ಪ್ರವೇಶವಿದ್ದಕಾಲ. ಗೌಡರ ಬಳಿ ಅಡ್ವಾನ್ಸ್ ನೀಡುವಷ್ಟು ಹಣವಿರಲಿಲ್ಲ. ಧೈರ್ಯಮಾಡಿ ಬೀಡಿ ಸೇದುತ್ತಾ ಕೈಲೊಂದು ಪೆಟ್ಟಿಗೆ ಹಿಡಿದು ಹಾಸ್ಟೆಲ್‌ಗೆ ತೆರಳಿದರು. ಎದುರಾದ ಹಳೆಯ ಸಹಪಾಠಿ ಕಿಟ್ಟಪ್ಪಗೌಡರ ಭೇಟಿ. ಆಪ್ತ ಸಲುಗೆಯಿಂದ

ಏನೋ ಮ್ಯಾನೇಜರ್ ತುಂಭಾ ಸ್ಟ್ರಿಕ್ಟ್ ಅಂತೆ! ಅಡ್ವಾನ್ಸ್ ಇಲ್ಲದೆ ಪ್ರವೇಶವಿಲ್ಲವಂತೆ. ನಮ್ಮಂಥೋರಿಗೆ ಅಡ್ವಾನ್ಸ್ ಕೊಡೋರು ಯಾರು? ಎಂದು ಹೇಳಿ ರೂ. 15ಗಳನ್ನು ಮೇಜಿನ ಮೇಲಿಟ್ಟು ನನ್ನ ಹತ್ತಿರ ಇರೋದೇ ಇಷ್ಟು. ಪ್ರವೇಶ ದೊರಕಿಸಿಕೊಡಿ ಎಂದು ಹೇಳಿದರು. ಹಳೆಯ ಸಹಪಾಠಿತ್ವ, ಬಡತನದ ನೋವು ಗೊತ್ತಿದ್ದ ಕಿಟ್ಟಪ್ಪ ಗೌಡರಿಗೆ ಹಾಸ್ಟೆಲ್ ನಿಯಮ ಭಂಗವಾದರೂ ಪ್ರವೇಶ ನೀಡುವುದು ಅನಿವಾರ್ಯವಾಯಿತು. ಬೀಡಿ ಕಾಫಿಗೂ ಗೆಳೆಯರಲ್ಲಿ ಕಾಸು ಕೇಳುತ್ತಿದ್ದರೂ ಕೈಯಲ್ಲಿ ಹಣವಿದ್ದಾಗ ಉದಾರಿ ಎಂಬುದು ಗೆಳೆಯರ ಅನಿಸಿಕೆ. 1946–47ರಲ್ಲಿ ಅದೇ ಹಾಸ್ಟೆಲ್‌ಗೆ ಮ್ಯಾನೇಜರ್ ಆ ಕೆಲಸ ನಿರ್ವಹಿಸಿದರು. ಮಾನವೀಯತೆಯ ಔದಾರ್ಯತೆ ಆ ಸಂದರ್ಭದಲ್ಲಿ ಆ ಹಾಸ್ಟೆಲ್‌ನಲ್ಲಿ ಊಟಮಾಡದವರೇ ಇಲ್ಲವೆಂಬುದು ಅವರ ಸಂಗಾತಿಗಳ ನೆನಪು. ಈ ನಡುವೆ ಸರ್ಕಾರದ ವಿರುದ್ಧ ಭೂಗತ ಹೋರಾಟದ ಪೋಲೀಸ್ ವಾರೆಂಟ್ ಇದ್ದರೂ ವೇಷ ಮರೆಸಿಕೊಂಡು ಸರ್ಕಾರದ ವಿರುದ್ಧ ತಮ್ಮ ಚಟುವಟಿಕೆಗಳನ್ನು ಮುಂದುವರೆಸಿಕೊಂಡು ಹೋಗುತ್ತಿದ್ದರು.

1942ರ ಕ್ವಿಟ್ ಇಂಡಿಯಾ ಚಳುವಳಿ ಗೌಡರಲ್ಲಿ ದೇಶಭಕ್ತಿಯ ಬೆಂಕಿಯನ್ನು ಮತ್ತಷ್ಟು ತೀವ್ರಗೊಳಿಸಿತು. ಈ ಸಂದರ್ಭದಲ್ಲಿ ವಿದ್ಯಾರ್ಥಿಗಳನ್ನು ಸೇರಿಸಿ ಅವರ ನಾಯಕರಾಗಿ ಸ್ವತಂತ್ರ ಸಮರದಲ್ಲಿ ಧುಮುಕಿದರು. ಪೋಲೀಸರ ಕೈಗೆ ಸಿಕ್ಕದೆ ತಲೆಮರೆಸಿಕೊಂಡು ಚಳುವಳಿಯನ್ನು ಮುಂದು ವರೆಸಿದರು. ಪುನಃ ಓದುವ ಆಸೆಬಲಿಯಿತು. ಪುನಃ ವಿದ್ಯಾರ್ಥಿಯಾಗಿ ಸೀನಿಯರ್ ಇಂಟರ್‌ಮೀಡಿಯೇಟ್ ತರಗತಿಗೆ ಶಿವಮೊಗ್ಗದಲ್ಲಿ ಸೇರಿದರು. ಜೀವನ ನಿರ್ವಹಣೆಗೆ ಒಕ್ಕಲಿಗರ ವಿದ್ಯಾರ್ಥಿನಿಲಯದ ವಾರ್ಡನ್ ಆಗಿ ಕೆಲಸ ಮಾಡುತ್ತಿದ್ದರು. ಈ ಸಮಯದಲ್ಲಿ ಒಕ್ಕಲಿಗ ಜನಾಂಗದವರೊಂದಿಗೆ ಇತರ ಜನಾಂಗದವರು ಸಹ ಒಕ್ಕಲಿಗರ ಹಾಸ್ಟೆಲ್‌ನಲ್ಲಿ ಓದು ಮುಂದುವರೆಸಲು ನೆರವಾದರು.

ತೆಳ್ಳಗೆ ಎತ್ತರವಾದ ಶರೀರ, ಶುಭ್ರ ಖಾದಿ ಉಡುಪು, ಶಿಸ್ತು, ನಿಷ್ಠೆ, ಸರಳ ಸ್ವಭಾವ, ವಿಚಾರವಂತ, ಅಧ್ಯಾಪಕರಾದ ಕಮಕೋಡು ನರಸಿಂಹ ಶಾಸ್ತ್ರಿಗಳು ಗೌಡರ ನೆಚ್ಚಿನ ಗುರು. ಸ್ವಾತಂತ್ರ್ಯ ಹೋರಾಟದ ಕಿಡಿ ಹೊತ್ತಿಸಿದವರು ಈ ಗುರುಗಳು. 1943–44ರಲ್ಲಿ ಹೈಸ್ಕೂಲ್ ಶಿಕ್ಷಣ ಮುಗಿಸಿದರು. 1944ರ ಹೊತ್ತಿಗೆ ಶಿವಮೊಗ್ಗದ ಇಂಟರ್ ಮೀಡಿಯಟ್ ಕಾಲೇಜ್‌ಗೆ ಸೇರಿದರು. ಈ ಸಂದರ್ಭದಲ್ಲಿ ಹಣದ ತೊಂದರೆ ಗೌಡರ ಧೈರ್ಯವನ್ನು ಕುಂದಿಸಲಿಲ್ಲ. ಇದೇ ವೇಳೆಯಲ್ಲಿ ಸರಕಾರಿ ವಿರೋಧಿ ಚಟುವಟಿಕೆಯಲ್ಲಿ ತೊಡಗಿ ಸೆರೆಮನೆ ವಾಸ ಅನುಭವಿಸಿ ನ್ಯಾಯಾಲಯದಲ್ಲಿ ಅಪೀಲು ಮಾಡಿಕೊಂಡಿದ್ದರಿಂದಾಗಿ ಶಿಕ್ಷೆ ರದ್ದಾಗಿ ಹೊರಬಂದಿದ್ದರು. ಶಿವಮೊಗ್ಗ ಕಾಲೇಜಿಗೆ ಸೇರುವ ಮುನ್ನವೇ ಗೌಡರ ಹೆಸರು ಕ್ರಾಂತಿಕಾರಿ ವೀರನೆಂದು ಪ್ರಸಿದ್ಧಿ ಜನರ ನಾಲಿಗೆಯಲ್ಲಿತ್ತು. ಕಾಲೇಜಿಗೆ ಸೇರಿದ ಆರಂಭದಲ್ಲಿ ಬಡತನದ ಕದಂಬ ಬಾಹು ಅವರನ್ನು ತನ್ನತ್ತ ಸೆಳೆಯುತ್ತಿತ್ತು. ಅನ್ನದ ಸಮಸ್ಯೆಯೇ ಭೂತಾಕಾರವಾಗಿದ್ದು ಊಟಕ್ಕಾಗಿ ವಾರದ ಮನೆ, ಅಲ್ಲಿ ನಿರ್ಲಕ್ಷ್ಯ, ತಿರಸ್ಕಾರ ಹೇಗೋ ದೈಹಿಕ ಹಸಿವನ್ನು ಇಂಗಿಸಿಕೊಂಡರೂ ಮಲಗಲು ಸೂರಿನ ಬವಣೆ. ವಿದ್ಯಾರ್ಜನೆಯ ಕಾತರತೆಯಲ್ಲಿ ದೇಹಾರೋಗ್ಯದ ಬಗ್ಗೆ ನಿರ್ಲಕ್ಷ್ಯ. ನಿರಂತರ ಅಧ್ಯಯನ ಮತ್ತು

ಸಹಜ ಪ್ರತಿಭೆಯಿಂದ ವಿಕಾಸಗೊಂಡ ಅವರ ಜ್ಞಾನದ ಮಟ್ಟ ಬೋಧಿಸುವ ಅಧ್ಯಾಪಕರುಗಳಿಗೂ ಆಶ್ಚರ್ಯವನ್ನುಂಟು ಮಾಡುತ್ತಿತ್ತು.

ಹಣದ ತೀವ್ರತರ ಅಡಚಣೆಯಿಂದಾಗಿ ವ್ಯಾಸಂಗ ನಿಲ್ಲಿಸಿ ಊರಿಗೆ ಹಿಂತಿರುಗಬೇಕಾಯಿತು. ಊರಿನಲ್ಲಿ ಡಾಕ್ಟರ್ ಟಿ. ವಿಶ್ವನಾಥ್‌ರವರ ಸಂಪರ್ಕಲಭಿಸಿತು. ಆಗ ಗೌಡರು ಜೀವನ ನಿರ್ವಹಣೆಗಾಗಿ ಬೀಡಿ ಕಟ್ಟುತ್ತಿದ್ದರು, ಹೊಲಿಗೆ ಕೆಲಸವನ್ನು ಕಲಿಯುತ್ತಿದ್ದರು. ಬಡತನದ ಬವಣೆಗೆ ಸಿಲುಕಿ ಓದನ್ನು ಅರ್ಧದಲ್ಲಿಯೇ ಮೊಟಕುಗೊಳಿಸಿ ನಿರುದ್ಯೋಗಿಯಾಗಿ ಊರಿನಲ್ಲಿದ್ದವನನ್ನು ತಾವು ಓದಿದ ಮಾಧ್ಯಮಿಕ ಶಾಲೆಯಲ್ಲಿಯೇ ಕೆಲಸಕ್ಕೆ ಸೇರಿಸಿದರು. ಆರಗದ ಮಾಧ್ಯಮಿಕ ಶಾಲೆಯಲ್ಲಿ ಗೌಡರು ಕೆಲಕಾಲ ಉಪಾಧ್ಯಾಯರಾಗಿ ಇತಿಹಾಸ, ಇಂಗ್ಲೀಷ್‌ನ್ನು ಬೋಧಿಸುತ್ತಿದ್ದರು. ಉಪಾಧ್ಯಾಯ ವೃತ್ತಿಯೊಂದಿಗೆ ಸಮಾಜ ಸೇವಾ ಕಾರ್ಯಕರ್ತರೂ ಆದರು. ವಯಸ್ಕರ ಶಾಲೆ ನಡೆಸುವುದು, ಖಾದಿ ನೂಲು ತೆಗೆಯುವುದು, ಸ್ವಾತಂತ್ರ್ಯ ಹೋರಾಟದ ಬಗೆಗೆ ಚಿಂತಿಸುವುದು, ಹಳ್ಳಿಗರ ಸಮಸ್ಯೆಗಳನ್ನು ಪರಿಶೀಲಿಸಿ ಬಗೆಹರಿಸುವುದು, ಮಹಾಭಾರತ, ರಾಮಾಯಣ ಮುಂತಾದ ಉದಾತ್ತ ಕೃತಿಗಳನ್ನು ಅಭ್ಯಾಸ ಮಾಡುವುದು, ಆಧುನಿಕ ಸಾಹಿತ್ಯ, ಕೃತಿಗಳನ್ನು ಅವಲೋಕಿಸುವುದು, ಇವುಗಳನ್ನು ಜನರ ಮುಂದೆ ಓದಿ ಹೇಳುವುದು ಮುಂತಾದ ಚಟುವಟಿಕೆಗಳಲ್ಲಿ ತೊಡಗಿದ್ದರು. ಇದರಿಂದಾಗಿ ಜನರಲ್ಲಿ ಬೆರೆಯಲು, ಅವರ ಕಷ್ಟ ಸುಖಗಳನ್ನು ಹತ್ತಿರದಿಂದ ಗಮನಿಸಲು ಸಾಧ್ಯವಾಗಿ ಮುಂದೆ ಈ ಅನುಭವವೇ ಅವರ ಬಡವರ ಪಾಲಿನ ಶಕ್ತಿಯಾಗಿ ಹೊರಹೊಮ್ಮಲ್ಲು ಕಾರಣವಾಯಿತು.

ಗೌಡರು ದೇಶವನ್ನು ಸ್ವತಂತ್ರಗೊಳಿಸಲು ತಮ್ಮ ಪ್ರಯತ್ನಗಳನ್ನು ಹಲವಾರು ರೀತಿಗಳಲ್ಲಿ ರೂಪಿಸುಕೊಳ್ಳುತ್ತಿದ್ದರು. ಭೂಗತ ಚಟುವಟಿಕೆಗಳಲ್ಲಿ ನಿಸ್ಸೀಮರಾಗಿದ್ದರು. ಒಮ್ಮೆ ಗೌಡರು ಶಾಸ್ತ್ರೀಯವರೊಂದಿಗೆ ಆರಗದಿಂದ ಹೊರಟು ಅರಸಾಳು ಸೇರಿದರು. ಮುಂದಿನ ಪ್ರಯಾಣ ರೈಲಿನಲ್ಲಿ ಶಿವಮೊಗ್ಗಕ್ಕೆ. ರಾತ್ರಿ ಸಮಯ ರೈಲು ಅವರಿಗೆ ಕೈಕೊಟ್ಟಿತು. ಅಕ್ಕಪಕ್ಕದಲ್ಲಿ ಮನೆಯಿರಲಿಲ್ಲ. ಸುತ್ತ ದಟ್ಟಕಾಡು. ಕಳ್ಳಕಾಕರ ಭೀತಿ. ಸ್ಟೇಷನ್ ಎದುರು ಒಂದೇ ಒಂದು ಹೋಟೆಲ್. ಅವರಿಬ್ಬರೂ ಆ ದಿನ ಅಲ್ಲಿಯೇ ತಂಗಲು ನಿರ್ಧಾರ. ಹೋಟೆಲ್ ಮಾಲೀಕನನ್ನು ಮಲಗಲು ಜಾಗ ಕೇಳಿದರು. ಆದರೆ ಆತ ಅನುಮಾನಗೊಂಡು ನಿರಾಕರಿಸಿದ. ದೇಶಾಭಿಮಾನಿ ಈ ತರುಣನಲ್ಲಿ ಆತ್ಮಾಭಿಮಾನ ಹೆಡೆ ಬಿಚ್ಚಿತ್ತು. ಇದರಿಂದ ಘರ್ಷಣೆ, ಅದಕ್ಕೆ ಜನ ಕೈಕಾಲಿಲ್ಲದ ಕತೆಕಟ್ಟಿದರು. ಹುಚ್ಚು, ಬುದ್ಧಿಭ್ರಮಣೆ, ತಲೆ ಕೆಟ್ಟುಹೋಗಿದೆ ಎಂದರು. ಈ ಸ್ಥಿತಿ ಅಣ್ಣನ ಚಿತ್ತವನ್ನು ಕಲಕಿತು. ಈ ಹುಚ್ಚು ಬಿಡಿಸಲು ತಣ್ಣೀರಿನ ಅಭಿಷೇಕದ ಉಪಚಾರ. ಈ ಸ್ಥಿತಿ ದೇಶಪ್ರೇಮಿ ತರುಣನ ಬೇಯುವ ಮನಸ್ಸಿಗೆ ಬದುಕನ್ನು ಅಸಹ್ಯವಾಗಿಸಿತು. ಊರಿನ ಜನರು ಹುಡುಗನಿಗೆ ಹುಚ್ಚೆಂದು, ಬ್ರಾಹ್ಮಣರು ಓದುವ ರಾಮಾಯಣ, ಮಹಾಭಾರತ, ಭಗವದ್ಗೀತೆ ಇತ್ಯಾದಿ ಹಾಳುಮೂಳನ್ನು ಈ ಶೂದ್ರ ಹುಡುಗ ಓದಿದ್ದರಿಂದ ಆತನಿಗೆ ತಲೆಕೆಟ್ಟಿದೆ ಎಂಬ ವದಂತಿ ಹುಟ್ಟಿಸಿದರು.

ಹುಡುಗನಿಗಾದ ಆಶಾಭಂಗ, ಮಾನಸಿಕ ಕ್ಷೋಭೆಯನ್ನು ಯಾರೂ ಗುರುತಿಸುವ ಪ್ರಯತ್ನ ನಡೆಸಲಿಲ್ಲ. ಗೌಡರ ಬದುಕಿನ ಹಲವು ಅನಿರೀಕ್ಷಿತಗಳಂತೆ ಆರಗದಲ್ಲಿದ್ದ ಖಾಸಗಿ ಚಿಕಿತ್ಸಾಲಯದ ಡಾಕ್ಟರರೊಬ್ಬರ ಭೇಟಿಯೂ ಆಯಿತು. ಅದು ಗೌಡರ ಅಪೇಕ್ಷೆಯಂತೆ ಆದದ್ದು ಅಲ್ಲ. ಹುಚ್ಚನೋ ಅಲ್ಲವೋ ಎಂದು ತಿಳಿದುಕೊಳ್ಳುವ ಸಲುವಾಗಿ ಕರೆದುಕೊಂಡು ಬಂದ ಅವರ ಅಣ್ಣ ಶ್ರೀ ಧರ್ಮಯ್ಯಗೌಡರಿಂದ ಆದದ್ದು. ಡಾ. ಟಿ. ವಿಶ್ವನಾಥರಾವ್. ರವರು ಹುಡುಗನ ಮಂಕುತನ ಆಶಾಭಂಗದಿಂದ ಉಂಟಾದದ್ದು ಎಂಬುದನ್ನು ಗುರುತಿಸಿದ್ದಲ್ಲದೆ ಆರೋಗ್ಯ ವಿಜ್ಞಾನಕ್ಕೆ ಸಂಬಂಧಿಸಿದಂತೆ ಒಂದು ಲೇಖನವನ್ನು ಅನುವಾದಿಸುವ ಕೆಲಸ ಹಂಚಿದರು. ಪುನಃ ತಿದ್ದುಪಡಿ ಮಾಡಲಾರದಷ್ಟು ಸೊಗಸಾಗಿ ಸಮರ್ಥವಾಗಿ ಅನುವಾದ ಮಾಡಲ್ಪಟ್ಟ ಲೇಖನ ಪತ್ರಿಕೆಯಲ್ಲಿ ಪ್ರಕಟವಾದದ್ದು ಮಾತ್ರವಲ್ಲದೆ ಅದು ಗೌಡರಲ್ಲಿ ಭರವಸೆ ಹುಟ್ಟಿಸಿತು. ಮೊಟ್ಟ ಮೊದಲು ತನ್ನ ಹೆಸರಿನಲ್ಲಿ ಪ್ರಕಟವಾದ ಲೇಖನದಿಂದ ಉಲ್ಲಾಸಗೊಂಡು ಡಾ. ವಿಶ್ವನಾಥರ ಮತ್ತು ಸ್ವಸಂಗ್ರಹದ ಪುಸ್ತಕಗಳನ್ನು ಹುರುಪಿನಿಂದ ಓದಿದಲ್ಲದೆ ಡಾಕ್ಟರ್‌ರಿಗೂ ಆಗಾಗ ವಿವರಿಸತೊಡಿಗಿದರಂತೆ. ಅಂದಿನ ಆತನ ಮಾನಸಿಕ ಚಿಕಿತ್ಸೆಗೆ ಯಾವುದಾದರೂ ಕೆಲಸವೇ ಔಷಧವೆಂದು ತೀರ್ಮಾನಿಸಿದ ಅವರು ತೀರ್ಥಹಳ್ಳಿಯ ಶಾಲಾ ಇನ್ಸ್‌ಪೆಕ್ಟರ್ ಅವರಿಗೆ ಅರ್ಜಿ ಸಲ್ಲಿಸಲು ಸಲಹೆ ಕೊಟ್ಟರು. ಆರಗದ ನ್ಯೂಟೈಪ್ ಮಿಡ್ಲ್‌ಸ್ಕೂಲ್‌ನಲ್ಲಿ ಮೇಸ್ಟರಾಗಿ ಕೆಲಸ ಸಿಕ್ಕಿತು. ಅಲ್ಲಿಯೇ ಇಂಗ್ಲೀಷ್ ಮಾಸ್ತರಾಗಿದ್ದ ನಾಗನಂದರ ಒಡನಾಟ, ಆತ್ಮೀಯ ಸಲಹೆ ಯಕ್ಷಗಾನದಲ್ಲಿ ಭಾಗವಹಿಸುವ ಚಟುವಟಿಕೆಗಳ ಮೂಲಕ ಮನಸ್ಸನ್ನು ಸಮಸ್ಥಿತಿಗೆ ತಂದುಕೊಂಡರು. (ಜೀವಂತಜ್ವಾಲೆ-589) ತಮ್ಮ ಬಗ್ಗೆ, ತಾವು ಮಾಡುತ್ತಿರುವ ಕಾರ್ಯದ ಬಗ್ಗೆ ಗೌಡರಲ್ಲಿ ಅನುಮನ ಮೂಡತೊಡಗಿತ್ತು. ಮರುಗಳಿಗೆಯಲ್ಲಿಯೇ ದೇಶಾಭಿಮಾನದ ಕಿಚ್ಚು ಅವರಲ್ಲಿ ಅಪಮಾನದ ಹೊಗೆಯನ್ನು ಶಮನಗೊಳಿಸುತ್ತಿತ್ತು. ಹೀಗಾಗಿ ತಾವು ಮಾಡುತ್ತಿರುವ ಚಳುವಳಿಯಿಂದ ಹಿಂದೆ ಸರಿಯುವ ಪ್ರಯತ್ನ ಮಾಡಲಿಲ್ಲ.

ಗೋಪಾಲಗೌಡರು ಸಮಾಜವನ್ನು ಆವರಿಸಿರುವ ಗೊಡ್ಡು ಸಂಪ್ರದಾಯಗಳು, ಜಿಡ್ಡು ನಂಬಿಕೆಗಳು, ದುರಾಚಾರದ ದುಷ್ಟ ವಿಧಿಗಳ ವಿರುದ್ಧ ಹೋರಾಟ ನಡೆಸಿದ ಧೀಮಂತ. ಒಮ್ಮೆ ತೀರ್ಥಹಳ್ಳಿಯ ಮುಳುಬಾಗಿಲು ಮಠದ ಸ್ವಾಮಿಗಳು, ಅಲ್ಲಿನ ರಸ್ತೆಯ ಬದಿಯಲ್ಲಿ ನಿಂತು, ಗೌಡರನ್ನು ಕಂಡು ತಮ್ಮ ಮಠಕ್ಕೆ ಭೇಟಿಕೊಡಬೇಕೆಂದು ಆಹ್ವಾನಿಸಿದರು. ಆಗ ಅವರು "ನಿಮ್ಮ ಬಗ್ಗೆ ವೈಯಕ್ತಿಕ ಗೌರವ, ವಿಶ್ವಾಸವಿದೆ. ಆದರೆ ದೇವರು, ಧರ್ಮಗಳ ಬಗ್ಗೆ ನನ್ನದೇ ಆದ ಅಭಿಪ್ರಾಯವಿದೆ. ಮಠ, ಸ್ವಾಮಿ, ಸಂಪ್ರದಾಯಗಳ ಬಗ್ಗೆ ವಿರೋಧವಿದೆ. ನನ್ನ ದೃಷ್ಟಿಯಲ್ಲಿ ಕಾವಿ ಬಡವರ ಶೋಷಣೆಯ ಸಂಕೇತ ಎಂಬ ಭಾವನೆ ಇರುವವನು. ಆದರೆ ನಿಮ್ಮಲ್ಲಿಗೆ ಬರಲಿಕ್ಕೆ ಅಭ್ಯಂತರವಿಲ್ಲ. ಅಲ್ಲಿ ನಾನು ಒಂದು ತೊಟ್ಟು ನೀರನ್ನೂ ಸ್ವೀಕರಿಸುವುದಿಲ್ಲ ಎಂದು ಹೇಳಿದರಂತೆ. ಸ್ವಾಮಿಗಳು ಅವರನ್ನು ಆಧರದಿಂದ ಸ್ವಾಗತಿಸಿ ಕಳುಹಿಸಿಕೊಟ್ಟರಂತೆ. ಅವರ ಸ್ಥಿತಿಯೂ ಅಷ್ಟಕಷ್ಟೆ ಅವರ ಜೇಬು ಯಾವಾಗಲೂ ಖಾಲಿಯೇ ದುಡ್ಡಿದ್ದಾಗ ಸಿಗರೇಟು ಸೇದುತ್ತಿದ್ದರು. ಕಡಿಮೆ ಇದ್ದಾಗ ಬೀಡಿ ಸೇದುತ್ತಿದ್ದರು. ಏನೂ ಇಲ್ಲದ್ದಿದ್ದರೆ ಸುಮ್ಮನೆ ಇರುತ್ತಿದ್ದರು. ಅಂತಹ

ಸಂದರ್ಭದಲ್ಲಿ ಅವರ ಗುಣ ಸ್ವಭಾವ ಕಂಡವರು ಸಿಗರೇಟು ಕೊಟ್ಟರೆ ತೆಗೆದುಕೊಳ್ಳುತ್ತಿದ್ದರು. ಇಲ್ಲದಿದ್ದರೆ ತಾವಾಗಿಯೇ ಕೇಳುತ್ತಿರಲಿಲ್ಲ ಮುಟ್ಟುತ್ತಿರಲಿಲ್ಲ. ಇಂತಹ ಆರ್ಥಿಕ ದುಃಸ್ಥಿತಿಯಲ್ಲೂ ಜನಹಿತವನ್ನು ಅವರು ಕಡೆಗಣಿಸಲಿಲ್ಲ.

ಒಮ್ಮೆ ಗೌಡರು ತಮ್ಮೂರಿನಿಂದ ಬಂದ ಬಳಗದೊಂದಿಗೆ ವಿಧಾನ ಸೌಧಕ್ಕೆ ಬಂದರು. ಗೌಡರ ಬಳಗ ಅಲ್ಲಿಗೆ ಬರುವುದಕ್ಕೂ ಕೃಷ್ಣಪ್ಪನವರು ತಮ್ಮ ಕೊಠಡಿಯಿಂದ ಹೊರಬರುವುದಕ್ಕೂ ಸರಿಯಾಯಿತು. ಇಬ್ಬರೂ ಎದುರಾದರು. ಕೃಷ್ಣಪ್ಪನವರು ಕಂದಾಯ ಸಚಿವರಾಗಿದ್ದರು. ಅವರು 'ಏನು ಗೌಡ್ರೇ, ಈಗ ಇತ್ತ' ಎಂದರು. ಆಗ ಗೌಡರು ನಮ್ಮೂರ ಹುಡುಗರು ಬಂದಿದ್ದರು ಅವರಿಗೆ ವಿಧಾನ ಸೌಧ ತೋರಿಸಿಕೊಂಡು ಬರೋಣವೆಂದುಕೊಂಡು ಬಂದೆ ಎಂದು ಹೇಳಿ ಹೋಗಲು ಮುಂದಾದರು. ಈ ಸಂದರ್ಭದಲ್ಲಿ ಗೌಡರೊಂದಿಗಿದ್ದವರು ಸ್ವಾಮಿ ನಾವು ವಿಧಾನ ಸೌಧ ನೋಡಲು ಬರಲಿಲ್ಲ. ಇವರಣ್ಣ ಧರ್ಮೆಗೌಡರಿಗೆ ವರ್ಗಾವಣೆಯಾಗಿದೆ. ಅದನ್ನು ರದ್ದುಮಾಡಿ ಎಂದು ನಾಲ್ಕೈದು ದಿನಗಳಿಂದ ಕಾಡಿಸುತ್ತಿದ್ದೇವೆ. ಆದರೆ ಇವರು ಅದನ್ನು ಕಿವಿಗೆ ಹಾಕಿಕೊಳ್ಳುತ್ತಿಲ್ಲ ಎಂದು ತಿಳಿಸಿದರು. ಆಗ ಕೃಷ್ಣಪ್ಪನವರು ಆ ತಕ್ಷಣ ವರ್ಗಾವಣೆಯನ್ನು ರದ್ದುಪಡಿಸಿದರು. ವೈಯಕ್ತಿಕ ಕೆಲಸಕ್ಕಿಂತ ಅದರಲ್ಲೂ ತಮ್ಮ ಸ್ವಂತ ಅಣ್ಣನ ಸಮಸ್ಯೆಯನ್ನು ಬಗೆಹರಿಸಲು ಬಳಸಿಕೊಳ್ಳದ ವ್ಯಕ್ತಿತ್ವ ಅದು.

ಒಮ್ಮೆ ಅವರ ಅನುಯಾಯಿ ಅಧ್ಯಾಪಕರೊಬ್ಬರು ಬಂದು ತಮ್ಮ ಮಗನಿಗೆ ಕೆಲಸ ಕೊಡಿಸಿ ಎಂದು ಕೇಳಿಕೊಂಡರು. ಗೌಡರು ಆಗಲಿ ಎಂದರು. ಅಷ್ಟಕ್ಕೆ ಸುಮ್ಮನಾಗದೇ ಆ ಮನುಷ್ಯ ಗೌಡ್ರೆ ಕೆಲಸ ಕೊಡಿಸ್ಲೇ ಬೇಕು ಎಂದರು. ಇದರಿಂದ ಸಿಟ್ಟಾದ ಗೌಡರು 'ನೀನು ಏನು ಮಾಡುತ್ತಿದ್ದೀಯಾ, ಎಷ್ಟು ಸಂಬಳಬರುತ್ತದೆ? ಜಮೀನು ಎಷ್ಟಿದೆ? ಎಂದು ಕೇಳಿ ನಿನಗೆ ಕೆಲಸ ಕೊಡಿಸುವುದಕ್ಕೆ ಆಗುವುದಿಲ್ಲ. ನಿನಗೆ ಸಂಬಳ ಬರುತ್ತದೆ. ಜೊತೆಗೆ ಹೆಚ್ಚುವರಿ ಆದಾಯ ಇದೆ ನಿನಗಿಂತ ವರಮಾನ ಕಡಿಮೆ ಇದ್ದವರಿಗೆ ಕೆಲಸಕೊಡಿಸಿ ಆಮೇಲೆ ನಿನಗೆ ಕೊಡಿಸ್ತೀನಿ ಹೋಗು ಎಂದು ನಿಷ್ಠುರವಾಗಿ ಹೇಳಿಬಿಟ್ಟರು. ಖಂಡಿತ ವಾದಿಯಾಗಿ ಛಲವಾದಿ ಕೂಡ ಆಗಿದ್ದರು.

ಒಮ್ಮೆ ಗೌಡರು ತೀರ್ಥಹಳ್ಳಿಯಲ್ಲಿದ್ದಾಗ ಅವರ ಸ್ನೇಹಿತರೊಬ್ಬರು ಅಲ್ಲಿನ ಆಸ್ಪತ್ರೆ ಡಾಕ್ಟರ್ ಬಗ್ಗೆ ದೂರು ಹೇಳಿದರು. ಅದೇ ಸಮಯಕ್ಕೆ ಸರಿಯಾಗಿ ಆ ಡಾಕ್ಟರ್ ಸಹ ಗೌಡರನ್ನು ನೋಡಲು ಅಲ್ಲಿಗೆ ಬಂದರು. ಗೌಡರು ಕೋಪೋದ್ರಿಕ್ತರಾಗಿ ಆ ಡಾಕ್ಟರ್ ರವರಿಗೆ ಛೀಮಾರಿಹಾಕಿದರು. ಸಿಟ್ಟು ಕಡಿಮೆ ಆದ ಅವರಿಗೆ ತಮ್ಮ ಸ್ನೇಹಿತರು ತಮ್ಮನ್ನು ತಪ್ಪುದಾರಿಗೆಳೆದಿರುವುದನ್ನು ಮನವರಿಕೆ ಮಾಡಿಕೊಂಡರು. ಡಾಕ್ಟರದ್ದು ತಪ್ಪಿಲ್ಲ, ವಿನಾಕಾರಣ ಅವರ ಮನಸ್ಸು ನೋಯಿಸಿದೆ ಎಂದು ಪಶ್ಚಾತ್ತಾಪ ಪಟ್ಟು, ಆ ಕೂಡಲೆಯೇ ಡಾಕ್ಟರ್ ಮನೆಗೆ ಹೋಗಿ ದಯವಿಟ್ಟು ನಿಮ್ಮ ಕರ್ತವ್ಯವನ್ನು ನೀವು ಮಾಡಿ ನನ್ನನ್ನು ಕ್ಷಮಿಸಿ ಎಂದು ಕೇಳಿಕೊಂಡರು. ಇಂತಹ ಸಂವೇದನಾಶೀಲಾ ವ್ಯಕ್ತಿಯನ್ನು ಶಾಸಕರಾಗಿ ನೋಡುವುದು ಇಂದಿನ ದಿನಗಳಲ್ಲಿ ಸಾಧ್ಯವಾಗಲಾರದ ಮಾತು.

ಗೌಡರದು ಬಡವರ ಪಾಲಿಗೆ ಕರುಣಾಜನಕ ಹೃದಯ ಒಂದೆಡೆಯಾದರೆ ಜನವಿರೋಧಿ, ಜೀವವಿರೋಧ ಸಂದರ್ಭಗಳಲ್ಲಿ ಉಗ್ರರೂಪತಾಳುತ್ತಿದ್ದರು. ಸ್ವಾರ್ಥಿ, ಲೋಭಿ, ಸಮಾಜಘಾತುಕರನ್ನು ಕ್ಷುದ್ರರು ಎಂದು ತೋರಿಸಲು ಕೋಪವನ್ನು ಒಂದು ಶಕ್ತಿಯನ್ನಾಗಿ ಬಳಸಿಕೊಂಡಿದ್ದರು. ಒಮ್ಮೆ ಅವರು ಎಂ.ಎಲ್.ಎ ಆಗಿದ್ದ ಸಂದರ್ಭ. ಶಿವಮೊಗ್ಗದ ಭೃಂದಾವನ ಹೋಟೆಲ್‌ನಲ್ಲಿ ತಂಗಿದ್ದರು. ಆಗ ಅವರ ಜೊತೆಯಲ್ಲಿ ಮೇಗರವಳ್ಳಿಯ ಎಂ.ಡಿ. ಶೇಷಪ್ಪ ಹೆಗ್ಡೆ ಇದ್ದರು. ಗೌಡರು ಕೋಣೆಯ ಮೂಲೆಯಲ್ಲಿ ಕನ್ನಡಿಗೆ ಎದುರಾಗಿ ಕುಳಿತು ಮುಖಕ್ಷೌರ ಮಾಡಿಕೊಳ್ಳುತ್ತಿದ್ದರು. ಒಬ್ಬರು ನ್ಯಾಮತಿಯ ಕಡೆಯ ಸಾಹುಕಾರರು ಗೌಡರನ್ನು ನೋಡಲು ಬಂದು ನಮಸ್ಕಾರ ಹೇಳುತ್ತಾ ಕೋಣೆಯಲ್ಲಿ ಕುಳಿತರು. ಅದುಇದು ಮಾತನಾಡುತ್ತಾ ಸಹಜವಾಗಿಯೇ ತಮಗೆ ಎಂ.ಎಲ್.ಎ. ಕಾರ್ ಕೋಟಾ ಅಲಾಟ್ ಆಗಿರಬೇಕಲ್ಲ? ಎಂದು ಗೌಡರನ್ನು ಕೇಳಿದರು. ಗೌಡರು ಅಷ್ಟೆ ನಿರ್ಲಿಪ್ತರಾಗಿ 'ನಮ್ಮಂಥವರಿಗೆ ಕಾರ್ ಏಕೆ? ಎಲ್ಲೋ ಆ ಕಾರ್ಡ್, ಟ್ರಂಕ್ ಮೂಲೆಯಲ್ಲಿ ಬಿದ್ದಿರಬೇಕು ಎಂದರು. ಸಾಹುಕಾರರು ಆಸೆಯ ಧ್ವನಿಯಲ್ಲಿ ತಮಗೆ ಬೇಡವಾದರೆ ನಮ್ಮಂಥವರಿಗೆ ಕೊಡಬಹುದಲ್ಲಾ ಅಂದರು. ಅದಕ್ಕೆ ಗೌಡರು ಶಾಸಕನಿಗೆ ತನ್ನ ಕ್ಷೇತ್ರ ಸುತ್ತಲು ಉಪಯೋಗ ಆಗ್ಲಿ ಅಂತ ಸರ್ಕಾರ ಕೋಡ್ತೋದು ಎಂದು ಹೇಳಿ ಮಾತು ಮುಗಿಸುವ ಮೊದಲೇ ಹತ್ತು ಸಾವಿರ ಬೇಕಾದರೆ ಕೊಡುತ್ತೀನಿ ಎಂದು ಇಳಿಧ್ವನಿಯಲ್ಲಿ ಸಾಹುಕಾರ ಗೌಡರನ್ನು ಕೇಳಿಕೊಂಡರು. ಆಗಲೇ ಗೌಡರ ಕಣ್ಣು ಕೆಂಪಗಾದವು. ಮುಖ ಕೆಂಪಾಗಿ ಕೋಪದಿಂದ ಆರಂಭದಲ್ಲಿ ಸಾಹುಕಾರರೇ ಎಂದವರು ಕೋಪದ ಭರದಲ್ಲಿ 'ಲೇ ಸಾಹುಕಾರ ಎಡದಾ ಮಗ್ಗಲ್ಲಿ ಎದ್ದೀಯೇನೋ, ಇಲ್ಲಿಂದ ಮರ್‍ಯಾದೆಯಾಗಿ ಹೊರಟೋಗ್ತಿಯೋ ಇಲ್ಲೋ...... ಹೋಗು, ಎದ್ಹೋಗು' ಎಂದು ಅವಸರಿಸಿದರಂತೆ. ಅಲ್ಲಿದ್ದವರು ಸಾಹುಕಾರರಿಗೆ ಅಲ್ಲಿಂದ ಹೊರಹೋಗುವಂತೆ ತಿಳಿಸಿದರಂತೆ. ಹೋಗುವಾಗ ಗೌಡರಿಗೆ ನಮಸ್ಕಾರ ಎಂದು ಹೇಳಿದರೂ ಗೌಡರು ಅದಕ್ಕೆ ಪ್ರತಿಕ್ರಿಯಿಸದೆ ನಿಂತಿದ್ದರಂತೆ. ಗೌಡರು ಬಡವರ ಸಂಕಷ್ಟಗಳಲ್ಲಿ ಒಂದಾಗುವವರು, ಶ್ರೀಮಂತರ ಧರ್ಪಗಳಲ್ಲಿ ಅಷ್ಟೇ ಕಠಿಣವಾಗಿ ವರ್ತಿಸುವುದನ್ನು ಮೇಲಿನಂತಹ ಸಾಕಷ್ಟು ಘಟನೆಗಳಲ್ಲಿ ಗಮನಿಸಬಹುದಾಗಿತ್ತು.

ಚುನಾವಣೆಯಲ್ಲಿ ಸೋಲುಗೆಲುವನ್ನು ಸಮಾನವಾಗಿ ಸ್ವೀಕರಿಸುತ್ತಿದ್ದರು. ಗೌಡರಿಗಿಂತ ಗೌಡರ ಹಿಂಬಾಲಕರೇ ಹೆಚ್ಚು ಆತಂಕಗೊಳ್ಳುತ್ತಿದ್ದರು. ಇಂತಹ ಸಂದರ್ಭಗಳಲ್ಲಿ ಗೌಡರೇ ಹಿಂಬಾಲಕರನ್ನು ಸಂತೈಸುತ್ತಿದ್ದರು. ಸೋತಾಗ ತಾವೇ ಸೋತೆನೆಂದು ಬೇಸರಿಸುವ ಗೆದ್ದಾಗ ತಾವೇ ಗೆದ್ದೆವೆಂಬ ಅವರ ಹಿಂಬಾಲಕರ ನಡಾವಳಿ ಗೌಡರ ಅಂತಃಸತ್ವದ ಪರಿಚಯ ಮಾಡಿಸುತ್ತಿತ್ತು. ಚುನಾವಣೆಯಲ್ಲಿ ಗೌಡರು ಸೋಲುಗೆಲುವುಗಳನ್ನು ಉತ್ಸಾಹ ಪೂರ್ವಕವಾಗಿ ತೆಗೆದುಕೊಂಡು ಚುನಾವಣೆ ಮುಗಿದ ಬಳಿಕ ತಮ್ಮ ಹಿಂಬಾಲಕರಿಗೆ ಬೇಸರವೆನಿಸಿದರೂ ಎದುರು ಪಕ್ಷದವರೊಂದಿಗೆ ನಡೆದುಕೊಳ್ಳುತ್ತಿದ್ದ ರೀತಿ ನಿಜವಾದ ಪ್ರಜಾಪ್ರಭುತ್ವ ಗೌರವಿಸುವ ಮನುಷ್ಯನ ಘನತೆಗೆ ತಕ್ಕಂತೆ ಇರುತ್ತಿದ್ದವು.

ಗೌಡರ ಸರಳತೆ ಮತ್ತು ಜೀವನದ ಗುರಿಯ ಒಂದೇ ಒಂದು ಸಂದರ್ಭವನ್ನು ಹೀಗೆ ನೆನಪಿಸಿಕೊಳ್ಳಬಹುದಾಗಿದೆ. ಒಮ್ಮೆ ಗೌಡರು ಹೊಸನಗರದ ಕಡೆಯ ಹೆಸರುವಾಸಿಯಾದ ಶ್ರೀಮಂತರ ಮನೆಗೆ ಹೋದರಂತೆ. ಸಾಹುಕಾರರನ್ನು ಭೇಟಿಮಾಡಿ ಗೌಡರು, ಬಡವರು ಓಟು ಕೊಡುತ್ತಾರೆ, ನೀವು ದುಡ್ಡುಕೊಡಬೇಕು ಎಂದು ತಮ್ಮ ನೇರನುಡಿಯಲ್ಲಿ ಕೇಳಿದರಂತೆ. ಅಷ್ಟರಲ್ಲಿ ಸಾಹುಕಾರರು ಯಾವುದೋ ಕೆಲಸ ನಿಮಿತ್ತ ಮನೆಯ ಒಳಗೆ ಹೋದರು. ಪಕ್ಕದಲ್ಲಿದ್ದ ಶೇಷಪ್ಪ ಹೆಗ್ಡೆಯವರು ಅರಮನೆಯಂಥ ಮನೆಯ ಜಂತಿ ಬಾಗಿಲುಗಳನ್ನು ಬಿಟ್ಟ ಕಣ್ಣಲ್ಲಿ ನೋಡುತ್ತಿದ್ದರು. ಗೌಡರ ಗಮನಕ್ಕೆ ಬಂದು "ಶೇಷಪ್ಪ, ಬಹಳ ಬಹಳ ಜನರ ಗೋಣು ಮುರಿದು ಕಟ್ಟಿದ ಮನೆ ಕಣೋ, ನೀನ್ಯಾಕೆ ಹಾಗೆ ಕುತ್ತಿಗೆ ಮುರಕೊಂಡು ನೋಡ್ತಿಯೋ'' ಎಂದು ಮಾರ್ಮಿಕವಾಗಿ ನುಡಿದರಂತೆ. ನಂತರ ಸಾಹುಕಾರರು ಹೊರಗೆ ಬಂದ ಮೇಲೆ ಗೌಡರು ನೀವು ನಮ್ಮ ಒಡೇರು ಅಂದ್ರಂತೆ. ತಾವು ಅಂಥಾ ಮಾತು ಹೇಳಬಾರದು. ನಿಮಗೆ ಹಳೆ ಜಮೀನು ಬಿಟ್ಟುಕೊಡ್ತೀವಿ, ಒಂದು ಚಿಕ್ಕ ಬಂಗ್ಲೇನೋ ಕಟ್ಟಿಸಿಕೊಡ್ತೀನಿ. ನೀವು ಎಲೆಕ್ಷನ್ನಿನಿಂದ ಹೊರಗೆ ಬನ್ನಿ ಅಂದರು. ಗೌಡರಿಗೆ ಸಿಟ್ಟು ಬಂದರೂ ತೋರಿಸಿಕೊಡದೆ ತಾವು ಹೇಳೋದು ನನ್ನ ಒಳ್ಳೆಯದಕ್ಕೆ ನನ್ನ ನೀವು ಅರ್ಥಮಾಡಿಕೊಂಡಿಲ್ಲ. ನಾನು ರಾಜಕೀಯಕ್ಕೆ ಬಂದಿರೋದು ಮನೆ, ಆಸ್ತಿ, ಹಣ ಮಾಡುವ ದೃಷ್ಟಿಯಿಂದಲ್ಲ. ನನ್ನ ಜೀವಿತದಲ್ಲಿ ಜನತೆಗೆ ನಿಜವಾದ ಸೇವೆ ಮಾಡ್ಬೇಕು ಅನ್ನೋದು. ಏನೋ ಆ ಕಾಲದಲ್ಲಿ ನನ್ನ ಅಕ್ಕ ಅಣ್ಣನನ್ನು ಸಾಕಲು ನಮ್ಮ ತಂದೆ ತಮ್ಮಲ್ಲಿ ಸಾಲ ಮಾಡಿದ್ರು. ಕೊನೆಗೆ ಅವರು ಮಕ್ಕಳನ್ನು ಏಕೆ ಈ ಒಡೆಯರ ಸಾಲದಲ್ಲಿ ಹಾಕಲಿ ಅಂತ ಜಮೀನು ಕೊಟ್ಟು ಋಣ ಪರಿಹಾರ ಮಾಡ್ಕೊಂಡಿದ್ದಾರೆ. ಜನರು ನಂಬೋ ಹಾಗೆ ನರಕ, ಸ್ವರ್ಗಗಳು ಇರೋದಾದ್ರೆ ಅದನ್ನು ವಾಪಸ್ಸು ತಗೊಂಡು ನಾನ್ಯಾಕೆ ನರಕಕ್ಕೆ ಹೋಗಲಿ ಎಂದರಂತೆ. ಹೀಗೆ ನಿರ್ಧಿಷ್ಟ ಮತ್ತು ಸ್ಪಷ್ಟ ರಾಜಕೀಯತೆಯ ಗುರಿ ಅವರಲ್ಲಿ ಅಚ್ಚಳಿಯದೇ ಮನೆಮಾಡಿತ್ತು. ಇದು ಅವರ ರಾಜಕೀಯ ಭಾಷಣಗಳಲ್ಲಿ ಹೊರಬರುತ್ತಿತ್ತು. ಗೌಡರು ಚುನಾವಣಾ ಪ್ರಚಾರಕ್ಕೆ ಬರುತ್ತಾರೆಂದರೆ ಅವರನ್ನು ಕಾಯುವುದರಲ್ಲಿಯೇ ಜನ ಖುಷಿಕಾಣುತ್ತಿದ್ದರು. ರಾತ್ರಿ ಬಹಳ ತಡವಾದರೂ ಜನರು ಅಗ್ಗಿಷ್ಟಿಕೆ ಹಾಕಿಕೊಂಡು ಡಿಸೆಂಬರ್ ಚಳಿಯಲ್ಲಿ ಕಾಯುತ್ತಿದ್ದರು. ಗೌಡರ ಬಗ್ಗೆ ಹಳ್ಳಿಯ ಜನ ಯಾವ ಪ್ರೀತಿಯ ಭಾವನೆ ಇಟ್ಟಿದ್ದರು ಎನ್ನುವುದಕ್ಕೆ ಸಾಕ್ಷಿಯಾಗುತ್ತದೆ. ಅವರ ಭಾಷಣದಲ್ಲಿ ನಿರ್ಲಿಪ್ತತೆ ಹಾಸ್ಯ, ಸಾಹಿತ್ಯ, ಗಂಭೀರ ಚಿಂತನೆ ಎಲ್ಲವೂ ಇರುತ್ತಿತ್ತು. ತಮ್ಮ ಮಾತು ಜನರ ಸಮಸ್ಯೆಯ ಪ್ರತಿರೂಪವೇ ಆಗುತ್ತಿತ್ತು.

ಶುಚಿಯಾಗಿದ್ದು ಶುಭ್ರವಾದ ಮತ್ತು ಚಿಂದಿಯಾದರೂ ಅವುಗಳನ್ನೇ ಧರಿಸಿ ನೀಟಾಗಿ ದಿರಿಸು ದರಿಸುತ್ತಿದ್ದ ಗೌಡರಿಗೆ ಬೀಡಿ ಸಿಗರೇಟು ವ್ಯಾಮೋಹ ಹೆಚ್ಚು. ಗೌಡರ ಎಲ್ಲಾ ಕೆಲಸಗಳೂ ತುಂಬಾ ನಿಧಾನ. ಊಟದಲ್ಲೂ ನಿಧಾನಿಯಾದ ಅವರನ್ನು ಅವರ ಹತ್ತಿರದ ಸ್ನೇಹಿತರು ನೀರನ್ನು ಗೌಡರು ಅಗಿದು ಕುಡಿಯುತ್ತಾರೆ ಎಂದು ತಮಾಷೆ ಮಾಡುತ್ತಿದ್ದರಂತೆ.

ಗೌಡರರದು ಹೇಳಿಕೇಳಿ ಕುಡಿದು ತಿನ್ನುವ ಜಾತಿ; ಒಮ್ಮೆ ಅಪ್ಪ-ಮಗ ಕೋಳಿ ಕತ್ತರಿಸಲು ದೈವದ ಬನಕ್ಕೆ ಹೋದರಂತೆ. ಗೌಡರಿಗೆ ಕೋಳಿ ಹಿಡಿದುಕೊಳ್ಳಲು ಹೇಳಿ, ತಂದೆ ಕತ್ತನ್ನು ಹಿಡಿದು ಕತ್ತರಿಸಿದರಂತೆ. ಕೋಳಿಯ ಮುಂಡ ಮೇಲ್ಮುಖವಾಗಿ ಕೊಸರಿಕೊಂಡಿತಂತೆ. ಆಗ ತಂದೆಯ ಮೈ-ಮುಖದಲೆಲ್ಲಾ ರಕ್ತವಾಯಿತಂತೆ. ಸಿಟ್ಟಿನಿಂದ ಅವರು ದನಬಡಿದಂತೆ ಗೌಡರನ್ನು ಬಡಿದರಂತೆ. ರಾತ್ರಿ ಊಟಕ್ಕೆ ಅದನ್ನು ಬಡಿಸಿದಾಗ ಅದನ್ನು ಗೌಡರು ತಿನ್ನಲಿಲ್ಲ. ಅಂದಿನಿಂದ ಮಾಂಸಾಹಾರವನ್ನು ವರ್ಜಿಸಿದರು ಎನ್ನುವುದಾಗಿ ಪಿ. ಕಾಳಿಂಗರಾವ್ ರವರು 'ಸ್ನೇಹಜೀವಿ' ಎನ್ನುವ ಲೇಖನದಲ್ಲಿ ನೆನಪಿಸಿಕೊಳ್ಳುತ್ತಾರೆ. (ಶಾಂತವೇರಿ ಗೋಪಾಲಗೌಡರ ನೆನಪಿನ ಸಂಪುಟ-47).

ಮಾಂಸಹಾರಿ ಕುಟುಂಬದಲ್ಲಿ ಜನಿಸಿದರೂ ಗೌಡರು ಶಾಖಾಹಾರಿಯಾಗಿಯೇ ಕೊನೆಯವರೆಗೂ ಉಳಿದರು. ತಮ್ಮ ಕೊನೆಯ ದಿನಗಳಲ್ಲಿ ಗೌಡರು ಮಧ್ಯ ಸೇವನೆಯ ಅತೀ ಚಟಕ್ಕೆ ಬಿದ್ದರು. ಇದರಿಂದಾಗಿ ಐವತ್ತು ವರ್ಷಕ್ಕೆ ಮುಂಚೆಯೇ ಪಾರ್ಶ್ವವಾಯು ಹೊಡೆತಕ್ಕೆ ಸಿಕ್ಕಿ ಜರ್ಜರಿತರಾಗಿದ್ದರು. ಶಾಂತವೇರಿ ಗೋಪಾಲಗೌಡರ ಜೀವನ ವಿಧಾನವೇ ಸಮಾಜವಾದವಾಗಿತ್ತು. ಸಮಾಜವಾದದಲ್ಲಿನ ಆದರ್ಶದಂತೆ ಅಕ್ಷರಶಃ ನಿಜಜೀವನದಲ್ಲಿ ಬದುಕಿ ತೋರಿಸಿಕೊಟ್ಟರು. ತಮ್ಮ ಬದುಕಿನ ಉದ್ದಕ್ಕೂ ಫಕೀರನಾಗಿಯೇ ನಿಂತರು. ಚುನಾವಣಾ ಸಂದರ್ಭಗಳಲ್ಲಿ ಅವುಗಳ ಹಣಕಾಸು ವ್ಯವಸ್ಥೆ, ಪ್ರಚಾರ ಶೈಲಿಗಳು ಈಗ ಮಲೆನಾಡಿನ ಭಾಗಗಳಲ್ಲಿ ರಂಜಕ ದಂತಕಥೆಗಳ ರೂಪವನ್ನು ಪಡೆದು ಮನೆಮಾತಾಗಿದೆ. ಠೇವಣಿ ಸಲ್ಲಿಸಲು ಸಾಧ್ಯವಿಲ್ಲದ ಪರಿಸ್ಥಿತಿಯಲ್ಲಿ ಅವರ ಅಭಿಮಾನಿಗಳು ತಾವೇ ನಿಧಿ ಸಂಗ್ರಹಿಸಿ ಠೇವಣಿ ಹಣ ಕಟ್ಟಿ, ಚುನಾವಣೆಗೆ ಸ್ಪರ್ಧಿಸಿ ವಿಶ್ವಾಸಿಗರು, ಬೆಂಬಲಿಗರು ನೀಡುತ್ತಿದ್ದ ಅಲ್ಪಸ್ವಲ್ಪ ಹಣಕಾಸಿನ ನೆರವಿನಿಂದಲೇ ಚುನಾವಣಾ ಖರ್ಚು ಭರಿಸುತ್ತಿದ್ದರು. ತಮ್ಮ ಭಾಷಣಗಳಲ್ಲಿ ಯಾವತ್ತು ಧಾರ್ಮಿಕ ಭಾವನೆಗಳು, ಜಾತಿಯ ವಿಚಾರಗಳ ಹಿನ್ನೆಲೆಗಳು ನುಸುಳದಂತೆ ಎಚ್ಚರ ವಹಿಸುತ್ತಿದ್ದರು.

ಸಮಾನತೆಗೆ ಅಡ್ಡಿಯಾಗಿ ಬಂಡೆಯಂತೆ ಅಚಲವಾಗಿ ನಿಂತಿದ್ದ ಜನರ ಅಜ್ಞಾನ, ಮೌಢ್ಯ, ಶೋಷಣೆ, ಸ್ವಾರ್ಥ ಮುಂತಾದ ದುರ್ಗುಣಗಳ ಬೇರುಗಳನ್ನು ಕೀಳಲು ಅನವರತ ಚಿಂತಿಸುತ್ತಿದ್ದರು. ಪಂಪ-ರನ್ನರಂಥವರ ಕಾವ್ಯಗಳನ್ನು ಚೆನ್ನಾಗಿ ಅರಗಿಸಿಕೊಂಡಿದ್ದ ಗೌಡರು ರನ್ನ ಕವಿಯ ಬಗ್ಗೆ ಅಪಾರ ಹೆಮ್ಮೆ. ಕುಮಾರವ್ಯಾಸ ಇವರ ಪ್ರಿಯ ಕವಿ. ಹರಿಶ್ಚಂದ್ರ ಕಾವ್ಯ – ಜೈಮಿನಿ ಭಾರತವನ್ನು ಭಾವಪೂರ್ಣವಾಗಿ ಓದುತ್ತಿದ್ದರು. ಬದುಕಿನ ವಿಕಾಸ ಪಥಕ್ಕೆ ಸಾಹಿತ್ಯ-ಸಂಗೀತವನ್ನು ಬಳಸಿಕೊಳ್ಳುವ ಹುಚ್ಚು ಇವರದು. ಸಮಾಜದಲ್ಲಿ ಬದಲಾವಣೆಗೆ, ಬಂಡಾಯಕ್ಕೆ ಕ್ರಾಂತಿಕಾರಿ ಭಾವನೆಯ ಕವಿತೆಗಳನ್ನು ಹಾಡಿಸುತ್ತಿದ್ದರು. ಅಂತೆಯೇ ಅವುಗಳ ವಿಶ್ಲೇಷಣೆಯನ್ನು ಮಾಡುತ್ತಿದ್ದರು. ಕನ್ನಡದಲ್ಲೆಂತೂ ಇಂಗ್ಲೀಷಿನಲ್ಲೂ ಪರಿಣಿತಿ ಇತ್ತು. ಸಂಗೀತ ಕೇಳುವ, ಕಾವ್ಯ ರಚನೆ ಮಾಡುವ ಹಾಗೂ ಪುಸ್ತಕಗಳನ್ನು ಓದುವ ಹವ್ಯಾಸದ ಜೊತೆಗೆ ಕವನ ಬರೆಯುವ ಮತ್ತು ವ್ಯಂಗ್ಯ ಚಿತ್ರ ಬರೆಯುವ ಅಪರೂಪದ ಅಭ್ಯಾಸಗಳೂ ಅವರಲ್ಲಿದ್ದವು.

ಅವರು ಬರೆದ ಕವನಗಳು, ವ್ಯಂಗ್ಯ ಚಿತ್ರಗಳೆಲ್ಲವೂ ಲಭ್ಯವಿಲ್ಲದಿದ್ದರು ಸಿಕ್ಕಂತಹ ಒಂದೇ ಒಂದು ಕವನವೆಂದರೆ 'ಕಾಲಾಯ ತಸ್ಮೈ ನಮಃ' ಎಂಬ ಕವಿತೆ.

ಕಾಗೋಡು ಚಳುವಳಿಗೆ ಮೂಲ ಕಾರಣ ರೈತರ ಸಮಸ್ಯೆಗಿಂತ ಮಿಗಿಲಾಗಿ ಮಾನವೀಯತೆಗೆ ಕಳಂಕ ಬರುವ ಕ್ರೌರ್ಯ, ಹಿಂಸೆ ಮುಂತಾದವುಗಳು. ಅಮಾನುಷ ವರ್ತನೆ ವಿರುದ್ಧ ಗೌಡರು ಬಂಡಾಯ ಹೂಡಿದ್ದರು. ಜಮೀನ್ದಾರರ ಮುಂದೆ ಒಕ್ಕಲು ಮಕ್ಕಳು ಒಂದು ಒಳ್ಳೆಯ ಬಟ್ಟೆ, ಚಪ್ಪಲಿ ಹಾಕುವಂತಿರಲಿಲ್ಲ. ಹೆಂಗಸರು ರವಿಕೆಯನ್ನು ತೊಡುವಂತಿರಲಿಲ್ಲ. ಇದು ಗುಲಾಮತನದ ಸಂಕೇತವಾಗಿತ್ತು. ಇದು ನನ್ನ ಹೋರಾಟದ ಚಾಲನೆಗೆ ಇಂಬು ಕೊಟ್ಟ ಒಳ ತಿರುಳು ಎನ್ನುತ್ತಿದ್ದರು.

ಹೆಚ್ಚಾಗಿ ಬ್ರಾಹ್ಮಣರ ಮನೆಯಲ್ಲಿಯೇ ವಾಸ್ತವ್ಯ ಹೂಡುತ್ತಿದ್ದ ಗೌಡರ ಬಗ್ಗೆ ಯು.ಆರ್ ಅನಂತಮೂರ್ತಿಯವರು "ಜಾತಿ ವರ್ಗದ ಯಾವುದೇ ಅಂತರ ಗೌಡರ ಚಿಂತನೆಗೆ ಮತ್ತು ದಾರ್ಶನಿಕತೆಗೆ ಅಡ್ಡಿಯುಂಟು ಮಾಡಲಿಲ್ಲ. ಕುಮಾರವ್ಯಾಸನನ್ನು ಸೊಗಸಾಗಿ ವಾಚಿಸುತ್ತಿದ್ದ ಈ ಹುಡುಗ ಆರಗದ ಪೋಸ್ಟ್‌ಮನ್ ಒಬ್ಬರ ಮಗ. ತಂದೆಯ ನಿಯಮ, ನೀತಿ, ಮನೆಗೆ ಅವರು ತರುತ್ತಿದ್ದ ಪತ್ರಿಕೆಗಳು, ಅವುಗಳನ್ನು ತಾನು ಓದುತ್ತಿದ್ದು ತನ್ನ ಸಣ್ಣ ಪ್ರಪಂಚದಲ್ಲಿ ಹೊರಗಿನ ಜಗತ್ತು ಅರಳುತ್ತಿದ್ದುದು..... ಎಲ್ಲವನ್ನೂ ತಮ್ಮ ಬರವಣಿಗೆಯಲ್ಲಿ ಗೌಡರು ವರ್ಣಿಸಿ ಬರೆದಿದ್ದಾರೆ. ದನ ಕಾದುಕೊಂಡು, ಬೀಡಿ ಕಟ್ಟಿಕೊಂಡು ಇದ್ದ ಈ ಹುಡುಗ ಪಕ್ಕಾ ವಿಜ್ಞಾನ ದೃಷ್ಟಿಯುಳ್ಳವನು. ಜನರ ಜೀವನ ಬದಲಾಗಬೇಕೆಂಬ ಅವಸರದ ಜೊತೆಗೇ ಅಂತರಂಗದಲ್ಲಿ ಆಲಿಸಿದಾಗ ಮಾತ್ರ ಕೇಳುವ ಪಿಸುಮಾತಿನ ನಿಜಗಳನ್ನು ಕೇಳಿಸಿಕೊಳ್ಳಬಲ್ಲ ಈ ತಾತ್ವಿಕ, ಸಂತೆ ಗದ್ದಲಗಳಲ್ಲಿ ಬದುಕಲು ನಿರ್ಧರಿಸಿಯೂ ತನ್ನತನ ಕಳೆದುಕೊಳ್ಳದ ಈ ರಾಜಕಾರಣಿ, ಕಾರ್ಪಣ್ಯ, ದೈನ್ಯ, ಬಡತನಗಳ ಬಗ್ಗೆಯೇ ಯೋಚಿಸುತ್ತಿದ್ದೂ ಈ ಕೆಸರಲ್ಲೂ ಅರಳುವ ಜೀವನದ ಸೊಗಸುಗಳನ್ನು ಮರೆಯದ ರಸಿಕ. ಕಡುಕೋಪಿಯಾಗಬಲ್ಲನಾದರೂ ಹಾಸ್ಯಪ್ರಿಯ. ಅತ್ಯಂತ ಸಭ್ಯನಾದರೂ ನಿಷ್ಠೂರನಾಗಿ ಉಳಿದ. ಈ ಸಂಕೀರ್ಣ ಮನುಷ್ಯ ನನ್ನ ಗೆಳೆತನದ ಅತ್ಯುತ್ತಮ ಗಳಿಕೆಗಳಲ್ಲಿ ಬಹುಮುಖ್ಯರಾದವರು" ಎನ್ನವುದಾಗಿ 'ಜೀವಂತ ರಾಜಕಾರಣದ ಮಾದರಿ' ಎನ್ನುವ ಲೇಖನದಲ್ಲಿ ಬರೆದಿದ್ದಾರೆ. (ಶಾಂತವೇರಿ ಗೋಪಾಲಗೌಡರ ನೆನಪಿನ ಸಂಪುಟ 48–56).

1962ರ ವಿಧಾನಸಭಾ ಚುನಾವಣೆಯಲ್ಲಿ ಗೌಡರ ವಿರುದ್ಧ ಸೋಲುಂಡ ಬಿ.ಎಸ್. ವಿಶ್ವನಾಥ್ ರವರು ಗೌಡರ ಬಗ್ಗೆ "ಗೋಪಾಲಗೌಡರು ತುಂಬಾ ಬಡತನ ಕುಟುಂಬದಿಂದ ಬಂದವರು. ಅವರದೂ ಗೇಣಿದಾರರ ಕುಟುಂಬ, ಬಡತನದ ಧಾರುಣ ಅನುಭವ, ಮುಖ್ಯವಾಗಿ ಗೇಣಿದಾರ ರೈತರು ಭೂಮಾಲಿಕರೆದುರು ದೀನರಾಗಿ ಕೈಚಾಚಿ ನಿಂತು ಜೀವನ ಸಾಗಿಸಬೇಕಾಗಿದ್ದ ಸಂದರ್ಭಗಳೆಲ್ಲವನ್ನು ಕಣ್ಣಾರೆ ಕಂಡವರು. ಸಮಾಜದಲ್ಲಿರುವ ಬಹುಪಾಲು ಬಡವರಿಗಾಗಿ

ಏನನ್ನಾದರೂ ಮಾಡಲೇಬೇಕೆಂದು ವಿದ್ಯಾರ್ಥಿಯಾಗಿದ್ದಾಗಲೇ ತನ್ನ ಮಾರ್ಗವನ್ನು ಗುರುತಿಸಿಕೊಂಡಿದ್ದವರು. ವಿಧಾನಸಭೆಗೆ ಮೊದಲ ಸಾರ್ವತ್ರಿಕ ಚುನಾವಣೆ ಬಂದಾಗ ತಮ್ಮ ಹಿತರಕ್ಷಣೆ ಹಾಗೂ ಸಮಸ್ಯೆಗಳ ನಿವಾರಣೆ ಗೋಪಾಲ ಗೌಡರಿಂದ ಮಾತ್ರ ಸಾಧ್ಯ ಎಂದು ಚೆನ್ನಾಗಿ ಮನಗಂಡಿದ್ದ ರೈತವರ್ಗವು ಅವರನ್ನು ತಮ್ಮ ಪ್ರತಿನಿಧಿಯಾಗಿ ಆರಿಸಿಕೊಂಡಿತು. ಶಾಸಕರಾದ ಮೇಲೂ ಗೌಡರು ರೈತರನ್ನು ಮರೆಯಲಿಲ್ಲ. ಮುಚ್ಚುಮರೆಯಿಲ್ಲದೆ, ನೇರ ನಡೆನುಡಿಯ ಗೋಪಾಲಗೌಡರ ಪಾರದರ್ಶಕ ಪ್ರಾಮಾಣಿಕತೆಯ ಮುಂದೆ ರಾಜಕಾರಣದ ಕುತಂತ್ರಗಳು ಗೆಲ್ಲಲು ಸಾಧ್ಯವೇ ಇರಲಿಲ್ಲ. ಹಾಗಾಗಿ ಅವರಾಗಿಯೇ ರಾಜಕೀಯದಿಂದ ನಿವೃತ್ತಿಯಾಗುವ ತನಕ ಅವರನ್ನು ಚುನಾವಣಾ ಕಣದಲ್ಲಿ ಸೋಲಿಸುವುದು ಸುಲಭವಲ್ಲ. ಎನ್ನುವುದಾಗಿ ಮಾರ್ಮಿಕವಾಗಿ ನುಡಿಯುತ್ತಾರೆ ಎಂದು ಎಸ್.ಎಸ್. ಸೂರ್ಯನಾರಾಯಣರವರು 'ನೇರ ನಡೆ–ನುಡಿಯ ನೇತಾರ' ಎಂಬ ಲೇಕನದಲ್ಲಿ ಬರೆಯುತ್ತಾರೆ. (ಶಾಂತವೇರಿ ಗೋಪಾಲಗೌಡರ ನೆನಪಿನ ಸಂಪುಟ 60–61).

"ಹುತ್ತದಲ್ಲಿ ಯಾವ ಹಾವು ಇದೆ ಎಂದು ಕೈಹಾಕಿ ತಿಳಿಯಲು ಹೋಗಬಾರದು, ಕಚ್ಚೀತು. ಒಂಟೆಗಳ ಮದುವೆಯಲ್ಲಿ ಕತ್ತಗಳೇ ಗಾಯಕರು" ಎಂಬುದಾಗಿ ಗಾದೆಗಳ ಮೂಲಕ ವ್ಯಂಗ್ಯವಾಗಿ ತಮ್ಮ ಭಾಷಣಕ್ಕೆ ಅಡ್ಡಿಪಡಿಸಿದ ಕಾಂಗ್ರೆಸ್ ಪಕ್ಷದವರ ಬಗ್ಗೆ ಹೇಳುತ್ತಿದ್ದರು.

ಗೋಪಾಲಗೌಡರ ತಂದೆ ಕೊಲ್ಲೂರಯ್ಯಗೌಡ, ತಾಯಿ ಶೇಷಮ್ಮ. ಅವರ ತಂದೆಯವರಿಗೆ ಎಂಟು ಎಕರೆ ಜಮೀನು ಆರಗದ ಕೆರೆ ಹಿಂಭಾಗದಲ್ಲಿ ಬಂಧಿತ್ತು ಮತ್ತು ಅರ್ಧ ಎಕರೆ ಭಾಗಾಯ್ತು ಕಡೆಗದ್ದೆಯಲ್ಲಿ ಬಂದಿದ್ದು ಅದರಿಂದ ಅವರಿಗೆ ಯಾವುದೇ ಉತ್ಪತ್ತಿ ಸಿಗುತ್ತಿರಲಿಲ್ಲ. ಆಗ ಅವರ ತಂದೆ ವಿಲೇಜ್ ಪೋಸ್ಟ್‌ಮನ್ ಆಗಿದ್ದರು. ಎಂಟೋ ಹತ್ತೋ ರೂಪಾಯಿ ಸಂಬಳ ಬರುತ್ತಿದ್ದ ಕಾಲ ಅದು. ಈ ಕೆಲಸದಿಂದಾಗಿ ಜಮೀನು ನೋಡಿಕೊಳ್ಳುವುದು ಕಷ್ಟ ಆಗುತ್ತಿತ್ತು. ಎಲ್ಲಾ ಆಸ್ತಿ ಶೀರ್ನಳ್ಳಿ ಸಾಹುಕಾರರಿಗೆ ಕ್ರಯವಾಗಿ ಹೋಯಿತು. ಆಸ್ತಿ ಶೀರ್ನಳ್ಳಿ ಸಾಹುಕಾರರಿಗೆ ಕ್ರಯವಾದುದು ಕೇವಲ ಹನ್ನೆರಡು ರೂಪಾಯಿಗಳ ಸಾಲಕ್ಕಾಗಿ. ಸಾಲಮಾಡಿದ್ದವರು ಗೋಪಾಲಗೌಡರ ದೊಡ್ಡಪ್ಪ ಲೋಕಪ್ಪಗೌಡರು. ಸಾಲ ತೀರಿಸಲಿಲ್ಲವಾದ್ದರಿಂದ ಜಮೀನು ಕ್ರಯವಾಯಿತು. 9ವರ್ಷ ವಯಸ್ಸಿನಿಂದಲೇ ಅವರು ಬಡತನವನ್ನು ಕಂಡರು.

ಇವರಿಗೆ ಬಾಲ್ಯದಿಂದಲೂ ಕಲೆ–ಸಾಹಿತ್ಯವೆಂದರೆ ಅಪಾರ ಪ್ರೀತಿ. ಆಗ ಪ್ರೈಮರಿ ಶಾಲೆಯಲ್ಲಿ ಓದುತ್ತಿದ್ದ ಇನ್ನೂ ಎಂಟು ವರ್ಷ ಕಳೆದಿರಲಿಲ್ಲ. ಆರಗದ ಮಾಳಪ್ಪನ ಕಟ್ಟೆಯಲ್ಲಿ ಒಬ್ಬ ತಾಳಮದ್ದಲೆಯ ಕಲಾಕಾರ ಪ್ರತಿ ಶನಿವಾರ ಕಛೇರಿ ನಡೆಸುತ್ತಿದ್ದ. ಆಗ ಗೋಪಾಲ ಆತನೊಂದಿಗೆ ರಾತ್ರಿಯೆಲ್ಲಾ ತಾಳಮದ್ದಳೆಯನ್ನು ಕೇಳಿ, ಮನೆಗೆ ತುಂಭಾ ತಡವಾಗಿ ಬರುತ್ತಿದ್ದರು. 'ಬಾಗಿಲೊಳು ಕೈ ಮುಗಿದು ಒಳಗೆ ಬಾ ಯಾತ್ರಿಕನೆ' ಎಂಬ ಕುವೆಂಪು ಕವನ,

'ಕುರುಡು ಕಾಂಚಾಣ' ಮುಂತಾದ ಕವಿತೆಗಳನ್ನು ಕೇಳಿ ಆನಂಧಿಸುವುದರ ಜೊತೆಗೆ ಯಕ್ಷಗಾನವನ್ನು ತುಂಭಾ ಮೆಚ್ಚಿಕೊಂಡು ಅವರ ಯಾವುದಾದರು ಒಂದು ಹಾಡನ್ನು ಗುನುಗುಡುತ್ತಿದ್ದರು.

ಬಿ. ಬಸವಲಿಂಗಪ್ಪನವರು ಮಂತ್ರಿಯಾಗಿದ್ದಾಗೊಮ್ಮೆ ಅವರ ಜನ್ಮ ಸ್ಥಳ ಶಾಂತವೇರಿಗೆ ಭೇಟಿಕೊಟ್ಟು, ಅವರ ತಾಯಿಯನ್ನು ಕಾಣಲು ಹೋದರು. ಹಳ್ಳಿಗೆ ಹೊಂದಿಕೊಂಡ ತಕ್ಕಮಟ್ಟಿಗೆ ವಿಶಾಲವಾದ ಹಳೆಯ ಗುಡಿಸಲು ಗೋಡೆಗಳು ಸುಣ್ಣಕಂಡು ಬಹಳ ವರ್ಷಗಳಾಗಿದ್ದಂತೆ ಕಂಡಿತು. ಈಚಲು ಚಾಪೆಯ ಮೇಲೆ ಕುಳಿತ್ತಿದ್ದ ಹಣ್ಣು ಮುದುಕಿಯನ್ನು ಕಂಡು ಇವರು ಗೋಪಾಲಗೌಡರ ತಾಯಿಯಲ್ಲವೇ? ಎಂದು ಅಲ್ಲಿದ್ದವರನ್ನು ಕೇಳಿದರು. ಹೌದು ಎಂದು ಅವರು ಉತ್ತಿರಿಸಿದರು. ಗೌಡರು ತನ್ನ ಸಂಸಾರಕ್ಕಾಗಿ ಒಂದು ಸ್ವಂತ ಮನೆಯನ್ನೂ ಕಟ್ಟಿಕೊಳ್ಳುವ ಪ್ರಯತ್ನ ನಡೆಸದೆ ಬಡತನದಲ್ಲಿಯೇ ಕೊನೆಯುಸಿರೆಳೆದರು. ಅವರ ಪ್ರಾಮಾಣಿಕತೆಗೆ ಇದೊಂದು ನಿದರ್ಶನವಾಗಿದೆ.

ಗೌಡರು ಶಾಂತವೇರಿಗೆ ಬಂದಿದ್ದರು. ಇವರನ್ನು ಬೇಟಿ ಮಾಡಲು ಅವರ ಅಭಿಮಾನಿಗಳು ಅವರ ಮನೆಗೆ ಭೇಟಿ ನೀಡಿದ್ದರು. ಈ ಸಂದರ್ಭದಲ್ಲಿ ಗೋಪಾಲಗೌಡರು ಬಂದ ಆರು ಜನರಿಗೆ ಕಾಫಿ ತರುವಂತೆ ಸೋನಕ್ಕನವರಿಗೆ ತಿಳಿಸಿದರು. ಸೋನಕ್ಕನವರು ಆರು ಲೋಟ ಕಾಫಿಯೊಂದಿಗೆ ಹೊರಬಂದು, ಬಂದ ಅತಿಥಿಗಳಿಗೆ ಕಾಫಿಕೊಡಲು ಮುಂದಾದರು. ಗೋಪಾಲಗೌಡರು ಕಾಫಿ ಲೋಟಗಳನ್ನು ದಿಟ್ಟಿಸಿ ನೋಡಿದರು. ಒಂದೊಂದು ಲೋಟ ಒಂದೊಂದು ಅಳತೆಯ ಹಾಗೂ ಲೋಹಗಳದ್ದಾಗಿತ್ತು. ತಾವು ಒಂದು ಲೋಟ ತೆಗೆದುಕೊಂಡು ನೋಡ್ರಪ್ಪ ಸಮಾಜವಾದಿ ಪಕ್ಷ ಸಹ ಹೀಗೆ. ಲೋಟ ಬೇರೆ ಬೇರೆ ಯಾದರು ಕಾಫಿಮಾತ್ರ ಒಂದೇ ಎಂದು ನಗುತ್ತಾ ನುಡಿದರು. ತಾವು ಆಗಲೇ ಎರಡು ಬಾರಿ ಶಾಸಕರಾದರೂ ಸಹ ಮನೆಗೆ ಬೇಕಾದ ವಸ್ತುಗಳನ್ನು ಮಾಡಲೂಕೂಡ ಅವರು ಯೋಚಿಸಿರಲಿಲ್ಲ.

ಆರೋಗ್ಯ ಸರಿಯಿಲ್ಲದಿದ್ದಾಗಿ ಹೆಚ್ಚಾಗಿ ಆಸ್ಪತ್ರೆ ಔಷಧಿ ತೆಗೆದುಕೊಳ್ಳದೆ ಮನೆಯ ಮದ್ದುಗಳನ್ನು ಬಳಸುತ್ತಿದ್ದರು. ಪಿತ್ತಕೋಪ, ಅಜೀರ್ಣ, ಅರುತಿ ತೊಂದರೆಗಳಿಗೆ ಜೀರಿಕಾರಿ ರಸಾಯನ ಬಳಸುತ್ತಿದ್ದರು. ಬೇದಿ ಕಡಿಮೆ ಮಾಡಲು ಗೆಳೆಯ ದೇವಪ್ಪರವರ ಔಷದವಾದ ಎಳನೀರೊಂದನ್ನು ತಂದು ಅದಕ್ಕೆ ಕಲ್ಲುಸಕ್ಕರೆ ಮತ್ತು ಕಲ್ನಾರು ಹಾಕಿಟ್ಟು ಬೆಳಗಿನ ಜಾವ 4 ಗಂಟೆಗೆ ಕುಡಿಯುತ್ತಿದ್ದರು.

ಒಂದು ಸಮಾಜ ಆಳುವವರಿಂದಲೇ ಭದ್ರತೆಯ ಅಥವಾ ಅಭಿವೃದ್ಧಿಯ ದೃಷ್ಠಿಯಲ್ಲಿ ಆತಂಕಕ್ಕೆ ಒಳಗಾದಂತಹ ಸಂದರ್ಭಗಳಲ್ಲಿ ಅನ್ಯಾಯಕ್ಕೆ ಒಳಗಾದ ಸಂತ್ರಸ್ಥರ ಪರವಾಗಿ ಗೌಡರು ಯಾವಾಗಲೂ ಚಿಂತಿಸುತ್ತಿದ್ದರು. ಅವರಿಗೆ ಪುನರ್ ವಸತಿ ಮತ್ತಿತರ ಸೌಲಭ್ಯಗಳನ್ನು ದೊರಕಿಸಿಕೊಡುವಲ್ಲಿ ಶತಪ್ರಯತ್ನ ಮಾಡುತ್ತಿದ್ದರು. ಇವುಗಳನ್ನು ಸಾರ್ವಜನಿಕ ಚರ್ಚಿತ ವಿಷಯವನ್ನಾಗಿಸಿ ನ್ಯಾಯದೊರಕಿಸಿಕೊಡಲು ಕಂಕಣಬದ್ದರಾಗಿರುತ್ತಿದ್ದರು. ಹಾಗೆಯೇ ಶರಾವತಿಯ ಮುಳುಗಡೆಯವರ ಪುನರ್ ವ್ಯವಸ್ಥೆಯ ಬಗ್ಗೆ 'ಮಾರ್ಗದರ್ಶಿ'ಯಲ್ಲಿ ಲೇಖನ ಬರೆದು ವಿಧಾನ ಮಂಡಲದ ಅಧಿವೇಶನ ಹೇಗೆ ಅಸಫಲವಾಗಿದೆ ಎಂಬ ಬಗ್ಗೆ ವಿಷಯ ಮಂಡನೆ ಮಾಡುತ್ತಿದ್ದರು. ತಮ್ಮ ಅಭಿಪ್ರಾಯ

ಮತ್ತು ವಿಚಾರಗಳನ್ನು ಮಾರ್ಗದರ್ಶಿ ಪತ್ರಿಕೆ ಹಾಗೂ ರಾಜ್ಯ ಮತ್ತು ಸ್ಥಳೀಯ ದಿನಪತ್ರಿಕೆಗಳಿಗೆ ಲೇಖನಗಳನ್ನು ಬರೆಯುವುದರ ಮೂಲಕ ವ್ಯಕ್ತಪಡಿಸುತ್ತಿದ್ದರು.

ಸಮಾಜದಲ್ಲಿನ ಆಚರಣೆ ಹಾಗೂ ಸಂಪ್ರದಾಯಗಳನ್ನು ಬಹಳ ಸೂಕ್ಷ್ಮವಾಗಿ ಅವಲೋಕಿಸುತ್ತಿದ್ದರು. ಊರು ಮತ್ತು ಸಂಬಂಧಗಳಲ್ಲಿ ನಡೆಯುವ ಮದುವೆಗಳು, ದೇವರ ಪೂಜೆ ಹಾಗೂ ಹಬ್ಬಹರಿದಿನ, ಜಾತ್ರೆಗಳಿಗೆ ಭೇಟಿ ನೀಡುತ್ತಿದ್ದರು. ಸಂದರ್ಭಬಂದಲ್ಲಿ ತಮ್ಮ ಅಭಿಪ್ರಾಯವನ್ನು ಸೇರಿದ ಸ್ನೇಹಿತರು ಮತ್ತು ಊರಿನವರೊಂದಿಗೆ ಹಂಚಿಕೊಳ್ಳುತ್ತಿದ್ದರು. ಕೆಲವೊಮ್ಮೆ ಮೌನವಾಗಿ ಎಲ್ಲವನ್ನೂ ನೋಡಿಯೂ ನೋಡದಂತೆ ಸುಮ್ಮನಿರುತ್ತಿದ್ದರು. 1960ರ ಏಪ್ರಿಲ್ 11ರ ಅವರ ದಿನಚರಿಯಲ್ಲಿ ಕರಗದ ಬಗ್ಗೆ ಹೀಗೆ ಬರೆಯುತ್ತಾರೆ "ರಾತ್ರಿ ಕಣ್ಣನ್ ಜೊತೆ ಕರಗ ನೋಡಲು ಹೋಗಿ ಬಂದೆ. ಅಸಂಖ್ಯಾತ ಹಳ್ಳಿ ಜನರು ಜಾತ್ರೆ ಸೇರಿದ್ದಾರೆ. ಅವರ ಮುಗ್ದತೆ ಹಾಗೂ ದಡ್ಡತನವನ್ನು ಚಾಲಾಕಿನ ಪೇಟೆಯ ಜನ ಎಷ್ಟು ರೀತಿಯಲ್ಲಿ ಸಾದ್ಯವೋ ಅಷ್ಟು ರೀತಿಯಲ್ಲಿ ಶೋಷಣೆ ಮಾಡಿ ತಮ್ಮ ತೆವಲು ತೀರಿಸಿಕೊಳ್ಳುತ್ತಾರೆ".

ಅಲಸೂರಿನ 'ಮೂಪಾಲಕಿ' ಉತ್ಸವದ ಬಗ್ಗೆ ಬರೆಯುತ್ತಾರೆ. "ಇದು ಮತ್ತೊಂದು ಕರಗದಂತೆ, ಅತ್ತಿಂದಿತ್ತ, ಇತ್ತಿಂದತ್ತ ಜನ ಗುಂಪು ಗುಂಪಾಗಿ ಒಬ್ಬರ ಮೇಲೊಬ್ಬರು ಬೀಳುತ್ತಾ ಅಲೆದಾಡುವ ಜಾತ್ರೆ. ನೂರಾರು ಮಣ ಹೂ ಕಟ್ಟಿ ನಾನಾ ದೇವರುಗಳು ಪಲ್ಲಕ್ಕಿಯಲ್ಲಿ ಉತ್ಸವ ಹೋಗುವುದು–ಅದೊಂದು ದೃಶ್ಯ! ದೇವರನ್ನು ಮೆಚ್ಚಿಸುವ ಬಗೆ! 11 ಮಾರ್ಚ್ 1953 ರಂದು ಮಾನ್ಯ ಗೌಡರು ಶಾಸನ ಸಭೆಯ ತಮ್ಮ ಭಾಷಣದಲ್ಲಿ ಮಾನ್ಯ ಮುಖ್ಯ ಮಂತ್ರಿಗಳ ಮಾತನ್ನು ಉದಾಹರಿಸುತ್ತಾ ಮನುಷ್ಯನಿಗೆ ಬರಿ ವಸ್ತು ಪ್ರಪಂಚ ಒಂದರಲ್ಲೇ ಬದುಕಿದ್ದರೆ ಸಾಲದು ಅಲ್ಲಿಗೆ ಎಲ್ಲಾ ಮುಕ್ತಾಯವಾದಂತಾಗಲಿಲ್ಲ. ಮನುಷ್ಯನಿಗೆ ಅನ್ನಮಯಕೋಶ, ಪ್ರಾಣಮಯಕೋಶ, ಜ್ಞಾನಮಯಕೋಶ, ಇಷ್ಟಕ್ಕೆ ಮುಕ್ತಾಯವಾದರೆ ಸಾಲದು. ಅವನಿಗೆ ವಿಜ್ಞಾನಮಯಕೋಶ, ಆನಂದ ಇತ್ಯಾಧಿಗಳೆಲ್ಲದರಲ್ಲಿ ವಿಹರಿಸುವಂಥ ಅವಕಾಶವಿರಬೇಕು. ಅನ್ನದ ಆಧಾರದ ಮೇಲೆ ಪ್ರಾಣ, ಪ್ರಾಣದ ಆಧಾರದ ಮೇಲೆ ಜ್ಞಾನ, ಇವು ಮೂರರ ಮೇಲೆ ವಿಜ್ಞಾನ. ಅದರಿಂದ ಆನಂದ ದೇಶದಲ್ಲಿ ಕ್ಷಾಮಡಾಮರಗಳಿದ್ದು 'ಅನ್ನ' 'ಅನ್ನ' ಎಂದು ಜನ ಬಳಲುತ್ತಿದ್ದಾಗ 'ನೀವು ಭಾರತ ಓದಿ, ರಾಮಾಯಣ ಓದಿ, ಹರಿದಾಸರ ಕಥೆಗಳನ್ನು ಕೇಳಿ, ಶಿವಶರಣರ ವಚನಗಳನ್ನು ಹಾಡಿ' ಎನ್ನುವುದು ಹಾಸ್ಯವಾಗಿ ಕಾಣುತ್ತದೆ. ಈ ಹೊತ್ತು ಸಂಸ್ಕೃತಿಯನ್ನು ನಾವು ಪುನರುದ್ಧಾರ ಮಾಡುತ್ತೇವೆಂದು ಹೇಳಿಕೊಂಡು ಬೊಬ್ಬೆಹಾಕುತ್ತಾ ಊರು ಊರುಗಳಲ್ಲಿ ಹೋಗುತ್ತಿದ್ದರೆ, ಇದು ಕೇವಲ ಹೊಗಳುಭಟ್ಟರ ಕೂಟ, ಹೂವಿನ ಮಾಲೆಗಾಗಿ ಹೊಗಳಿಸಿಕೊಳ್ಳಬೇಕು ಎಂಬ ಆಕಾಂಕ್ಷೆಯಿಂದ ಅಲ್ಲಿ ಹೋಗಿ ಕೂರುತ್ತಿದ್ದೀರಿ ಎಂದು ಹೇಳದೆ ವಿಧಿಯಿಲ್ಲ. ಈ ಸಮಯದಲ್ಲಿ ಪದ್ಯವೊಂದು ಸಮಯೋಚಿತವಾಗಿ ನೆನಪಿಗೆ ಬರುತ್ತದೆ.

'ಒಂಟಿಗಳ ಮದುವೆಗಳಲ್ಲಿ ಕತ್ತೆಗಳೇ ಗಾಯಕರು, ದೇಶದಲ್ಲಿ ಅನ್ನಕೊಡಿ, ಬಟ್ಟೆಕೊಡಿ, ವಸತಿ ಮಾಡಿಕೊಡಿ, ಎಂದು ಜನ ಪರಿತಪಿಸುತ್ತಿದಾರೆ. ಕವಿ ಹೇಳುವಂತೆ ಅನ್ನದನ್ಯಾಯ ದಾವಾಗ್ನಿಯಲ್ಲಿ ಕರಗುತ್ತಿದೆ ನರತೆ, ಸಂಸ್ಕೃತಿ, ಪ್ರೀತಿ, ದಿನದ ಬಯಕೆ' ಇಷ್ಟೆಂದ ಮಾತ್ರಕ್ಕೆ ಸಂಸ್ಕೃತ ಬೇಡವೆಂದಲ್ಲ. ಅದಕ್ಕೆ ಇದು ಸಕಾಲವಲ್ಲ" (ಶಾಂತವೇರಿ ಗೋಪಾಲಗೌಡರ ನೆನಪಿನ ಸಂಪುಟ 318–319).

ಭಾರಿ ಕೈಗಾರಿಕೆಗಳತ್ತ ಮಾತ್ರ ಯೋಚಿಸದೆ ಅಲ್ಪಸ್ವಲ್ಪ ಬಂಡವಾಳದ ಗುಡಿಕೈಗಾರಿಕೆಗಳ ಬಗ್ಗೆ ಯೋಚಿಸಬೇಕು. ಇದರಿಂದ ಕೈಗಾರಿಕೆಗಳೆಲ್ಲವೂ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಕೇಂದ್ರೀಕೃತವಾಗುವುದೂ ಕೂಡ ತಪ್ಪಿ, ವಿಕೇಂದ್ರೀಕೃತವಾಗಲು ಸಹಾಯವಾಗುತ್ತದೆ. ನಮ್ಮಲ್ಲಿ ಈಗಲೇ ಗುಡಿಕೈಗಾರಿಕೆಗಳು ಜನರ ಕೈಬಿಟ್ಟು ಹೋಗುತ್ತಿವೆ. ಇವುಗಳಿಗೆ ಅಗತ್ಯವಾದ ಬೆತ್ತ, ಬಿದಿರು, ಬೆಂಡು, ಗಂಧ, ಮುಂತಾದ ಕಚ್ಚಾಮಾಲುಗಳು ಹೇರಳವಾಗಿ ದೊರೆಯುತ್ತವೆ. ಓಲೆಗರಿ ನಮ್ಮಲ್ಲಿ ವಿಶೇಷವಾಗಿದೆ. ಚೈನಾ, ಜಪಾನ್ ದೇಶಗಳಲ್ಲಿ ತಯಾರಿಸುವಂಥ ಛತ್ರಿಗಳನ್ನು ನಾವೂ ಸಹ ಇಲ್ಲಿ ಈ ಓಲೆಗರಿಗಳಿಂದ ತಯಾರಿಸಬಹುದು. ನಮ್ಮ ಮಲೆನಾಡಿನಲ್ಲಿ ಈಗಲೂ ಈ ಓಲೆಗರಿಗಳ ಛತ್ರಿ ಚಾಲ್ತಿಯಲ್ಲಿರುತ್ತದೆ. ಜನರಿಗೆ ಉತ್ತೇಜನವಿಲ್ಲದರಿಂದಲೂ, ಈ ದೇಶದ ಮಾಲುಗಳಿಗೆ ಮಾನ್ಯತೆ ಇಲ್ಲದಿರುವುದರಿಂದಲೂ ನಮ್ಮ ದೇಶದ ಗುಡಿಕೈಗಾರಿಕೆಗಳು ಮುಂದುವರೆಯಲು ಸಾಧ್ಯವಾಗುತ್ತಿಲ್ಲ. ಶಿವಮೊಗ್ಗ ಜಿಲ್ಲೆಯ ಸಾಗರ, ಸೊರಬಗಳಲ್ಲಿ ಗುಡಿಗಾರರ ಗಂಧದ ಮರದ ಸಾಮಾನುಗಳು, ತೀರ್ಥಹಳ್ಳಿಯ ಕವಲೇ ದುರ್ಗದಲ್ಲಿ ಬಳಪದಕಲ್ಲಿನ ಗಡಿಗೆ ಇತ್ಯಾದಿಗಳನ್ನು ಮಾಡುತ್ತಿದ್ದಾರೆ ಎನ್ನುವುದಾಗಿ ಕೈಗಾರಿಕೆಗಳ ಬಗ್ಗೆ, ಅವುಗಳ ಅಗತ್ಯತೆ ಮತ್ತು ಆಶ್ರಯತೆಯ ಬಗ್ಗೆ 26 ಮಾರ್ಚ್ 1953ರ ಶಾಸನ ಸಭೆಯ ಭಾಷಣದಲ್ಲಿ ಉಲ್ಲೇಖಿಸುತ್ತಾರೆ. (ಶಾಂತವೇರಿ ಗೋಪಾಲಗೌಡರ ನೆನಪಿನ ಸಂಪುಟ 319–320).

"ಶತಮಾನಗಳಿಂದಲೂ ತುಳಿಯಲ್ಪಟ್ಟು ಕೆಳಕ್ಕೆ ಒತ್ತಲ್ಪಟ್ಟು ಕಡೆಗೆ ಈ ಜನಾಂಗವನ್ನು ಯಾರೂ ಮುಟ್ಟಲೂಬಾರದೆಂದೂ ಮಾಡಿದ್ದಕ್ಕಿಂತ ಜನಾಂಗಗಳ ಸಂಖ್ಯೆ ಸಾವಿರಗಟ್ಟಲೆ ಅಪಾರವಾಗಿದೆ. ನೂರಾರು ವರ್ಷಗಳಿಂದ ಈ ಒಂದು ಜನಾಂಗ ಇತರ ಜನಾಂಗಗಳವರ ಅಭಿವೃದ್ಧಿಗೆ ಕೊಟ್ಟಿರತಕ್ಕಂಥ ಸಾಲವನ್ನು ತೀರಿಸುವುದಕ್ಕೆ ನಾವೆಲ್ಲರೂ ತೆರಬೇಕಾದ ಋಣ ಬಹಳವಾಗಿದೆ ಎಂದು ಹೇಳುತ್ತೇನೆ. ತಾವು ಯಾವ ಒಂದು ಪಟ್ಟಣಕ್ಕೇ ಹೋಗಲಿ ಅಥವಾ ಒಂದು ಊರಿಗೇ ಹೋಗಲಿ ಅಲ್ಲಿ ಒಂದು ಹೊಲಗೇರಿ ಇದ್ದೇ ಇರುತ್ತದೆ. ಈ ಜನಾಂಗದಂತೆಯೇ ಮಲೆನಾಡು ಪ್ರದೇಶದ 'ದೀವರು' ಕೂಡಾ ಹೆಚ್ಚು ಬಡತನದಲ್ಲಿದ್ದಾರೆ. ಸಾಕಷ್ಟು ಜಮೀನುಗಳಿಲ್ಲ. ಉದ್ಯೋಗಗಳು ಬೇಕಾಗಿದೆ. ನಿಮ್ಮ ಪಂಗಡದಲ್ಲಿದ್ದಂತೆಯೇ ಇವರೂ ಸಹ ದಲಿತರೂ, ದೀನರೂ ಆಗಿದ್ದಾರೆ.

ಇಪ್ಪತ್ತು ವರ್ಷಗಳ ಮೇಲೆ ಕೂಡ ಏನಾದರೂ ಜಗಳ ಮಾಡಿಕೊಂಡು ಅವರು ಅವನಿಗೆ ಸಲ್ಲಿಸಬೇಕಾದ ಸಂಬಳಕೊಡದೆ ಇದ್ದರೂ ಹಾಗೆಯೇ ಅವನು ಏನಾದರು ಪರಾರಿಯಾದರೂ ಅಂಥವನನ್ನು ಮತ್ತೆ ಹಿಡಿಸಿ ಕೈಕಾಲುಕಟ್ಟಿಹಾಕಿ ತಂದು ದುಡಿಸುತ್ತಾರೆ. ಇದು ಜೀತದ ಪದ್ಧತಿ!. ಅವನಿಗೆ ಮದುವೆ ಮಾಡಿದರೆ ಅವನು, ಅವನ ಹೆಂಡತಿ, ಅವನ ಮಕ್ಕಳು ಎಲ್ಲರೂ ಅವರ ಸ್ವತ್ತು, ಚರಸ್ವತ್ತು ಇದ್ದಹಾಗೆ. ಇಂಥಾದ್ದು ಸಮಾಜದಲ್ಲಿ, ಹಳ್ಳಿಗಳಲ್ಲಿ ಹೆಚ್ಚಾಗಿ ಕಾಣುತ್ತೇವೆ. ಹಳ್ಳಿಗಳಲ್ಲಿ ಈಗಲೂ ಕೂಡ ದೇವಸ್ಥಾನಗಳಿಗೆ ಹರಿಜನರು ಹೋಗುವುದಾಗಲಿ, ಹರಿಜನರು ಸವರ್ಣ ಹಿಂದೂಗಳ ಬಾವಿಗಳನ್ನು ಉಪಯೋಗಿಸುವುದಾಗಲಿ, ಅವರನ್ನು ಸಮಭಾವದಿಂದ ಕಾಣುವುದಾಗಲಿ ಎಲ್ಲೂ ಇಲ್ಲ. ಈ ಪಂಗಡಗಳಿಗೆ ಸೇರಿದಂತೆ 'ಲಂಬಾಣಿ'ಗರೆಂಬ ಜನ ಇದ್ದಾರೆ. ಅವರ ಊರನ್ನು 'ತಾಂಡಾ' ಎಂದೇ ಕರೆಯುತ್ತಾರೆ. ತಾಂಡಾಕಳೆಂದರೆ ಊರಿನ ಹೊರಗೆ ಇದ್ದ ಹಾಗೆ. ಅವರಿಗೆ ಯಾವ ಸೌಲಭ್ಯಗಳನ್ನು ಇದುವರೆಗೂ ಕಲ್ಪಿಸಿಕೊಟ್ಟಿಲ್ಲ. ಅವರ ವೃತ್ತಿ ಕಾಡಿಗೆ ಹೋಗಿ ಕಟ್ಟಿಗೆ ತಂದು ಮಾರುವುದು. ಜಮೀನು ವ್ಯವಸಾಯ ಮಾಡುವುದು, ಇಷ್ಟೊಂದು ಬಹುಸಂಖ್ಯಾತ ಜನಾಂಗ ಮೂಲೆ ಗುಂಪಾಗಿದ್ದು ನಮ್ಮ ಯೋಜನೆಗಳಲ್ಲಿ ಭಾಗವಹಿಸದೇ ಹೋದಲ್ಲಿ ದೇಶ ಏಳಿಗೆಯಾಗುವುದಿಲ್ಲ. ಅವರು ಸಮಾಜದಲ್ಲಿ ಹಿಂದಕ್ಕೆ ಏಳೆಯತಕ್ಕ ಶಕ್ತಿಯಾಗಿ ಉಳಿಯುತ್ತಾರೆ (ಶಾಂತವೇರಿ ಗೋಪಾಲಗೌಡರ ನೆನಪಿನ ಸಂಪುಟ 325–328). ತಮ್ಮ ಶಾಸನ ಸಭೆಯಲ್ಲಿನ ನಿಮ್ನ ವರ್ಗದವರ ಬಗೆಗಿನ ಭಾಷಣದಲ್ಲಿ ಗೌಡರು ಈ ಮೇಲಿನಂತೆ ಅನಿಸಿಕೆ ವ್ಯಕ್ತಪಡಿಸುತ್ತಾರೆ.

"ಯಾವುತ್ತು ನಮ್ಮ ಆಚಾರದಲ್ಲಿ, ಪ್ರತಿನಿತ್ಯದ ಆಚಾರದಲ್ಲಿ ವಿಚಾರ ಶೂನ್ಯವಾಗುತ್ತಾ ಹೋಗುತ್ತದೆಯೋ ಅಂದಿನ ಆ ಆಚಾರ ಗೊಡ್ಡು ಆಚಾರವಾಗುತ್ತದೆ. ಆದರೆ ಹಿಂದೆ ಇರತಕ್ಕ ಭಾವನೆ ಮೂಢ ಭಾವನೆಯಾಗುತ್ತದೆ. ಹೀಗೆ ನಾವು ಅನೇಕ ವರ್ಷಗಳಿಂದ ಧರ್ಮದ ಆಚರಣೆಯಲ್ಲಿ ಅನೇಕ ಮುಖ್ಯವಾದ ಅಂಶಗಳನ್ನು ಕೈಬಿಡುತ್ತಾ ಬಂದು ಇವೊತ್ತು ನಮ್ಮ ಆಚಾರದಲ್ಲಿ ಒಂದು ಶುಷ್ಕತೆ, ತಿರುಳಿಲ್ಲದಿರುವಿಕೆ ಮತ್ತು ಮೌಢ್ಯದಿಂದ ತುಂಬಿರುವ ಭಾವಾರ್ಥವನ್ನು ಇಟ್ಟುಕೊಂಡಿರುವುದನ್ನು ನಾವು ನೋಡುತ್ತಾ ಇದ್ದೇವೆ. ವಿಚಾರರಹಿತವಾದ ಆಚಾರವನ್ನು ಇವೊತ್ತು ನಾವು ಅನುಸರಿಸುತ್ತಾ ಇದ್ದೇವೆ. ನಡವಳಿಕೆಯಲ್ಲಿ ಇಟ್ಟುಕೊಂಡಿದ್ದೇವೆ. ಧರ್ಮ ಪ್ರತಿಯೊಬ್ಬ ಮನುಷ್ಯನ ವೈಯಕ್ತಿಕವಾದ ಒಂದು ಭಾವ ಎಂದು ಕೂಡ ನಾನು ತಿಳಿದುಕೊಂಡಿದ್ದೇನೆ. ಎಂದು ಹೇಳುತ್ತಾ ಧರ್ಮ ಮನುಕುಲದ ಏಳಿಗೆಯನ್ನು ಹಾಗೂ ಸಾರ್ವತ್ರಿಕ ಶಾಂತಿ ಮತ್ತು ಒಳಿತನ್ನು ಬಯಸಬೇಕೆ ವಿನಃ ಯಾವುದೇ ಒಂದು ಮತ ಅಥವಾ ಪಂಗಡಕ್ಕೆ ಮಾತ್ರ ಉಪಯುಕ್ತ ಎನ್ನುವಂತಹ ಭಾವನೆ ಹಾಗೂ ಅಂಧಕಾರಕ ಆಚರಣೆಗಳನ್ನು ಹುಟ್ಟುಹಾಕುವಂತಿರಬಾರದೆಂದು ಗೌಡರು ಬಯಸುತ್ತಾರೆ.

ದಿನಾಂಕ:11–09–1963ರ ಮೈಸೂರು ರಾಜ್ಯದ ಧಾರ್ಮಿಕ ಮತ್ತು ದಾನೀಯ ಸಂಸ್ಥೆಗಳಿಗೆ ಸಂಬಂಧಪಟ್ಟ ವಿದೇಯಕದ ಮೇಲೆ ನಡೆದ ಶಾಸನಸಭೆಯ ಚರ್ಚೆಯಲ್ಲಿ ಧರ್ಮದ ಬಗ್ಗೆ ಗೌಡರು ಸುದೀರ್ಘ ಮಾಹಿತಿಯನ್ನು ಶಾಸನ ಸಭೆಗೆ ನೀಡುತ್ತಾರೆ. ಮನುಷ್ಯನ ಇತಿಹಾಸದಲ್ಲಿ ಈ ದೈವೀಕಾಂಡ ಬಹಳ ವಿಸ್ತಾರವಾದುದು ಎಂದು ಹೇಳಬಹುದು. ಮನುಷ್ಯ ದೇವರನ್ನು ಯಾವತ್ತು ಸೃಷ್ಟಿಮಾಡಿದ ಎಂಬ ತಾರೀಖು ಇತಿಹಾಸದಲ್ಲಿ ಎಲ್ಲಿಯೂ ಖಚಿತವಾಗಿ ದೊರೆಯುವುದಿಲ್ಲ. ಆ ಭಾವನೆ ಅವನಲ್ಲಿ ಬೆಳೆದು, ಅವನ ದೇವರುಗಳು ಅವನ ಮನಸ್ಸಿನಲ್ಲಿ ರೂಪುಗೊಂಡು, ಅವು ಅವನಿಗೆ ಬೇಕಾದಂತೆ ಆಕಾರಹೊಂದಿ ಭೂಮಿಯ ಮೇಲೆ ವಾಸಮಾಡುವುದಕ್ಕೆ ಯಾವಾಗ ಪ್ರಾರಂಭ ಮಾಡಿದವು ಎನ್ನುವ ಇತಿಹಾಸ ಕೂಡ ಬಹಳ ಪ್ರಾಕೃತ ಮತ್ತು ಪುರಾತನವಾದುದು. ದೇವರು ಮತ್ತು ಧರ್ಮದ ಹೆಸರಿನಲ್ಲಿ ಮನುಷ್ಯ ಹರಿಸಿದಷ್ಟು ರಕ್ತವನ್ನು ಬೇರೆಯಾವ ಉದ್ದೇಶಕ್ಕಾಗಿಯೂ ಹರಿಸಿರಲಾರ ಎಂದು ಅನ್ನಿಸುತ್ತದೆ. ನಮ್ಮ ಸಮಾಜದಲ್ಲಿ ಹೇಗೆ ಧನಿಕರು, ಬಡವರು ಎನ್ನತಕ್ಕ ಭೇದವಿದೆಯೋ ಹಾಗೆಯೇ ಈ ಧಾರ್ಮಿಕ ವಿಶ್ವದಲ್ಲಿಯೂ ಕೂಡ, ದೇವರುಗಳ ರಾಜ್ಯದಲ್ಲಿಯೂ ಕೋಟ್ಯಾದೀಶರಾದ ದೇವರುಗಳಿದ್ದಾರೆ. ಹೊತ್ತು ತೆಂಗಿನಕಾಯಿ, ನೀರು, ಇಲ್ಲದೇ ಬರೀ ನೀರು ಮತ್ತು ಒಂದು ತುಳಸಿದಳ ತಲೆಯ ಮೇಲೆ ಬಿದ್ದಿರುತ್ತವೆ. ಅಲ್ಲದೆ ಹಾಗೆ ಏನೋ ಬೀಳದೆ ಇರತಕ್ಕ ನಿರ್ಗತಿಕರಾಗಿರತಕ್ಕ, ರಸ್ತೆಯ ಪಕ್ಕದಲ್ಲಿ ಕೇಳುವವರಿಲ್ಲದೆ ಬಿದ್ದಿರುವ ಎಷ್ಟೋ ದೇವರುಗಳನ್ನು ಇಲ್ಲಿಯೂ ನಾವು ಕಾಣುತ್ತೇವೆ. ಶ್ರೀಮಂತ ದೇವರುಗಳು ಇವೆ. ಅತೀ ಗರೀಬರಾದ ದೇವರುಗಳೂ ಇವೆ. ಯಾವ ದೇವರ ಆಸ್ತಿಪಾಸ್ತಿಗಳು ಪರಾದೀನವಾಗಿ ಹೋಗಿಬಿಟ್ಟಿದೆಯೋ ಯಾರ ತಲೆಯ ಮೇಲೆ ಒಂದು ತುಳಸಿದಳ, ಒಂದು ಹನಿ ಒಳ್ಳೆಯ ಉದಕ ಕೂಡ ಬೀಳುತ್ತಿಲ್ಲವೋ ಅಂಥ ದೇವರ ಕಡೆ ಇವತ್ತು ಸರ್ಕಾರದ ಗಮನವನ್ನು ಸೆಳೆಯಬೇಕು, ಅಂಥ ದೇವರನ್ನು ನಾವು ಕೈಬಿಡಬಾರದು'' ಎಂಬುದಾಗಿ ಜನರ ನಂಬಿಕೆ ಮತ್ತು ಆಚರಣೆಯ ಬಗ್ಗೆ ಧಾರ್ಮಿಕ ಸ್ಥಳಗಳ ನಿರ್ವಹಣೆ ಬಗ್ಗೆ ಅಭಿಪ್ರಾಯ ಪಡುತ್ತಿದ್ದರು.

ಇವೊತ್ತಿನ ದಿವಸ ಭೂಮಾಲೀಕರು ಗೇಣಿದಾರರನ್ನು ಅಧಿಕ ಸಂಖ್ಯೆಯಲ್ಲಿ ಭೂಮಿಯಿಂದ ಹೊರಗೆ ಹಾಕುತ್ತಿದ್ದಾರೆ. ಅವರನ್ನು ದೇಶಾದ್ಯಂತ ಹೊರದೂಡುತ್ತಿದ್ದಾರೆ. ಅವರಿಗೆ ಹೊಟ್ಟೆಗೆ ಇಲ್ಲ ಬಟ್ಟೆಗೆ ಇಲ್ಲ. ಎಲ್ಲಾ ಕಡೆಗಳಲ್ಲಿ ಆ ಒಂದು ಚಿತ್ರವನ್ನು ನಾವುನೋಡಬಹುದು. ಹಳ್ಳಿಗಳಲ್ಲಿ ಜನ ಗುಳೇಕಟ್ಟಿಕೊಂಡು ಕುಟುಂಬ ಬೇಟೆಗೆ ಹೊರಡುತ್ತಿದ್ದಾರೆ. ಹರಿಜನರು ಕರಟಿಗೆಯಲ್ಲಿ ಕಾಫಿಯನ್ನು ಕುಡಿಯುತ್ತಾರೆ ಅಥವಾ ತಮಗಾಗಿ ಇಟ್ಟಿರುವ ಲೋಟದಲ್ಲಿ ಕಾಫಿಯನ್ನು ಕುಡಿದು ಅದನ್ನು ತಾವೇ ತೊಳೆದು ಇಟ್ಟುಕೊಂಡು ಹೋಗುವುದು ಪದ್ಧತಿಯಾಗಿದೆ. ಅನೇಕ ಮನೆಗಳಲ್ಲಿ ಅವರು ಒಳಬರುವುದಕ್ಕೆ ಸಾಧ್ಯವಿಲ್ಲ. ಅವರು ಕುಡಿಯುವ ಲೋಟದಲ್ಲಿ ನೀರು ಕೊಡುವುದಿಲ್ಲ. ಅವರನ್ನು ಮುಟ್ಟಿಸಿಕೊಳ್ಳುವುದಿಲ್ಲ. ನಮ್ಮಲ್ಲಿ ಬಹಳ ಜನ ಐದು ಸಾವಿರ ವರ್ಷಗಳ ಹಿಂದೆ ಯಾವ ರೀತಿಯಲ್ಲಿ ನಡೆದುಕೊಂಡು ಬರುತ್ತಿದ್ದಾರೋ ಅದೇ ರೀತಿ ಅವರ ಗಾಳಿ ಬೀಸಬಾರದು, ಅವರ ನೆರಳು ತಾಗಬಾರದು ಎನ್ನುವ

ಪರಿಸ್ಥಿತಿಯಲ್ಲಿದ್ದಾರೆ. ಆದರೆ ಸಾರ್ವಜನಿಕ ಸ್ಥಳದಲ್ಲಾದರೂ ಇವರಿಗೆ ಯೋಗ್ಯವಾದ ಗೌರವಯುತ ಸ್ಥಾನಮಾನಗಳು ಇವೆಯೇ ಎಂದರೆ ಇಲ್ಲ. ಕೆಲವು ಶಾಲೆಗಳಲ್ಲಿ ಸಹ ಅವರನ್ನು ಇತರ ಜನಗಳಿಂದ ಪ್ರತ್ಯೇಕವಾಗಿ ಕೂರಿಸುತ್ತಾರೆ ಎನ್ನವುದು ನನ್ನ ಗಮನಕ್ಕೆ ಬಂದಿದೆ. ಆದುದರಿಂದ ಅಸ್ಪೃಶ್ಯತೆಯ ಬಗ್ಗೆ 48 ಕೇಸುಗಳನ್ನು ಹಾಕಿದ್ದಾರೆ. ಪೋಲೀಸರ ಗಮನಕ್ಕೆ ಅವರೂ ಕೂಡ ಸವರ್ಣ ಹಿಂದೂಗಳಂತೆ ಅವರ ಮನೋಭಾವದಂತೆ ವರ್ತಿಸಿ ಇದಕ್ಕೆಲ್ಲಾ ಕೇಸು ಹಾಕಬೇಕೋ? ಹೊರಗಡೆ ಕುಳಿತುಕೊಂಡು ಕುಡಿದರೆ ಆಗುವುದಿಲ್ಲವೋ, ದೊಡ್ಡ ಕೇಸು ಹಾಕುವುದಕ್ಕೆ ಬಂದ ಎಂದು ಅವನನ್ನು ಕಳುಹಿಸಿಬಿಡುತ್ತಾರೆ. ಎನ್ನವುದಾಗಿ ತಮ್ಮ ಮಾರ್ಚ್–12, 1964ರ ಶಾಸನಸಭೆ ಭಾಷಣದಲ್ಲಿ ಗೌಡರು ಅಸ್ಪೃಶ್ಯತೆಯ ಬಗ್ಗೆ ಮಾತನಾಡಿದ್ದಾರೆ.

ಗೌಡರಲ್ಲಿ ಸೋತರೂ ಸೋತನೆಂಬ ಹತಾಶನಾಗುವ ಕೆಚ್ಚು ಕಳೆದುಕೊಳ್ಳುವಂತಹ ಅರೆಬರೆ ನಾಯಕತ್ವವಿರಲಿಲ್ಲ. ಯಾರೋ ಕೆಲವು ಕಿಡಿಗೇಡಿಗಳು ಸೋತಿದ್ದ ಗೋಪಾಲಗೌಡರನ್ನು ಕುಚೋದ್ಯಮಾಡಿದಲ್ಲಿ ಅದಕ್ಕೆ ಸೊಪ್ಪುಹಾಕುತ್ತಿರಲಿಲ್ಲ. ಅಂತಹವರ ಬಳಿ ನೇರವಾಗಿ ಹೋಗಿ ಯಾಕೆ ಸೋತಿದ್ದು, ಯಾರಿಂದ ಎನ್ನುವುದನ್ನು ವಿವರವಾಗಿ ಗುಂಡು ಹೊಡೆದ ಹಾಗೆ ಹೇಳುತ್ತಿದ್ದರು. ಅವರ ಗತ್ತಿಗೆ ಯಾರಾದರೂ ಹೆದರಬೇಕಾಗಿತ್ತು. ಸಾಕಷ್ಟು ಭಾರಿ ಮಿತ್ರರಿಂದ ಜೇಬಲ್ಲಿ ಕಾಸಿಲ್ಲದಿದ್ರೂ ಶ್ರೀಮಂತಿಕೆ ಗತ್ತಿಗೆ ಬರ ಇಲ್ಲ. ಎಂಬುವುದಾಗಿ ತಮಾಷೆ ಮಾಡಿಸಿಕೊಂಡಿದ್ದಿದೆ. ದೇವರು, ದೇವರು ಇದ್ದಾನೆ ಎಂಬುವುದನ್ನು ವಿರೋಧಿಸುತ್ತಿದ್ದವರು, ಆದರೆ ಪೂಜಿಸುವವರು ಹಾಗೂ ನಂಬುವವರ ಮನಸ್ಸಿಗೆ ನೋವು ಉಂಟು ಮಾಡುತ್ತಿರಲಿಲ್ಲ. ಸಮಯ ಬಂದಾಗ ಅದರ ಬಗ್ಗೆ ಹೇಳುತ್ತಿದ್ದರು. ಅನೇಕ ಸಾರಿ ಚರ್ಚೆ ಮಾಡುವಾಗ ದೇವರ ಬಗ್ಗೆ ನಂಬದಿದ್ದರೂ ಖಂಡಿಸಿದ್ದುದನ್ನು ಅವರ ಸ್ನೇಹಿತರು ಇಂದಿಗೂ ನೆನಪಿಸಿಕೊಳ್ಳುತ್ತಾರೆ. ಗೌಡರಿಗೆ ಸಾಹಿತ್ಯದ ಹುಚ್ಚು ಬಹಳ. ಪುಸ್ತಕ ಓದುವುದು ಅವರಿಗೆ ನೆಚ್ಚಿನ ಹವ್ಯಾಸ. ಸಾಕಷ್ಟುಭಾರಿ ಹರಿಶ್ಚಂದ್ರ ಕಾವ್ಯ ಓದುತ್ತಾ ಕೂರುತ್ತಿದ್ದರು. ಸ್ಪಷ್ಟವಾಗಿ ನಿಧಾನವಾಗಿ ಪದ್ಯ ಪಠ್ಯವನ್ನು ಓದಿ ವ್ಯಾಖ್ಯಾನ ಮಾಡುತ್ತಿದ್ದರು. ಅವರಿಗೆ ಪ್ರಿಯವಾದ ಮತ್ತೊಂದು ಕಾವ್ಯವೆಂದರೆ ಕುಮಾರವ್ಯಾಸ ಭಾರತ. ಒಬ್ಬ ರಾಜಕಾರಣಿಗೆ ಏನೆಲ್ಲಾ ಸದ್ಗುಣಗಳು ಇರಬೇಕೋ ಅವೆಲ್ಲವುಗಳು ಗೋಪಾಲಗೌಡರಲ್ಲಿ ಕಾಣಬರುತ್ತಿದ್ದವು. ನಿಸ್ಪೃಹತೆ, ಆತ್ಮಾಭಿಮಾನ, ಹಾಸ್ಯ ಪ್ರವೃತ್ತಿ, ಧೈರ್ಯ, ಮುಂತಾದ ಹಲವು ಗುಣಗಳು ಅವರಲ್ಲಿದ್ದವು. ಜಾತೀಯತೆಯ ಸೋಂಕು ಅವರಲ್ಲಿ ಇರಲಿಲ್ಲ. ಈ ಎಲ್ಲಾ ಅಂಶಗಳಿಗೆ ಅವರು ಓದುತ್ತಿದ್ದ ಕಾವ್ಯ–ಸಾಹಿತ್ಯ ಕಾರಣವಾಗಿರಬಹುದು. ಸಂಗೀತದ ಆರಾಧಕರಾಗಿದ್ದ ಗೌಡರು ಸಂಗೀತಗಾರರನ್ನು ಆತ್ಮೀಯತೆಯಿಂದ ಕಾಣುತ್ತಿದ್ದರು. ಒಮ್ಮೆ ತೀರ್ಥಹಳ್ಳಿಯ ರಾಮ ಮಂದಿರದಲ್ಲಿ ಗೋಪಾಲಗೌಡರ ಅಧ್ಯಕ್ಷತೆಯಲ್ಲಿ ಪಿ. ಕಾಳಿಂಗರಾಯರ ಸಂಗೀತ ಕಛೇರಿಯನ್ನು ಏರ್ಪಡಿಸಲಾಗಿತ್ತು. ಅಂದು ಸಂಗೀತದ ಬಗ್ಗೆ ಬಹುಪಾಂಡಿತ್ಯ ಪೂರ್ವಕವಾಗಿ ಮಾತನಾಡಿದ್ದ ಅವರು ಕಾಳಿಂಗರಾಯರನ್ನು ನಮ್ಮ ನಾಡಿನ ಹೆಮ್ಮೆಯ 'ಗಾನಗಂಧರ್ವ' ಎಂದು ಪ್ರಶಂಸಿದ್ದರು. ರನ್ನ, ಕುಮಾರವ್ಯಾಸ ಮುಂತಾದ ಕವಿಗಳನ್ನು ತುಂಬು ಹೃದಯದಿಂದ

ಪ್ರೀತಿಸುತ್ತಿದ್ದರು. ಭಾವಗೀತೆಗಳು, ಕ್ರಾಂತಿ ಗೀತೆಗಳನ್ನು ಸ್ಫೂರ್ತಿ ಉಕ್ಕುವಂತೆ ವಾಚಿಸುತ್ತಿದ್ದರು. ಬೇಂದ್ರೆಯವರ 'ಕುರುಡು ಕಾಂಚಾಣ', 'ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು', 'ಗಂಗಾವತರಣ' ಮುಂತಾದ ಎಲ್ಲದರಲ್ಲಿಯೂ ಅಪಾರ ಪ್ರೀತಿ. ಬದುಕಿನ ವಿಕಾಸ ಪಥಕ್ಕೆ ಸಾಹಿತ್ಯ–ಸಂಗೀತವನ್ನು, ಸಮಾಜದಲ್ಲಿಯ ಬದಲಾವಣೆಗೆ–ಬಂಡಾಯಕ್ಕೆ ಕ್ರಾಂತಿಕಾರಿ ಭಾವನೆಯ ಕವಿತೆಗಳನ್ನು ಬಳಸಿಕೊಳ್ಳುತ್ತಿದ್ದರು. ಯಾವಾಗಲೂ ಸೋನ–ಮೋಹನ ಕುಮಾರಿಯವರಿಂದ ಕುವೆಂಪುರವರ "ನಡೆ ಮುಂದೆ..... ನುಗ್ಗಿನಡೆ ಮುಂದೆ......." ಮತ್ತು ಅವರ ಪ್ರಿಯಾ ಕ್ರಾಂತಿಕಾರಿ ಗೀತೆ ಕಯ್ಯಾರೆ ಕಿಞ್ಞಣ್ಣರೈ ರವರ

" ಎನ್ನೆದೆಯ ಬಿಸಿ ರಕ್ತ ಕುದಿ ಕುದಿಸಿ ಮಸಿಮಾಡಿ

ನಾ ಬರೆಯ ಬಲ್ಲೆ ನಾನು ಕವಿಯು"

ಮತ್ತು

"ಭಾರತೀಯರು ನಾವು ಎಂದೆಂದೂ ಒಂದೆ,

ಭಾವೈಕ್ಯದಲ್ಲಿ ಕೂಡಿ ನಡೆಯುವೆವು ಮುಂದೆ"

ಪು.ತಿ.ನ. ರವರ –'ಗೀತರೂಪಕಗಳ ತುಣುಕುಗಳು', ಗೋಪಾಲಕೃಷ್ಣ ಅಡಿಗರ –'ನೆಹರೂ ನಿವೃತ್ತರಾಗಲಿಲ್ಲ', ನಿಸ್ಸಾರ್ ಅಹಮದ್ ರವರ –'ಕುರಿಗಳು ಸಾರ್ ಕುರಿಗಳು'. ಮುಂತಾದ ಕವಿತೆಗಳನ್ನು ಬಹಳ ಸೊಗಸಾಗಿ ವಾಚಿಸುತ್ತಿದ್ದರು. ಹಾಗೂ ಅವುಗಳನ್ನು ಅಂದವಾಗಿ ವಿಶ್ಲೇಷಿಸುತ್ತಿದ್ದರು. ತುಲನಾತ್ಮಕ ದೃಷ್ಟಿಕೋನ, ವಿಮರ್ಶಾತ್ಮಕ ದೃಷ್ಠಿ ಅವರ ವೈಚಾರಿಕೆಯ ಶ್ರೀಮಂತಿಕೆಯಾಗಿತ್ತು. ಕನ್ನಡ ಭಾಷೆಯಂತೆಯೇ ಇಂಗ್ಲೀಷ್ ಭಾಷೆಯಲ್ಲಿಯೂ ಪರಿಣಿತಿ ಇತ್ತು.

ಗೌಡರು ಗಡಸಾಗಿದು ಕಠೋರವಾಗಿ ಅನ್ಯಾಯವನ್ನು ಎದುರಿಸಿ ನಿಲ್ಲುತ್ತಿದ್ದರೂ ಅವರ ಒಳಮನಸ್ಸು ಬಹಳ ಮೃಧುವಾಗಿತ್ತು. ಹಲವು ಸಂದರ್ಭಗಳಲ್ಲಿ ಅವರು ಅಸಹಾಯಕ ಜನರ ನೋವನ್ನು ಕೇಳಲಾಗದೆ ಕಣ್ಣೀರು ಹಾಕಿದ ಸಂಗತಿಗಳಿವೆ. '1954ರಲ್ಲಿ ಇರಬೇಕು, ಶಿಕಾರಿಪುರದ ತಾಳಗುಂದದಲ್ಲಿ ದಲಿತವರ್ಗದ ಹೆಣ್ಣು ಮಕ್ಕಳ ಮೇಲೆ ಪೋಲೀಸರ ಅತ್ಯಾಚಾರ ನಡೆಯಿತು. ಆಗ ಪಾನನಿರೋಧ ಜಾರಿಯಲ್ಲಿತ್ತು. ತಾಳಗುಂದದ ವಡ್ಡರು "ಹಟ್ಟಿಹಬ್ಬ"ದಂದು ಸಂಪ್ರದಾಯದಂತೆ ತಾವು ಕುಡಿದು ಹಬ್ಬ ಆಚರಿಸುವುದಾಗಿ ಸ್ಥಳೀಯ ಪೋಲಿಸರಿಗೆ ತಿಳಿಸಿ, ಅಂದು ರಾತ್ರಿ ಹಬ್ಬದ ಸಡಗರದಲ್ಲಿದ್ದರು. .ಜಿಲ್ಲಾ ಪಾನ ನಿರೋಧ ದಳದ ಎಸ್.ಪಿ.ಗೆ ಸುದ್ಧಿ ಹೋಗಿ ಅವರು ತಮ್ಮ ದಳದೊಡನೆ ತಾಳಗುಂದಕ್ಕೆ ಬಂದು ಹಬ್ಬದ ಮೋಜಿನಲ್ಲಿ ಕುಡಿದಿದ್ದ ಭೋವಿ ಜನಾಂಗದ ಹಟ್ಟಿಗೆ ನುಗ್ಗಿದರು. ಪೂರ್ವಭಾವಿ ಮಾಮೂಲಿ ಕೊಟ್ಟು ವ್ಯವಸ್ಥೆ ಮಾಡಿದ್ದರೂ ಪೋಲೀಸರು ಬಂದು ಹೆಂಗಸರ ಮೇಲೆ

ಕೈಮಾಡಿದುದನ್ನು ಸಹಿಸದೆ ಪೋಲೀಸರನ್ನೂ ಭೋವಿಗಳು ತಳಿಸಿದರು. ಎಸ್.ಪಿ.ಗೆ ಹೊಡೆದು, ಹೆಡಮುರಿ ಕಟ್ಟಿ, ಕೆರೆಯ ಹತ್ತಿರ ಹಾಕಿದರು. ಸುದ್ಧಿ ತಿಳಿದ ಜಿಲ್ಲಾ ರಕ್ಷಣಾಧಿಕಾರಿ ಮಾರನೆಯ ದಿನ ನೂರಾರು ಪೋಲೀಸ್ ಪಡೆಯೊಡನೆ ಬಂದು ತಾಳಗುಂದದ ಮೇಲೆ ದಾಳಿ ನಡೆಸಿದರು. ಗಂಡಸರೆಲ್ಲಾ ಹೆದರಿ ಗುಡ್ಡ ಬಿದ್ದಿದ್ದರು. ಪೋಲೀಸ್ ಪಡೆ ದಲಿತರ ಮನೆಗಳಿಗೆ ನುಗ್ಗಿ ಇದ್ದದ್ದನ್ನೆಲ್ಲಾ ದೋಚಿ, ಹೆಣ್ಣು ಮಕ್ಕಳ ಮೇಲೆ ಅತ್ಯಾಚಾರ ನಡೆಸಿತು. ಇಪ್ಪತ್ತೆರಡು ದಿನ ಆ ಗ್ರಾಮ ವಾಸಿಗಳ ಮೇಲೆ ಹಲ್ಲೆ ನಡೆಸಿದರು. ಜೊತೆಗೆ ಮನೆಯಲ್ಲಿನ ಕಾಳು, ಕೋಳಿ, ಕುರಿ ಹಾಗೂ ಚೂರುಪಾರು ಚಿನ್ನವನ್ನು ಸಹ ಪೋಲೀಸರು ದೋಚಿದರು. ವಿಷಯ ಪತ್ರಿಕೆಯವರಿಂದ ನಾಡಿಗೆ ತಲುಪಿತು. ಸತ್ಯ ಪತ್ರಿಕೆಯ ವರದಿಗಾರರಾಗಿದ್ದ ಎಸ್.ಕೆ ಸೀತಾರಾಮ ಅಯ್ಯಂಗಾರ್ ರವರು ಪತ್ರಿಕೆಯಲ್ಲಿ ಹೆಣ್ಣು ಮಕ್ಕಳ ಗೋಳಿನ ಕಥೆಯನ್ನು ವರದಿ ಮಾಡುವುದರ ಜೊತೆಗೆ ನಾಡಿನ ಎಲ್ಲಾ ಪತ್ರಿಕೆಗಳಿಗೆ ವರದಿ ನೀಡಿದರು. ಅನ್ಯಾಯವನ್ನು ಪ್ರತಿಭಟಿಸಿ ಉಪವಾಸ ಸತ್ಯಾಗ್ರಹ ಪ್ರಾರಂಭಿಸಿದರು. ಆಗ ಶಾಸಕರಾಗಿದ್ದ ಗೌಡರು ವಿಚಾರದ ಗಂಭೀರತೆಯನ್ನು ಅರಿತು ತಾಳಗುಂದಕ್ಕೆ ಭೇಟಿನೀಡಿದರು. ಅವರನ್ನು ಅಯ್ಯಂಗಾರ್‌ರವರು ಪ್ರತಿಯೊಂದು ಮನೆಮನೆಗೂ ಕರೆದುಕೊಂಡು ಹೋಗಿ ಅತ್ಯಚಾರಕ್ಕೆ ಒಳಗಾದ ಹೆಣ್ಣು ಮಕ್ಕಳನ್ನು ಕಂಡು ಅವರು ತಮ್ಮ ಮೇಲೆ ಪೋಲೀಸರು ಹಾಕಿದ ಬೆದರಿಕೆ–ಬಲಾತ್ಕಾರ, ಅತ್ಯಾಚಾರದ ಅಮಾನುಷ ರೀತಿಯನ್ನು ವಿವರಿಸಿ ಹೇಳುತ್ತಿದ್ದಾಗ ಎರಡೇ ಪ್ರಕರಣಗಳನ್ನು ಕೇಳುವಷ್ಟರ ಹೊತ್ತಿಗೆ ಗೌಡರು "ಸೀತಾರಾಮ್ ನಾನು ಇನ್ನು ಕೇಳಲು ಸಾಧ್ಯವಿಲ್ಲ. ಎಂಥಹ ರಾಕ್ಷಸೀಕೃತ್ಯ" ಎಂದು ಮಗುವಿನಂತೆ ಕಣ್ಣೀರು ಸುರಿಸಿದರು. ಅನ್ಯಾಯಕ್ಕೆ ಒಳಗಾದವರನ್ನು ಸಮಾಧಾನ ಪಡಿಸಲು ಬಂದಿದ್ದ ಗೌಡರನ್ನೇ ಅಯ್ಯಂಗಾರ್‌ರವರು ಸಂತೈಸ ಬೇಕಾದ ಪರಿಸ್ಥಿತಿ ಬಂದಿತು. ಒಡನೆಯೇ ಕೆಂಡದಂತಾದ ಗೌಡರು ನಾವು ನಮ್ಮ ಪಕ್ಷದಿಂದ ಈ ಅಮಾನುಷ ಕೃತ್ಯವನ್ನು ಖಂಡಿಸಿ ಹೋರಾಡುತ್ತೇವೆ. ಶಾಸನ ಸಭೆಯಲ್ಲಿ ಈ ಬಗ್ಗೆ ಹಗರಣವನ್ನು ಮಾಡುತ್ತೇನೆ. ಎಂದು ಹೇಳಿ ಅಯ್ಯಂಗಾರ್‌ರವರನ್ನು ಉಪವಾಸ ನಿಲ್ಲಸುವಂತೆ ಕೇಳಿಕೊಂಡರು. ನಂತರ ಶಾಸನಸಭೆಯಲ್ಲಿ ಈ ವಿಚಾರವನ್ನು ದೊಡ್ಡ ಹಗರಣವನ್ನೇ ಮಾಡಿದರು.

ಇಂತಹುದೇ ಮತ್ತೊಂದು ಪ್ರಕರಣ, ಶಿವಮೊಗ್ಗದ ಹತ್ತಿರದ 'ಜಯಂತಿ' ಗ್ರಾಮದಲ್ಲಿ, ಹರಿಜನರು ಬಗರ್‌ಹುಕುಂ ಸಾಗುವಳಿ ಮಾಡಿದ ಸುಮಾರು 60 ಎಕರೆ ಭೂಮಿಯ ಮೇಲೆ ಸವರ್ಣೀಯರು ನೂರಾರು ದನಗಳನ್ನು ಒಂದೇ ರಾತ್ರಿ ಬಿಟ್ಟು ಮೇಯಿಸಿದ ಪ್ರಕರಣದ ಬಗ್ಗೆ ಗಮನ ಸೆಳೆಯಲು ಅಯ್ಯಂಗಾರ್ ರವರು ಹಾಗೂ ಶ್ರೀ ಬದರಿನಾರಾಯಣ್ ರವರು ಆಗಿನ ಜಿಲ್ಲಾಧಿಕಾರಿಯಾಗಿದ್ದ ಶ್ರೀ ಆದಿರಾಜಯ್ಯನವರಲ್ಲಿ ದೂರಿತ್ತು. ರಕ್ಷಣೆ, ಕೋರಲು ಅವರ ಕೊಠಡಿಗೆ ತೆರಳಿದ್ದರು. ಆ ಸಂದರ್ಭದಲ್ಲಿ ಆಗ ಶಾಸಕರಾಗಿದ್ದ ಶ್ರೀ ಗೋಪಾಲಗೌಡರು ಅಲ್ಲಿಯೇ ಕುಳಿತ್ತಿದ್ದರು. ಆಗಲೇ ಅಯ್ಯಂಗಾರ್‌ರವರು ಸಮಾಜವಾದಿ ಪಕ್ಷ ತ್ಯಜಿಸಿ ಕಾಂಗ್ರೆಸ್ ಪಾಳಯಕ್ಕೆ ಸೇರಿದ್ದರು.

ಜಿಲ್ಲಾಧಿಕಾರಿಗಳಾದ ಆದಿರಾಜಯ್ಯನವರು ರಕ್ಷಣೆಕೊಡುವುದಿರಲಿ 'ಹರಿಜನರಾದರೇನು ಬಗರ್ ಹುಕ್ಕುಂ ಸಾಗುವಳಿ ಮಾಡಿದರೆ ಏನು ಮಾಡಲು ಸಾಧ್ಯ? ಅಲ್ಲದೆ ಅವರು ವಾಸಿಸುವ ಜಾಗವೂ ಬಗರ್ ಹುಕ್ಕುಂ ಅಕ್ರಮಣ. ಅದನ್ನೂ ಬಿಡಿಸಬೇಕಾದೀತು. ಇಲ್ಲವೇ ಬೆಂಕಿ......" ಎನ್ನವುದೇ ತಡ ಕೇಳುತ್ತಾ ಕುಳಿತ್ತಿದ್ದ ಗೌಡರು ಕೈಯಲ್ಲಿದ್ದ ಕೋಲು ಎತ್ತಿ ಡಿ.ಸಿ. ಗಲ್ಲಕ್ಕೆ ತಿವಿದು "ಏನು ಹೇಳ್ದೆ! ಇನ್ನೊಂದು ಸಾರಿ ಹೇಳು. ಗುಡಿಸಲಿಗೆ ಬೆಂಕಿ ಹಚ್ಚುತ್ತೀಯ? ನಾವೇನು ಮಾಡುತ್ತೇವೆ ಗೊತ್ತೇ?....... ನಿನ್ನನ್ನು ಆ ಬೆಂಕಿಯಲ್ಲಿ ಹಾಕುತ್ತೇವೆ. ಅಧಿಕಾರದ ಅಮಲಿನಲ್ಲಿ ಮಾತನಾಡುತ್ತೀಯ ಎಚ್ಚರಿಕೆ? ಎಂದು ಗುಡುಗಿದರು. ಡಿ.ಸಿ.ಗೆ ದಂಡ ತೋರಿಸಿ ದಲಿತರ ರಕ್ಷಣೆಗೆ ಸಿದ್ದರಾಗಿ ನಿಂತರು (ಜೀವಂತ ಜ್ವಾಲೆ 112–113). ಹೀಗೆ ಅನ್ಯಾಯಕ್ಕೆ ಒಳಗಾದವರ ಪಾಲಿಗೆ ನ್ಯಾಯನೀಡುವ ದೇವರಾಗಿ ಸ್ವಾಭಿಮಾನದ ಸಂಕೇತವಾಗಿ ಗೌಡರು ನಡೆದುಕೊಂಡರು.

ಕಾಗೋಡು ಸತ್ಯಾಗ್ರಹ ಒಂದು ವೇದಿಕೆಯಾಗಿ ಅಂದಿನ ದಿನಗಳ ಕತ್ತಲ ಬದುಕಿನ ಹಲವಾರು ಸಂಗತಿಗಳನ್ನು ಬಿತ್ತರಿಸಲು ಸಹಕಾರಿಯಾಗಿದೆ. ಭೂಮಿಯನ್ನು ಗೇಣಿಗೆ ಕೊಟ್ಟಿದ್ದೇವೆಂದೂ ಅಥವಾ ಗೇಣಿ ಪಡೆದಿದ್ದೇವೆಂದೂ ಯಾವುದೇ ಲಿಖಿತ ಒಪ್ಪಂದ ಕರಾರುಗಳಿರಲಿಲ್ಲ. ಗೇಣಿ ಪಡೆದಿದ್ದಕ್ಕೆ ಯಾವುದೇ ದಾಖಲೆ ನೀಡುತ್ತಿರಲಿಲ್ಲ. ಮೂರು ಸೇರಿನ ಕೊಳಗದಲ್ಲಿಯೇ ಗೇಣಿಯನ್ನು ಪಡೆಯಬೇಕಾಗಿದ್ದರೂ ಮೂರರಿಂದ ಮೂರು ಮುಕ್ಕಾಲು ಸೇರಿನಲ್ಲಿ ಹೆಚ್ಚುವರಿ ಪಡೆಯಲಾಗುತ್ತಿತ್ತು. ಅಲ್ಲದೆ ಹೆಚ್ಚಿನ ಭತ್ತ, ಸಲಿಗೆ ಭತ್ತ ವಗೈರೆ ಎಂದು ಚೀಲಕ್ಕೆ ಎರಡರಿಂದ ಮೂರು ಸೇರು ಹೆಚ್ಚಾಗಿ ಪಡೆಯುತ್ತಿದ್ದರು. ವರ್ಷಕ್ಕೆ ನಾಲ್ಕರಿಂದ ಹತ್ತು ಆಳುಗಳು ಒಡೆಯರ ಬಿಟ್ಟಿ ಕೆಲಸದ ದುಡಿತನವನ್ನು ಮಾಡಬೇಕಾಗಿತ್ತು. ಅತೀವೃಷ್ಠಿ ಅನಾವೃಷ್ಠಿಗಳಿಂದ ಬೆಳೆ ನಷ್ಟವಾದಾಗಲೂ ಗೇಣಿಯನ್ನು ಮುಂದಿನ ಸಾಲುಗಳಲ್ಲಿ ಕೊಡಬೇಕಾಗುತ್ತಿತ್ತು. ಸರ್ಕಾರವು ರೈತ ರಿಯಾಯ್ತಿಗಳನ್ನು ಘೋಷಿಸಿದಾಗೆಲ್ಲ ಕೇವಲ ಕಂದಾಯ ಕೊಡುವವನೇ ರೈತರೆಂದು ಪರಿಗಣಿಸುತ್ತಿತ್ತು. ಉದಾಹರಣೆಗೆ ಬೆಳೆ ರಕ್ಷಣೆಗೆ ಬಂದೂಕು, ಲೈಸೆನ್ಸ್, ನಾಟಾ ರಿಯಾಯ್ತಿದರ, ಬೆಳೆಸಾಲ, ಅಭಿವೃದ್ಧಿ ಸಾಲ ಇತ್ಯಾದಿ ಇವುಗಳನ್ನೆಲ್ಲಾ ಗೇಣಿಗೆ ಕೊಟ್ಟಿರುವ ಭೂಮಿಗಳ ಖಾತೆ ಹಕ್ಕಿನ ದಾಖಲೆಯನ್ನು ಮುಂದುಮಾಡಿ ಜಮೀನ್ದಾರರೇ ಪಡೆದುಕೊಳ್ಳುತ್ತಿದ್ದರು. ಗೇಣಿದಾರರ ಗಮನಕ್ಕೇ ಬರುತ್ತಿರಲಿಲ್ಲ.

ಗೇಣಿ ರೈತರ ಧ್ವನಿಗೆ ಬೆಳಕಾದ ಕಾಗೋಡು ಸತ್ಯಾಗ್ರಹದ ಪ್ರಮುಖ ಪ್ರದೇಶವಾದ 'ಕಾಗೋಡು' ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನ ತಾಳಗುಪ್ಪ ಹೋಬಳಿಯಲ್ಲಿನ ಒಂದು ಸಣ್ಣ ಹಳ್ಳಿ ಇದರ ಅಕ್ಕಪಕ್ಕದ ಹಳ್ಳಿಗಳಾದ ಹಾಗಲಪುರ, ಮರಗದ್ದೆ, ಸಣ್ಣಮನೆ, ಮತ್ತು ಹಿರೇನಲ್ಲೂರು ಹಳ್ಳಿಗಳ ಜೊತೆ ಕಾಗೋಡು ಸೇರಕೊಂಡು ಹಿರೇನಲ್ಲೂರು ರೆವಿನ್ಯೂ ಗ್ರಾಮ ಮತ್ತು ಗ್ರಾಮ ಪಂಚಾಯತ್ ಆಗಿದೆ. ಈಗ ಸುಮಾರು 138 ಮನೆಗಳಿರುವ ಈ ಊರಿನಲ್ಲಿ ನಾಲ್ಕು ಲಿಂಗಾಯಿತರಿಗೆ ಸೇರಿದ, ಏಳು ಮಡಿವಾಳರಿಗೆ ಸೇರಿದ ಮತ್ತು 30 ಆದಿಕರ್ನಾಟಕ ಅಥವಾ ಹರಿಜನರಿಗೆ ಸೇರಿದ ಮನೆಗಳಿವೆ. ಉಳಿದ 97 ಮನೆಗಳೂ ಸಹ ದೀವರ ಜಾತಿಯ ಮನೆಗಳಾಗಿವೆ. ಕಾಗೋಡು

ಗೌಡರು ತಾಲ್ಲೂಕಿನ ಅತೀ ಶ್ರೀಮಂತ ಗೌಡರಲ್ಲಿ ಒಬ್ಬರಾಗಿದ್ದರು. ಭರ್ಜರಿಯಾಗಿ ಮರದಿಂದ ಕಟ್ಟಿದ ಭಾರಿ ಮನೆ ಕಾಗೋಡು ಗೌಡರದು. ಸುಮಾರು 1896–1904ರಲ್ಲಿ ನಿರ್ಮಿತವಾದ ಈ ದೊಡ್ಡಮನೆ ಕೆಲಸಕ್ಕೆ ಎರಡು ನೂರು ಒಕ್ಕಲುಗಳನ್ನು ಬಿಟ್ಟಿದ್ದರಂತೆ. ಆ ಕಾಲದಲ್ಲಿಯೇ ಮನೆ ಕಟ್ಟಿಸಲು ಸುಮಾರು ನಾಲ್ಕು ಸಾವಿರ ಖರ್ಚಾಗಿತ್ತಂತೆ. ದೀವರ ಕೇರಿಯ ಎಲ್ಲಾ ಮನೆಗಳಿಗಿಂತಲೂ ದೊಡ್ಡದಾಗಿರುವ ಅವರ ಕೊಟ್ಟಿಗೆಯೇ ಐವತ್ತು ಕಾಲ್ನಡೆಗಳನ್ನು ಧಾರಾಳವಾಗಿ ಕಟ್ಟಬಹುದಾದಷ್ಟು ದೊಡ್ಡದಾಗಿತ್ತಂತೆ.

ಶ್ರೀಮಂತರ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ತುಳಿತದಲ್ಲಿ ಮನುಷ್ಯ ಗೌರವವನ್ನೇ ಕಳೆದುಕೊಂಡು ಪ್ರಾಣಿಗಳಂತೆ ಬದುಕುತ್ತಿದ್ದ ದೀವರು, ಅವರಂತೆಯೇ ಹರಿಜನ ಮತ್ತು ಮಡಿವಾಳ ಜನಾಂಗದವರು ಬಹಳ ಕಷ್ಟದ ಬದುಕನ್ನು ಸಾಗಿಸುತ್ತಿದ್ದ ಕಾಲ ಅದು. ದೀವ ಒಕ್ಕಲಿಗರು ತುಂಡು ಪಂಚೆ ಉಟ್ಟು, ಅರೆ ಹೊಟ್ಟೆ ಉಂಡು, ಉತ್ತು ಬಿತ್ತು ಬೆಳೆದು ಸುಮ್ಮನೆ ಕೂತು ತಿಂದು ದರ್ಬಾರು ಮಾಡುವ ದಣಿಗಳಿಗೆ ಗೇಣಿ ಕೊಡಬೇಕಾಗಿತ್ತು. ಆದರೆ ಮೇಲು ಜಾತಿಯ ದಣಿಗಳ ಎದುರು ಈ ದೀವರು ಕಾಲುಮುಟ್ಟುವಂತೆ ಪಂಚೆ ಉಡುವಂತಿರಲಿಲ್ಲ. ಅದು ಮೊಣಕಾಲಿನಕೆಳಗೆ ಇಳಿಯಕೂಡದು.

ದಣಿಗಳ ಮನೆಯ ಎದುರು ಇವರು ಚಪ್ಪಲಿ ಮೆಟ್ಟಿಕೊಂಡು ನಡೆಯುವಂತಿರಲಿಲ್ಲ. ದಣಿಗಳು ಮನೆಯ ಚಾವಡಿಯಲ್ಲಿ ಆಸೀನರಾಗಿದ್ದಾಗ ಇವರು ಮನೆಯ ಎದುರು ಹಾದು ಹೋಗಬೇಕಾದರೆ ಕಾಲಿನ ಜೋಡು ಕಳಚಿ ಕೈಯಲ್ಲಿ ಹಿಡಿದುಕೊಂಡು ಬಗ್ಗಿ ಮುಂದೆ ನಡೆಯಬೇಕಾಗಿತ್ತು. ದಣಿಗಳ ಮನೆಯಲ್ಲಿ ಯಾರನ್ನೂ ಅವರು ಯಾವ ಪ್ರಾಯದವರೇ ಆಗಿರಲಿ ಏಕ ವಚನದಲ್ಲಿ ಮಾತಾಡಿಸುವಂತಿಲ್ಲ. ಆದರೆ ದಣಿಗಳ ಮನೆಯ ಚೋಟುದ್ದದ ಪಿಳ್ಳೆ ಕೂಡಾ ದೀವರ ಮುದುಕರನ್ನು 'ನೀನು', 'ತಾನು' ಎಂದು ಮಾತಾಡಿಸಬಹುದಾಗಿತ್ತು. ಗಾಡಿ ಹೊಡೆಯುವಾಗ ದಣಿಗಳು ಎದುರಾದರೆ ಕಾಲುಬಿಟ್ಟು ಕುಳಿತುಕೊಳ್ಳುವಂತಿಲ್ಲ. ಬ್ರಾಹ್ಮಣ, ಲಿಂಗಾಯಿತರ ಮನೆಗಳಲ್ಲಿ, ಊರಿನ ದೇವಸ್ಥಾನಗಳಲ್ಲಿ ದೀವರು ಚಾವಡಿಯ ಅಥವಾ ಎರಡನೆಯ ಮಜಲನ್ನು ಸಹ ದಾಟುವಂತಿರಲಿಲ್ಲ. ದೀವರಿಗಿಂತ ಕೆಳಗಿನವರಾದ ಹರಿಜನರಿಗೆ ಕೃಷಿ ಭೂಮಿಯನ್ನೂ ಸಹ ಗೇಣಿಗೆ ಕೊಡುತ್ತಿರಲಿಲ್ಲ. ಕೂಲಿ ಮಾಡಿಕೊಂಡೇ ಬದುಕಬೇಕಾಗಿದ್ದ ಅವರಿಗೆ ಎಲ್ಲಯೂ ಹೊರಬಾಗಿಲಿನಿಂದ ಈಚೆಗೆ ಪ್ರವೇಶವಿರಲಿಲ್ಲ.

ಗೇಣಿ ಒಕ್ಕಲುಗಳು ದುಡಿದು ದಣಿಗಳಿಗೆ ಗೇಣಿಯನ್ನು ಸಲ್ಲಿಸಬೇಕಾಗಿತ್ತು. ಜೊತೆಗೆ ದಣಿಗಳು ಹೇಳಿದ ಬಿಟ್ಟಿಯನ್ನು ಮಾಡಬೇಕಾಗಿತ್ತು. ದಣಿಗಳ ಮನೆ ಕೊಟ್ಟಿಗೆಗೆ ಸೊಪ್ಪು ತರುವುದು, ಕರಡ ಕತ್ತರಿಸುವುದು, ಹುಲ್ಲು ಕೊಯ್ದು ತರುವುದು, ಅಂಗಳ ಸಗಣಿ ಸಾರಿಸುವುದು, ದನ ಮೇಯಿಸುವುದು, ಹಟ್ಟಿ ಮಾಡಲು ಹೊದೆಸುವುದು, ಬಟ್ಟೆ ಬಗೆಯುವುದು, ಅವರ ಕಾಗದ ಪತ್ರಗಳನ್ನು ಮುಟ್ಟಿಸುವುದು. ದಣಿಗಳ ಮನೆಯವರು ಎಲ್ಲಿಗಾದರೂ ಹೋಗಬೇಕಾದರೆ ಗಾಡಿಕಟ್ಟಿ ಹೊಡೆಯುವುದು, ಅಡಿಕೆ ಸುಲಿಯವುದು ಮುಂತಾದ ದಣಿಗಳು ಹೇಳಿದ ಯಾವ

ಕೆಲಸವನ್ನೂ, ಎದುರು ಮಾತಾಡದೆ ಮಾಡಬೇಕಾಗಿತ್ತು. ಹೆಸರೇ ಹೇಳುವಂತೆ ಇದು ಬಿಟ್ಟಿ ಕೆಲಸ. ದಣಿಗಳು ಖುಷಿಯಿಂದ ವೀಳ್ಯ, ಹೊಗೆಸೊಪ್ಪು, ತಿಂಡಿ, ನುಚ್ಚು ಕೊಟ್ಟರೇ ಕೊಟ್ಟರು. ಇಲ್ಲದಿದ್ದರೆ ಕೇಳಿ ಪಡೆಯುವಂತಿಲ್ಲ. ಒಂದು ಒಕ್ಕಲು ವರ್ಷಕ್ಕೆ ಹದಿನೈದರಿಂದ ಇಪ್ಪತ್ತು ಆಳಿನ ಕೆಲಸವನ್ನು ದಣಿಗಳ ಮನೆಯಲ್ಲಿ ಬಿಟ್ಟಿಯಾಗಿ ಮಾಡಬೇಕಾಗಿತ್ತು.

ಗೋಪಾಲಗೌಡರು 'ಮಹಾಕ್ರಾಂತಿಗೆ ಆಹ್ವಾನ' ಎಂಬ ತಮ್ಮ ಲೇಖನದಲ್ಲಿ ಯಳಂದೂರಿನಲ್ಲಿ ತಾವು ಕಂಡ ಅಪೂರ್ವದ ಘಟನೆಯನ್ನು ಉಲ್ಲೇಖ ಮಾಡುತ್ತಾರೆ. ಯಳಂದೂರಿನಲ್ಲಿ ಸವರ್ಣ ಹಿಂದುಗಳು ಮತ್ತು ಹರಿಜನರು ಜೊತೆಯಲ್ಲಿ ಇದ್ದುದನ್ನು ನೋಡಿ ನನಗೆ ಆಶ್ಚರ್ಯ ಆಯಿತು. ಹಾಗೂ ಅಲ್ಲಿ ಹರಿಜನರಿಗೆ ಭೂಮಿಕಾಣಿ ಇದ್ದುದನ್ನು ನೋಡಿದೆ. ಅವರು ರೇಷ್ಮೆ ಗೂಡನ್ನು ತೆಗೆಯುತ್ತಾ ಇದ್ದುದನ್ನು ನಾನು ನೋಡಿದೆ. ರಾಜ್ಯದಲ್ಲಿ ನಾನು ಅನೇಕ ಕಡೆ ನೋಡಿದ್ದೇನೆ ಆದರೆ ಇಂಥಾ ಅಪೂರ್ವವಾದ ಸವರ್ಣ ಹಿಂದುಗಳು ಮತ್ತು ಹರಿಜನರು ಜೊತೆಯಲ್ಲಿ ಇದ್ದುದನ್ನು ನಾನು ನೋಡಿಲ್ಲ. ಅಲ್ಲಿ ಅವರು ಅನ್ಯೋನ್ಯವಾಗಿ ಇರುವುದನ್ನು ನೋಡಿ ನನಗೆ ತುಂಬಾ ಸಂತೋಷವಾಯಿತು. ಸಮಾಜವಾದವನ್ನು ವರ್ಗ ಮತ್ತು ವರ್ಣಗಳನ್ನು ತೊಡೆದುಹಾಕುವ ದಾರಿಯಲ್ಲಿ ತರುವುದು ನಮ್ಮ ಕನಸಾಗಬೇಕೆನ್ನುವುದು ಗೌಡರ ಆಶಯವಾಗಿತ್ತು.

ಗೋಪಾಲಗೌಡರು ಗುಲಾಮಗಿರಿಯ ಬಗ್ಗೆ ಆಕ್ರೋಶಗೊಳ್ಳುತ್ತಾರೆ. ಆಗಿನ ಸಂದರ್ಭದಲ್ಲಿನ ಜೀತ ಪದ್ಧತಿಯ ಬಗ್ಗೆ ತಾವು ನೆನಪಿಸಿಕೊಳ್ಳುವುದು ಹೀಗೆ. ಹಿಂದೆ ನಮ್ಮಲ್ಲಿ ಜೀತದ ಪದ್ಧತಿ ಇತ್ತು. ಆಗ ಹರಿಜನರು ಜಮೀನ್ದಾರನ ಮನೆಯಲ್ಲಿ ಜೀತ ಮಾಡುವುದರ ಜೊತೆಗೆ ಅವರಲ್ಲಿ ಮದುವೆಯಾದಾಗ ಅವರ ಮನೆಗೆ ಹರಿಜನರ ಕುಟುಂಬಗಳನ್ನು ಬಳುವಳಿಯಾಗಿ ಕಳುಹಿಸುತ್ತಿದ್ದರು ಎಂದು ಕೇಳಿದ್ದೇನೆ. ಹರಿಜನರು ಜಮೀನ್ದಾರ ಮನೆಯಲ್ಲಿ ಜೀತಕ್ಕೆ ಇದ್ದುಕೊಂಡು ಅವರಿಗೆ ಗುಲಾಮಗಿರಿ ಮಾಡುತ್ತಿದ್ದರು. 'ಗುಲಾಮ' ಎಂದರೆ ಯಾರಿಗೆ ಯಜಮಾನನನ್ನು ಬದಲಾಯಿಸುವ ಅಧಿಕಾರ ಇರುವುದಿಲ್ಲವೋ ಅವರನ್ನು ಗುಲಾಮ ಎಂದು ಹೇಳುತ್ತಾರೆ. ಈ ರೀತಿಯ ಜೀತದ ಪದ್ಧತಿ ನಮ್ಮ ರಾಜ್ಯದಲ್ಲಿ ಈಗಲೂ ಇದೆ. ಈ ಪದ್ಧತಿಯನ್ನು ತೆಗೆಯುವುದು, ಅಸ್ಪೃಶ್ಯತೆಯನ್ನು ನಿರ್ಮೂಲನೆ ಮಾಡುವುದು ಈ ಪ್ರಶ್ನೆ ಕೇವಲ ಕಾಗದದ ಮೇಲಿದೆ. ಅದು ಇನ್ನೂ ಜೀವಂತವಾಗಿಯೇ ಇದೆ. ಕೆಲವು ಸಾರ್ವಜನಿಕ ಸ್ಥಳಗಳಲ್ಲಿ ಹರಿಜನರಿಗೆ ಪ್ರವೇಶವಿಲ್ಲ. ದೇವಸ್ಥಾನಗಳಲ್ಲಿ ಅವರಿಗೆ ಪ್ರವೇಶವಿಲ್ಲ. ಬುದ್ಧ, ಬಸವಣ್ಣ ಮತ್ತು ಮಹಾತ್ಮ ಗಾಂಧಿಯವರು ಮಾಡಿದಂತಹ ಚಳುವಳಿ ಏನಿವೆ ಅವು ಇನ್ನೂ ಹಾಗೆಯೇ ಉಳಿದಿವೆ. ಆ ಚಳುವಳಿಯ ಪರಿಣಾಮ ಏನೂ ಆಗಿಲ್ಲ. ಸವರ್ಣ ಹಿಂದೂಗಳಲ್ಲಿ ಅವರ ಮನಸ್ಸು ಮತ್ತು ಹೃದಯದಲ್ಲಿ, ತಲೆಯ ಯಾವುದೋ ಒಂದು ಭಾಗದಲ್ಲಿ ಅಸ್ಪೃಶ್ಯತೆ ಎನ್ನುವುದು ಮನೆಮಾಡಿಕೊಂಡು ಕುಳಿತುಕೊಂಡು ಬಿಟ್ಟಿದೆ. ಅದನ್ನು ತೊಡೆದುಹಾಕುವಂತಹ ಪ್ರಯತ್ನ ಮಾಡಬೇಕು. ಆ ಅಸ್ಪೃಶ್ಯತೆಯನ್ನು ನಿವಾರಣೆ ಮಾಡಬೇಕಾಗಿದ್ದರೆ ಅದಕ್ಕೆ ದುಡ್ಡು ಖರ್ಚು ಮಾಡಿದರೆ ಅದು ಹೋಗುವುದಿಲ್ಲ. ಹಿಂದೂ ಸಮಾಜದವರ ತಲೆಯಲ್ಲಿ ಅಸ್ಪೃಶ್ಯತೆ ಎನ್ನತಕ್ಕಂಥ ಕೆಟ್ಟಹುಳು ಏನಿದೆ ಅದನ್ನು ಕಿತ್ತುಹಾಕಬೇಕು. ಆದ್ದರಿಂದ

ನಾವು ವರ್ಣರಹಿತ ಮತ್ತು ವರ್ಗರಹಿತವಾದ ಸಮಾಜ ನಿರ್ಮಾಣಕ್ಕೆ ನಿರ್ಧಿಷ್ಟವಾದ ಹೆಜ್ಜೆಯನ್ನು ಮಾಡಬೇಕಾಗುತ್ತದೆ. ಈ ಬಗ್ಗೆ ಹೆಚ್ಚಿನ ಪ್ರಯತ್ನವನ್ನು ಮಾಡಬೇಕು.

ತಮಗೆ ಎದೆಬಡಿತ ಪ್ರಾರಂಭವಾದ ಸಂದರ್ಭವನ್ನು ಅವರೇ ನೆನಪಿಸಿಕೊಳ್ಳುವ ಬಗೆ ಹೀಗೆ "ಒಂದು ದಿವಸ ಬಸ್ಸಿನಲ್ಲಿ ಶಿವಮೊಗ್ಗದಿಂದ ತೀರ್ಥಹಳ್ಳಿಗೆ ಬರುತ್ತಿದ್ದೆ ಕಣ್ರೀ, ಅವತ್ತು ಬಸ್ಸಿನಲ್ಲಿ ತುಂಬಾ ರಷ್. ನಾನು ಕಂಡಕ್ಟರ್ ಸೀಟಿನಲ್ಲಿ ಕುಳಿತುಕೊಂಡಿದ್ದೆ. ಸಕ್ರೇಬೈಲು ದಾಟಿದ ಮೇಲೆ ಇಳುಕಲು ಬರುತ್ತಲ್ಲ ಅಲ್ಲಿನಾನು ತೀವ್ರಗತಿಯಿಂದ ಓಡುತ್ತಿರುವ ಬಸ್ಸಿನ ಪಕ್ಕದಲ್ಲಿಯೇ ನೋಡುತ್ತಿರುವಾಗ ಬಸ್ಸಿನ ಎಡಗಡೆಯ ಮುಂದಿನ ಚಕ್ರ ಸಡಿಲವಾಗಿ ಕಳಚುತ್ತ ಪಕ್ಕಕ್ಕೆ ಬರತೊಡಗಿದ್ದು ಕಂಡು ಬಿಟ್ಟಿತು. ಇನ್ನೇನು ಚಕ್ರ ಕಳಚಿ ಹೊರಗೆ ಬಂದುಬಿಡುತ್ತೆ. ಇಷ್ಟು ವೇಗವಾಗಿ ಹೋಗುತ್ತಿರುವ ಬಸ್ಸು ಪಲ್ಟಿಹೊಡೆದು ಜನ ಎಲ್ಲಿ ಬಿದ್ದು ಬಿಡುತ್ತಾರೋ, ಎಷ್ಟು ಜನ ಸಾಯುತ್ತಾರೋ ಏನೋ, ನಾನು ಸಾಯುತ್ತೇನೋ ಏನೋ ಎಂದು ಕೊಳ್ಳುತ್ತಿರುವಾಗಲೇ ಗಾಬರಿಯಾಗಿ ಎದೆಬಡಿದುಕೊಳ್ಳಲು ಶುರು ಆಗಿ ಬಿಡ್ತು. ಬಸ್ಸಿನ ಸೀಟನ್ನು ಗಟ್ಟಿಯಾಗಿ ಅವಚಿಹಿಡಿದುಬಿಟ್ಟೆ. ಕಣ್ಣು ಬೆಳ್ಳಗೆ ಮಾಡಿದ್ದೇನಂತೆ. ಆದರೆ ಆ ದಿನ ಅಂಥ ಅಪಘಾತ ಏನು ನಡೆಯಲಿಲ್ಲ. ಚಕ್ರ ನೋಡಿದ ಕಂಡಕ್ಟರ್ ಬಸ್ಸನ್ನು ನಿಲ್ಲಿಸಿದ್ದ. ಆದರೆ ನನ್ನ ಎದೆಬಡಿತದ ಭರಾಟೆ ನಿಲ್ಲಿಸಬೇಕಾದರೆ ಬಹಳ ಹೊತ್ತೇ ಹಿಡೀತು. ಆದರೆ ಅವತ್ತಿನಿಂದ ಇದು ಅಭ್ಯಾಸವಾಗಿ, ಆಗಾಗ ಬಡಿದುಕೊಳ್ಳುವಂತಾಗಿದೆ. ಈಗ ಯಾವುದೇ ಪರಿಸ್ಥಿತಿಯಲ್ಲಿ, ನಾನು ಬಹಳ ಉದ್ರೇಕಗೊಂಡರೆ ಕೂಡಲೇ ಶುರುವಾಗುತ್ತೆ. ಬಡಿದುಕೊಳ್ಳಲಿಕ್ಕೆ. ಕಿವಿಗೆ ಕೇಳುತ್ತೋ ಏನೋ ಅನ್ನಿಸಿಬಿಡತ್ತೆ. ಇಡೀ ಎದೆ ಹಾರುತ್ತೇರಿ. ಆಗ ನನಗೆ ಏನು ಮಾಡಬೇಕು ಏನು ಮಾಡ್ತೀನಿ, ಏನು ಆಗ್ತಿನಿ ಅಂತಾನೆ ಗೊತ್ತಾಗೊಲ್ಲ. ಸಂಪೂರ್ಣ ಹತೋಟಿ ತಪ್ಪಿ ಬಿಡುತ್ತೆ. ಕೂಗಿ ಬಿಡ್ತೀನಿ. ಅದು ನನಗೆ ಹುಚ್ಚು ಬಂತು ಅಂತಾರಿವರು. ಇಷ್ಟೇನೋಡಿ"(ಜೀವಂತ ಜ್ವಾಲೆ–59). ಎಂಬುದಾಗಿ ಬದುಕಿನ ಏಗಿಳಿತಗಳನ್ನು ಹಾಗೂ ಆರೋಗ್ಯದ ಬಗ್ಗೆ ಹೇಳಿಕೊಳ್ಳುವುದರೊಂದಿಗೆ ಒಮ್ಮೆಲೆ ಕೋಪೋದ್ರಿಕ್ತಗೊಳ್ಳುವ ತಮ್ಮ ನಡತೆಯ ಬಗ್ಗೆ ವಿವರಿಸುತ್ತಾರೆ.

ಗೌಡರ ಬದುಕಿನ ಪ್ರಮುಖ ಕಾಲಘಟ್ಟಗಳು ಮತ್ತು ಬದುಕಿನ ಸ್ಥಿತಿಗತಿಗಳು ಹಾಗೂ ಸಾಮಾಜಿಕ ಪರಿಸರದ ವಿವರಣೆಯ ಮೂಲಕ ಆಕಾಲದ, ಆ ತಲೆಮಾರಿನ ಸಾಕಷ್ಟು ವಿಚಾರಗಳನ್ನು ಅಧ್ಯಯನದಲ್ಲಿ ಗಮನಿಸಬಹುದಾಗಿದೆ. ವರ್ಗ ಸಂಗರ್ಷ, ವರ್ಣ ಸಂಗರ್ಷ ಮತ್ತು ಜೀತ ಪದ್ಧತಿಯಂತಹ ಸಾಮಾಜಿಕ ಅನಿಷ್ಟಗಳನ್ನು ಪರಿಚಯಿಸುವಲ್ಲಿ ಈ ಅಧ್ಯಾಯ ಆಮೂಲಾಗ್ರ ಮಾಹಿತಿಯನ್ನು ನೀಡುತ್ತದೆ. ಸಾಮಾಜಿಕ ವ್ಯವಸ್ಥೆಯಲ್ಲಿ ಆಚರಣೆಗಳು, ಸಂಪ್ರದಾಯಗಳು ಮೌಢ್ಯಗಳಾಗಿ ವೈಜ್ಞಾನಿಕ ಜಗತ್ತಿಗೆ ಗೋಚರಿಸುವ ನಗ್ನ ಸತ್ಯಗಳ ಬಗ್ಗೆ ಹಲವಾರು ದೃಷ್ಟಾಂತಗಳನ್ನು ಈ ಅಧ್ಯಾಯ ನೀಡಬಲ್ಲದಾಗಿದೆ. ಗೌಡರ ನೇರ ಬರವಣಿಗೆಯ ಲೇಖನಗಳ ಮೂಲಕ ಹಾಗೂ ಅವರ ಸಮಕಾಲಿನ ಗೆಳೆಯರ

ಅನಿಸಿಕೆಗಳ ಸಂಗ್ರಹಗಳ ಮೂಲಕ ಒಂದು ಸಮಾಜದ ಹಲವು ಮುಖಗಳನ್ನು ಪರಿಚಯಿಸುವ ಆಶಯವನ್ನು ಈ ಅಧ್ಯಾಯದಲ್ಲಿ ಕಂಡುಕೊಳ್ಳಲಾಗಿದೆ.

ಅಧ್ಯಾಯ – 3

ರಾಜಕೀಯ ಜೀವನದ ಹೆಜ್ಜೆಗಳು

ಪ್ರಾರಂಭದಿಂದಲೂ ರಾಜಕೀಯ ಪ್ರೇರಿತ ಪರಿಸರವುಳ್ಳ ಆರಗ ಗ್ರಾಮದಲ್ಲಿ ಜನಿಸಿದ ಇವರಿಗೆ ಬಹುಷಃ ರಾಜಕೀಯ ಎನ್ನುವುದು ಪರಿಸರದ ಸೆಲೆಯಾಗಿ ಬಂದಿರುವ ಸಾಧ್ಯತೆ ಇದೆ. ತೀರ್ಥಹಳ್ಳಿ ಸರ್ಕಾರಿ ಪ್ರೌಢ ಶಾಲೆಯ ಕನ್ನಡ ಪಂಡಿತರಾಗಿದ್ದ ಕಮಕೊಡು ನರಸಿಂಹ ಶಾಸ್ತ್ರಿಗಳ ಪ್ರಭಾವಕ್ಕೆ ಒಳಗಾಗಿದ್ದ ಅಂದಿನ ಹಲವಾರು ವಿದ್ಯಾರ್ಥಿಗಳಲ್ಲಿ ಗೌಡರು ಒಬ್ಬರು. ಕುಮಾರವ್ಯಾಸ, ಜೈಮಿನಿ ಭಾರತ ವಾಚನ, ಕುವೆಂಪು, ಬೇಂದ್ರೆ ಕವನಗಳ ಭಾವಪೂರ್ಣ ಹಾಡುಗಾರಿಕೆ, ಯಕ್ಷಗಾನ ಅಭಿರುಚಿಯ ಈ ಶಿಷ್ಯನ ಮೇಲೆ ಗುರುವಿಗೂ ಆಸಕ್ತಿ. ಸ್ವಾತಂತ್ರ್ಯ ಚಳುವಳಿಯ ಕಿಚ್ಚನ್ನು ಸಹಪಾಠಿಗಳಿಗೂ ಹತ್ತಿಸಿದ್ದಲ್ಲದೆ ಸಾರ್ ನೀವೂ ಶಾಲೆ ಬಿಟ್ಟು ನಮ್ಮೊಂದಿಗೆ ಹೋರಬರಬೇಕು, ಚಳುವಳಿಗೆ ನೀವು ಸೇರ್ರೋಬೇಕು ಎಂದು ಗುರುಗಳಿಗೆ ಜಬರದಸ್ತಿನ ಆಹ್ವಾನವಿತ್ತವರು. ವಿದ್ಯಾರ್ಥಿಗಳ ಭವಿಷ್ಯದ ದೃಷ್ಟಿಯಿಂದ ಹಾಗೆ ಮಾಡಲು ಹಿಂದೆ ಮುಂದೆ ನೋಡಿದ ಶಾಸ್ತ್ರಿಗಳಿಗೆ 'ಸಾರ್ ನೋಡ್ಕೋಳ್ತೀವಿ' ಎಂದು ನಿಷ್ಠುರವಾಡಿದ ಧೀರ ವಿದ್ಯಾರ್ಥಿ. ಆಗ ಗಾಂಧೀಜಿ ಕುರಿತ ಒಂದು ಪುಸ್ತಕ ಎಸ್.ಎಸ್.ಎಲ್.ಸಿ. ತರಗತಿಗೆ ಪಠ್ಯವಾಗಿದ್ದಿತಂತೆ. ಅದನ್ನು ಬೋಧಿಸುವ ನೆಪದಲ್ಲಿ ಪರಾತಂತ್ರ್ಯದಿಂದಾದ ಅಪಾಯಗಳನ್ನು ಎಚ್ಚರಿಸುತ್ತಿದ್ದರಂತೆ. ಸಾರ್ವತ್ರಿಕವಾಗಿ ಪ್ರಕಟಗೊಳ್ಳುತ್ತಿದ್ದ ಪರಾತಂತ್ರ್ಯದ ಬಗೆಗಿನ ಪ್ರತಿರೋದ ಒಂದು ಕಡೆಯಾದರೆ, ಗೌಡರ ಇದೇ ವಿವೇಕಯುಕ್ತ ರೊಚ್ಚು ಅಂದಿನ ಗುಲಾಮಶಾಹಿ ಶಿಕ್ಷಣ ಪದ್ಧತಿ, ಸಾಹುಕಾರ ಸಂಸ್ಕೃತಿಯ ಮೇಲೆ ಹರಿಹಾಯದೆ ಇರುತ್ತಿರಲಿಲ್ಲ. ಅಂದಿನ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಕೂರುವ ಮೊದಲು ಸೆಲೆಕ್ಷನ್ ಪರೀಕ್ಷೆ ಪಾಸು ಮಾಡಬೇಕಿತ್ತು. ಈ ಪರೀಕ್ಷೆಯಲ್ಲಿ ಆಂಗ್ಲ ಮತ್ತು ಗಣಿತ ವಿಷಯದ ಪ್ರಶ್ನೆಪತ್ರಿಕೆಗಳು ಕಠಿಣವಾಗಿದ್ದು ವಿದ್ಯಾರ್ಥಿಗಳಿಗೆ ಉತ್ತರಿಸಲು ಕಷ್ಟಕರವಾಗಿತ್ತು. ಹುಡುಗರು ಆ ಪ್ರಶ್ನೆಗಳಿಗೆ ಉತ್ತರಿಸಲಾಗದೇ ಕಕ್ಕಾಬಿಕ್ಕಿಯಾಗಿ ಕುಳಿತ್ತಿದ್ದಾಗ ಪರೀಕ್ಷಾ ಕೊಠಡಿಯನ್ನು ಬಿಟ್ಟು ಹೊರಬರುವಂತೆ ಹೇಳಿ ತಾವೇ ಸ್ವತಃ ಹೊರಬರುವ ಧೈರ್ಯ ತೋರಿಸಿದರು. ಗುಲಾಮಶಾಹಿ ಶಿಕ್ಷಣದ ಬಗ್ಗೆ ಸರಿಯಾಗಿ ಯೋಚಿಸುತ್ತಿದ್ದ ವಿದ್ಯಾರ್ಥಿಯೊಬ್ಬನ ನೈಜ ಪ್ರತಿಕ್ರಿಯೆ ಇದಾಗಿತ್ತು. ಉತ್ತಮ ಗ್ರಹಣಶಕ್ತಿ ಆದರೆ ಪಠ್ಯದ ಬಗ್ಗೆ ತಾತ್ಸಾರ ಉಳ್ಳವನಾಗಿದ್ದ ಈ ವಿದ್ಯಾರ್ಥಿಯ ಅಂದಿನ ವಾಸ್ತವ್ಯ ತೀರ್ಥಹಳ್ಳಿಯ ಒಕ್ಕಲಿಗರ ವಿದ್ಯಾರ್ಥಿನಿಲಯದಲ್ಲಿ. ಶ್ರೀಮಂತರು ಮತ್ತು ಶ್ರೀಮಂತಿಕೆಯನ್ನು ಅತ್ಯಂತ ಅಲಕ್ಷದಿಂದ ಕಾಣಿತ್ತಿದ್ದ ವಿದ್ಯಾರ್ಥಿ ನಿಲಯದ ಸ್ಕಾಲರ್ ಶಿಪ್ ಹುಡುಗ. ಅಲ್ಲಿನ ಶ್ರೀಮಂತ ಮಕ್ಕಳಿಗೊಂದು ತಮಾಷೆಯ ವ್ಯಕ್ತಿ, ದೊಗಲೆ ಉಡುಪಿನ ಆದರೂ ಧಿಮಾಕಿನ ಹುಡುಗನಿಗೆ ಮುಖಭಂಗಮಾಡಲು ಅವರೆಲ್ಲರ ಕುತಂತ್ರ, ಆರ್ಥಿಕವಾಗಿ ಸಮಾನಸ್ಥಿತಿಯಲ್ಲಿದ್ದ ಹುಡುಗನೊಂದಿಗೆ ಊಟದ ಮನೆಗೆ ಹೋದಾಗಲೆಲ್ಲಾ ತಟ್ಟೆ ಬಡಿದು ಅಪಮಾನ ಮಾಡುತ್ತಿದ್ದರು. ಅಂಥವರ ಜುಟ್ಟು ಹಿಡಿದು

ಹೊಡೆಯಬೇಕು ಎಂಬ ಕ್ರೌರ್ಯ ವ್ಯಕ್ತವಾಗುತ್ತಿದ್ದುದನ್ನು ಅವರ ಸಹ ಪಾಟಿಗಳು ಇಂದಿಗೂ ಸ್ಮರಿಸುತ್ತಾರೆ (ಜೀವಂತಜ್ವಾಲೆ–58).

ಇದಕ್ಕೆ ಪೂರಕವೆಂಬಂತೆ 1941ರಲ್ಲಿ ಒಡನಾಡಿಗಳ ಜೊತೆಗೆ ಪೋಸ್ಟ್ ಡಬ್ಬ ಕೀಳುವುದು, ತೀರ್ಥಹಳ್ಳಿ–ಕೊಪ್ಪ ರಸ್ತೆಯ ಟೆಲಿಗ್ರಾಫ್ ವಯ್ಯರ್‌ಗಳನ್ನು ಕತ್ತರಿಸುವುದರ ಮೂಲಕ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದ್ದರು. ಕ್ವಿಟ್ ಇಂಡಿಯ ಚಳುವಳಿಯಲ್ಲಿ ಭಾಗವಹಿಸಿ ಸ್ವಾತಂತ್ರ್ಯ ಹೋರಾಟಗಾರರನ್ನು ಬಂದಿಸುವುದರ ವಿರುದ್ಧ ತೀರ್ಥಹಳ್ಳಿಯ ಶ್ರೀರಾಮ ಮಂದಿರದಲ್ಲಿ ಮೊದಲ ಸಾರ್ವಜನಿಕ ರಾಜಕೀಯ ಭಾಷಣ ಮಾಡಿದರು. ಈ ಮೂಲಕ ರಾಜಕೀಯ ರಂಗಕ್ಕೆ ಅಧಿಕೃತವಾಗಿ ಗೌಡರ ಪ್ರವೇಶವಾದಂತಾಯಿತು.

1942 ಭಾರತ ದಿಲ್ಲಿಯಿಂದ ಹಳ್ಳಿಯ ತನಕ ಒಂದೇ ಕೂಗು, 'ಕ್ವಿಟ್ ಇಂಡಿಯಾ' ಆಗ ಗೌಡರು ತೀರ್ಥಹಳ್ಳಿ ಪ್ರೌಢ ಶಾಲೆಯಲ್ಲಿ ಒಬ್ಬ ಎಸ್.ಎಸ್.ಎಲ್.ಸಿ. ವಿದ್ಯಾರ್ಥಿ. ಆಯ್ಕೆ ಪರೀಕ್ಷೆ ನಡೆಯುತ್ತಿತ್ತು. ಶಾಲೆ ಬಂದ್ ಮಾಡುವ ಬಗ್ಗೆ ಆಗಲೇ ನೂರಾರು ವಿದ್ಯಾರ್ಥಿ–ವಿದ್ಯಾರ್ಥಿನಿಯರು ತೊಡಗಿದ್ದು ದೂರದಿಂದಲೇ ಕಂಡಿತು. ಜಯಘೋಷಗಳು ಮೊಳಗುತ್ತಿದ್ದು ಪೋಲಿಸರ ಸಾಲು ಎಲ್ಲವೂ ಮೈನವಿರೇಳಿಸಿದವು. ಕೈಲಿದ್ದ ಕಾಗದವನ್ನು ಅಲ್ಲೇ ಬಿಸಟ್ಟು, ಗೌಡರು ಸತ್ಯಾಗ್ರಹಿಯಾಗಿ, ಮೈಮರೆತು ಎದೆಯುಬ್ಬಿಸಿ ಜೈಕಾರ ಮಾಡುತ್ತಾ ಮುನ್ನುಗ್ಗಿದರು. ಮುನ್ನುಗ್ಗುವವರನ್ನು ಕೂಡಿಕೊಂಡೆ ಶಾಲೆ ಬಂದ್. ಅನೇಕರ ಬಂಧನ, ಬಂಧಿಖಾನೆಗೆ ರವಾನೆ, ಮೆರವಣಿಗೆ, ಹಂತದ ಬಹಿರಂಗ ಸಭೆ, ಅನೇಕರ ಭಾಷಣ, ಪ್ರಭಾತ್‌ಫೇರಿ, ಸಭೆ ಇವು ತೀರ್ಥಹಳ್ಳಿಯ ಜನತೆಯ ನಿತ್ಯ ಹೋರಾಟ. ದಿನ ದಿನಕ್ಕೂ ಉಗ್ರ ರೂಪ ತಾಳಿತು. ಹೋರಾಟ ಹಳ್ಳಿ ಹಳ್ಳಿಗೂ ಹಬ್ಬಿತು. ಬಂಧನಕ್ಕೊಳಗಾಗದೇ ಉಳಿದಿದ್ದ ಗೌಡರು ಕೆಲವರು ಊರು ಊರು ಸುತ್ತಿ ಸಭೆ ಮೆರವಣಿಗೆ ಮುಂದುವರೆಸಿಕೊಂಡೇ ನಡೆದರು. ಚಳುವಳಿ ಇನ್ನು ಉಗ್ರ ಸ್ವರೂಪದ ಹೋರಾಟ, ಹಿಂಸೆಯ ಹಾದಿ ಹಿಡಿದರೂ ಚಿಂತೆಯಿಲ್ಲವೆಂದು ಗುಪ್ತ ಪ್ರಚಾರ ಹಸ್ತ ಪತ್ರಿಕೆಗಳ ಹಂಚಾಟದಲ್ಲೂ ಭೂಗತರಾಗಿದ್ದು ಉಗ್ರಗಾಮಿಗಳು ತೊಡಗಿದ್ದರು. ಅಂತೆಯೇ ಗೌಡರು ಕೆಲವರು ಪೋಸ್ಟ್‌ಡಬ್ಬ ಕೀಳುವುದು, ತಂತಿ ಕತ್ತರಿಸುವುದು ಮುಂತಾದ ವಿಧ್ವಂಸಕ ರಾತ್ರಿ ಚಟುವಟಿಕೆಗಳಲ್ಲಿ ತೊಡಗಿದ್ದರು. ಪೋಲೀಸರಿಂದ ಬಂಧಿತರಾಗಿ ಶಿವಮೊಗ್ಗ ಜೈಲು ಸೇರಿದ್ದು ವಿವಿಧ ರಾಜಕೀಯ ಆದರ್ಶ ವ್ಯಕ್ತಿಗಳ ಪರಿಚಯವಾಯಿತು. ಜವಾಹರಲಾಲರ 'ಡಿಸ್ಕವರಿ ಆಫ್ ಇಚಿಡಿಯಾ' ಮಸನಿಯವರ 'ಸೋಷಲಿಸಂ ರೀ ಕನ್ಸಿಡರ್ಡ್', ಮಾರ್ಕ್ಸ್‌ವಾದ, ಗಾಂಧಿವಾದದಿಂದ ಹಿಡಿದು ಟ್ರಾಟಸ್ಕಿಯವರೆಗೂ ಪರಿಚಯವಾಯಿತು. ಇದೇ ಗೌಡರ ರಾಜಕೀಯ ಜೀವನಕ್ಕೆ ನಾಂಧಿ ಎಂಬ ತಮ್ಮ ರಾಜಕೀಯ ಪ್ರವೇಶದ ಹಂತವನ್ನು ಗೌಡರು 'ಸ್ವರಾಜ್ಯ ಬಂತು' ಎಂಬ ಲೇಖನದಲ್ಲಿ (ಶಾಂತವೇರಿ ಗೋಪಾಲಗೌಡರ ನೆನಪಿನ ಸಂಪುಟ 475–476) ವಿವರಿಸಿದ್ದಾರೆ.

ಮೂಲತಃ ಗೇಣಿದಾರರ ಕುಟುಂಬದಿಂದ ಬಂದ ಗೌಡರು 1942ರ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಪ್ರೌಢ ಶಾಲಾ ವಿದ್ಯಾರ್ಥಿಯಾಗಿದ್ದಾಗಲೇ ಧುಮುಕಿ ರಾಜಕೀಯ ರಂಗಕ್ಕೆ ಪ್ರವೇಶ ಪಡೆದರು. ಗೇಣಿ ರೈತರ ಪರವಾಗಿ ಹೋರಾಟಗಳನ್ನು ರೂಡಿಸಿ ಅವರಲ್ಲಿ ಜಾಗೃತಿ ತರುವಲ್ಲಿ ಸಫಲರಾದರು. ಸಾಗರ, ಸೊರಬ, ಹೊಸನಗರ, ತೀರ್ಥಹಳ್ಳಿ ಭಾಗಗಳಲ್ಲಿ ಗೇಣಿ ಬತ್ತವನ್ನು ಭೂಮಾಲಿಕರು ಮನಸೋ ಇಚ್ಛೆ ಪಡೆಯುತ್ತಿದ್ದರು. ಹಾಗೂ ಗೇಣಿ ಬತ್ತದ ಅಳತೆಯ ಕೊಳಗದ ತಕರಾರು ಗೇಣಿ ರೈತರನ್ನು ಒಡೆಯರ ವಿರುದ್ಧ ಬಂಡೇಳುವಂತೆ ಪ್ರೇರೇಪಿಸಿ ಚಳುವಳಿಗೆ ಕಾರಣವಾಯಿತು. ಮಲೆನಾಡಿನ ಭಾಗಗಳಲ್ಲಿ ಉಂಟಾದ ಒಡೆಯರ ವಿರುದ್ಧದ ರೈತರ ಎಚ್ಚರವೇ ಕಾಗೋಡು ರೈತ ಸತ್ಯಾಗ್ರಹಕ್ಕೆ ಕಾರಣವಾಯಿತು.

1946ರ ನಂಜನಗೂಡಿನ ವಿದ್ಯಾರ್ಥಿ ಕಾಂಗ್ರೆಸ್ ಸಮಾವೇಶದ 'ಕಾಂಗ್ರೆಸ್–ಸೋಷಲಿಸ್ಟ್'ನ ಮುಂದಾಳುವಾಗಿ ಕೆಲಸ ಮಾಡಿದರು. 1947ರ ಚಳುವಳಿಯಲ್ಲಿ ವೀರ ಮುಂಚೂಣಿಯನ್ನು ವಹಿಸಿದರು. ಭೂಗತವಾಗಿದ್ದುಕೊಂಡೇ ಪ್ರತಿ ದಿನವೂ ಜನಮನದಲ್ಲಿ ರಾಷ್ಟ್ರಪ್ರೇಮ ಪ್ರಜ್ವಲಿಸುವಂತೆ ವಿವಿಧ ರೀತಿಯ, ವಿವಿಧ ವೇಷಭೂಷಣ ಮಾಡಿ ಚಳವಳಿಗೆ ಚೇತನ ನೀಡುತ್ತಿದ್ದರು. ಈ ಸಮಯದಲ್ಲಿ ಗೌಡರಷ್ಟು ಭಾಷಣಕಾರರಾಗಿ ಜನಾನುರಾಗಿಯಾದ ತರುಣರು ಮಲೆನಾಡಿನ ಭಾಗದಲ್ಲಿ ಯಾರೂ ಇರಲಿಲ್ಲ. ಗೋಪಾಲಗೌಡರು ಈ ನೆಲದ ನುಡಿಗಟ್ಟುಗಳ ಮೂಲಕ ತಮ್ಮದೇ ಆದ ವಿಶಿಷ್ಟ ಶೈಲಿಯಲ್ಲಿ ಜನರಿಗೆ ಸಮಸ್ಯೆಯ ಅರಿವು ಮೂಡಿಸುತ್ತಿದ್ದರು. ಈ ಕಾರಣದಿಂದಾಗಿ ಅವರ ಎಲ್ಲಾ ಸಭೆ ಸಮಾರಂಭಗಳಲ್ಲಿ ಹಾಗೂ ಚುನಾವಣಾ ಭಾಷಣಗಳಲ್ಲಿ ಜನ ಕಿಕ್ಕಿರಿದು ಸೇರುತ್ತಿದ್ದರು. ಒಮ್ಮೆ ಶಿವಮೊಗ್ಗದ ರಾಮಣ್ಣ ಶೆಟ್ಟಿ ಪಾರ್ಕಿನಲ್ಲಿ ಗೌಡರ ಭಾಷಣ ಕೇಳಿಸಿಕೊಳ್ಳುತ್ತಿದ್ದ ಪೋಲೀಸರು ಗೌಡರನ್ನು ಬಂಧಿಸಲು ಮುಂದಾದರು. ಗೌಡರು ತಕ್ಷಣ ವೇದಿಕೆಯಿಂದ ಕೆಳಕ್ಕೆ ಹಾರಿ, ಮಹಿಳೆಯೊಬ್ಬರು ಬಿಚ್ಚಿಕೊಟ್ಟ ಸೀರೆ ಉಟ್ಟು ಪೋಲೀಸರ ಕಣ್ಣಿಗೆ ಮಣ್ಣೆರಚಿದರು. ಸರ್ಕಾರ ಇವರ ಕಾರ್ಯಚಟುವಟಿಕೆಗಳಿಂದ ತಲ್ಲಣಗೊಂಡಿತ್ತು. ಆಗಲೇ ಮಲೆನಾಡಿನ ಭಾಗದ ಜನರಲ್ಲಿ ಗೌಡರ ಸಾಹಸ ಪರಾಕ್ರಮಗಳು ರಂಜನೆಯ ಕಥೆಗಳಾಗಿದ್ದವು. ಪೋಲೀಸರು ಅವರನ್ನು ಬಂಧಿಸಲು ಸರ್ವ ಪ್ರಯತ್ನ ಮಾಡುತ್ತಿದ್ದರು. ಒಮ್ಮೆ ಅವರನ್ನು ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿದರು. ಗೌಡರ ಪರ ವಾದಿಸಲಿಕ್ಕೆ ಲಾಯರ್‌ಗಳಾರು ಇರಲಿಲ್ಲ. ಗೌಡರು ತಾವೇ ಲಾಯರ್ ಆಗಿ ವಾಧಿಸಿದರು. ಇಂಥದೊಂದು ಸಂದರ್ಭವನ್ನು ನೆನಪಿಸಿಕೊಳ್ಳತಕ್ಕದ್ದಾಗಿದೆ. 'ಗೋಪಾಲಗೌಡರು ಗ್ಯಾಂಗ್ ಕಟ್ಟಿಕೊಂಡು ಮೀಟಿಂಗ್ ಮಾಡುತ್ತಿದ್ದರು' ಎಂಬ ಆಪಾದನೆ ಪೋಲಿಸರದ್ದು. ಇದಕ್ಕೆ ಗೌಡರ ಪಾಟಿ ಸವಾಲು 'ಹೌದಪ್ಪ.. ಗೋಪಾಲಗೌಡ ಗ್ಯಾಂಗ್ ಕಟ್ಟಿಕೊಂಡು ಏನೋ ಮಾಡುತ್ತಿದ್ದ, ಗ್ಯಾಂಗ್ ಎಂದರೇನು? ಒಬ್ಬ ಪೋಲಿಯೋ, ಜುಗಾರಿಯೋ, ದರೋಡೆಕೋರನೋ, ಒಂದು ಗುಂಪು ಕಟ್ಟಿಕೊಂಡರೆ ಅದನ್ನು ಗ್ಯಾಂಗ್ ಅನ್ನುತ್ತಾರೆ. ಹೌದ... ಹೌದು ಆದರೆ ಒಬ್ಬ ರಾಜಕೀಯ ವ್ಯಕ್ತಿ ಒಂದು ಗುಂಪು

ಸೇರಿಸಿಕೊಂಡು ಮೀಟಿಂಗ್ ಮಾಡುತ್ತಿದ್ದರೆ. ಅದು ಗ್ಯಾಂಗೇ' ಎಂದು ಪ್ರಶ್ನಿಸಿದರು. ಇದೇ ರೀತಿ ಆಪಾಧನೆಯ ಪ್ರತಿಯೊಂದು ಶಬ್ದವನ್ನೂ ಅವರು ನಿರ್ದಿಷ್ಟವೂ, ಖಚಿತವೂ ಆಗಿ ವಿಶ್ಲೇಷಣೆ ಮಾಡುತ್ತಾ ಅದನ್ನು ಕೇಳುತ್ತಾ ಬಂದರು. ಬಂಧಿಸಿದ್ದ ಇನ್‌ಸ್ಪೆಕ್ಟರ್ ನರ್ವಸ್ ಆಗಿದ್ದರು. ಆಗ ಗೌಡರೇ ನ್ಯಾಯಾದೀಶರಿಗೆ 'ಸ್ವಾಮಿ.... ದಯಮಾಡಿ ಅವರಿಗೊಂದು ಕುರ್ಚಿಕೊಡಿ' ಎಂದು ಹೇಳಿ, ಅವರು ಕುಳಿತುಕೊಂಡೇ ಹೇಳಲು ಅವಕಾಶ ಮಾಡಿಕೊಟ್ಟರು. ಗೌಡರ ವಾದವನ್ನು ಕೇಳಲು ಬಹಳಷ್ಟು ಜನ ಲಾಯರುಗಳು ಬಂದಿದ್ದರು. ಅವರುಗಳೆಲ್ಲ ಅವರ ಕಾನೂನು ಪರಿಣಿತಿಗೆ, ತರ್ಕ ವಿಧಾನಕ್ಕೆ ವಿಸ್ಮಿತರಾದರು. ಆ ಸಂದರ್ಭದಲ್ಲಿ ಸರಕಾರಿ ವಕೀಲರು ಕಾನೂನಿನ ನೆರವು ಪಡೆಯಲು ಪುಸ್ತಕವನ್ನು ತೆರೆಯಲು ಮುಂದಾದರು. ಆಗ ಗೌಡರು ಅವರನ್ನು ಕುರಿತು 'ಸ್ವಾಮಿ ಯಾಕ್ರೀ ಪುಸ್ತಕ ತೆಗೆಯುತ್ತೀರಿ, ಇಂಥ ಪುಸ್ತಕದಲ್ಲಿ, ಇಂಥ ಕಡೆ ಇಂಥ ಕಾನೂನು ಹೀಗೆ ಹೀಗೆ ಹೇಳುತ್ತದೆ'. ಕಾನೂನಿನ ಪ್ರತಿಯೊಂದು ಅಂಶಗಳೂ ಸಹ ಅವರ ಬಾಯಲಿತ್ತು. ಅಷ್ಟರ ಮಟ್ಟಿಗೆ ಆಯಾ ಕ್ಷೇತ್ರಗಳ ಬಗ್ಗೆ ಪರಿಣತಿಯನ್ನು ಪಡೆದವರಾಗಿದ್ದರು. ಭಾರತಕ್ಕೆ ಸ್ವಾತಂತ್ರ ಬಂದ ನಂತರ ಗೌಡರು 'ಕಾಂಗ್ರೆಸ್ ಪಕ್ಷ ಸ್ವರಾಜ್ಯ ತರುವುದಕ್ಕೆ ಮಾತ್ರ ಸೀಮಿತ. ಇನ್ನು ಮುಂದೆ ನಾವು ಸ್ವತಂತ್ರ ಭಾರತ ಕಟ್ಟಬೇಕು. ಅದಕ್ಕೆ ಸಮಾಜವಾದವೇ ತಾರಕ ಮಂತ್ರ' ಎಂದು ಘೋಷಿಸಿ ಕಾಂಗ್ರೆಸ್‌ಗೆ ರಾಜೀನಾಮೆ ನೀಡಿದರು.

1948ರಲ್ಲಿ ಗೌಡರು ಬೃಹತ್ ರೈತ ಸಮಾವೇಶವನ್ನು ಸಂಘಟಿಸಿದರು ಇದರಲ್ಲಿ ರಾಮನಂದನ್ ಮಿಶ್ರಾ, ಕಮಾಲಾದೇವಿ ಚಟ್ಟೋಪದ್ಯಾಯ, ಮುಂತಾದವರು ಭಾಗವಹಿಸಿದ್ದರು. 1949ರಲ್ಲಿ ಅಣ್ಣಾ ದೇಶಪಾಂಡೆಯವರೊಂದಿಗೆ ಕರ್ನಾಟಕ ಸಮಾಜವಾದಿ ಪಕ್ಷ ರಚನೆ ಮಾಡಿದರು. 1951ರಲ್ಲಿ ಡಾ. ಲೋಹಿರವರ ನೇತೃತ್ವದಲ್ಲಿ ಕಾಗೋಡು ಸತ್ಯಾಗ್ರಹವನ್ನು ಚಾತುರ್ಯದಿಂದ ಸಂಘಟಿಸಿ ಮಲೆನಾಡ ಭಾಗದಲ್ಲಿ ಸಮಾಜವಾದಿ ಸಿದ್ಧಾಂತಗಳ ಚಿಂತನೆಗೆ ಮತ್ತು ಜನರು ಅವುಗಳನ್ನು ಒಪ್ಪಿಕೊಳ್ಳುವತ್ತ ಪ್ರಮುಖ ಪಾತ್ರ ವಹಿಸಿದರು.

ಸಮಾಜವಾದದ ಆದರ್ಶದ ಸೆಳೆತಕ್ಕೆ ಸಿಕ್ಕಿ ಗೋಪಾಲಗೌಡರು ಸಹಜವಾಗಿಯೇ ರೈತರ, ದೀನದಲಿತರ ಸ್ಥಿತಿಗತಿಯ ಕಡೆಗೆ ಗಮನ ಹರಿಸಿದರು. ಅವರು ತಮ್ಮ ಸುತ್ತಲಿನ ಪರಿಸರವನ್ನು ಮಾನವೀಯ ಕಾಳಜಿಯಲ್ಲಿ ಅರ್ಥೈಸಿದ್ದರು. ಅವರ ಕಣ್ಣ ಮುಂದೆ ನಿಂತ ಸಜೀವ ಚಿತ್ರವೆಂದರೆ ತಾನು ತನ್ನ ಮನೆಯ ಚಿತ್ರಣ, ಹಗಲೂ ಮೂರ್ಹೊತ್ತು ದುಡಿದರೂ ಹೊಟ್ಟೆಗಿಲ್ಲದ ಹೊಟ್ಟೆಬೆನ್ನಿಗೆ ಹತ್ತಿದ ರೈತನ ಚಿತ್ರ, ಆತನ ಬಡತನ ಬವಣೆಗೆ, ತನ್ನೂರ ಇತಿಹಾಸ ನೆನಪಿಗೆ ಬಂತು. ಬಡವರ ಬಗೆಗೆ ಗಾಢವಾದ ಅನುಕಂಪ ಹುಟ್ಟಿತ್ತು. ಅವರ ಸಂಕಷ್ಟಗಳನ್ನು ತೊಡೆದುಹಾಕಲು, ಗೋಳಿನ ಕಣ್ಣಿರನ್ನು ಒರೆಸುವ ಕಾಯಕಕ್ಕೆ ಧೀರ ನಾಯಕತ್ವವನ್ನು ಒದಗಿಸಿಕೊಟ್ಟ ಮಾನವೀಯ ಮುಂದಾಳುವಾಗಿ ರೂಪುಗೊಂಡರು.

ಚುನಾವಣಾ ಭಾಷಣಗಳಲ್ಲಿ ಆಯಾ ಪ್ರದೇಶದ ಸಮಸ್ಯೆಗಳನ್ನು ಕುರಿತು ಅವರು ಮಾತನಾಡುತ್ತಿದ್ದರು. ನೇರವಾಗಿ ಓಟು ಕೇಳುವುದು ಅವರ ಜಾಯಮಾನದಲ್ಲಿ ಸಾಧ್ಯವಿರಲಿಲ್ಲ. ಈಗಿನ ರಾಜಕಾರಣಿಗಳಿಗೆ ಒಂದು ವ್ಯಕ್ತಿ ಎಂದರೆ ಒಂದು ಓಟಿನ ರೂಪದಲ್ಲಿ ಕಾಣಿಸುತ್ತಾರೆ. ಆದರೆ ಗೋಪಾಲಗೌಡರಿಗೆ ತನ್ನ ಮತದಾರರು ಮಾನವನಾಗಿ ಮಾತ್ರ ಕಾಣಿಸುತ್ತಿದ್ದ. 'ಅನಿಕೇತನ' ಎಂಬ ಲೇಖನದಲ್ಲಿ ಕಡಿದಾಳು ಶಾಮಣ್ಣ (ಶಾಂತವೇರಿ ಗೋಪಾಲಗೌಡರ ನೆನಪಿನ ಸಂಪುಟ–12) ರವರು ಅಭಿಪ್ರಾಯ ಪಡುತ್ತಾರೆ. "ಮನೆ ನಿವೇಶನ ಹಂಚುವಾಗ ಎಲ್ಲಾ ಜಾತಿಗಳಲ್ಲಿ ಕಡುಬಡತನದಲ್ಲಿರುವ ಕುಟುಂಬಗಳಿಗೆ ಸಿಗುವಂತೆ ಲಾಟರಿ ಮೂಲಕ ಅರ್ಹ ಫಲಾನುಭವಿಗಳನ್ನು ಆರಿಸಬೇಕು. ಇದರಿಂದಾಗಿ ನಿವೇಶನ ಹಂಚಿದ ಪ್ರದೇಶದಲ್ಲಿ ಎಲ್ಲಾ ಧರ್ಮ, ಜಾತಿಗೆ ಸೇರಿದ ಕುಟುಂಬಗಳು ಒಂದೆಡೆ ವಾಸಿಸುವಂತಾಗುತ್ತದೆ. ಅದರಿಂದ ಎಲ್ಲಾ ಜಾತಿ ವರ್ಗದವರೂ ಕೂಡಿಬಾಳುವಂತಾಗುತ್ತದೆ. ಎಲ್ಲಾ ಮಕ್ಕಳೂ ಕೂಡಿ ಆಡಿದರೆ ಸಮಾಜ ಮುಂದುವರೆಯುತ್ತದೆ. ಆದ್ದರಿಂದ ಜಾತಿ ಕೇರಿ ಮಾಡಬೇಡಿ" ಎಂದು ರೆವಿನ್ಯೂ ಅಧಿಕಾರಿಗಳಿಗೆ ಹೇಳಿತ್ತಿದ್ದುದರ ಬಗ್ಗೆ ಕಡಿದಾಳ್ ಶಾಮಣ್ಣರವರು 'ಅನಿಕೇತನ' ಲೇಖನದಲ್ಲಿ ಬರೆಯುತ್ತಾರೆ (ಶಾಂತವೇರಿ ಗೋಪಾಲಗೌಡರ ನೆನಪು ಸಂಪುಟ–14).

'ಮಹಿಳಾ ಸದಸ್ಯರಿಲ್ಲದಿದ್ದಲ್ಲಿ ಸಂಘ, ಸಮಿತಿಗಳಿಗೆ ಬೆಲೆಯೇ ಇಲ್ಲ' ಎನ್ನುತ್ತಿದ್ದರು. "ಅಲ್ಲಾ, ಶಾಮಣ್ಣ ಗೋಪಾಲಗೌಡರು ಯಾವಾಗ ಬಟ್ಟೆ ತಂದುಕೊಟ್ಟು ಜುಬ್ಬಾ ಹೊಲೆಸಿದ್ದರು" ಅವರಿಗೆ ಬಟ್ಟೆ ತಂದು ಹೊಲೆಸಿದ ಅನುಭವವೇ ಇಲ್ಲ! ನಾನು ಹರಿದುಹೋದ ಅವರ ಜುಬ್ಬವನ್ನು ಹೊಲೆದುಕೊಟ್ಟಿರಬಹುದು. ಯಾರ್‍ಯಾರೋ, ಅವರಿಗೆ ರೆಡಿಮೆಡ್ ಜುಬ್ಬ ತಂದುಕೊಡುತ್ತಾರೆ. ಅವ್ಯೊಂದಕ್ಕೂ ಅಳತೆ ಸರಿ ಇರಲ್ಲ. ಅದಕ್ಕೆ ಜುಬ್ಬಾದ ತೋಳನ್ನು ತುದಿಯಲ್ಲಿ ಮಡಚಿಕೊಳ್ಳಲು ನೀವೆಲ್ಲಾ ಅದನ್ನು ಪ್ಯಾಷನ್ ಅಂದುಕೊಂಡರೆ ನಾನೇನು ಮಾಡೋದು" ಎನ್ನುವುದಾಗಿ ಟೈಲರ್ ನಾರಾಯಣ ಶೆಟ್ಟರು ಹೇಳುತ್ತಿದ್ದರು ಎನ್ನುವುದಾಗಿ 'ಅನಿಕೇತನ' ಎಂಬ ಲೇಖನದಲ್ಲಿ ಕಡಿದಾಳ್ ಶಾಮಣ್ಣ ಹೇಳುತ್ತಿದ್ದರು. ಈ ಘಟನೆಗಳು ಗೌಡರು ರಾಜಕಾರಣವನ್ನು ಒಂದು ಸಿದ್ಧಾಂತವಾಗಿ ಹೇಗೆ ಒಪ್ಪಿಕೊಂಡಿದ್ದರು ಹಾಗೂ ಅವರ ರಾಜಕೀಯ ಧ್ಯೇಯಗಳು ಏನಾಗಿರಬಹುದು ಎಂಬುದರ ಬಗ್ಗೆ ಮುನ್ಸೂಚನೆ ನೀಡುತ್ತದೆ.

ಜಮೀನ್ದಾರರು ಬಳಸುತ್ತಿದ್ದ ಅಳತೆ ಕೊಳಗದ ತಕರಾರು ಕಾಗೋಡು ಹೋರಾಟಕ್ಕೆ ಮೂಲ. ಆದರೆ ಆಳದಲ್ಲಿ ಈ ಹೋರಾಟ, ನಮ್ಮ ದೀವರು ಮತ್ತು ಇತರ ಬಡಜನತೆಯು ಅನೇಕ ವರ್ಷಗಳಿಂದ ಜಮೀನ್ದಾರರ ಶೋಷಣೆಗಳಿಂದ ಅನುಭವಿಸುತ್ತಿದ್ದ ಅಪಮಾನದ ವಿರುದ್ಧ ನಡೆಸಿದ ಹೋರಾಟವೂ ಆಗಿತ್ತು. ಕಾಗೋಡು ಗ್ರಾಮದ ಕೆ.ಜಿ. ಒಡೆಯರ್ ರವರ ಕುಟುಂಬವು ನಮ್ಮ ಗೇಣಿದಾರರ ಮೇಲೆ ನಡೆಸುತ್ತಿದ್ದ ಅನಾಗರೀಕ ದೌರ್ಜನ್ಯ ಮನುಷ್ಯ

ಮಾತ್ರದವರು ಸಹಿಸಲಾರದ್ದು. ದೀವರು ಇವರ ವಿರುದ್ಧ ಸಂಘಟಿತರಾಗಿ ಧ್ವನಿ ಎತ್ತುವುದಕ್ಕೆ ಅಳತೆ ಕೊಳಗದ ತಕರಾರು ಒಂದು ನೆಪವಾಗಿತ್ತು.

ಗೋಪಾಲಗೌಡರು ಸತ್ಯಾಗ್ರಹದ ಸಂದರ್ಭದಲ್ಲಿ ಕಾಗೋಡು ಸುತ್ತಮುತ್ತಲಿನ ಹಳ್ಳಿಗಳನ್ನೆಲ್ಲಾ ಬರಿ ಕಾಲ್ನಡಿಗೆಯಲ್ಲಿ ಸುತ್ತಾಡಿ ರೈತರನ್ನು ಸಂಘಟಿಸಿದರು. ಇದರಿಂದಾಗಿ ಆ ಭಾಗದಲ್ಲಿ ಗೋಪಾಲಗೌಡರು ಎಲ್ಲರಿಗೂ ಪರಿಚಿತರಾದರು. ಕಾಗೋಡು ಹೋರಾಟದ ನಂತರ ಸಮಾಜವಾದಿ ಪಕ್ಷ ಈ ಭಾಗದಲ್ಲಿ ಹೆಚ್ಚು ಪ್ರಭಲವಾಯಿತು. ಕಾಗೋಡಿನಲ್ಲಿ ಸಮಾಜವಾಧಿ ಪಕ್ಷ ಹೋರಾಟಮಾಡದೇ ಹೋಗಿದ್ದರೆ, ಇಲ್ಲಿ ಭೂಸುಧಾರಣಾ ಕಾನೂನು ಜಾರಿಗೆ ಬರುತ್ತಿರಲಿಲ್ಲ. ಇದೇ ಆಧಾರಲ್ಲಿ ಸಮಾಜವಾದಿ ಪಕ್ಷ ರಾಜ್ಯದಲ್ಲಿ ಅನೇಕ ಹೋರಾಟಗಳನ್ನು ನಡೆಸಿತು. ಕಾಗೋಡು ಚಳುವಳಿಯ ನಂತರ ಗೋಪಾಲಗೌಡರು ರಾಜ್ಯದ ಸಮಾಜವಾದಿ ನಾಯಕರಾಗಿ ಮೂಡಿಬಂದರು. 1952ರ ಗೋಪಾಲಗೌಡರ ಮೊದಲ ಚುನಾವಣೆಯಲ್ಲಿ ಕೆಂಪು ಬಾವುಟ, ಕೆಂಪು ಟೋಪಿ ಪ್ರಚಾರದೊಂದಿಗೆ ಶ್ರೀಮಂತ ಜಮೀನ್ದಾರರಾದ ಬದರಿನಾರಾಯಣ ಅಯ್ಯಂಗಾರ್ ವಿರುದ್ಧ ಗೆದ್ದು ಬಂದರು (ಶಾಂತವೇರಿ ಗೋಪಾಲಗೌಡರ ನೆನಪು ಸಂಪುಟ–177). ಎಂಬುದಾಗಿ ಕಾಗೋಡು ತಿಮ್ಮಪ್ಪನವರು ಜನರ ಕಣ್ಣಲ್ಲಿ ಗೋಪಾಲಗೌಡ ಎಂಬ ಲೇಖನದಲ್ಲಿ ಗೌಡರನ್ನು ನೆನಪಿಸಿಕೊಳ್ಳುತ್ತಾರೆ.

ಕಾಗೋಡು ಚಳುವಳಿಗೆ ಗೇಣಿ ರೈತರು ಮತ್ತು ಭೂಮಾಲಿಕರ ನಡುವೆ ಅನೇಕ ಹಂತಗಳಲ್ಲಿ ನಡೆದ ಸಂಘರ್ಷಗಳು ಹಾಗೂ ಅವುಗಳನ್ನು ಸರಿಪಡಿಸಲು ರಚಿಸಿಕೊಂಡ ಸಮಿತಿಗಳು ಪರೋಕ್ಷವಾಗಿ ಕಾರಣವಾಗುತ್ತವೆ. ಭೂಮಾಲಿಕರ ಪರವಾಗಿ ಗೇಣಿ ಜಮೀನಿಗೆ ತಮ್ಮದೇ ಆದ ಸಮರ್ಥನೆಯನ್ನು ಹೀಗೆ ವ್ಯಕ್ತಪಡಿಸುತ್ತಾರೆ – ಮಲೆನಾಡಿನಲ್ಲಿ ಜಮೀನು ವಿಸ್ತೀರ್ಣ ಆಗಾಧವಾಗಿದೆ. ಆದರೆ, ರೈತರ ಸಂಖ್ಯೆ ಕಮ್ಮಿ. ಹೀಗಾಗಿ ಅನೇಕ ಕಡೆಗಳಲ್ಲಿ ಜಮೀನು ಪಾಳುಬಿದ್ದಿದೆ. ಈಗ ರೋಗ–ರುಜಿನಗಳ ದೆಸೆಯಿಂದ ಹಳ್ಳಿಗಳು ಕ್ಷೀಣಹೊಂದಿ, ಫಲವತ್ತಾದ ಜಮೀನುಗಳ ಅನೇಕ ಎಕರೆ ವಿಸ್ತೀರ್ಣ ಕಾಡುಪ್ರದೇಶಗಳಾಗಿವೆ. ಇಂತಹ ಪರಿಸ್ಥಿತಿಯಲ್ಲಿ ಒಂದೇ ಶರೀರದಲ್ಲಿನ ಬೇರೆ ಬೇರೆ ಅವಯವಗಳಂತೆ ಹಿಡುವಳಿದಾರನು, ರೈತನೂ ಪ್ರಕೃತಿಯ ನಾನಾ ರೂಪದ ಕ್ರೌರ್ಯಗಳನ್ನು ಎದುರಿಸಿ ಸೌಂದರ್ಯ–ಸೌಭಾಗ್ಯಗಳನ್ನು ಅನುಭವಿಸಿಕೊಂಡು ಅಣ್ಣ ತಮ್ಮಂದಿರಂತೆ, ಸಾಂಸಾರಿಕದಂತೆ ನಡೆದುಕೊಂಡು ಬಂದು ತಮ್ಮ ಜೀವನ ಯಾತ್ರೆಯನ್ನು ಸಾಧಿಸಿಕೊಂಡು ಸುಖಸಂತೋಷಗಳಿಂದ ಜೀವಿಸುತ್ತಿದ್ದರು. ಇಬ್ಬರೂ ಹೊಂದಿಕೊಳ್ಳದೆ ಗತ್ಯಂತರವಿರಲಿಲ್ಲ. ಹಿಡುವಳಿದಾರನಿಗೆ ಜಮೀನಿನಲ್ಲಿ ಬೆಲೆಯಿಲ್ಲ. ರೈತನಲ್ಲಿ ಬೆಲೆ ಇದೆ. ಅಂದಾಗ ಒಕ್ಕಲು ಒಡೆತನ ಮಧುರವಾಗಿರಲೇಬೇಕು. ಹಿಡುವಳಿದಾರರು ರೈತರಿಗೆ ಸಕಲ ಕಾಲದಲ್ಲಿ ನೆರವು ನೀಡುತ್ತಾ ಬಂದಿದ್ದಾನೆ. ಕಂದಾಯ ಕಾಣಿಕೆ ಸಕಾಲಕ್ಕೆ ಕಟ್ಟುತ್ತಾ ಬಂದಿದ್ದಾನೆ. ಅನೇಕ ಸಾರಿ ಸಾಲಸೂಲಗಳಿಗೆ ತುತ್ತಾಗಿ ಮನೆಮಠ ಕೂಡ ಮಾರಿಕೊಂಡಿದ್ದಾನೆ. ಒಂದು ರೀತಿಯ ದಯಾಮಯ ಯಜಮಾನತನವಿತ್ತು. ಇಂದು ಇಂತಹ ಸ್ಥಿತಿ ಬಿಗಡಾಯಿಸಿದೆ.

ಇದರಿಂದ ಉಭಯವಾದಿಗಳಿಗೂ ಅನುಕೂಲವಿಲ್ಲ. ಆದರೆ ರೈತರಲ್ಲಿ ಕೆಲವರು ಏನು ತಿಳಿಯದ, ಹಿಂದುಳಿದ ಮತದ ಕಟ್ಟುನಿಟ್ಟುಗಳಿಗೆ ತಲೆಭಾಗುವ ವಿವೇಚನಾ ಶಕ್ತಿ ಇಲ್ಲದ, ಸತ್ಯ ಸಂಪ್ರದಾಯ ಅರಿಯದ ಈ ರೈತರಿಗೆ ಇಲ್ಲಸಲ್ಲದ ಭರವಸೆಗಳನ್ನು ತೋರಿಸಿ ತಮ್ಮ ನಾಯಕತ್ವದಲ್ಲಿ ಇಂದ್ರಲೋಕವನ್ನು ಭೂಲೋಕಕ್ಕೆ ಇಳಿಸುವಂತಹ ನಂಬಿಕೆಗಳನ್ನು ಬೋಧಿಸಿ ಇವರಲ್ಲಿ ಜನ್ಮಜಾತ ಇದ್ದಂತಹ ನಂಬಿಕೆಯನ್ನು ಕೆಡಿಸಿ ಅವರನ್ನು ತಪ್ಪುದಾರಿಗೆ ಎಳೆದಿದ್ದಾರೆ. ಹಾಗೆ ರೈತರನ್ನು ಜಮೀನಿನಿಂದ ಓಡಿಸುವ ಪ್ರಶ್ನೆಯೇ ಇಲ್ಲ. ರೈತನನ್ನು ಬಿಡಿಸುವ ಗೋಜಿಗೆ ಹೋಗುವ ಪ್ರಯತ್ನ ನೂರಾರು ವರ್ಷಗಳಿಂದ ಯಾರೂ ಹೇಳಿಲ್ಲ, ಕೇಳಿಲ್ಲ. ರೈತರ ಸಂಖ್ಯೆ ಮಲೆನಾಡಿಲ್ಲಿ ಕಡಿಮೆಯಾದಾಗ ಬಿಡುಸುವ ಪ್ರಶ್ನೆಯೇ ಏಳುವುದಿಲ್ಲ. "ನಾನು ಕೊಟ್ಟಷ್ಟು ತೆಗೆದುಕೊಳ್ಳಬೇಕು; ಕೊಡುವ ಪ್ರಮಾಣದಲ್ಲಿ ತೆಗೆದುಕೊಳ್ಳಬೇಕು; ನಾವು ಕೊಡುವುದು ಧರ್ಮದ ಹಾಗೆ. ಸಾಗುವಳಿದಾರನು ಜಮೀನಿನ ಯಜಮಾನ; ನಾವು ಜಮೀನು ಬಿಡುವುದಿಲ್ಲ. ಸತ್ಯಾಗ್ರಹ ಮಾಡುತ್ತೇವೆ. ಸಾಮೂಹಿಕ ಸತ್ಯಾಗ್ರಹ ಮಾಡುವೆವು" ಎಂದು ಮುಂತಾಗಿ ಕಾನೂನಿಗೆ ವಿರೋಧವಾಗಿ ಚಳುವಳಿ ಮಾಡಿ ಉದ್ರೇಕ ಪ್ರೇರಿತವಾದ ಭಾಷಣಗಳನ್ನು ಮಾಡಿ ಭಯೋತ್ಪಾದನೆ ಉಂಟುಮಾಡುತ್ತಾ, ಈ ಎರಡು ವರ್ಷದ ಗೇಣಿಯನ್ನು, ಸಾಲವನ್ನು ಕೊಡದೆ ಮನಸೋಇಚ್ಛೆಯಾಗಿ ನಡೆಯುತ್ತಿದ್ದಾರೆ. ಸರ್ಕಾರದ ಡಿಪೋವಿಗೂ ಅಲ್ಪಸ್ವಲ್ಪ ಕೊಡುತ್ತಾ ಜಮೀನನ್ನು ಅರೂಪಸ್ಥಿತಿಗೆ ತರುತ್ತಾ ಹಿಡುವಳಿದಾರರ ಮೇಲೆ ಬಲ ಪ್ರಯೋಗ ಮಾಡಲಾಗುತ್ತಿದೆ ಎಂಬುದಾಗಿ ಭೂಮಾಲಿಕರ ಪರವಾಗಿ ಕೆ.ಜಿ. ಒಡೆಯರ್ ಪತ್ರಿಕೆಯಲ್ಲಿ ಹೇಳಿಕೆ ನೀಡಿದ್ದರು. ಇದರ ಬಗ್ಗೆ ರೈತರ ಪರವಾಗಿ ನೀಡಿದ ಹೇಳಿಕೆ ಈ ಕೆಳಗಿನಂತಿದೆ.

ಕೊಟ್ಟದ್ದು ತೆಗೆದುಕೊಳ್ಳಬೇಕೆಂದು ಗೇಣಿದಾರರು ಹೇಳಿದರೆ ತಪ್ಪು. ಆದರೆ ಕೇಳಿದಷ್ಟು ಕೊಡಲೇಬೇಕೆಂದು ಹಿಡುವಳಿದಾರರು ಬಲಾತ್ಕರಿಸಿದರೆ ತಪ್ಪಲ್ಲ. ಕೆಲವು ಕಡೆ ಜಮೀನುದಾರರು ಕಡ್ಡಾಯವಾಗಿ ಮಾಡಿಸುತ್ತಿದ್ದ ಮನುಷ್ಯತ್ವಕ್ಕೆ ಹೀನವಾದ ಬಿಟ್ಟಿಕೆಲಸದ ಪದ್ಧತಿಯನ್ನು, ಜೀತದ ಪದ್ಧತಿಯನ್ನು ಅನೇಕ ಮೋಸದ ಪದ್ಧತಿಯನ್ನು ರೈತರು ಸಂಘಟಿತರಾಗಿ ಇನ್ನು ಸಹಿಸಬಾರದೆಂದು ನಿರ್ಧರಿಸಿರುವುದರಿಂದ ಕೆಲವು ಜಮೀನುದಾರರು ರೈತರ ಮೇಲೆ ಅಪಪ್ರಚಾರಕ್ಕೆ ತೊಡಗಿರುವುದು ತೀರಾ ಖಂಡನೀಯ.

ರೈತರು ಇಂದಿನವರೆಗಿನ ಗೇಣಿಯನ್ನು ಪೂರ್ತಿ ಪಾವತಿ ಮಾಡಿರುತ್ತಾರೆ. ರೈತರು ಎಂದೂ ಸಾಗುವಳಿ ಮಾಡುವವರು; ಭೂಮಿಯ ಒಡೆಯರೆಂದು ಹೇಳಿಲ್ಲ. ರೈತರು ಕೊಟ್ಟಷ್ಟನ್ನು ಕೊಟ್ಟ ಪ್ರಮಾಣದಲ್ಲಿ ತೆಗೆದುಕೊಳ್ಳಬೇಕೆಂದು ಯಾವಾಗಲೂ ಹೇಳಿಲ್ಲ. ಆದರೆ ಕಾನೂನಿನನುಸಾರವಾಗಿ ಕ್ರಮವಾದ ಅಳತೆಯಲ್ಲಿ ತೆಗೆದುಕೊಳ್ಳಬೇಕೆಂದು ಕೇಳಿದ್ದಕ್ಕೆ ತಮ್ಮ ಸಾಗುವಳಿ ಹಕ್ಕಿಗೆ ರಕ್ಷಣೆ ಕೊಡಬೇಕೆಂದು ಕೇಳಿದ್ದಾರೆ. ತಮ್ಮ ಸಾಗುವಳಿ ಹಕ್ಕಿಗೆ ರಕ್ಷಣೆಕೊಡಬೇಕೆಂದೂ ಪ್ರಾರ್ಥಿಸಿದ್ದಾರೆ. ಸತ್ಯಾಂಶ ಹೀಗಿದ್ದರೂ ಕೆಲವು ಜಮೀನ್ದಾರರು, ರೈತರು ಎಂದೂ ಎಷ್ಟು

ಮಾತ್ರಕ್ಕೂ ಹೇಳದ, ಮನಸ್ಸಿನಲ್ಲಿಯೂ ಸಹ ಯೋಚಿಸದ ಮಾತನ್ನು ರೈತರುಗಳ ಅಭಿಪ್ರಾಯವೆಂದು ಹೇಳಿ ಅಪಪ್ರಚಾರ ಮಾಡುತ್ತಿರುವುದು ಜನರಿಗೂ ಸರ್ಕಾರಕ್ಕೂ ಮಂಕುಬೂದಿ ಎರಚಲು ಯತ್ನಿಸುತ್ತಿರುವ್ಯದು ಖಂಡನೀಯ.

ಕಾಗೋಡು ಗ್ರಾಮದ ಜಮೀನ್ದಾರರು ತಮಗೆ ಸರ್ಕಾರದ ಬೆಂಬಲ ವಿರುವುದರಿಂದಲೂ, ತಾವು ಪ್ರಭಾವಶಾಲಿಯಾದ ಕಾಂಗ್ರೆಸ್ ಮುಖಂಡರೆನಿಸಿಕೊಂಡಿರುವುದರಿಂದಲೂ ಸರ್ಕಾರಕ್ಕೆ ಉತ್ಪ್ರೇಕ್ಷೆಯಿಂದ ಕೂಡಿದ್ದು ಸತ್ಯದೂರವಾದ ಸಂಗಾತಿಗಳನ್ನು ವರದಿ ಮಾಡಿ, ಅಕ್ರಮವಾಗಿ ಬಡ ಬೋರೇಗೌಡನ ಹಣದಿಂದ ತಮ್ಮ ಮನೆಗೆ ಸುಮಾರು ಮೂರು ತಿಂಗಳಿನಿಂದ ಹದಿನೈದು ಇಪ್ಪತ್ತು ಜನ ಪೋಲಿಸಿನವರನ್ನು ರಿಸರ್ವ್ ವಗೈರೆ ಚಾಲಕರನ್ನು ಸರ್ಕಾರದ ವೆಚ್ಚದಲ್ಲಿ ಪಡೆದುಕೊಂಡು ತಾವು ಬಡರೈತರ ಮೇಲೆ ಭಯಂಕರವಾಗಿ ಲಾಠಿ ಚಾರ್ಜ್ ನಡೆಸಿದ್ದಾರೆ. ಕರುಣೆಗೆ ಪಾತ್ರರಾದ ರೈತರಿಗೆ ಬೂಟ್ಸ್ ಮತ್ತು ಪಾದರಕ್ಷೆಗಳ ಪ್ರಯೋಗಗಳನ್ನು ಕೊಟ್ಟು, ಆ ರುಚಿಗಳನ್ನು ರೈತವರ್ಗವಾದ ಸ್ತ್ರೀ–ಪುರುಷ ಆಬಾಲವೃದ್ಧರಾದ ರೈತಬಾಂದವರು ಎಂದೆಂದಿಗೂ ಮರೆಯದ ಮಾತಾಗಿ ಉಳಿದಿರುವುದು, ಸ್ಪಷ್ಟವಾದ ಸಂಗತಿಯಾಗಿದೆ. ಅಕ್ರಮವಾಗಿ ಸುಮಾರು ಇನ್ನೂರು ಜನ ಬಡರೈತರನ್ನು ಹಿಂಸಿಸಿ ದಸ್ತಗಿರಿ ವಗೈರೆ ಅಕ್ರಮ ಕಾನೂನು ಜಾರಿ ಮಾಡಿಸಿರುತ್ತಾರೆ. ಹಾಗೂ ಇದಕ್ಕೆಲ್ಲಾ ಮೂಲ ಕಾರಣರೂ, ಜಮೀನ್ದಾರರೂ ಆದ ನಿಮ್ಮಿಂದ ಮಾತ್ರವೇ ಹಲವು ಸುಳ್ಳು ಕೇಸುಗಳೂ, ನೂರಾರು ಜನರ ರೈತರ ಮೇಲೆ ಸಾಗರ ಸನ್ನಿಧಿ ಕೋರ್ಟ್ ಕಛೇರಿಗಳಲ್ಲಿ ದಾಖಲಾಗಿರುತ್ತದೆ. ಇಷ್ಟೂ ಸಾಲದೆಂದು ಮಹಿಳೆಯರನ್ನು ದಸ್ತಗಿರಿ ಮಾಡಿಸಿದ್ದಾರೆ. ಎಲ್ಲಕಿಂತ ಹೆಚ್ಚಾಗಿ ನೂರಾರು ವರುಷಗಳಿಂದ ವಂಶ ಪಾರಂಪರ್ಯಯವಾಗಿ ಒಂದೇ ಸಮನೆ ಸಾಗುವಳಿ ಮಾಡುತ್ತಿರುವ ರೈತರ ನೂರಾರು ಬಡ ಕುಟುಂಬಗಳನ್ನು ಮಳೆಗಾಲ ಈ ಬಿತ್ತನೆ ಕಾಲದಲ್ಲಿ, ನಿರಾಶ್ರಿತರನ್ನಾಗಿಯೂ, ನಿರ್ಗತಿಕರನ್ನಾಗಿಯೂ ಮಾಡಿ, ದೇಶಾಂತರ ಓಡಿಸಲು ಯತ್ನಿಸುತ್ತಿದ್ದಾರೆ. ರೈತರ ಮೇಲೆ ಇಷ್ಟೆಲ್ಲಾ ಅತ್ಯಾಚಾರಗಳನ್ನು ನಡೆಯಿಸುತ್ತಲೇ ರೈತರಿಗೆ ವಿವೇಕ ಹೇಳಲು ಹೆದರದಿರುವುದು ಎಲ್ಲರಿಗೂ ತಿಳಿದಿದೆ. ಈ ಕಾಲದಲ್ಲಿ ಯಾರು ಯಾರನ್ನು ವಂಚಿಸಲು ಸಾಧ್ಯವಿಲ್ಲ ಎಂಬುದಾಗಿ ಭೂ ಮಾಲಿಕರಾದ ಕೆ.ಜಿ. ಒಡೆಯರ್ ಅವರ ಹೇಳಿಕೆಗೆ ಪ್ರತಿಯಾಗಿ ರೈತ ಸಂಘದ ಅಧ್ಯಕ್ಷ ಡಿ. ಮೂಕಪ್ಪನವರು ಮೇ 15 ಮಂಗಳವಾರ 1951ರಂದು ಹೇಳಿಕೆ ನೀಡಿರುತ್ತಾರೆ. (ಶಾಂತವೇರಿ ಗೋಪಾಲಗೌಡರ ನೆನಪಿನ ಸಂಪುಟ 163–166).

ಗ್ರಾಮಾಭಿವೃದ್ಧಿಗೆ ಬದ್ಧವಾದ ಕಾಂಗ್ರೆಸ್ ಸರ್ಕಾರ ಇಷ್ಟು ದಿನದ ಮೌನದ ಜೊತೆಗೆ ಇನ್ನೂ ಮೌನವಾಗಿ ಕೂರದೆ ಪೋಲೀಸರನ್ನು ವಾಪಾಸ್ ಕರೆಸಿರಿ. ರೈತರ ಯೋಗಕ್ಷೇಮದ ರಕ್ಷಣೆಯ ಭರವಸೆ ನೀಡಲಿ. ಅಲ್ಲದೆ ಉದ್ವಿಗ್ನ ವಾತವರ್ಣವನ್ನು ಹಾಗೇ ಉರಿಯಲು ಬಿಟ್ಟಲ್ಲಿ ಭಯಂಕರ ಆಸ್ಫೋಟವು ಸಂಭವಿಸುವ್ಯದರಲ್ಲಿ ಸಂಶಯವಿಲ್ಲ. ಪರಿಣಾಮ ಏನಾಗುವುದೋ ಹೇಳಲಾಗುವುದಿಲ್ಲ. ಅಂತೇ ಮಹಾದಾರುಣ ಸ್ಥಿತಿಯಲ್ಲಿರುವ ರೈತನ ಜೀವನಾಡಿ ಕತ್ತರಿಸಿ ಬೀಳಲಿರುವ ಇಂದು ರೈತ ಪೋಷಿತ ಸರ್ಕಾರ ಮಧ್ಯೆ ಪ್ರವೇಶಿಸಿ ರೈತ ಹಿತ ಕಾಪಾಡಬೇಕು. ಸಾಗರ

ತಾಲ್ಲೂಕಿನಲ್ಲೇನಾಗುತ್ತಿದೆ? ಪರಿಣಾಮವೇನಾದೀತು? ಎಂಬುದನ್ನರಿಯಲು ಸರ್ಕಾರದ ಉನ್ನತ ವಲಯಗಳಲ್ಲಿ ಕಾತುರವೇ ಕಾಣುತ್ತಿಲ್ಲದಿರುವುದು ವಿಷಾದಕರ. ಈ ವರೆಗೂ ಪರಿಸ್ಥಿತಿಯ ಪರಿಶೀಲನೆಗಾಗಿ ಬೇಟಿಕೊಡದಿದ್ದ ಮಂತ್ರಿಗಳಲ್ಲಿ ಒಬ್ಬರಾದರೂ ಕೂಡಲೇ ಮಲೆನಾಡ ಈ ಮೂಲೆಗೆ ಭೇಟಿಕೊಟ್ಟು ಸ್ಥಿತಿಗತಿ ಅರಿಯಲೆತ್ನಿಸುವುದು ಅಗತ್ಯ (ಶಾಂತವೇರಿ ಗೋಪಾಲಗೌಡರ ನೆನಪಿನ ಸಂಪುಟ 167–168) ಎಂಬುದಾಗಿ ದಿನಾಂಕ:19–05–1951ನೇ ಬುಧವಾರದ ಪ್ರಜಾವಾಣಿ ದಿನಪತ್ರಿಕೆಯ ಸಂಪಾದಕೀಯದಲ್ಲಿ ರಾಜ್ಯ ಸರ್ಕಾರದ ನಿರ್ಲಕ್ಷ್ಯವನ್ನು ಎಚ್ಚರಿಸಲಾಗಿತ್ತು. ಜೊತೆಗೆ ರೈತ ಹೋರಾಟದ ತೀವ್ರತೆಯನ್ನು ಸರ್ಕಾರದ ಹಾಗೂ ರಾಜ್ಯದ ಜನರ ಅರಿವಿಗೆ ತರುವಷ್ಟು ತೀವ್ರವಾಗಿ ಗೇಣಿ ರೈತರ ಹೋರಾಟ ಪ್ರಬಲವಾಗಿತ್ತು.

ಸದನದಲ್ಲಿ ರಾಜ್ಯಪಾಲರ ಭಾಷಣವನ್ನು ಹರಿದು ಹಾಕಿದ ಸಂದರ್ಭದ ಬಗ್ಗೆ ಗೌಡರ ವಿವರಣೆ ಈ ಕೆಳಕಂಡಂತಿದೆ. ''ಅಂದು ನಾನು ಅಸೆಂಬ್ಲಿಯಲ್ಲಿ, ರಾಜ್ಯಪಾಲರ ಭಾಷಣದ ಬಗ್ಗೆ, ಗೇಣಿದಾರರ ಬಗ್ಗೆ, ತರಬೇಕಾಗಿದ್ದ ಕಾನೂನುಗಳ ಬಗ್ಗೆ, ಬಿ.ಡಿ. ಜತ್ತಿ ಸಮಿತಿಯ ವರದಿಯ ಬಗ್ಗೆ ಮಾತನಾಡಬೇಕಾಗಿತ್ತು. ಅಲ್ಲಿ ಕಾಂಗ್ರೆಸ್ ಶಾಸಕರಿಗೆ ಮಾತಾಡಲು ಹೆಚ್ಚು ಅವಕಾಶ ಕೊಡುತ್ತಿದ್ದರು. ನಾನು ಎಷ್ಟು ಸಾರಿ ಪ್ರಯತ್ನಿಸಿದರೂ ಅವಕಾಶ ಕೊಡಲಿಲ್ಲ. ಅದಕ್ಕೆ ಅನಿವಾರ್ಯವಾಗಿ ನಮ್ಮ ಜನಗಳ ಭಾಷೆಯಲ್ಲಿ ಇಲ್ಲದ ಆ ಭಾಷಣದ ಪ್ರತಿಯನ್ನು ಚೂರು ಚೂರು ಮಾಡಿ ಬೂಟುಗಾಲಿನಲ್ಲಿ ತುಳಿದೆ ಎಂದರು ಎಂಬುದಾಗಿ ಎಂ.ಡಿ. ಶೇಷಪ್ಪ ಹೆಗ್ಗಡೆ ಯವರು ಗೌಡರ ರಾಜಕೀಯ ಕಾತುರತೆಯ ಕ್ಷಣವನ್ನು ನೆನಪಿಸಿಕೊಳ್ಳುತ್ತಾರೆ (ಶಾಂತವೇರಿ ಗೋಪಾಲಗೌಡರ ನೆನಪಿನ ಸಂಪುಟ 197)

ನಮ್ಮಲ್ಲಿ ಈಗ ಏಕನಾಯಕತ್ವ ಕೊನೆಗೊಂಡಿದ್ದರೂ ಕೂಡ ಇವೊತ್ತು ನಾವು ಈ ಬಡತನ ಮತ್ತು ಹಣದ ಕೊರತೆಯಿಂದ ತೊಳಲುತ್ತಿದ್ದರೂ ರಾಜ ಪ್ರಮುಖರಿಗೆ 24 ಲಕ್ಷ ರೂಪಾಯಿಗಳ ಮಾಸಾಶನವನ್ನು ಕೊಡುತ್ತಾ ಇದ್ದೇವೆ. ನನ್ನ ದೃಷ್ಠಿಯಲ್ಲಿ ಅದನ್ನೂ ಕೂಡ ನಿಲ್ಲಿಸಬೇಕಾದದ್ದು ದೇಶದ ಹಿತದೃಷ್ಠಿಯಿಂದ ಕ್ಷೇಮ ಎಂದು ಹೇಳುತ್ತಿದ್ದೇನೆ. ಎನ್ನುವುದಾಗಿ ರಾಜಧನ ರದ್ಧತಿಯ ಬಗ್ಗೆ ಕಾಳಜಿ ತೋರುತ್ತಾರೆ.

ಮಾತೃ ಭಾಷೆ ಕನ್ನಡದ ಬಗ್ಗೆ, ಕರ್ನಾಟಕದ ಏಕೀಕರಣದ ಬಗ್ಗೆ ಮೈಸೂರು ರಾಜ್ಯಕ್ಕೆ ಕರ್ನಾಟಕ ಎಂದು ಹೆಸರಿಡುವ ಬಗ್ಗೆ ಸ್ಪಷ್ಠ ಮತ್ತು ದಿಟ್ಟ ಅಭಿಪ್ರಾಯವನ್ನು ಶಾಸನ ಸಭೆಯಲ್ಲಿ ಮಂಡಿಸಿ ಎಲ್ಲರ ವಿಶ್ವಾಸಕ್ಕೆ ಪಾತ್ರರಾಗಿದ್ದರು. ಪ್ರಾಥಮಿಕ ಶಿಕ್ಷಣ ಅವಸ್ಥೆಯ ಬಗ್ಗೆ ಮತ್ತು ಅದರಲ್ಲಿ ಆಗಬೇಕಿರುವ ಸುಧಾರಣೆಗಳ ಬಗ್ಗೆ ಸೆಪ್ಟೆಂಬರ್ 7, 1962ರ ತಮ್ಮ ಶಾಸನ ಸಭೆಯ ಭಾಷಣದಲ್ಲಿ ದೀರ್ಘವಾಗಿ ವಿಚಾರವನ್ನು ಮಂಡಿಸಿದ್ದರು. ಆರು ವರ್ಷ ತುಂಬಿದ ಮಕ್ಕಳಿಗೆ ರಾಜ್ಯಾಂಗದ ನಿರ್ದೇಶನದ ಮೇರೆಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣ ನೀಡಬೇಕಿತ್ತು. ಆದರೆ ಇದು ಸಾಧ್ಯವಾಗಿಲ್ಲ. ಈ ಬಗ್ಗೆ ಎಷ್ಟು 6 ವರ್ಷ ತುಂಬಿದ ಮಕ್ಕಳು ರಾಜ್ಯದಲ್ಲಿದ್ದಾರೆ. ಅವರಲ್ಲಿ 7, 8, 9 ವರ್ಷ ಹೀಗೆ ಬೇರೆ ಬೇರೆ ವಯೋಮಾನದ ಎಷ್ಟು ಮಕ್ಕಳು ಶಾಲೆಗಳಲ್ಲಿ ಶಿಕ್ಷಣ ಪಡೆಯುತ್ತಿದ್ದಾರೆ. ಈ ಬಗ್ಗೆ ಸರ್ಕಾರದಲ್ಲಿ ಮಾಹಿತಿ

ಇಲ್ಲ. ಇದಕ್ಕಾಗಿ ಸರ್ಕಾರದ ಸರ್ವೆ ಕಾರ್ಯನಡೆಸಿ ಎಷ್ಟು ಮಕ್ಕಳು ಶಾಲೆಯ ಒಳಗೆ ಮತ್ತು ಹೊರಗಿದ್ದಾರೆ ಎನ್ನುವ್ಯದನ್ನು ಖಚಿತ ಪಡಿಸಿಕೊಂಡು ಆ ಬಳಿಕ ಅವರಿಗೆ ಸೂಕ್ತ ಅವಕಾಶಗಳನ್ನು ಕಲ್ಪಿಸುವತ್ತ ಯೋಚಿಸಬೇಕು. ಕೆಲವು ಊರುಗಳಲ್ಲಿ ಶಾಲೆಗಳಿಲ್ಲ, ಶಾಲೆಗಳಿದ್ದರೂ ಸರಿಯಾದ ಮತ್ತು ಸೂಕ್ತವಾದ ಕಟ್ಟಡಗಳಿಲ್ಲ. ಕಟ್ಟಡಗಳಿದ್ದರೂ ಹೆಚ್ಚಿದ ಮಕ್ಕಳ ಸಂಖ್ಯೆಗೆ ಸರಿಹೊಂದವಷ್ಟು ಕೊಠಡಿಗಳಿಲ್ಲ. ಶಾಲಾ ಕಟ್ಟಡಗಳನ್ನು ತಾಲ್ಲೂಕು ಅಭಿವೃದ್ಧಿ ಮಂಡಳಿಯವರಿಗೆ ವಹಿಸಿದ್ದು ಅವರಲ್ಲಿ ಎಲ್ಲಾ ಊರುಗಳಿಗೂ ಹಂಚುವಷ್ಟು ಹಣವಿಲ್ಲ, ದಾನಿಗಳು ಕಟ್ಟಿಕೊಟ್ಟ ಶಾಲೆಗಳ ಸಣ್ಣಪುಟ್ಟ ದುರಸ್ಥಿ ಮಾಡಿಸುವ ಜವಾಬ್ದಾರಿಯೂ ಸರ್ಕಾರಕ್ಕಿಲ್ಲ. ಅದನ್ನೂ ದಾನಿಗಳೇ ಮಾಡಿಸಬೇಕಾದ ಪರಿಸ್ಥಿತಿ ತೀರಾ ಅಸಹನೀಯವಾಗಿದೆ. ಸರ್ಕಾರದಿಂದ ಬಟ್ಟೆ ಹಂಚುವ ಕಾರ್ಯಕ್ರಮ ಕ್ರಮವಾಗಿಲ್ಲ. ಬಟ್ಟೆಗಳ ಗುಣಮಟ್ಟ ಉತ್ತಮವಾಗಿಲ್ಲ. ವಿದ್ಯಾರ್ಥಿವೇತನ ಸರಿಯಾಗಿ ಸಕಾಲದಲ್ಲಿ ಮಕ್ಕಳಿಗೆ ತಲುಪುತಿಲ್ಲ. ಮಿಡ್‌ಡೆ ಮೀಲ್ ಕಾರ್ಯಕ್ರಮ ಎಲ್ಲಾ ಶಾಲೆಗಳಲ್ಲಿ ದೊರೆಯುತ್ತಿಲ್ಲ. ದೊರೆಯುತ್ತಿದ್ದರೂ ಅದರಲ್ಲಿ ನೀಡುವ ಆಹಾರದ ಗುಣಮಟ್ಟ ಉತ್ತಮವಾಗಿಲ್ಲ. ಅಮೇರಿಕಾ ದೇಶದವರು ಮಕ್ಕಳಿಗೆ ಉಚಿತವಾಗಿ ನೀಡಲು ಕೊಡುತ್ತಿದ್ದ ಹಾಲಿನ ಪುಡಿಯನ್ನು ಮಾರಾಟಮಾಡಿಕೊಳ್ಳಲಾಗುತ್ತಿದೆ. ಈ ಬಗ್ಗೆ ಸರ್ಕಾರ ಸೂಕ್ತ ಎಚ್ಚರಿಕೆ ವಹಿಸಿ ಹಂತ ಹಂತವಾಗಿ ಪರಿಶೀಲಿಸಿ ಮಕ್ಕಳಿಗೆ ಹಾಲು ಪುಡಿ ತಲುಪುವಂತೆ ನೋಡಿಕೊಳ್ಳಬೇಕು. ಕಲ್ಯಾಣ ನಿಧಿಗೆ ಪ್ರೌಢ ಶಾಲಾ ಮಕ್ಕಳಿಗೆ ನಿಗಧಿ ಪಡಿಸಿದ ಎರಡು ರೂಪಾಯಿ ಸಹ ಬಡಮಕ್ಕಳಿಗೆ ಕೊಡುವುದು ಕಷ್ಟವಾಗಿ ಇತ್ಯಾದಿಯಾಗಿ ಪ್ರಾಥಮಿಕ ಶಿಕ್ಷಣದ ಬಗ್ಗೆ ತಮ್ಮ ಕಾಳಜಿಯನ್ನು ಸುಮಾರು 50 ವರ್ಷಗಳ ಹಿಂದೆಯೇ ವ್ಯಕ್ತಪಡಿಸಿದ ಗೌಡರ ದೂರದೃಷ್ಟಿ ಅವರ ರಾಜಕೀಯ ದೂರಾಲೋಚನೆಗೆ ಸಾಕ್ಷಿಯಾಗಿದೆ.

ಕನ್ನಡ ಭಾಷೆಯ ಬಗ್ಗೆ, ಆಡಳಿತ ಭಾಷೆಯಾಗಿ ಕನ್ನಡವನ್ನು ಜಾರಿಗೆ ತರುವ ಬಗ್ಗೆ ಪ್ರಾಮಾಣಿಕ ಪ್ರಯತ್ನ ಗೌಡರಿಂದ ಸಂದರ್ಭ ಸಿಕ್ಕಾಗಲೆಲ್ಲಾ ವ್ಯಕ್ತಪಡಿಸುತ್ತಿದ್ದರು. ಜಡ್ಜ್‌ಮೆಂಟನ್ನು ಇಂಗ್ಲೀಷ್‌ನಲ್ಲಿ ಬರೆದು ಜನರನ್ನು ಗಲ್ಲಿಗೆ ಹಾಕುವುದು ಬೇಕು. ಕನ್ನಡದಲ್ಲಿಯೇ ಆ ಜಡ್ಜ್‌ಮೆಂಟನ್ನು ಬರೆದು ಆ ಶಿಕ್ಷೆಯನ್ನು ಕೊಡಬಹುದಲ್ಲ. ಕನ್ನಡದಲ್ಲಿ ಹೇಳಿದ್ದನ್ನು ಜಡ್ಜ್ ಇಂಗ್ಲೀಷ್‌ನಲ್ಲಿ ಬರೆದುಕೊಳ್ಳುವಾಗ ಏನು ಬೇಕಾದರೂ ಬರೆದುಕೊಳ್ಳಬಹುದು. ಈ ದಿವಸ ಹೈದ್ರಾಬಾದಿನಲ್ಲಿ ಉರ್ದು ಭಾಷೆಯಲ್ಲಿ ಜಡ್ಜ್‌ಮೆಂಟನ್ನು ಬರೆಯುತ್ತಿಲ್ಲವೇನೊ ಹೀಗೆ ಕನ್ನಡದಲ್ಲಿ ಏಕೆ ಬರೆಯಬಾರದು ಎಂಬುದಾಗಿ ಕನ್ನಡ ಭಾಷಾ ಬಳಕೆ ಬಗ್ಗೆ ಆಕ್ರೋಶ ವ್ಯಕ್ತಪಡಿಸಿದ್ದರು.

ಮಧುಗಿರಿಯಲ್ಲಿ ನಡೆದ ಘಟನೆಯ ಬಗ್ಗೆ ದಿನಾಂಕ:12–12–1967ರ ತಮ್ಮ ಶಾಸನ ಸಭೆಯ ಭಾಷಣದಲ್ಲಿ ಪೋಲೀಸ್ ದೌರ್ಜನ್ಯದ ಬಗ್ಗೆ ಹರಿ ಹಾಯುತ್ತಾರೆ. ವೆಂಕಟಮ್ಮ ಎಂಬ ಹದಿನಾರು ವರ್ಷದ ಹುಡುಗಿಯ ಮಾನಭಂಗ ಮಾಡಿದ್ದಾರೆ–ಕ್ವರಿಯಮ್ಮ ಎನ್ನುವವಳು 12 ವರ್ಷದ ಸಣ್ಣ ಹುಡುಗಿ, ಈರಮ್ಮ, ಗಂಗಮ್ಮ, ಲಕ್ಷ್ಮಮ್ಮ, ಆದಿಲಕ್ಷ್ಮಮ್ಮ ಈ ನಾಲ್ವರು ಮಹಿಳೆಯರು ನಾಪತ್ತೆಯಾಗಿದ್ದಾರೆ. ಮದುವೆಯ ಹಸೆಮಣೆ ಮೇಲೆ ಕುಳಿತಿದ್ದ ಸಣ್ಣ

ಹುಡುಗಿಯನ್ನು ಎಳೆದು ತಂದು ಅವರ ಮೇಲೆ ಪೋಲೀಸರು ಅತ್ಯಾಚಾರ ಮಾಡಿದ್ದಾರೆ. ಸುಮಾರು 80–90 ಜನ ಪುರುಷರನ್ನು ದಸ್ತಗಿರಿ ಮಾಡಿದ್ದಾರೆ. ದವಸ ಧಾನ್ಯಗಳನ್ನು ಲೂಟಿಮಾಡಿದ್ದಾರೆ. ಸಮಾಜದಲ್ಲಿನ ಕ್ರೂರ ಕೃತ್ಯಗಳನ್ನು ಶಾಸನ ಸಭೆಯಲ್ಲಿ ಕಟುವಾಗಿ ಟೀಕಿಸುವುದರ ಮೂಲಕ ಸಾಮಾಜಿಕ, ನೈತಿಕ ಪ್ರಜ್ಞೆಯನ್ನು ಎಚ್ಚರಿಸಿ ತಪ್ಪಿತಸ್ಥರಿಗೆ ಶಿಕ್ಷೆ ವಿಧಿಸಬೇಕೆಂದು ಸರ್ಕಾರವನ್ನು ಆಗ್ರಹಿಸುತ್ತಿದ್ದರು.

ಕೊಪ್ಪ, ಶೃಂಗೇರಿ, ತೀರ್ಥಹಳ್ಳಿ, ಹೊಸನಗರ, ಶಿಕಾರಿಪುರ, ಸೊರಬ, ಶ್ರೀರಂಗಪಟ್ಟಣ ಮುಂತಾದ ಮಲೆನಾಡಿನ ಹಾಗೂ ಇನ್ನಿತರ ತಾಲ್ಲೂಕ್‌ಗಳಲ್ಲಿ ಗೇಣಿಗೆ ಸಂಬಂಧಪಟ್ಟ ಅಪೀಲುಗಳು ನೂರಾರು ಏತಕ್ಕೆ, ಸಾವಿರಾರು ಗೇಣಿ ವಿವಾದಗಳು ಇತ್ಯರ್ಥವಾಗದೇ ತಹಶೀಲ್ದಾರರುಗಳ ಕೋರ್ಟಿನಲ್ಲಿ ಬಿದ್ದು, ಸುಮಾರು ಆರೇಳು ವರ್ಷಗಳಿಂದಲೂ ಗೇಣಿದಾರರು ಹಾಗೂ ಜಮೀನ್ದಾರರು ಒಂದೇ ಸಮನೆ ಕೋರ್ಟಿಗೆ ಹೋಗಿ ಲಾಯರುಗಳಿಗೆ ಫೀ ಕೊಟ್ಟು ಹತವಾತದ್ದಾರೆ. ಎಷ್ಟೋ ಕಡೆಗಳಲ್ಲಿ ಲಾಯರುಗಳಿಗೆ ದುಡ್ಡು ತೆತ್ತು ಭಿಕಾರಿಗಳಾಗಿಯೂ ಆಗಿ ಮನೆ ಮಠಗಳನ್ನು ಇದಕ್ಕಾಗಿ ಕಳೆದುಕೊಂಡಿದ್ದಾರೆ (ಶಾಂತವೇರಿ ಗೋಪಾಲಗೌಡರ ನೆನಪಿನ ಸಂಪುಟ 452)

ಕಾಗೋಡು ಸತ್ಯಾಗ್ರಹ ಒಂದು ವೇದಿಕೆಯಾಗಿ ಅಂದಿನ ದಿನಗಳ ಕತ್ತಲ ಬದುಕಿನ ಹಲವಾರು ಸಂಗತಿಗಳನ್ನು ಬಿತ್ತರಿಸಲು ಸಹಕಾರಿಯಾಗಿದೆ. ದೀನದಲಿತರ ಹಾಗೂ ಹಿಂದುಳಿದ ವರ್ಗಗಳ ಗೇಣಿ ರಹಿತರನ್ನು ಅಮಾನುಷವಾಗಿ ನಡೆಸಿಕೊಳ್ಳುತ್ತಿದ್ದ ರೀತಿ ಹಾಗೂ ಶ್ರೀಮಂತ ವರ್ಗದವರ ದರ್ಪ, ದೌರ್ಜನ್ಯಗಳು ಶೋಷಣೆಗೊಳಗಾದ ವರ್ಗವನ್ನು ಒಂದೆಡೆ ಸಂಘಟಿಸಿ ಹೋರಾಟದ ಕ್ರಾಂತಿಯ ಕಿಚ್ಚು ಉದಯಿಸಲು ಕಾರಣವಾಯಿತು. ಇದಕ್ಕೆ ಪ್ರಮುಖ ಆಸರೆಯಾಗಿ ನೊಂದ ರೈತರ ಪರವಾಗಿ ದ್ವನಿಗೂಡಿಸಿದ ರೈತ ಸಂಘ ಸಹಾಯಕ್ಕೆ ನಿಂತಿತ್ತು. ದಿನಾಂಕ:04–01–1948ರಲ್ಲಿ ಸಾಗರ ತಾಲ್ಲೂಕ್ ರೈತ ಸಂಘ ಅಸ್ತಿತ್ವಕ್ಕೆ ಬಂದ ಬಳಿಕ ರೈತ ಹೋರಾಟಕ್ಕೆ ಒಂದು ಜೀವಂತ ಶಕ್ತಿ ದೊರಕಿದಂತಾಯಿತು. ಅದರ ಮುಖ್ಯ ಬೇಡಿಕೆಗಳೆಂದರೆ ಮೊದಲನೆಯದು ಭೂಮಿಯನ್ನು ಗೇಣಿಗೆ ಕೊಟ್ಟಿದ್ದೇವೆಂದೂ ಅಥವಾ ಗೇಣಿ ಪಡೆದಿದ್ದೇವೆಂದೂ ಒಪ್ಪಂದ ಕರಾರಿನಂತೆ ಬರೆದುಕೊಟ್ಟು, ಗೇಣಿ ಪಡೆದಿದ್ದಕ್ಕೆ ರಶೀಧಿ ಕೊಡಬೇಕು. ಎರಡನೆಯದು ಮೂರು ಸೇರಿನ ಕೊಳಗದಲ್ಲಿಯೇ ಗೇಣಿಯನ್ನು ಪಡೆಯಬೇಕು (ಆಗ ಮೂರು ಕಾಲು, ಮೂರು ವರೆ, ಮೂರು ಮುಕ್ಕಾಲು ಸೇರು ಹಿಡಿಯುವಂಥ ಕೊಳಗಗಳನ್ನು ಉಪಯೋಗಿಸುತ್ತಿದ್ದರು). ಅಲ್ಲದೆ ಹೆಚ್ಚಿನ ಭತ್ತ, ಸಲಿಗೆ ಭತ್ತ ವಗೈರೆ ಎಂದು ಚೀಲಕ್ಕೆ ಎರಡರಿಂದ ಮೂರು ಸೇರು ಹೆಚ್ಚಾಗಿ ಪಡೆಯುತ್ತಿದ್ದಾರೆ ಇವೆಲ್ಲವನ್ನೂ ನಿಲ್ಲಿಸಬೇಕು. ಮೂರನೆಯದು ವರ್ಷಕ್ಕೆ ನಾಲ್ಕರಿಂದ ಹತ್ತು ಆಳುಗಳು ಒಡೆಯರ ಬಿಟ್ಟಿ ಕೆಲಸದ ದುಡಿತನವನ್ನು ರದ್ದುಪಡಿಸಬೇಕು ಮತ್ತು ನಾಲ್ಕನೆಯದಾಗಿ ಅತೀವೃಷ್ಠಿ ಅನಾವೃಷ್ಠಿಗಳಿಂದ ಬೆಳೆ ನಷ್ಟವಾದಾಗ ಗೇಣಿಯನ್ನು ಪಡೆಯಬಾರದು (ಅಂಥ ವರ್ಷಗಳಲ್ಲಿ ಗೇಣಿಯನ್ನು ಮುಂದಿನ ಸಾಲಿನಲ್ಲಿ ಕೊಡಬೇಕಾಗುತ್ತಿತ್ತು). ಎರಡನೆಯದಾಗಿ ಸರ್ಕಾರದ ಮುಂದೆ ಇಟ್ಟ ಬೇಡಿಕೆಗಳು, ಮೊದಲನೆಯದು ಗೇಣಿದಾರರ ಭೂಮಿಯನ್ನು ಭೂ

ಒಡೆಯರು ಕೈತಪ್ಪಿದ ತಕ್ಷಣ ಆರ್ಡಿನೆನ್ಸ್ ಹೊರಡಿಸಬೇಕು. ಅಲ್ಲದೆ ಗೇಣಿದಾರರಿಗೆ ರಕ್ಷಣೆ ನೀಡುವ ಟೆನೆನ್ಸಿ ಕಾನೂನು ಜಾರಿಗೆ ತರಬೇಕು. ಎರಡನೆಯದಾಗಿ ಸರ್ಕಾರವು ರೈತ ರಿಯಾಯ್ತಿಗಳನ್ನು ಘೋಷಿಸಿದಾಗೆಲ್ಲ ಕೇವಲ ಕಂದಾಯ ಕೊಡುವವನೇ ರೈತರೆಂದು ಪರಿಗಣಿಸುತ್ತಿದೆ. ಇನ್ನು ಮುಂದಿನ ದಿನಗಳಲ್ಲಿ ಗೇಣಿದಾರರು ರೈತರೆಂದು ಪರಿಗಣಿಸಿ ಅವರಿಗೆ ಸರ್ಕಾರದ ರಿಯಾಯ್ತಿ ಸೌಲಭ್ಯಗಳನ್ನು ಒದಗಿಸಬೇಕು. ಉದಾಹರಣೆಗೆ ಬೆಳೆ ರಕ್ಷಣೆಗೆ ಬಂದೂಕು, ಲೈಸೆನ್ಸ್, ನಾಟಾ ರಿಯಾಯ್ತಿದರ, ಬೆಳೆಸಾಲ, ಅಭಿವೃದ್ಧಿ ಸಾಲ ಇತ್ಯಾದಿ (ಇವುಗಳನ್ನೆಲ್ಲಾ ಗೇಣಿಗೆ ಕೊಟ್ಟಿರುವ ಭೂಮಿಗಳ ಖಾತೆ ಹಕ್ಕಿನ ದಾಖಲೆಯನ್ನು ಮುಂದುಮಾಡಿ ಜಮೀನ್ದಾರರೇ ಪಡೆದುಕೊಳ್ಳುತ್ತಿದ್ದರು. ಗೇಣಿದಾರರ ಗಮನಕ್ಕೇ ಬರುತ್ತಿರಲಿಲ್ಲ). ಮುಂತಾದ ಪ್ರಮುಖವಾದ ಬೇಡಿಕೆಗಳೊಂದಿಗೆ ಪ್ರತಿ ಗ್ರಾಮದಲ್ಲಿಯ ರೈತರ ಸಭೆಗಳ ಮೂಲಕ ತಿಳಿಸಿ ರೈತರನ್ನು ಜಾಗೃತಗೊಳಿಸುವುದು ಈ ಸಂಘದ ಪ್ರಮುಖ ಆಶಯವಾಗಿತ್ತು. ಹೀಗೆಯೇ ಮೂರು ವರ್ಷಗಳಿಗಿಂತ ಹೆಚ್ಚುಕಾಲ ರೈತರನ್ನು ಸಂಘಟಿಸುತ್ತ, ಜಾಗೃತಿ–ಒಗ್ಗಟ್ಟಿನ ಪ್ರಜ್ಞೆ ಹುಟ್ಟಿಸುತ್ತಾ, ಸಣ್ಣ–ಸಣ್ಣ ಪ್ರಕಟಣೆ–ಪುಸ್ತಕಗಳನ್ನು ಹೊರಡಿಸುತ್ತಾ, ಲಭ್ಯವಿರುವ ಪತ್ರಿಕಾ ಪ್ರಚಾರವನ್ನು ಪಡೆಯುತ್ತ ನಡೆಸಿದ ರೈತ ಸಂಘಟನಾ ಕಾರ್ಯ ಮುಂದುವರೆಸಿಕೊಂಡು ಬರಲಾಗುತ್ತಿತ್ತು. ಇಂತಹ ಸಭೆಗಳಲ್ಲಿ ಭಾಗವಹಿಸಿ ರೈತರ ಬೇಡಿಕೆಗಳನ್ನು ಬೆಂಬಲಿಸಿ, ಭಾಷಣ ಮಾಡಿ ರೈತರಲ್ಲಿ ಹೊಸ ಹುರುಪನ್ನು ಬಿತ್ತುತ್ತಿದ್ದರು. ರೈತರನ್ನು ಸಂಘಟಿಸಿ ಹೋರಾಟಕ್ಕೆ ಸಿದ್ದಮಾಡಿದ್ದರು. ಅವರ ಸಂಘಟನಾ ಚಾತುರ್ಯ ಅಧ್ಬುತವಾದ ಮಾತಿನ ಮೋಡಿ; ಗತ್ತುಗಾರಿಕೆ, ವಿಷಯ ಪ್ರತಿಪಾದನೆ, ರೈತರನ್ನು ನೇರವಾಗಿ ಸ್ಪಂದಿಸುತ್ತಿತ್ತು. ಗೌಡರು ಮುಗ್ದ ರೈತರ ಭಾವನೆಯೊಂದಿಗೆ ಆತ್ಮೀಯತೆ ಹೊಂದಿದ್ದರು. ಇದರಿಂದಾಗಿ ಪದೇ ಪದೇ ಗೌಡರನ್ನು ಆಹ್ವಾನಿಸುತ್ತಿದ್ದರು. ಗೌಡರು ಸಹ ರೈತರ ಬೇಡಿಕೆಗಳ ಈಡೇರಿಕೆಯ ಅಗತ್ಯವನ್ನು ವರ್ಣಿಸುವಾಗ ಒಮ್ಮೊಮ್ಮೆ ಭಾವಪರವಶರಾಗಿ ಉದ್ವಿಗ್ನರಾಗುತ್ತಿದ್ದರು.

ಕಾಗೋಡು ಗೌಡರು ತಾಲ್ಲೂಕಿನ ಅತೀ ಶ್ರೀಮಂತ ಗೌಡರಲ್ಲಿ ಒಬ್ಬರಾಗಿದ್ದರು. ಭರ್ಜರಿಯಾಗಿ ಮರದಿಂದ ಕಟ್ಟಿದ ಭಾರಿ ಮನೆ ಕಾಗೋಡು ಗೌಡರದು. ಸುಮಾರು 1896–1904ರಲ್ಲಿ ನಿರ್ಮಿತವಾದ ಈ ದೊಡ್ಡಮನೆ ಕೆಲಸಕ್ಕೆ ಎರಡು ನೂರು ಒಕ್ಕಲುಗಳನ್ನು ಬಿಟ್ಟಿದ್ದರಂತೆ. ಆ ಕಾಲದಲ್ಲಿಯೇ ಮನೆ ಕಟ್ಟಿಸಲು ಸುಮಾರು ನಾಲ್ಕು ಸಾವಿರ ಖರ್ಚಾಗಿತ್ತಂತೆ. ದೀವರ ಕೇರಿಯ ಎಲ್ಲಾ ಮನೆಗಳಿಗಿಂತಲೂ ದೊಡ್ಡದಾಗಿರುವ ಅವರ ಕೊಟ್ಟಿಗೆಯೇ ಐವತ್ತು ಕಾಲ್ನಡೆಗಳನ್ನು ಧಾರಾಳವಾಗಿ ಕಟ್ಟಬಹುದಾದಷ್ಟು ದೊಡ್ಡದಾಗಿತ್ತಂತೆ (ಅನುಬಂಧ 2).

ಶ್ರೀಮಂತರ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ತುಳಿತದಲ್ಲಿ ಮನುಷ್ಯ ಗೌರವವನ್ನೇ ಕಳೆದುಕೊಂಡು ಪ್ರಾಣಿಗಳಂತೆ ಬದುಕುತ್ತಿದ್ದ ದೀವರು, ಅವರಂತೆಯೇ ಹರಿಜನ ಮತ್ತು ಮಡಿವಾಳ ಜನಾಂದವರು ಬಹಳ ಕಷ್ಟದ ಬದುಕನ್ನು ಸಾಗಿಸುತ್ತಿದ್ದ ಕಾಲ ಅದು. ದೀವ ಒಕ್ಕಲಿಗರು ತುಂಡು ಪಂಚೆ ಉಟ್ಟು, ಅರೆ ಹೊಟ್ಟೆ ಉಂಡು, ಉತ್ತು ಬಿತ್ತು ಬೆಳೆದು ಸುಮ್ಮನೆ ಕೂತು ತಿಂದು ದರ್ಬಾರು ಮಾಡುವ ದಣಿಗಳಿಗೆ ಗೇಣಿ ಕೊಡಬೇಕಾಗಿತ್ತು. ಆದರೆ ಮೇಲು

ಜಾತಿಯ ದಣಿಗಳ ಎದುರು ಈ ದೀವರು ಕಾಲುಮುಟ್ಟುವಂತೆ ಪಂಚೆ ಉಡುವಂತಿರಲಿಲ್ಲ. ಅದು ಮೊಣಕಾಲಿನಕೆಳಗೆ ಇಳಿಯಕೂಡದು.

ದಣಿಗಳ ಮನೆಯ ಎದುರು ಇವರು ಚಪ್ಪಲಿ ಮೆಟ್ಟಿಕೊಂಡು ನಡೆಯುವಂತಿರಲಿಲ್ಲ. ದಣಿಗಳು ಮನೆಯ ಚಾವಡಿಯಲ್ಲಿ ಆಸೀನರಾಗಿದ್ದಾಗ ಇವರು ಮನೆಯ ಎದುರು ಹಾದು ಹೋಗಬೇಕಾದರೆ ಕಾಲಿನ ಜೋಡು ಕಳಚಿ ಕೈಯಲ್ಲಿ ಹಿಡಿದುಕೊಂಡು ಬಗ್ಗಿ ಮುಂದೆ ನಡೆಯಬೇಕಾಗಿತ್ತು. ದಣಿಗಳ ಮನೆಯಲ್ಲಿ ಯಾರನ್ನೂ ಅವರು ಯಾವ ಪ್ರಾಯದವರೇ ಆಗಿರಲಿ ಏಕ ವಚನದಲ್ಲಿ ಮಾತಾಡಿಸುವಂತಿಲ್ಲ. ಆದರೆ ದಣಿಗಳ ಮನೆಯ ಚೋಟುದ್ದದ ಪಿಳ್ಳೆ ಕೂಡಾ ದೀವರ ಮುದುಕರನ್ನು 'ನೀನು' 'ತಾನು' ಎಂದು ಮಾತಾಡಿಸಬಹುದಾಗಿತ್ತು. ಗಾಡಿ ಹೊಡೆಯುವಾಗ ದಣಿಗಳು ಎದುರಾದರೆ ಕಾಲುಬಿಟ್ಟು ಕುಳಿತುಕೊಳ್ಳುವಂತಿಲ್ಲ. ಬ್ರಾಹ್ಮಣ, ಲಿಂಗಾಯಿತರ ಮನೆಗಳಲ್ಲಿ, ಊರಿನ ದೇವಸ್ಥಾನಗಳಲ್ಲಿ ದೀವರು ಚಾವಡಿಯ ಅಥವಾ ಎರಡನೆಯ ಮಜಲನ್ನು ಸಹ ದಾಟುವಂತಿರಲಿಲ್ಲ. ದೀವರಿಗಿಂತ ಕೆಳಗಿನವರಾದ ಹರಿಜನರಿಗೆ ಕೃಷಿ ಭೂಮಿಯನ್ನೂ ಸಹ ಗೇಣಿಗೆ ಕೊಡುತ್ತಿರಲಿಲ್ಲ. ಕೂಲಿ ಮಾಡಿಕೊಂಡೇ ಬದುಕಬೇಕಾಗಿದ್ದ ಅವರಿಗೆ ಎಲ್ಲಯೂ ಹೊರಬಾಗಿಲಿನಿಂದ ಈಚೆಗೆ ಪ್ರವೇಶವಿರಲಿಲ್ಲ.

ಗೇಣಿ ಒಕ್ಕಲುಗಳು ದುಡಿದು ದಣಿಗಳಿಗೆ ಗೇಣಿಯನ್ನು ಸಲ್ಲಿಸಬೇಕಾಗಿತ್ತು. ಜೊತೆಗೆ ದಣಿಗಳು ಹೇಳಿದ ಬಿಟ್ಟಿಯನ್ನು ಮಾಡಬೇಕಾಗಿತ್ತು. ದಣಿಗಳ ಮನೆ ಕೊಟ್ಟಿಗೆಗೆ ಸೊಪ್ಪು ತರುವುದು, ಕರಡ ಕತ್ತರಿಸುವುದು, ಹುಲ್ಲು ಕೊಯ್ದು ತರುವುದು, ಅಂಗಳ ಸಗಣಿ ಸಾರಿಸುವುದು, ದನ ಮೇಯಿಸುವುದು, ಹಟ್ಟಿ ಮಾಡಲು ಹೊದೆಸುವುದು, ಬಟ್ಟೆ ಬಗೆಯುವುದು, ಅವರ ಕಾಗದ ಪತ್ರಗಳನ್ನು ಮುಟ್ಟಿಸುವುದು. ದಣಿಗಳ ಮನೆಯವರು ಎಲ್ಲಿಗಾದರೂ ಹೋಗಬೇಕಾದರೆ ಗಾಡಿಕಟ್ಟಿ ಹೊಡೆಯುವುದು, ಅಡಿಕೆ ಸುಲಿಯವುದು ಮುಂತಾದ ದಣಿಗಳು ಹೇಳಿದ ಯಾವ ಕೆಲಸವನ್ನೂ, ಎದುರು ಮಾತಾಡದೆ ಮಾಡಬೇಕಾಗಿತ್ತು. ಹೆಸರೇ ಹೇಳುವಂತೆ ಇದು ಬಿಟ್ಟಿ ಕೆಲಸ. ದಣಿಗಳು ಖುಷಿಯಿಂದ ವೀಳ್ಯ, ಹೊಗೆಸೊಪ್ಪು, ತಿಂಡಿ, ನುಚ್ಚು ಕೊಟ್ಟರೆ ಕೊಟ್ಟರು. ಇಲ್ಲದಿದ್ದರೆ ಕೇಳಿ ಪಡೆಯುವಂತಿಲ್ಲ. ಒಂದು ಒಕ್ಕಲು ವರ್ಷಕ್ಕೆ ಹದಿನೈದರಿಂದ ಇಪ್ಪತ್ತು ಆಳಿನ ಕೆಲಸವನ್ನು ದಣಿಗಳ ಮನೆಯಲ್ಲಿ ಬಿಟ್ಟಿಯಾಗಿ ಮಾಡಬೇಕಾಗಿತ್ತು (ಅನುಬಂಧ 3).

ಗೇಣಿ ಎಷ್ಟಿರಬೇಕೆಂಬ ಒಂದು ವಿವಾದ ಮಲೆನಾಡಿನ ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನ ಕಾಗೋಡು ಗ್ರಾಮದ ಜಮೀನ್ದಾರರ, ರೈತರ ನಡುವೆ ಹುಟ್ಟಿದ್ದು ರಾಜಿ ಆಗಲಿಲ್ಲ. ಸಂಧಾನಗಳು ಫಲಿಸಲಿಲ್ಲ ರೈತರು, ರೈತ ಸಂಘ, ಅರವತ್ತು ಸೇರು ಎಂದರು. ಒಡೆಯರು, ಜಮೀನ್ದಾರರು ಎಪ್ಪತ್ತು ಸೇರು ಮಾಮೂಲು ಎಂದರು. ಅಂದಿನ ಸರಕಾರಕ್ಕೂ ಗೊತ್ತಾದ ಪ್ರಮಾಣ ಇರಲಿಲ್ಲ. ಎಪ್ಪತ್ತು ಸೇರಿನಂತೆ ಗೇಣಿ ಚುಕ್ತ ಮಾಡಿ ಗದ್ದೆಗೆ ಕಾಲಿಡಿ ಎಂದು ಒಡೆಯರು ಆಜ್ಞೆ ಮಾಡಿದರು. ಅರವತ್ತು ಸೇರಿಗಿಂತ ಒಂದು ಕಾಳು ಜಾಸ್ತಿ ಕೊಡುವುದಿಲ್ಲ. ಉಳುಮೆ ಹಕ್ಕನ್ನು ಬಿಡುವುದಿಲ್ಲ. ನಾವುಗಳು

ಉಳುಮೆ ಕಟ್ಟೇ ಸೈ ಎಂದು ರೈತರು ತಮ್ಮ ತೀರ್ಮಾನ ತಿಳಿಸಿದರು. ಇಷ್ಟೇ ಮೂಲ. ರೈತರುಗಳು ನೇಗಿಲು–ನೊಗ ಹೊತ್ತು ಕೊಂಡು ಗದ್ದೆಗಳಿಗೆ ಕಾಲುಇಟ್ಟದ್ದೇ ತಡ. ಕಾಯುತ್ತಿದ್ದ ಒಡೆಯರು, ಅವರ ಆಳು, ಕಾಳು ಎಲ್ಲ ಸೇರಿ ಅವರನ್ನು ಹೊಡೆದು ಒದ್ದು ಗದ್ದೆಗಳಿಂದ ಅಟ್ಟಿ ಓಡಿಸಿದರು ಘರ್ಷಣೆ ನಡೆಯಿತು. ಪೋಲಿಸರಿಗೆ ದೂರು ಹೋಯಿತು. ರೈತ ಸಂಘ, ಸೋಷಲಿಸ್ಟ್ ಪಾರ್ಟಿ ರೈತರ ಪರನಿಂತರು. ಸೂಚನೆಕೊಟ್ಟು ಸತ್ಯಾಗ್ರಹ ಸಾರಿದರು. ಪೋಲಿಸರು ಸತ್ಯಾಗ್ರಹಿಗಳನ್ನು ಬಂಧಿಸಿದ್ದು ಸರಕಾರ ಹೋರಾಟವನ್ನು ಹತ್ತಿಕ್ಕಲು ಕ್ರೂರ ದಬ್ಬಾಳಿಕೆಗೆ ಇಳಿಯಿತು. ವಿದೇಶ ಪ್ರವಾಸ ಹೊರಡಲಿದ್ದ ಸೋಷಲಿಸ್ಟ್ ನೇತಾರ ಡಾ. ರಾಮಮನೋಹರ ಲೋಹಿಯಾ ಅವರು ಕಾಗೋಡಿಗೆ ಧಾವಿಸಿಬಂದರು. ಅವರೂ ಬಂಧನಕ್ಕೊಳಗಾದರು. ಕಾಗೋಡು ಹತ್ತಿರದ ಒಂದು ಹಳ್ಳಿಯಲ್ಲಿ ಗೌಡರು ಕೂಡ ಬಂದಿಯಾದರು. (ಕಾಗೋಡು ಚಲೋ ಲೇಖನ) (ಶಾಂತವೇರಿ ಗೋಪಾಲಗೌಡರ ನೆನಪಿನ ಸಂಪುಟ 471–474).

ಗೌಡರು ಎದುರಿಸಿದ ಚುನಾವಣೆಯ ವಿಷಯವೇ ಒಂದು ಮಾದರಿಯಾದ ಕ್ರಮವಾಗಿದ್ದಿತು. 1952ನೇ ಇಸವಿಯಲ್ಲಿ ನಡೆದ ಪ್ರಥಮ ಮಹಾ ಚುನಾವಣೆಗೆ ಅವರು ಶಿವಮೊಗ್ಗ ಜಿಲ್ಲೆಯ ಸಾಗರ ಕ್ಷೇತ್ರದಿಂದ ಸೋಷಲಿಸ್ಟ್ ಪಾರ್ಟಿಯ ವತಿಯಿಂದ ಸ್ಪರ್ಧಿಸಿದ್ದರು. ಗೌಡರ ಎದುರಾಳಿ ಆಗರ್ಭ ಶ್ರೀಮಂತ ಎ.ಆರ್. ಬದರಿನಾರಾಯಣ್ ಅಯ್ಯಾಂಗಾರ್. ಅತ್ಯಂತ ವಿಸ್ತಾರವಾದ ಕ್ಷೇತ್ರವಾದ ಸಾಗರ ಕ್ಷೇತ್ರವು ಸಾಗರ, ಹೊಸನಗರ ಹಾಗೂ ತೀರ್ಥಹಳ್ಳಿಯ ಅರ್ಧ ಭಾಗವನ್ನು ಒಳಗೊಂಡಿತ್ತು. ಚುನಾವಣೆ ಎಂದರೆ ಹಣಕಾಸಿನ ವಿಚಾರ ಎದುರು ಪಾರ್ಟಿ ಆಗರ್ಭ ಶ್ರೀಮಂತ ಜೊತೆಗೆ ಜಮೀನ್ದಾರರ, ಕಾಂಗ್ರೆಸ್ಸಿಗರ ಸಂಪೂರ್ಣ ಬೆಂಬಲ ಅವರಿಗಿತ್ತು. ಗೌಡರಿಗೆ ಹಣವೊಂದು ಬಿಟ್ಟು ಉಳಿದೆಲ್ಲಾ ಬೆಂಬಲವಿತ್ತು. 250 ರೂ. ಠೇವಣಿ ಹಣವನ್ನು ಸಹ ಸ್ನೇಹಿತರಿಂದ ಸಂಗ್ರಹಮಾಡಿ ಕಟ್ಟಿತ್ತು, ಗೌಡರ ಪರವಾಗಿ ಶ್ರೀಸಾಮಾನ್ಯರು, ಬಡವರು, ಬಡಗೇಣಿದಾರರೂ, ಕೂಲಿದಾರರು, ಮಧ್ಯಮ ವರ್ಗದ ಜನತೆ ಜಾತಿಮತ ಬೇಧವಿಲ್ಲದೆ ಚುನಾವಣಾ ಪ್ರಚಾರ ಕಾರ್ಯದಲ್ಲಿ ಮುಂದಾದರು. ಕರಪತ್ರ, ವಾಲ್‌ಪೋಸ್ಟರ್ ಸಹ ಅಚ್ಚುಹಾಕಿಸಿ ಕಾರ್ಯಕರ್ತರಿಗೆ ಮುಟ್ಟಿಸುವಷ್ಟು ಹಣಕಾಸಿನ ವ್ಯವಸ್ಥೆ ಪಕ್ಷಕ್ಕೆ ಇರಲಿಲ್ಲ. ಕಾರು ಮುಂತಾದ ವಾಹನಗಳನ್ನು ಬಳಸುವ ಸ್ಥಿತಿಯಲ್ಲಿಯೂ ಇರಲಿಲ್ಲ. ಗೌಡರು ಮತ್ತು ಪಕ್ಷದ ಕಾರ್ಯಕರ್ತರೊಂದಿಗೆ ಮನೆ ಮನೆಗೆ ಹೋಗಿ ಮತ ಕೇಳಿ ಚುನಾವಣೆ ಎದುರಿಸಿದ್ದರು. ಅವರೆಂದೂ ಜಾತಿ ವಾದವನ್ನು ಹೇಳಿ ಮತ ಕೇಳಿದವರಲ್ಲ, ಎದುರಾಳಿಯವರ ಬಗ್ಗೆ ಎಂದೂ ತಮ್ಮ ಭಾಷಣದಲ್ಲಿ ಲಘುವಾಗಿ ಮಾತಾಡಿದವರಲ್ಲ. ತಮ್ಮ ಭಾಷಣದಲ್ಲಿ ತಾತ್ವಿಕ ನೆಲೆಗಟ್ಟಿನ ಟೀಕೆ ಟಿಪ್ಪಣಿಗಳು ಮತದಾರರ ಮನಮುಟ್ಟುವಂತೆ ಪಕ್ಷದ ಚುನಾವಣಾ ಪ್ರಣಾಳಿಕೆಯನ್ನು ಹೇಳುತ್ತಿದ್ದರು. ಪಕ್ಷದ ಕಾರ್ಯಕರ್ತರು ಸಹ ತುಂಭಾ ನಿಷ್ಠಾವಂತರು, ಪ್ರತಿಫಲಾಪೇಕ್ಷೆಯಿಲ್ಲದೆ ಹಗಲೂ–ರಾತ್ರಿ ದುಡಿಯುತ್ತಿದ್ದರು. ಕಾಲುನಡಿಗೆಯ ಸಭೆ, ಸ್ವಂತ ಖರ್ಚಿನಲ್ಲಿ ಬಸ್ಸಿನಲ್ಲೋ, ಪ್ರಯಾಣ ಮಾಡುತ್ತಾ ಮತದಾರರ ಮನೆಯಲ್ಲಿ ಊಟ–ತಿಂಡಿ ಮಾಡುತ್ತಾ ಮನೆಮಾರು ಬಿಟ್ಟು ತಿಂಗಳುಗಟ್ಟಲೆ ಚುನಾವಣಾ ಪ್ರಚಾರ ಮಾಡುತ್ತಿದ್ದರು. ಚುನಾವಣೆಯಲ್ಲಿ ಇಷ್ಟೆಲ್ಲಾ ಖರ್ಚು ಮಾಡಿಕೊಂಡಿದ್ದರೂ,

ಎಂದೂ ಸ್ವಾರ್ಥಕ್ಕಾಗಿ ಗೌಡರನ್ನು ಬಳಸಿಕೊಂಡವರಲ್ಲ. 1952ರ ಚುನಾವಣೆಯಲ್ಲಿ ಕಾಂಗ್ರೆಸ್ಸಿನ ಎ.ಆರ್. ಬದರಿನಾರಾಯಣರ ವಿರುದ್ಧ ಪ್ರಚಂಡ ಬಹುಮತದಿಂದ ಗೌಡರು ಚನಾಯಿತರಾದರು.

ವಿಶಾಲವಾದ ಸಾಗರ ಕ್ಷೇತ್ರವನ್ನು 1957ರ ಚುನಾವಣಾ ವೇಳೆಗೆ ಒಡೆದು, ತೀರ್ಥಹಳ್ಳಿಯ ಮೂರು ಹೋಬಳಿ, ಹೊಸನಗರ ತಾಲ್ಲೂಕು ಮತ್ತು ಸಾಗರದ ಆನಂದಪುರ ಹೋಬಳಿ ಸೇರಿಸಿ ಮೂರು ಅಸೆಂಬ್ಲಿ ಕ್ಷೇತ್ರ ಮಾಡಲಾಗಿತ್ತು. ಈ ಸಲದ ಚುನಾವಣೆಯಲ್ಲಿ ಸಹ ಗೌಡರ ಉದುರಾಳಿ ಕಾಂಗ್ರೆಸ್ಸಿನ ಎ.ಆರ್. ಬದರಿನಾರಾಯಣ ಅಯ್ಯಾಂಗಾರ್ ರವರು, ಈ ಚುನಾವಣೆಯಲ್ಲಿ ಗೌಡರ ಪರವಾಗಿ ಡಾ. ಲೋಹಿಯಾರವರು ಸಂಚಾರ ಮಾಡಿ ಗೌಡರೊಂದಿಗೆ ಪ್ರಚಾರ ಮಾಡಿದರು. ಈ ಚುನಾವಣೆಯಲ್ಲಿನ ತಮ್ಮ ಭಾಷಣದಲ್ಲಿ ಲೋಹಿಯಾರವರು ಗೌಡರು ಮಾಡಿದ ಜನಹಿತ ಕಾರ್ಯವನ್ನು ವ್ಯಂಗ್ಯವಾಗಿ ಜನರಿಗೆ ಅರ್ಥವಾಗುವಂತೆ ಮಾತನಾಡಿದರು. ಆದರೆ ಜನರು ಅವರ ವ್ಯಂಗ್ಯದ ಮಾತನ್ನು ಅರ್ಥಮಾಡಿಕೊಳ್ಳಲಿಲ್ಲ. 1957ರಲ್ಲಿ ಗೌಡರ ಸೋಲಿಗೆ ಈ ಅಂಶವೂ ಒಂದು ಕಾರಣವಾಗಿರಬಹುದು. ಗೌಡರದ್ದು ನಿಧಾನ ಪ್ರವೃತ್ತಿ. ಒಂದು ರೀತಿಯ ಮೂಢಿ ಮನುಷ್ಯ. ಸಭೆಯ ಕಾರ್ಯಕ್ರಮ ಯಾವಾಗಲೂ ನಿಗಧಿಪಡಿಸಿದ್ದಕ್ಕಿಂತ ಒಂದೆರಡು ಘಂಟೆ ತಡವಾಗಿ ಪ್ರಾರಂಭವಾಗುತ್ತಿತ್ತು. ರಾತ್ರಿ ಎಷ್ಟು ಹೊತ್ತಾದರೂ ಜನ ಅವರು ಬರುವುದನ್ನು ಕಾಯುತ್ತಿದ್ದರು. ಅವರ ಮಾತಿನ ಮೋಡಿಗೆ ಮರಳಾಗದ ಜನ ವಿರಳ. ಎಂಥ ಹಳ್ಳಿಯವನೂ ತಲೆದೂಗುವಂತೆ ವಿಚಾರ ಮಂಡನೆ, ವಿರೋಧಿಯನ್ನು ತನ್ನ ಕಡೆಗೆ ಸೆಳೆದುಕೊಳ್ಳುವ ವಿಚಾರಲಹರಿ, ಅವರನ್ನು ಜನ ಪ್ರೀತಿಸುತ್ತಿದ್ದರು, ಗೌವಿಸುತ್ತಿದ್ದರು. 1957ರ ಚುನಾವಣೆಯಲ್ಲಿ ಕಾಂಗ್ರೆಸ್ ತನ್ನ ಎಲ್ಲಾ ರಾಜಕೀಯವನ್ನು ಮಾಡಿತು. ಗೌಡರ ಕಾರ್ಯಕರ್ತರನ್ನು ಆಮೀಷತೋರಿಸಿ ಒಡೆದು ತಮ್ಮ ಬಳಿ ಕರೆದುಕೊಂಡರು. ಕೆಲವರನ್ನು ಬೆದರಿಕೆಯ ಗುಂಡುಗಳನ್ನು ಹಾರಿಸಿ ಭಯಪಡಿಸಿದರು. ಜಾತಿಯ ಪಕ್ಷ ಬೀಜವನ್ನು ಬಿತ್ತಿದರು. ಜೀವನದ ಹಂಗುತೊರೆದು ಕೆಲವೇ ಕಾರ್ಯಕರ್ತರು ಗೌಡರ ಪರವಾಗಿ ಕೆಲಸಮಾಡಿದರು. ಆದರೆ ಈ ಚುನಾವಣೆಯಲ್ಲಿ ಗೌಡರು ಸೋಲನ್ನು ಅನುಭವಿಸಬೇಕಾಯಿತು.

1962ರಲ್ಲಿ ಪುನಃ ಸಾಗರ ಕ್ಷೇತ್ರವನ್ನು ಬದಲಾವಣೆ ಮಾಡಲಾಯಿತು. ಈ ಸಲ ಪೂರ್ಣ ತೀರ್ಥಹಳ್ಳಿ ತಾಲ್ಲೂಕು ಹಾಗೂ ಹೊಸನಗರ ತಾಲ್ಲೂಕಿನ ನಗರ ಹೋಬಳಿ ಸೇರಿ ತೀರ್ಥಹಳ್ಳಿ ಕ್ಷೇತ್ರವಾಯಿತು. ಈ ಸಲದ ಚುನಾವಣೆಯಲ್ಲಿ ಕೆ.ಟಿ. ದಾನಮ್ಮ ಜನ ಸಂಘದಿಂದ ಹೆಚ್. ರಾಮಕೃಷ್ಣಪ್ರಭು, ಸೊನಲೇ ಸ್ವಾಮಿರಾವ್, ಗುಡ್ಡೇಕೇರಿ ವೆಂಕಪ್ಪಹೆಗ್ಡೆ, ಮುಂತಾದವರು ಸ್ಪರ್ಥಿಸಿದ್ದರು. ಗೌಡರು ಪುನಃ ಈ ಚುನಾವಣೆಯಲ್ಲಿ ಸಮಾಜವಾದಿ ಪಕ್ಷದಿಂದ ಸ್ಪರ್ಧಿಸಿದ್ದರು. ಕಾರ್ಯಕರ್ತರ ಅವಿರತ ಶ್ರಮದಿಂದ ಗೌಡರು ಈ ಚುನಾವಣೆಯಲ್ಲಿ ಭಾರಿ ಮತಗಳ ಅಂತರದಿಂದ ಜಯಗಳಿಸಿದರು.

1967ರಲ್ಲಿ ಮೂರನೇ ಮಹಾ ಚುನಾವಣೆ ಎದುರಾಯಿತು. ಈ ಸಲದ ಚುನಾವಣೆಯಲ್ಲಿ ಗೌಡರ ಎದುರಾಳಿಯಾಗಿ ಕಾಂಗ್ರೆಸ್ ಪಕ್ಷದಿಂದ ಗೌಡರ ಶಿಷ್ಯರಾಗಿದ್ದ ಬಿ.ಎಸ್. ವಿಶ್ವನಾಥ್‌ರವರು ಸ್ಪರ್ಧಿಯಾದರು. ಈ ಚುನಾವಣೆ ಬಹಳ ಕುತೂಹಲದಿಂದ ಕೂಡಿತ್ತು. ಅಧಿಕಾರ, ಹಣ, ಹಾಗೂ ಕಾಂಗ್ರೆಸ್ ನಾಯಕರ ಪೂರ್ಣ ಬೆಂಬಲದೊಂದಿಗೆ ಬಿ.ಎಸ್. ವಿಶ್ವನಾಥ್ ರವರು ಅಪಾರ ಹಣ ಖರ್ಚುಮಾಡಿ ಚುನಾವಣೆ ಎದುರಿಸಿದರು. ಆದರೆ ಗೌಡರ ಪಾಲಿಗೆ ಇದೂ ಸಹ ಬಡ ಚುನಾವಣೆಯೇ. ಅವರಲ್ಲಿ ಹಣವಿರಲಿಲ್ಲ. ಅಧಿಕಾರವಿರಲಿಲ್ಲ. ಶ್ರೀಮಂತವರ್ಗದವರ ಬೆಂಬಲವಿರಲಿಲ್ಲ. ಅವರಿಗೆ ಮೊದಲಿನಿಂದಲೂ ಬೆಳೆದುಕೊಂಡ ಅಭಿಮಾನಿಗಳ ಶ್ರೀ ರಕ್ಷೆಯೇ ಆಸ್ತಿ. ತಾವು ಮಾಡಿದ ಜನಹಿತ ಕಾರ್ಯಗಳೇ ಆಧಾರ. ಗೌಡರು ಕಾಂಗ್ರೆಸ್ ಮಂತ್ರಿಮಂಡಲದಲ್ಲಿ, ವಿಧಾನ ಸಭೆಯಲ್ಲಿ ಹಲವಾರು ಭಾರಿ ಆಳುವ ಪಕ್ಷದ ಹುಳುಕನ್ನು ಹೊರಗೆಡವಿದ್ದರು. ಇವುಗಳನ್ನು ಜನ ಸಾಮಾನ್ಯರ ಮುಂದಿಟ್ಟು ಕಾಂಗ್ರೆಸ್ಸಿನ ಕರ್ಮಕಾಂಡದ ದುರಂತ ಕಥೆಗಳನ್ನು ಅವರ ಅರಿವಿಗೆ ತರಲು ಪ್ರಯತ್ನಿಸಿದ್ದರು. ಇದು ಕಾಂಗ್ರೆಸ್ಸಿಗೆ ನುಂಗಲಾರದ ತುತ್ತಾಯಿತು. ಮುಯ್ಯಿಗೆ ಮುಯ್ಯಿ ತೀರಿಸಿಕೊಳ್ಳುವ ಉದ್ದೇಶದಿಂದ ಈ ಕ್ಷೇತ್ರಕ್ಕೆ ಮುಖ್ಯಮಂತ್ರಿಗಳೇ ಖುದ್ದಾಗಿ ಸಹಾಯ ಮಾಡಲು ತೀರ್ಥಹಳ್ಳಿಗೆ ಬರುವುದರ ಜೊತೆಗೆ ಅಪಾರ ಹಣ ಸಹಾಯ ಮಾಡಿದ್ದರು. ಈ ಚುನಾವಣೆಯಲ್ಲಿ ಗೌಡರಿಗೆ ತಾಲ್ಲೂಕಿನ ಸಿ.ಪಿ.ಎಮ್ ಪೂರ್ಣ ಬೆಂಬಲವನ್ನು ಅದರ ನಾಯಕ ಅಪ್ಪಣ್ಣ ಹೆಗ್ಡೆಯವರ ಮೂಲಕ ನೀಡಿದರು. ಈ ಚುನಾವಣೆಯ ಮತ ಎಣಿಕೆ ಹೊಸನಗರ ತಾಲ್ಲೂಕಿನಲ್ಲಿ ನಡೆಯಿತು. ಗೌಡರು ಎಣಿಕೆ ನಡೆಯುವಾಗ ಆರೋಗ್ಯ ಸರಿಯಿಲ್ಲದ ಪ್ರಯುಕ್ತ ಹಾಜರಿರಲಿಲ್ಲ. ಈ ಸಲವೂ ಪ್ರಚಂಡ ಬಹುಮತಗಳಿಂದ ಜಯಗಳಿಸಿದರು. ಎಣಿಕೆಯ ಬಳಿಕ ಎದುರಾಳಿ ಬಿ.ಎಸ್. ವಿಶ್ವನಾಥ್‌ರವರು ಈ ಸಲದ ಎಲೆಕ್ಷನ್‌ಗೆ ಬಹಳ ಪ್ರಯತ್ನಪಟ್ಟೆ ಆದ್ರೂ ಸಾರ್ಥಕವಾಗಲಿಲ್ಲ. ಇನ್ನು ಈ ಕ್ಷೇತ್ರದಲ್ಲಿ ಯಾರು ಸ್ಪರ್ಧಿಸಿದರೂ ಗೆಲ್ಲಲು ಸಾಧ್ಯವಿಲ್ಲ. ಎಂದು ಹೇಳಿ ಗೋಪಾಲಗೌಡರ ಜನಾನುರಾಧವನ್ನು ನೆನಪಿಸಿಕೊಂಡರು, ಇದೇ ಗೌಡರ ಕೊನೆಯ ಚುನಾವಣೆಯಾಯಿತು. ಗೌಡರ ಚುನಾವಣೆಯೇ ಒಂದು ಆದರ್ಶ. ಪ್ರಮುಖವಾದ ಪ್ರಜ್ಞಾವಂತ ಕಾರ್ಯವಾಗಿತ್ತು. ಅವರಿಗೆ ಹಣಕ್ಕಿಂತ ಜನರ ಪ್ರೀತಿದೊಡ್ಡದಾಯಿತು. ಇಷ್ಟಾದರೂ ಗೌಡರು ಚುನಾವಣೆಯಲ್ಲಿ ಮಾಡಿದ ಖರ್ಚನ್ನು ನೆನಪಿಸಿಕೊಂಡರೆ ಆಶ್ಚರ್ಯವಾಗುತ್ತದೆ. 1952ರ ಮೊದಲ ಚುನಾವಣೆಗೆ ಸುಮಾರು ಆರು ಸಾವಿರ, 1957ರ ಎರಡನೇ ಚುನಾವಣೆಗೆ ಸುಮಾರು ಏಳು ಸಾವಿರ ಹಾಗೆಯೇ 1962ರ ಮೂರನೇ ಚುನಾವಣೆಗೆ ಸುಮಾರು ಎಂಟುಸಾವಿರದಷ್ಟು ಮಾತ್ರ ಖರ್ಚಾಗಿತ್ತು. ಆದರೆ ಜಿದ್ದಾಜಿದ್ದಿ ಸ್ಪರ್ಧೆ ಎದುರಿಸಿದ 1972ರ ಚುನಾವಣೆಯಲ್ಲಿ ಸ್ವಲ್ಪ ಹಣ ಹೆಚ್ಚಾಗಿಯೇ ಖರ್ಚಾಯಿತು. ಗೌಡರ ಪ್ರಭಾವ ಈ ಭಾಗದ ಜನರ ಮೇಲೆ ಎಷ್ಟಿತ್ತು ಎಂದರೆ 1972ರ ಚುನಾವಣೆಯಲ್ಲಿ ಕೋಣಂದೂರು ಲಿಂಗಪ್ಪನವರು ಗೌಡರ ಮಫ್ಲರ್ ತೋರಿಸಿ ವಿಜಯಿಯಾದರು.

ಗೋಪಾಲಗೌಡರು 'ಮಹಾಕ್ರಾಂತಿಗೆ ಆಹ್ವಾನ' ಎಂಬ ತಮ್ಮ ಲೇಖನದಲ್ಲಿ ಯಳಂದೂರಿನಲ್ಲಿ ತಾವು ಕಂಡ ಅಪೂರ್ವದ ಘಟನೆಯನ್ನು ಉಲ್ಲೇಖ ಮಾಡುತ್ತಾರೆ. ಯಳಂದೂರಿನಲ್ಲಿ ಸವರ್ಣ ಹಿಂದುಗಳು ಮತ್ತು ಹರಿಜನರು ಜೊತೆಯಲ್ಲಿ ಇದ್ದುದನ್ನು ನೋಡಿ ನನಗೆ ಆಶ್ಚರ್ಯ ಆಯಿತು. ಹಾಗೂ ಅಲ್ಲಿ ಹರಿಜನರಿಗೆ ಭೂಮಿಕಾಣಿ ಇದ್ದುದನ್ನು ನೋಡಿದೆ. ಅವರು ರೇಷ್ಮೆ ಗೂಡನ್ನು ತೆಗೆಯುತ್ತಾ ಇದ್ದುದನ್ನು ನಾನು ನೋಡಿದೆ. ರಾಜ್ಯದಲ್ಲಿ ನಾನು ಅನೇಕ ಕಡೆ ನೋಡಿದ್ದೇನೆ ಆದರೆ ಇಂಥಾ ಅಪೂರ್ವವಾದ ಸವರ್ಣ ಹಿಂದುಗಳು ಮತ್ತು ಹರಿಜನರು ಜೊತೆಯಲ್ಲಿ ಇದ್ದುದನ್ನು ನಾನು ನೋಡಿಲ್ಲ. ಅಲ್ಲಿ ಅವರು ಅನ್ಯೋನ್ಯವಾಗಿ ಇರುವುದನ್ನು ನೋಡಿ ನನಗೆ ತುಂಬಾ ಸಂತೋಷವಾಯಿತು. ಸಮಾಜವಾದವನ್ನು ವರ್ಗ ಮತ್ತು ವರ್ಣಗಳನ್ನು ತೊಡೆದುಹಾಕುವ ದಾರಿಯಲ್ಲಿ ತರುವುದು ನಮ್ಮ ಕನಸಾಗಬೇಕೆನ್ನುವುದು ಗೌಡರ ಆಶಯವಾಗಿತ್ತು.

ದಿನಾಂಕ:08–10–1958ರಲ್ಲಿ ಗೋಪಾಲಗೌಡರ ಅಧ್ಯಕ್ಷತೆಯಲ್ಲಿ ಹೊನ್ನೆಮರಡು ಮುಳುಗಡೆ ಪ್ರದೇಶದ ಸಂತ್ರಸ್ಥರ ಪರವಾಗಿ ರೈತರು ಮತ್ತು ಕೂಲಿಕಾರರ ಸಭೆ ಏರ್ಪಡಿಸಿ ಲಿಂಗನಮಕ್ಕಿ ಅಣೇಕಟ್ಟಿನ ಹಿನ್ನೀರಿನಿಂದ ಮುಳುಗಡೆಯಾದ ಗ್ರಾಮವಾಸಿಗಳ ಪರಿಹಾರದ ಬಗ್ಗೆ ಬೃಹತ್ ಪ್ರತಿಭಟನೆ ಏರ್ಪಡಿಸಿದ್ದರು. ಪ್ರತಿಭಟನೆ ಮೂಲಕ ಪ್ರಮುಖ ಬೇಡಿಕೆಗಳನ್ನು ಸರ್ಕಾರದ ಗಮನಕ್ಕೆ ತರಲಾಯಿತು. ಲಿಂಗನಮಕ್ಕಿ ಅಣೇಕಟ್ಟಿನಿಂದ ಮುಳುಗಡೆಗೆ ಬರುವ ಪ್ರದೇಶದಲ್ಲಿ ವಾಸವಾಗಿರುವ ಎಲ್ಲಾ ಕುಟುಂಬಗಳು ತಮ್ಮ ಆಸ್ತಿ ಮತ್ತು ಉದ್ಯೋಗ ಕಳೆದುಕೊಳ್ಳುವುದರಿಂದ ಅವರಿಗೆ ಸರ್ಕಾರ ಪರಿಹಾರ ಕೊಟ್ಟು ಪುನರ್ ವ್ಯವಸ್ಥೆ ಕಲ್ಪಿಸುವ ಬಗ್ಗೆ ಸ್ಥಿರ ಆಸ್ತಿಗಳಿಗೆ ಮಾತ್ರ ಪರಿಹಾರಕೊಟ್ಟು ಜೀವನಾಧಾರ ಉದ್ಯೋಗವನ್ನು ಕಳೆದುಕೊಳ್ಳುವ ಗೇಣಿದಾರರು ಮತ್ತು ಕೂಲಿಕಾರರು ಹಾಗೂ ಮತ್ತಿತರ ಸಣ್ಣಪುಟ್ಟ ಕಸುಬುದಾರರಿಗೆ ಪರಿಹಾರ ಕೊಡದಿರುವುದು ಅನ್ಯಾಯವೆಂದು ಸಭೆ ಅಭಿಪ್ರಾಯ ಪಟ್ಟಿತ್ತು. ಆದುದರಿಂದ ಸ್ಥಳಾಂತರ ಹೊಂದಲಿರುವ ಐದು ಜನರ ಕುಟುಂಬವೊಂದಕ್ಕೆ ರೂ. 5 ಸಾವಿರಗಳಿಗೆ ಕಡಿಮೆ ಇಲ್ಲದ ಪರಿಹಾರವನ್ನು ಪ್ರತಿಯೊಂದು ಕುಟುಂಬಕ್ಕೂ ಕೊಡಬೇಕು. ಈ ಬಗ್ಗೆ ಈಗಿರುವ ಕಾನೂನನ್ನು ಮುಂಬರುವ ಶಾಸನ ಸಭೆಯಲ್ಲಿ ಸೂಕ್ತವಾಗಿ ತಿದ್ದುಪಡಿ ಮಾಡಬೇಕು ಎಂದು ಸರ್ಕಾರವನ್ನು ಒತ್ತಾಯಿಸಿತು. 'ಉಳುವವನೆ ಹೊಲದೊಡೆಯ' ಎಂಬ ಆಧಾರದ ಮೇಲೆ ಭೂಸುಧಾರಣಾ ಕಾನೂನು ಆಗಲಿರುವ ಈ ಸಂಧರ್ಭದಲ್ಲಿ ಮುಳುಗಡೆ ಸಂಧರ್ಭದಲ್ಲಿ ಮುಳುಗಡೆ ಪ್ರದೇಶದ ಗೇಣಿದಾರರಿಗೆ ಅವರಿಗೆ ಉಳುಮೆಯಲ್ಲಿರುವ ಜಮೀನಿಗೆ ಸಲ್ಲುವ ಪರಿಹಾರ ದ್ರವ್ಯದ ಅರ್ಧದಷ್ಟನ್ನಾದರೂ ಪರಿಹಾರವಾಗಿ ನೀಡಬೇಕು. ಹಿರೇಬಾಸ್ಕರ ಅಣೇಕಟ್ಟಿನಿಂದ ಹಿಂದೆ ಮುಳುಗಡೆಯಾದ ಪ್ರದೇಶದಲ್ಲಿ ಎರಡು ಪಟ್ಟು ಕಂದಾಯಕ್ಕೆ ಸರ್ಕಾರ ಸಾಗುವಳಿಗೆ ಕೊಟ್ಟಿರುವ ಜಮೀನಿಗೂ ಈ ಮುಳುಗಡೆಯಲ್ಲಿ ಮುಳುಗಡೆಯಾಗುವ ಇತರೆ ಜಮೀನುಗಳಿಗೆ ಕೊಡುವಷ್ಟೇ ಪರಿಹಾರವನ್ನು ಕೊಡಬೇಕು. ಮುಳುಗಡೆ ಪ್ರದೇಶದಲ್ಲಿ ಸರ್ಕಾರ ವಶಪಡಿಸಿಕೊಂಡ ಗೇಣಿದಾರರ ಸಾಗುವಳಿಯಲ್ಲಿರುವ ಜಮೀನಿನ ಪಸಲು, ಆಯಾ ಗೇಣಿದಾರರಿಗೆ ಸಲ್ಲತಕ್ಕದ್ದೆಂದು, ಅದರಲ್ಲಿ ಖಾತೆದಾರರಿಗೆ ಯಾವ

ಪಾಲೂ ಸಿಗತಕ್ಕದ್ದಲ್ಲವೆಂದು ಸರ್ಕಾರ ಆಜ್ಞೆ ಹೊರಡಿಸಬೇಕು. ಈ ಯೋಜನೆಯ ಮೊದಲನೇ ಹಂತವು 1961ನೇ ಇಸವಿಯಲ್ಲಿ ಮುಗಿಯಲಿರುವುದರಿಂದ ಸ್ಥಳಾಂತರ ಹೊಂದಲಿರುವ ಜನರಿಗೆ ಉಚಿತ ಪುನರ್ ವ್ಯವಸ್ಥೆ ಕಲ್ಪಿಸುವ ಕಾರ್ಯವು ತ್ವರಿತವಾಗಿ ಒಮ್ಮೆಗೆ ನಡೆಯುವಂತೆ ಕೂಡಲೇ ತ್ವರಿತ ಕ್ರಮ ತೆಗೆದುಕೊಳ್ಳಬೇಕು. ಈಗಾಗಲೇ ಈ ಮುಳುಗಡೆ ಪ್ರದೇಶದಲ್ಲಿ ಆಸ್ತಿಗಳಿಗೆ ಕೊಟ್ಟಿರುವ ಪರಿಹಾರವು ಇಂದಿನ ಮಾರ್ಕೆಟ್ ಬೆಲೆಯ ಅರ್ಧಕ್ಕೂ ಕಡಿಮೆಯಾಗಿರುವುದನ್ನು ವಿಷಾದದಿಂದ ಗಮನಿಸಿ ನ್ಯಾಯವಾದ ಪರಿಹಾರವನ್ನು ಎಲ್ಲಾ ಆಸ್ತಿಗಳಿಗೂ ಸಲ್ಲಿಸಬೇಕು. ಈ ಮುಳುಗಡೆ ಪ್ರದೇಶದ ಜನರ ಪರಿಹಾರ ಮತ್ತು ಪುನರ್ ವ್ಯವಸ್ಥೆಗೆ ಸಂಬಂಧಪಟ್ಟ ಸಮಸ್ಯೆಗಳನ್ನು ಪರಿಹರಿಸುವ ಸಲುವಾಗಿ ಸೂಕ್ತ ಕ್ರಮಗಳನ್ನು ಕೈಗೊಳ್ಳಲು ಈ ಸಭೆಯಲ್ಲಿ 31 ಜನರುಳ್ಳ ಒಂದು ಸಮಿತಿಯನ್ನು ಸರ್ವಾನುಮತದಿಂದ ಚಲಾಯಿಸಲಾಯಿತ್ತಲ್ಲದೆ ಈ ಸಮಿತಿಗೆ ಶ್ರೀ ಗೋಪಾಲಗೌಡರನ್ನು ಅಧ್ಯಕ್ಷರನ್ನಾಗಿಯೂ, ಶ್ರೀ ಗಣಪತಿಯಪ್ಪನವರನ್ನು ಕಾರ್ಯದರ್ಶಿಯನ್ನಾಗಿಯೂ ಹಾಗೂ ಶ್ರೀ ಕಿಡದಂಬೆ ಕರಿಯಪ್ಪ ನವರನ್ನು ಉಪಾಧ್ಯಕ್ಷರು ಮತ್ತು ಖಜಾಂಚಿಯನ್ನಾಗಿ ಆಯ್ಕೆಮಾಡಲಾಯಿತು. ಹೀಗೆ ಗೋಪಾಲಗೌಡರ ಹೋರಾಟ ನಿತ್ಯವಾಗಿದ್ದು ಜನರ ಸಂಕಟಕ್ಕೆ ನೆರವಾಗುತ್ತಿದ್ದರು. ಹಾಗೆಯೇ ದಿನಾಂಕ:16–06–1960ರಂದು ಉರಗಳ್ಳಿ ಇನಾಂ ರೈತರ ಸಭೆ ಮೂಲಕ ಇನಾಂರದ್ದಿಯಾತಿ ಕಾನೂನಿನ ಅನ್ವಯ ಉರಗಳ್ಳಿ ಗ್ರಾಮದ ರೈತರಿಗೆ ಉಂಟಾದ ಅನ್ಯಾಯವನ್ನು ಪ್ರತಿಭಟಿಸಿ ಸರ್ಕಾರದ ಗಮನಕ್ಕೆ ತರಲಾಯಿತು.

ಲೇವಿ ವ್ಯವಸ್ಥೆ ಬಗ್ಗೆ ಮಾತನಾಡುತ್ತಾ (23 ಅಕ್ಟೋಬರ್ 1952) ಆಹಾರದ ಕ್ಷಾಮವನ್ನು ತಡೆಗಟ್ಟಲು ಸರ್ಕಾರದಲ್ಲಿ ದೂರದೃಷ್ಟಿಯುಳ್ಳ ಯೋಜನೆಯ ಹಾಗೂ ಖಚಿತ ತೀರ್ಮಾನ ತೆಗೆದುಕೊಳ್ಳಲಾಗದ ಸ್ಥಿತಿಯೇ ಕಾರಣ, ಮತ್ತು ರಾಗಿ, ಜೋಳ ಇತ್ಯಾದಿ ಆಹಾರದ ಬೆಳೆಗಳನ್ನು ಬೆಳೆಯುವುದರ ಬದಲಾಗಿ ರೈತರು ಕಮರ್ಷಿಯಲ್ ಕ್ರಾಪ್ಸ್‌ಗಳನ್ನು ಬೆಳೆಯಲು ಪ್ರಾರಂಭಿಸಿದ್ದಾರೆ. ಈ ಕಾರಣದಿಂದಲೇ ಒಂದೊಂದು ಜಿಲ್ಲೆಯಲ್ಲಿ ಒಂದೊಂದು ಕಮರ್ಷಿಯಲ್ ಬೆಳೆ ದಿನದಿನಕ್ಕೂ ಅಧಿಕವಾಗುತ್ತಾ ಬರುತ್ತಿದೆ. ಆದ್ದರಿಂದ ಸರ್ಕಾರ ಎಲ್ಲಿಯವರೆಗೆ ಕಂಟ್ರೋಲ್‌ಗಳನ್ನು ಇಟ್ಟುಕೊಂಡಿರುತ್ತವೆಯೋ ಅಂದಿನ ತನಕವೂ ಈ ಬೆಳೆಗಳ ಮೇಲೆ ಒಂದು ಹತೋಟಿಯನ್ನು ಇಟ್ಟುಕೊಳ್ಳಲೇಬೇಕು. ಎಲ್ಲೆಲ್ಲಿ ಆಹಾರ ಧ್ಯಾನ್ಯಗಳ ಬೆಳೆಯನ್ನು ಉದಾಸೀನ ಮಾಡಿ ಬೇರೆ ವಿಧವಾದ ಬೆಳೆಗಳನ್ನು ತೆಗೆಯುತ್ತಿದ್ದಾರೆಂಬ ಬಗ್ಗೆ ಸರ್ಕಾರದವರು ನಿಗಾ ಇಡಬೇಕು. ಹಾಗೆ ಮಾಡುವುದರ ಜೊತೆಗೆ ನಮಗೆ ಯಾವ ವಸ್ತುಗಳ ಅವಶ್ಯಕತೆ ಹೆಚ್ಚಾಗಿರುತ್ತದೋ ಅಂಥ ಬೆಳೆಗೆ ಹೆಚ್ಚಿಗೆ ಸೌಕರ್ಯಗಳನ್ನು ಕೊಡಬೇಕು ಎನ್ನುವುದಾಗಿ ತಮ್ಮ ಆಹಾರ ನೀತಿಯ ಸ್ಪಷ್ಟ ನಿಲುವನ್ನು ಅಧಿವೇಶನದ ತಮ್ಮ ಭಾಷಣದಲ್ಲಿ ಬಿಚ್ಚಿಡುತ್ತಾರೆ (ಶಾಂತವೇರಿ ಗೋಪಾಲಗೌಡರ ನೆನಪಿನ ಸಂಪುಟ 312).

ಗೋಪಾಲಗೌಡರು ಒಬ್ಬ ವ್ಯಕ್ತಿಯಾಗಿರದೇ ಒಂದು ಶಕ್ತಿಯಾಗಿ, ರಾಜಕೀಯ ಇಚ್ಛಾಶಕ್ತಿಯಾಗಿ ಸಮಾಜದಲ್ಲಿನ ಸಮಾನ ಅವಕಾಶಕ್ಕೆ ದುಡಿದವರು. ಕನ್ನಡ ಭಾಷೆ, ಕರ್ನಾಟಕದ ಏಕೀಕರಣ, ರಾಜಧನರದ್ದಿಯಾತಿ, ಇಂಗ್ಲೀಷ್ ಭಾಷೆ

ವ್ಯಾಮೋಹ, ಶಿಕ್ಷಣದ ಸುಧಾರಣೆ, ಆಡಳಿತದಲ್ಲಿ ಪಾರದರ್ಶಕತೆ, ಹರಿಜನರ ಅಸ್ಪೃಶ್ಯರ ಹಾಗೂ ಅಶಕ್ತರ ಬಲವರ್ಧನೆಗೆ ಪ್ರಯತ್ನ, ಶೋಷಿತರ ಪಾಲಿಗೆ ಸರ್ಕಾರದ ವಿಶೇಷ ಸೌಲಭ್ಯಗಳು, ಉಳುವವನೇ ಹೊಲದೊಡೆಯ, ಗೇಣಿ ಪದ್ದತಿ ರದ್ದಿಯಾತಿ, ಮುಳುಗಡೆ ಸಂತ್ರಸ್ಥರಿಗೆ ನೆರವು ಹಾಗೂ ಅಧಿಕಾರಿ ಶಾಹಿಗಳ ಪ್ರಜ್ಞಾ ರಹಿತ ಕಾರ್ಯತತ್ಪರತೆ ಮುಂತಾದ ಹಲವಾರು ಗಂಭೀರ ಸಮಸ್ಯೆಗಳಿಗೆ ಉತ್ತರ ದೊರಕಿಸಿಕೊಟ್ಟಿದ್ದಾರೆ. ಸಮಾಜ ಸುಧಾರಣೆಯಲ್ಲಿ ಒಬ್ಬ ಮೌಲ್ವಿಕ ರಾಜಕಾರಣಿಯ ಬದುಕು ಹೇಗಿರಬೇಕು ಎನ್ನುವ ಸತ್ಯವನ್ನು ಪ್ರಪಂಚಕ್ಕೆ ಹೊರಗೆಡಗಿದವರು. ಜೀವನ ಮತ್ತು ಸಿದ್ದಾಂತಗಳಿಗೆ ಹಾಗೂ ಮಾತು ಮತ್ತು ಕೃತಿಗಳಿಗೆ ಅಂತರವಿರಬಾರದು ಎಂಬ ಸತ್ಯವನ್ನು ಜಗತ್ತಿಗೆ ತನ್ನ ಜೀವನದಲ್ಲಿ ಅಳವಡಿಸಿ ತೋರಿಸಿದ ಪ್ರಾಯೋಗಿಕ ಪುರಷ. ಆಡಳಿತ ಸರ್ಕಾರದ ಪ್ರತಿನಿಧಿಯ ಮಹತ್ವವನ್ನು ಹಾಗೂ ವಿರೋಧ ಪಕ್ಷದ ಸಾರಥ್ಯದ ಮಹತ್ವವನ್ನು ಸಾರಿದ ಪ್ರಬುದ್ಧ ರಾಜಕಾರಣಿಯಾಗಿ ಗೌಡರು ಮೂಡಿಬಂದಿದ್ದಾರೆ. .ಜನತೆಯ ಶಕ್ತಿಯಾಗಿ ಜನ ಹಿತ ಕಾರ್ಯದ ಆಧ್ಯಪ್ರವರ್ತಕರಾಗಿ ಗೋಪಾಲಗೌಡರು ಉದಯಿಸಿದ ಹಲವಾರು ಘಟನೆಗಳು ಹಾಗೂ ಸಂಗತಿಗಳನ್ನು ಈ ಅಧ್ಯಾಯ ತಮ್ಮ ವಿವೇಚನೆಗೆ ನೀಡಬಲ್ಲುದು. ಎಂಬ ಸದಾಶಯವನ್ನು ಹೊಂದಲಾಗಿದೆ.

ಅಧ್ಯಾಯ – 4

ಜನರ ಕಣ್ಣಲ್ಲಿ ಗೋಪಾಲಗೌಡ

ಈ ಶತಮಾನ ಕಂಡ ಅಪರೂಪದ ಮಹಾನ್ ವ್ಯಕ್ತಿಯಾದ ಶಾಂತವೇರಿ ಗೋಪಾಲಗೌಡರ ವಿಚಾರಗಳು, ಜೀವನ ಸಿದ್ಧಾಂತಗಳು ಹಾಗು ಅವರ ಬದಕಿನ ಕ್ರಮಗಳು ಇಂದೂ, ಮುಂದೂ ಸಹ ಸಮಾಜ ಪ್ರೇರಣೆ ನೀಡುವಂತವು. ಗೌಡರ ಸಮಕಾಲೀರು, ಅವರನ್ನು ಹತ್ತಿರದಿಂದ ಬಲ್ಲವರು ಈ ವ್ಯಕ್ತಿ–ಶಕ್ತಿಯನ್ನು ನೆನಪಿಸಿಕೊಳ್ಳುವ ಮೂಲಕ ಹಲವಾರು ಅಪರೂಪದ ಸಂಗತಿಗಳನ್ನು ಮುಂದಿನ ತಲೆಮಾರಿಗೆ ನೀಡುತ್ತಾರೆ. ಅಪಮಾನಿತರು, ಶೋಷಿತರು ಮತ್ತು ದೀನದಲಿತರು ಗೌಡರನ್ನು ಅಭಿಮಾನದ ನಲೆಯಲ್ಲಿ ಆರಾಧಿಸುತ್ತಾರೆ. ನನ್ನ ದೃಷ್ಠಿಯಲ್ಲಿ ಅವರೊಬ್ಬರು ರಾಜಕೀಯ ಜೀವನದಲ್ಲಿ ಶ್ರದ್ಧಾಪೂರ್ಣ ತತ್ವನಿಷ್ಠ ಹೋರಾಟಗಾರರು. ಅವರೆಂದೂ ತಾವು ನಂಬಿದ ಧ್ಯೇಯ ಧೋರಣೆಗಳಿಂದ ವಿಮುಖರಾಗಲಿಲ್ಲ. ಆಶೆ–ಆಮಿಷಗಳಿಗೆ ಬಲಿಯಾಗಲಿಲ್ಲ. ಅವರೊಬ್ಬರು ಹುತಾತ್ಮರು ಎಂದರೂ ತಪ್ಪಾಗಲಾರದು. ರಾಜಕೀಯಕ್ಕಾಗಿ ಅವರು ತಮ್ಮ ಲೌಕಿಕವಾದವುಗಳನ್ನೆಲ್ಲಾ ಯಜ್ಞಮಾಡಿದ್ದಾರೆ....... ಕುವೆಂಪು.

ಈ ದೇಶದ ವಿದ್ಯಮಾನಗಳನ್ನು ನೋಡಿದರೆ, ತೀವ್ರ ಹತಾಶ ಸ್ಥಿತಿಯಲ್ಲೋ ನಾನು ಮುಳುಗಿಹೋಗಿಬಿಡುತ್ತೇವೆ. ಆದರೆ ಕರ್ನಾಟಕದ ಗೋಪಾಲ ಮತ್ತು ಬಂಗಾಳದ (ಹೆಸರು ನೆನಪಾಗುತ್ತಿಲ್ಲ) ಇವರುಗಳನ್ನು ನೋಡಿದರೆ, ಮತ್ತೆ ನನ್ನೆಲ್ಲಾ ಚೈತನ್ಯ ಬಂದಂತಾಗುತ್ತದೆ' ಎನ್ನುವುದಾಗಿ ಲೋಹಿಯಾ ಉತ್ತರ ಭಾರತದ ಒಂದು ಸಭೆಯಲ್ಲಿ ಮಾತಾಡಿದ್ದರು – ಕೆ.ಎಂ. ಶಂಕರಪ್ಪ. (ಜನರ ಕಣ್ಣಲ್ಲಿ ಗೋಪಾಲಗೌಡ ಲೇಖನ–174)

ಗೌಡರ ಹತ್ತು ಸಭೆಗಳಲ್ಲಿ ನಾವು ಭಾಗವಹಿಸಿದರೆ ಅಲ್ಲೆಲ್ಲಾ ಬೇರೆ ಬೇರೆ ವಿಷಯಗಳನ್ನು ಕುರಿತು ಮಾತನಾಡುವ ವಿದ್ವತ್ತು ಅವರಲ್ಲಿತ್ತು. ಭೂಸುಧಾರಣೆಯ ಬಗ್ಗೆ ಖಚಿತವಾಗಿ ಮಾತನಾಡುತ್ತಿದ್ದರು. ಹೆಚ್ಚಿನದಾಗಿ ಗೇಣಿದಾರರ ಸಮಸ್ಯೆಗಳನ್ನು ತೆಗೆದುಕೊಂಡು ಅವರದೇ ಮಾತುಗಳ ಮೂಲಕ ಸೂಕ್ಷ್ಮವಾಗಿ ವಿವರಿಸುತ್ತಿದ್ದರು – ಮುಡುಬಾಗಿಲು ರಾಮಪ್ಪ.

ಗೌಡರ ಭಾಷಣ ಶಾಸನ ಸಭೆಯಲ್ಲಿ ಇದೆ ಎಂದರೆ ಆಳುವ ಮತ್ತು ವಿರೋಧ ಪಕ್ಷದ ಸದಸ್ಯರಿಗೆ ಹಬ್ಬ, ಸದನದ ಸದಸ್ಯರು ಅವರ ಭಾಷಣವನ್ನು ತದೇಕ ಚಿತ್ತದಿಂದ ಆಲಿಸುತ್ತಿದ್ದರು. ಗೌಡರ ಭಾಷಣ ಆದಮೇಲೆ ತತ್‌ಕ್ಷಣದಲ್ಲಿಯೇ ಶಾಸನ ಸಭೆಯ ಕುರ್ಚಿಗಳೆಲ್ಲಾ ಖಾಲಿಯಾಗಿ ಬಿಡುತ್ತಿದ್ದವು. ಸಭಾಧ್ಯಕ್ಷರಾದ ಶ್ರೀ ವೈಕುಂಠ ಬಾಳಿಗರೇ ನನ್ನ ಹತ್ತಿರ ಹೇಳಿದ ಒಂದು ಮಾತು ನೆನಪಿಗೆ ಬರುತ್ತದೆ. ಸಭೆಯಲ್ಲಿ ಕೋರಂ ಬೇಕು ಎಂದಾಗ ಗೌಡರ ಭಾಷಣವಿದೆಯೆಂದು ಹೇಳಿದರೆ ಸಾಕು ಕೋರಂ ಇರುತ್ತದೆ – ಎಸ್ ಬಂಗಾರಪ್ಪ.

ಇಂಗ್ಲೆಂಡಿನ ಪಾರ್ಲಿಮೆಂಟಿಗೆ ಎಡ್ಮಂಡ್ ಬರ್ಕ್ ಎಂತೋ ಅಂತೆಯೇ ಕರ್ನಾಟಕದ ಶಾಸನ ಸಭೆಗೆ ಗೋಪಾಲಗೌಡ. ಶಾಂತವೇರಿ ಗೋಪಾಲಗೌಡರು ಸರಳ ಜೀವಿ, ವಾಗ್ಮಿ, ಆದರ್ಶ ಶಾಸಕ, ಚಿಂತನಶೀಲ ವ್ಯಕ್ತಿ, ಬಡವರ ಮೇಲೆ ಅವರಿಗಿದ್ದ ಅನುಕಂಪವನ್ನು ಇನ್ನಾವ ರಾಜಕಾರಣಿಯಲ್ಲೂ ನಾನು ಕಾಣಲಿಲ್ಲ. ಈ ಬಡಜನತೆಯ ಉದ್ಧಾರಕ್ಕೆ ಸಮಾಜವಾದ ತಾರಕ ಮಂತ್ರವೆಂದು ನಂಬಿದ್ದರು – ಡಿ. ದೇವರಾಜು ಅರಸು (ಶಾಂತವೇರಿ ಗೋಪಾಲಗೌಡ ನೆನಪಿನ ಸಂಪುಟ 180–181).

ನನಗೆ ರಾಜಕೀಯ ಕ್ಷೇತ್ರದಲ್ಲಿ ಪರಿಚಿತರಾದವರಲ್ಲಿ ಶಾಂತವೇರಿ ಗೋಪಾಲಗೌಡರು ವಿಶಿಷ್ಟ ವ್ಯಕ್ತಿ, ಸಮಾಜ ಹಿತದ ಬೆಳವಣಿಗೆಯ ವಿಷಯಗಳಲ್ಲಿ ಅವರಿಗೆ ಅಚಲ ನಂಬಿಕೆ. ಉತ್ತಮ ಭವಿಷ್ಯದ ಕನಸುಗಳು, ಗುರಿ, ನಿಷ್ಠೆ ಅವರ ಜೀವನದ ಅಡಿಪಾಯಗಳು. ನಿಷ್ಠಾವಂತ, ನಿರ್ಗರ್ವಿ, ಸತ್ಯವಂತ, ಸರಳಸ್ವಭಾವದವ. ಮಹಾಮೇದಾವಿ. ಗೋಪಾಲಗೌಡರು ನನ್ನ ದೃಷ್ಠಿಯಲ್ಲಿ ಚೊಕ್ಕ ಚಿನ್ನ. ನಮ್ಮ ಜೀವಿತದ ಅವಧಿಯಲ್ಲಿ ಇಂತವರನ್ನು ಮತ್ತು ಕಾಣಲಾರೆನೆಂದೇ ನನ್ನ ಭಾವನೆ – ಬಿ. ಬಸವಲಿಂಗಪ್ಪ.

ಕಪಟ, ಸುಳ್ಳು–ಮೋಸ, ತಿಳಿಯದ ಜೀವ ಅದು. ಮನುಷ್ಯ ಚೊಕ್ಕ ಚಿಕ್ಕ, ನಮ್ಮ ಸಮಾಜದ ದೌರ್ಬಲ್ಯಗಳಾದ ಅಸ್ಪೃಶ್ಯತೆ, ಜಾತೀಯತೆ ಮತ್ತು ಅಂಧಶ್ರದ್ಧೆಗಳನ್ನು ಕಂಡು ಮಮ್ಮಲ ಮರುಗಿದ ಅಂತಃಕರಣ – ಎನ್.ಡಿ. ವೆಂಕಟೇಶ.

"ಎಲ್ಲಿ ರೈತರಿಗೆ ಕಿರುಕುಳ, ಕಾರ್ಮಿಕರಿಗೆ ತೊಂದರೆ, ವಿದ್ಯಾರ್ಥಿಗಳಿಗೆ ಆತಂಕ ಎಂದರೆ ಅಲ್ಲಿ ಗೌಡರು ಹಾಜರ್. ಅವರು ಹಿಂದೆ ನಿಂತು ಬೆಂಕಿ ಹಚ್ಚುವ ಮುಂದಾಳುಗಳಾಗಿರಲಿಲ್ಲ. ತಾವೇ ಮುಂದೆ ನಿಂತು ವಿರೋಧವನ್ನು ಎದುರಿಸುವ ಧೀಮಂತರು' – ಬಿ.ಎಸ್ ಗುಂಡೂರಾವ್.

ಗೌಡರು ಸದಾ ತಮ್ಮನ್ನು ತಾವು ಎಚ್ಚರದಲ್ಲಿರಿಸಿಕೊಂಡು ಎಂದಿಗೂ ತಮ್ಮ ಸಿದ್ದಾಂತ ಮತ್ತು ಧ್ಯೇಯಗಳಿಗೆ ಭಂಗ ಉಂಟಾಗದಂತೆ ನಡೆದುಕೊಂಡವರು. ಜಾತಿ, ಭಾಷೆ, ಆಸ್ತಿ ಈ ಮೂರು ಅಂಶಗಳಲ್ಲಿ ಯಾವುದೇ ಎರಡೂ ಒಬ್ಬ ಮನುಷ್ಯನಲ್ಲಿದ್ದರೂ ಸಾಕು ಶೋಷಣೆ ಸಾಧ್ಯವಾಗುತ್ತದೆ. ಎಂದೆನ್ನುವ ಲೋಹಿಯಾ ರವರ ಮಾತು ಗೌಡರನ್ನು ಸದಾ ಎಚ್ಚರಿಸುತ್ತಿತ್ತು. ತಾವು ತಿಳಿದಕೊಂಡ ಅತ್ಯಂತ ಕಠಿಣ ವಿಚಾರಗಳನ್ನೂ ಸಹ ಜನಸಾಮಾನ್ಯರ ಭಾಷೆಯ ಮೂಲಕವೇ ತಿಳಿಸಬೇಕೆಂದು ಗೌಡರು ಸಾಧ್ಯವಾದಷ್ಟು ಯತ್ನಿಸಿ ಯಶಸ್ವಿಯಾಗಿದ್ದರು. ಹಳ್ಳಿಗರ ಮಾತಿನ ಧಾಟಿಯ ಸೊಗಡು ಆವಿಯಾಗದಂತೆ ಹಾಸ್ಯ, ಗಾದೆಗಳಲ್ಲಿ ಹಿಡಿದಿಡುತ್ತಿದ್ದ ವಿಶಿಷ್ಟಗತ್ತು ಅವರ ಭಾಷೆಗಿತ್ತು. ವಿಶಾಲ ಕರ್ನಾಟಕದ ಭಾವ, ಕನ್ನಡ ಆಡಳಿತ ಭಾಷೆಯಾಗಬೇಕೆಂಬ ಮನೋದಿಚ್ಛೆ, ಅವರ ಭಾಷಣಗಳಲ್ಲಿ ವ್ಯಕ್ತವಾಗಿರುವುದನ್ನು ನಾವು ಗಮನಿಸಬಹುದಾಗಿದೆ. ಅವರ ಭಾಷಣಗಳು ದೀರ್ಘವಾಗಿದ್ದು ಕೆಲವೊಮ್ಮೆ ಪುನರಾವರ್ತನೆಗಳು ಆಗುತ್ತಿತ್ತು.

ಹೇಳಬೇಕೆನ್ನುವ ವಿಷಯವನ್ನು ಹೇಳಿಯೇ, ಮುಗಿಸುತ್ತಿದ್ದರು. ತಾವು ಓದಿ ತಿಳಿದುಕೊಂಡಿದ್ದ ಮಾರ್ಕ್ಸ್, ಗಾಂಧಿ, ರಸೆಲ್, ಲೋಹಿಯಾ ಮುಂತಾದವರ ವಿಚಾರಗಳನ್ನು ದೊಡ್ಡ ದೊಡ್ಡ ಕ್ಲಿಷ್ಟ ಪದಗಳಲ್ಲಿ ವಿವರಿಸದೇ ಸರಳವಾಗಿ ಪ್ರತಿಯೊಂದನ್ನು ಬಿಡಿಸಿ ಹೇಳುತ್ತಿದ್ದುದರಿಂದಲೋ ಏನೋ ಅವರ ಭಾಷಣಗಳು ಯಾವಾಗಲೂ ದೀರ್ಘವಾಗಿಯೇ ಇರುತ್ತಿತ್ತು. ಗೌಡರು ಜಾತಿಯ ವ್ಯವಸ್ಥೆಯ ಘೋರ ಅಪಾಯಗಳನ್ನು ಗ್ರಹಿಸಿ ಅದರಿಂದ ಹೊರಬರಲು ಪ್ರಯತ್ನಿಸಿದ್ದರು. ಈ ಬಗ್ಗೆ ತಮ್ಮ ಭಾಷಣಗಳಲ್ಲಿ ಹಾಗೂ ಶಿವಮೊಗ್ಗದಲ್ಲಿ ವಿದ್ಯಾರ್ಥಿಯಾಗಿದ್ದಲೇ ಹಲವು ವಿಧಗಳಲ್ಲಿ ಪ್ರಯತ್ನಿಸಿದ್ದುಂಟು. ಹರಿಜನರನ್ನು ಆಂಜನೇಯ ದೇವಾಲಯ ಪ್ರವೇಶ ಮಾಡಿಸಬೇಕೆಂದು ಅವರನ್ನು ಸಂಘಟಿಸಿ, ದೇವಾಲಯದ ಟ್ರಸ್ಟಿಗಳ ವಿರೋಧವನ್ನು ಎದುರಿಸಿದರು. ಆದರೂ ಹಠ ಬಿಡದೇ ಪ್ರಯತ್ನಿಸಿದಾಗ ಪೋಲಿಸರು ಲಾಠಿ ಚಾರ್ಜ್ ಮಾಡಿದರು. ಅಸ್ಪೃಶ್ಯತೆ, ಹರಿಜನರ ತಿರಸ್ಕಾರದ ಬಗ್ಗೆ ಗೌಡರಲ್ಲಿ ಅಸಮಾಧಾನ ಕುದಿಯುತ್ತಿತ್ತು. ಸಮಾಜದಲ್ಲಿ ಅಪಮಾನಿತರಿಗೆ ನ್ಯಾಯದೊರಕಿಸಿಕೊಡಲು ತಮ್ಮೆಲ್ಲಾ ಪ್ರಯತ್ನಗಳನ್ನು ಪ್ರಾಮಾಣಿಕವಾಗಿ ಮಾಡಿದರು. ಇಂದಿಗೂ ಕೂಡ ಗೌಡರನ್ನು ಅತ್ಯಂತ ಪೂಜ್ಯ ಭಾವನೆಯಿಂದ ಆರಾಧಿಸುವ ಈ ಜನರ ಮಾತುಗಳೇ ಗೌಡರ ಅಂತಃಸತ್ವಕ್ಕೆ ಸಾಕ್ಷಿಯಾಗಿ ನಿಲ್ಲುತ್ತದೆ.

ಗೌಡರು ಊರಿಗೆ ಬಂದಾಗ ಹೆಚ್ಚಾಗಿ ಉಳಿದುಕೊಳ್ಳುತ್ತಿದ್ದುದು ಬ್ರಾಹ್ಮಣರ ಮನೆಯಲ್ಲಿ. ಬಡರೈತರ, ಹರಿಜನರ ಎಷ್ಟೋ ಮನೆಗಳಲ್ಲಿ ಅವರು ಪ್ರೀತಿಯಿಂದ ನೀಡಿದ ಊಟವನ್ನು ಮಾಡಿದ್ದಾರೆ. ಅವರು ಕೊಟ್ಟ ಟೀಯನ್ನು ಕುಡಿಯುತ್ತಿದ್ದರು. ಯು.ಆರ್. ಅನಂತಮೂರ್ತಿಯವರು ಹೇಳುವಂತೆ 'ಬ್ರಾಹ್ಮಣ ಶೂದ್ರ ಎಲ್ಲಾ ಜಾತೀಯ ಬಡವರ ನಾಯಕ ಗೋಪಾಲಗೌಡರಾಗಲು ಕಾರಣ ಇವರಿಗಿರುವ ವ್ಯಕ್ತಿ ದೂರವಾದ ಐತಿಹಾಸಿಕ ದೃಷ್ಟಿ' ಕಾರಣ, ಯಾವುದೇ ದುಷ್ಕೃತ್ಯಗಳು, ನ್ಯಾಯಪರವಲ್ಲದ, ವಿಚಾರಗಳನ್ನು ಕಂಡಾಗ ಮುಖಕ್ಕೆ ರಾಚುವಂತೆ ಮಾತನಾಡುವ ವೈಖರಿ ಅವರದು. ಅಪಾಯಕಾರಿ ಬೆಳವಣಿಗೆಗಳನ್ನು ಕಂಡಾಗ ಓಟು ಪಡೆಯುವ ಏಕ ಮಾತ್ರ ಉದ್ದೇಶಕ್ಕಾಗಿ ಕ್ಷುಲ್ಲಕ ರಾಜಕೀಯ ಮಾಡುವುದು ಅವರ ಜೀವಮಾನದಲ್ಲಿ ಇರಲಿಲ್ಲ. ಸತ್ಯ ಹೇಳಿ ಜನರಿಗೆ ಅಪ್ರಿಯನಾಗುವ ತಾಕತ್ತಿಲ್ಲದವನ್ನು ರಾಜಕೀಯ ನಾಯಕನಾಗಲು ಅರ್ಹನಲ್ಲ ಎಂಬುದು ಅವರ ಅಭಿಮತವಾಗಿತ್ತು. ಹೀಗಾಗಿ ಹಳ್ಳಿಯ ಜನ ಗೌಡರನ್ನು ತಾಕತ್ತಿನ ಮನುಷ್ಯ ಎಂದು ಇಂದಿಗೂ ನೆನಪಿಸಿಕೊಳ್ಳುತ್ತಾರೆ. ಕೆಲವು ವರ್ಷಗಳ ಹಿಂದೆ ಹಿಂದೂ–ಮುಸ್ಲಿಮರಲ್ಲಿ ಘರ್ಷಣೆಯೊಂದು ಚಿಕ್ಕಮಗಳೂರು ಜಿಲ್ಲೆಯಲ್ಲಿ ನಡೆಯಿತು. ಮುಸ್ಲಿಂ ಕುಟುಂಬದ ಸದಸ್ಯರಿದ್ದ ಕಾರೊಂದಕ್ಕೆ ಬೆಂಕಿಹಚ್ಚಿ ಸುಟ್ಟಾಗ ರಾಜಕೀಯನಾಯಕರುಗಳು ತಾವು ಆ ಸ್ಥಳಕ್ಕೆ ಭೇಟಿನೀಡದೆ ಇದ್ದಲ್ಲಿಂದಲೇ ಕೋಮು ಸೌಹಾರ್ಧದ ಕರೆಯನ್ನು ನೀಡುತ್ತಿದ್ದರು. ಈ ಸಂದರ್ಭದಲ್ಲಿ ಗೌಡರು ಅಪಾಯವನ್ನು ಲೆಕ್ಕಿಸದೆ ಆ ಸ್ಥಳಕ್ಕೆ ಹೋಗಿ ಹಿಂದೂಗಳು ಮಾಡಿದ ದೌರ್ಜನ್ಯವನ್ನು ಖಂಡಿಸಿದರು. ಆಪ್ತರು, ವಿದ್ಯಾರ್ಥಿಗಳಿಗೆ ಸೀಟು, ನೌಕರರಿಗೆ ವರ್ಗಾವಣೆ ಮುಂತಾದ ಕೆಲಸ

ಮಾಡಿಸಿಕೊಡಿ ಎಂದು ಇವರ ಬಳಿಬಂದಾಗಲೆಲ್ಲಾ ನಿಷ್ಠುರವಾಗಿ ಗೌಡರು ಶಾಸಕನಿಗೆ ಇದಕ್ಕಿಂತ ಗಂಬೀರವಾದ ಜವಾಬ್ದಾರಿಗಳಿವೆ ಎಂದು ಹೇಳುತ್ತಿದ್ದರು. ಶಾಸನ ಸಭೆಯ ಒಳಗೂ ಹೊರಗೂ ಸಾಮಾನ್ಯ ಬಡತನ, ಕಷ್ಟಕಾರ್ಪಣ್ಯ ಅಜ್ಞಾನದಿಂದಾಗುವ ಶೋಷಣೆ ಬಗ್ಗೆ ನಿರಂತರ ಸಮರ ಸಾರಿದ್ದಲ್ಲದೇ ರಾಜಧನ ರದ್ಧತಿ, ಭೂಸುಧಾರಣೆ, ನಿಮ್ನ ವರ್ಗದವರಿಗೆ ನ್ಯಾಯ, ಕರ್ನಾಟಕದ ಏಕೀಕರಣ, ಶಿಕ್ಷಣ ಪದ್ಧತಿಯ ಬದಲಾವಣೆ ಮೂಲಕ ಜನಪದ ನಿಲುವುಗಳನ್ನು ಬೆಂಬಲಿಸಿದ್ದಾರೆ. ಸಾಮಾಜಿಕ ಅನಿಷ್ಠ ಇತ್ಯಾದಿಗಳ ನಿರ್ಮೂಲನಕ್ಕಾಗಿ ಹೋರಾಟ ನಡೆಸಿದರು.

ಇತಿಹಾಸದ ಕಾಲಗರ್ಭದಲ್ಲಿ ಮೆರೆದ ಮಲೆನಾಡು ಕ್ರಮೇಣ ಮಂದವಾಗುತ್ತಾ ಬಂದಿತ್ತು. ಈ ಸಂದರ್ಭದಲ್ಲಿ ಗೌಡರ ರಾಜಕೀಯ ಪ್ರವೇಶ ಮಲೆನಾಡಿನ ಜನ ಜೀವನದಲ್ಲಿ ಹೊಸ ಚಾಲನೆಗೆ ಕಾರಣೀಭೂತವಾಯಿತು. ಅದುವರೆಗೂ ಮಂದಮಾರುತದ ಮಂಪರಿನಲ್ಲಿದ್ದ ಮಲೆನಾಡಿನ ಜನಜೀವನದಲ್ಲಿ ಗೌಡರ ಬೆರಗುಗೊಳಿಸುವ ಅಮೃತ ಭಾಷಣಗಳಿಂದ ಜನಜಾಗೃತಿಯ ಪ್ರಚಂಡ ಜ್ವಾಲಾ ಮುಖಿಯಾಗಿ ಸ್ಫೋಟಗೊಂಡಿತು. ಅಂದಿನಿಂದ ಇಂದಿನವರೆಗೂ ಮಲೆನಾಡಿನ ಜನ ರಾಜಕೀಯ ಪ್ರಜ್ಞಾವಂತರು ಎನಿಸಿಕೊಂಡಿದ್ದಾರೆ ಅದಕ್ಕೆ ಕಾರಣಕರ್ತರಾದವರು ಈ ಗೋಪಾಲಗೌಡರೆಂದರೆ ಅತಿಶಯೋಕ್ತಿ ಆಗಲಾರದು.

ಅಪ್ಪಟ ಕನ್ನಡ ಪ್ರೇಮಿಯಾದ ಗೌಡರಿಗೆ ಮಾತೃಭಾಷೆಯ ಬಗ್ಗೆ ಅಪಾರವಾದ ಅಭಿಮಾನವಿತ್ತು. ಕರ್ನಾಟಕವಾದಿಯಾಗಿ ಕೆ.ಆರ್. ಕಾರಂತರ ಬಲಗೈಯಾಗಿ ದುಡಿದರು. ಕನ್ನಡ ಭಾಷಾ ಪ್ರೇಮಿಯಾಗಿ, ಶಾಸನ ಸಭೆಯಲ್ಲಿ ಕನ್ನಡಿಗರೇ ರಾಜ್ಯಪಾಲರಾಗಿ ಕನ್ನಡದಲ್ಲಿಯೇ ಭಾಷಣ ಮಾಡಲಿ ಎಂದವರು ಹಾಗೆ ಕನ್ನಡ ಭಾಷೆಯಲ್ಲಿ ಭಾಷಣ ಮಾಡಿದಿದ್ದಾಗ ರಾಜ್ಯಪಾಲರ ಭಾಷಣದ ಪ್ರತಿಯನ್ನು ಹರಿದುಹಾಕಿ ಕಾಲಿನಿಂದ ತುಳಿದು ಆಕ್ರೋಶ ವ್ಯಕ್ತಪಡಿಸಿದ ಕನ್ನಡ ಪ್ರೇಮಿ.

ಒಮ್ಮೆ ಗೌಡರನ್ನು ಆಡಳಿತ ಪಕ್ಷದವರು ತಮ್ಮ ಪಕ್ಷಕ್ಕೆ ಬರುವಂತೆ ಕೇಳಿಕೊಂಡರು. ಅದಕ್ಕೆ ಅವರು ನಾನು ಕೈ ಎತ್ತೋ ಗುಂಪಿನವನಲ್ಲ. ನೀವೆಲ್ಲ ನಮ್ಮ ಪಕ್ಷಕ್ಕೆ ಬಂದ್ರೆ ನಮ್ಮ ಸಂಘಟನೆ ಬಲ ಪಡಿಸಬಹುದು. ಹೆಸರಿಗೆ ನೂರು ಕೈ ಎತ್ತುವ ಬದಲು ನನ್ನ ಒಂಟಿ ಧ್ವನಿ ನಾಡಿಗೆಲ್ಲಾ ಕೇಳಿಸುತ್ತದೆ. ರಾಜ್ಯಾಂಗವನ್ನು ರೂಪಿಸುವ ಶಾಸನ ಸಭೆಯಲ್ಲಿ ವ್ಯಕ್ತಿಗಿಂತಲೂ, ನಾನು ವ್ಯಕ್ತಿತ್ವವನ್ನು ಗೌರವಿಸುತ್ತೇನೆ. ಎಂದು ತಮ್ಮ ವೀರ ರಾಜಕೀಯ ಧುರೀಣತೆಯನ್ನು ತಿಳಿಸಿಕೊಟ್ಟರಂತೆ.

ಗೌಡರ ದೂರದೃಷ್ಠಿಯ ಪ್ರಜ್ಞೆಯನ್ನು ಅವರ ಮಾತಿನಲ್ಲಿ ಗಮನಿಸ ಬಹುದು. ಒಂದು ದಿನ ಗೌಡರು ತಮ್ಮ ಹೃದಯದ ಕಳಕಳಿಯನ್ನು ಶೇಷಪ್ಪ ಹೆಗ್ಡೆಯವರ ಹತ್ತಿರ "ನೋಡಪ್ಪ ಹೆಗ್ಡೆ–ಈಗ ನಮ್ಮಲ್ಲಿ ಜಿಲ್ಲೆ, ತಾಲ್ಲೂಕ್, ಹಳ್ಳಿಗಳಲ್ಲಿ ಹತ್ತಿಪ್ಪತ್ತು ಮಂದಿ ಪ್ರಾಮಾಣಿಕ ರಾಜಕೀಯದವರು ಇದ್ದೀವಿ. ಮುಂದೆ ಹತ್ತು–ಹದಿನೈದು ವರ್ಷದ ನಂತರ ಇವರೆಲ್ಲಾ ಗಾಳೀಲಿ ತೂರಿಹೋಗುತ್ತಾರೆ. ಅವಿದ್ಯಾವಂತ ಜನರನ್ನು ಸ್ವಾರ್ಥಿಗಳು ಸುಲಿಯುತ್ತಾರೆ, ಹೆಂಡ–

ಹಣದ ಹೊಳೆ ಹರಿಸ್ತಾರೆ, ತತ್ವಬಿಟ್ಟು, ಬಣ್ಣದ ವೇಷ ಹಾಕ್ಕೊಂಡು, ದೊಡ್ಡ ದೊಡ್ಡ ಬಂಗ್ಲೇಲಿ ಮೆರೆಯೋಕೆ ಮುಂದಿನ ಜನಾಂಗದಲ್ಲಿ ರಾಷ್ಟ್ರದ ಬಹುದೊಡ್ಡ ನಾಯಕರುಗಳಾಗುತ್ತಾರೆ. ಎಂದು ತೋಡಿಕೊಂಡಿದ್ದಾರಂತೆ.

ಗೌಡರು ರೈತ ಮುಖಿಯಾಗಲು ಕಾರಣವಾದ ಘಟನೆಯೊಂದನ್ನು ಅವರ ರಾಜಕೀಯ ಮಾರ್ಗದರ್ಶಕರಾದ ಡಾ. ಟಿ. ವಿಶ್ವನಾಥರವರು ನೆನಪಿಸಿಕೊಳ್ಳುತ್ತಾರೆ. ಆರಗದಲ್ಲಿ ನಡೆದ, ಬಡ ರೈತನೊಬ್ಬನ ಹೋರಾಟ ನಮ್ಮ ಮನಸ್ಸಿನ ಮೇಲೆ ವಿಶೇಷ ಪ್ರಭಾವವನ್ನು ಬೀರಿದ್ದಿತು. ಗೇಣಿದಾರ ರೈತ, ಆತನ ಗದ್ದೆಯ ಮೇಲಿನ ಗದ್ದೆಯವನು ಒಬ್ಬ ಮುಡಿ ಸಾಹುಕಾರ. ತನ್ನ ಗದ್ದೆಯಿಂದ ಕೆಳಗಿನ ಗದ್ದೆಗೆ ಸಾರಾಗವಾಗಿ ನೀರು ಬಿಡುತ್ತಿರಲಿಲ್ಲ. ಪರಿಣಾಮವಾಗಿ ಹಿಂದಿನ ಸಾರಿ ಗೇಣಿದಾರ ರೈತನ ಗದ್ದೆಯಲ್ಲಿ ಜಳ್ಳು ಭತ್ತವೇ ಹೆಚ್ಚಾಗಿ ಗೇಣಿಕೊಡಲು ಕಷ್ಟವಾಗಿ ಆತ ಸಾಲಗಾರನಾಗಿದ್ದ. ಈ ಸಾರಿ ಬಡರೈತ ನಿರ್ದಾರಮಾಡಿದ್ದ. ಸಾಹುಕಾರ ಬಡವನ ನಡುವಿನ ಹೋರಾಟ, ಬಡವ ತನ್ನ ಮಕ್ಕಳು ಮರಿಗಳ ಬದುಕಿಗಾಗಿ, ಸಾಹುಕಾರ ತನ್ನ ಜಮೀನು ವಿಸ್ತರಣೆಗಾಗಿ, ಮುಡಿ ಸಾಹುಕಾರ ತನ್ನ ಗದ್ದೆಗೆ ನೀರು ಬಿಡದಿದ್ದಾಗ ಬಡರೈತ ದೊಣ್ಣೆಯನ್ನೇ ಎತ್ತಿಕೊಂಡು ಸಾಹುಕಾರನ ಎಡತೊಡೆಗೆ ಸರಿಯಾಗಿ ಪೆಟ್ಟುಕೊಟ್ಟಿದ್ದ. ಮೇಲೆ ಮೇಲೆ ಏಟುಗಳು ಬಿದ್ದೊಡನೆಯೇ ತತ್ತರಿಸಿದ ಮುಡಿ ಜಮೀನ್ದಾರ ಊರಕಡೆ ಓಟಕಿತ್ತ. ಅವನನ್ನು ಅನುಸರಿಸಿದ ದಂಡಧಾರಿಯಾಗಿ ಬಡರೈತ. ಊರಿಗೇ ಸುದ್ದಿಯಾಯಿತು ಈ ಹೊಡೆದಾಟ.

ಸೋಜಿಗವೆಂಬಂತೆ ಆ ಬಡರೈತ ನೇರವಾಗಿ ನನ್ನ ವೈದ್ಯ ಶಾಲೆಗೆ ಬಂದುಬಿಟ್ಟ. ಅವನು ಬಂದಾಗ ಅಲ್ಲಿಯೇ ಕುರ್ಚಿಯಲ್ಲಿ ಗೋಪಾಲಗೌಡರು ಕುಳಿತಿದ್ದರು. ಮೊದಲು ಇದೇನು ಪೇಚು ಎನ್ನಿಸಿಬಿಟ್ಟಿತು. ಹಳ್ಳಿಯಲ್ಲಿ ಲೆಕ್ಕಕ್ಕೇ ಬಾರದಷ್ಟು ಆರ್ಥಿಕ ದುಸ್ಥಿತಿಯಲ್ಲಿದ್ದವರು ನಾವು. ಏನೋ ನಾವಿಬ್ಬರು ಕಲೆತಾಗ, ಜಮೀನ್ದಾರೀ ಪದ್ಧತಿ, ಶೋಷಣೆ, ರೈತರ ಉದ್ದಾರ ಸುಧಾರಣೆ ಮುಂತಾದವುಗಳ ಬಗ್ಗೆ ಮಾತುಗಳನ್ನು ಆಡಿಕೊಳ್ಳುತ್ತಿದ್ದುದು ನಿಜ. ಆದರೆ ಹೀಗೆ ರೈತ ಜಮೀನುದಾರರ ಹೊಡೆದಾಟದ ಸಮಸ್ಯೆಯೇ ಮೈಮೇಲೆ ಬಂದಾಗ, ಸಹಜವಾಗಿಯೇ ನಮಗೆ ಅಳುಕು. ಆದರೆ ಆ ಬಡರೈತನ ಒತ್ತಾಯಕ್ಕೆ ಮಣಿದು ಇಬ್ಬರೂ ಹೋಗಿ. ಅವನ ಗದ್ದೆ, ನೀರಿನ ಕಾಲುವೆ, ಹೊಡೆದಾಡಿದ ಸ್ಥಳ, ಮಾಡಿದ ಸಾಲ, ಉಳಿಕೆ, ಗಳಿಕೆಗಳನ್ನೆಲ್ಲಾ ತಿಳಿದುಕೊಂಡೆವು. ಇದೇ ರೈತರ ಸಮಸ್ಯೆಯ ಅರಿವಿಗೆ ನಾಂದಿಯಾಯಿತು. ಈ ಪ್ರಕರಣ ನಮಗೆ ಮುಂದೆ ರೈತರ ಸಮಸ್ಯೆಗಳನ್ನು ಸಮಗ್ರವಾಗಿ ಅರಿತುಕೊಳ್ಳಲು ಪ್ರಚೋದಿಸಿತು. ರೈತರ ಸಮಸ್ಯೆಗಳಿಗೆಲ್ಲ ಆತನು ಉಳುತ್ತಿದ್ದ "ಭೂಮಿಯು" ಆಧಾರಿತವಾದವು. ಆದರೆ ಆತ ಉಳುತ್ತಿದ್ದ ಭೂಮಿಯ ಒಡೆಯ ಅವನಲ್ಲ.

ಇದೇ ಸಂದರ್ಭದಲ್ಲಿ ವಿದೇಶಿ ಸಮಾಜವಾದಿ ಬರೆದ "ಸೋಷಿಯಲಿಸಮ್ ಇನ್ ಎ ಟೆಸ್ಟ್‌ಟ್ಯೂಬ್" ಪುಸ್ತಕವನ್ನು ವಿಶ್ವನಾಥ್ ಮತ್ತು ಗೌಡರು ಇಬ್ಬರು ಓದಿದ್ದರು. ಹಾಗೆಯೇ ತರುಣರ ಆರಾಧ್ಯ ದೈವವಾಗಿದ್ದ

ಜಯಪ್ರಕಾಶ ನಾರಾಯಣರ 'ಸಾಮ್ಯವಾದವೇ ಏಕೆ?' ಎಂಬ ಪುಸ್ತಕಗಳು ಗೌಡರಲ್ಲಿ ಸಮಾಜವಾದದ ತಾತ್ವಿಕನೆಲೆ ಹಾಗೂ ಅದರ ಮೂಲ ಸೂತ್ರಗಳ ಅರಿವನ್ನು ಉಂಟುಮಾಡಿತು. ಜ್ಞಾನದ ಜೊತೆಗೆ ತಮ್ಮ ಕಣ್ಣೆದುರನಲ್ಲೇ ನಡೆಯುತ್ತಿದ್ದ ಸಾಮಾಜಿಕ ಅಸಮತೋಲನ ರೈತ-ಒಡೆಯರ ನಡುವಿನ ಅಂತರ ಇವು ಜನರ ಒಡನಾಡಿಯಾಗಿ ಹಾಗೂ ದೀನದಲಿತರ, ಅಶಕ್ತರ ಧ್ವನಿಯಾಗಿ ನೆಲೆ ನಿಲ್ಲಲು ಗೌಡರಿಗೆ ಮುಖ್ಯ ಭೂಮಿಕೆಯನ್ನು ಒದಗಿಸಿತು.

ಗಾಂಧೀಜಿಯವರ ಫೋಟೋ ಕಾಣದಂಥ ಅನೇಕ ಮನೆಗಳಲ್ಲಿ ಗೌಡರ ಫೋಟೋ ಇದೆ. ಕೆಲವರು ಕುಂಕುಮ ಹಚ್ಚಿ, ಹೂಧರಿಸಿ ಪೂಜೆಯನ್ನು ಮಾಡುತ್ತಾರೆ. ಕೆಲವರು ಇಂದಿಗೂ ಗೌಡರನ್ನು ಒಬ್ಬ ಅವಧೂತ ಎಂದೇ ನಂಬಿಕೊಂಡಿದ್ದಾರೆ.

'ನಮ್ಮ ಜಾತೀಲಿ ಹುಟ್ಟಬಾರದಿತ್ತು ಮಾರಾಯ' ಎಂದು ಗೌಡರ ಬಗ್ಗೆ ಹೆಮ್ಮೆಪಟ್ಟುಕೊಳ್ಳುವ ಒಕ್ಕಲಿಗರು, 'ಆತ ನಮ್ಮ ಮನೆಯಲ್ಲಿರುತ್ತಿದ್ದು ನಮ್ಮ ಮನೆಯವನೇ ಆಗಿದ್ದ' ಎನ್ನುವ ಬ್ರಾಹ್ಮಣರು, 'ಅಂಥ ಮನುಷ್ಯ ಇನ್ನು ಹುಟ್ಟೋಲ್ರಿ' ಎಂದು ಗತ್ತಿನಿಂದ ಬೀಗುವ ಶ್ರೀಮಂತರು; 'ಗೌಡರು ನಮ್ಮ ಪಕ್ಷಪಾತಿಯಾಗಿದ್ದರು, ನಮಗಾಗಿ ಹೋರಾಟ ನಡೆಸುತ್ತಿದ್ದರು' ಎನ್ನುವ ಬಡವರು, 'ಆತ ಯಾವ ಪಕ್ಷದಲ್ಲೇ ಇರಲಿ, ನಾವು ಯಾವ ಪಕ್ಷದಲ್ಲೇ ಇರಲಿ, ಒಳ್ಳೆಯ ಸ್ನೇಹಿತನಾಗಿದ್ದ, ರಾಜಕಾರಣಿಯಾಗಿದ್ದ' ಎನ್ನುವ ವಿವಿಧ ಪಕ್ಷಗಳ ನಾಯಕರು, ಸಾಮಾನ್ಯವಾಗಿ ಸಮಾಜದ ವಿವಿಧ ವರ್ಗದ ಜಾತಿಯ, ವೃತ್ತಿಯ ಜನರಲ್ಲಿ ಕೇಳಿಬರುತ್ತಿದ್ದ ಮಾತುಗಳು.

ತೀರ್ಥಹಳ್ಳಿ ಮಾತ್ರವಲ್ಲ, ಮಲೆನಾಡಿನ ಯಾವುದೇ ಬಾಗದಲ್ಲಾದರೂ ಗೌಡರನ್ನು ಆತ್ಮೀಯವಾಗಿಬಲ್ಲ ವ್ಯಕ್ತಿಗಳು ಸಿಗುತ್ತಾರೆ. ದರ್ಜಿಯಾಗಿರಬಹುದು, ಹೋಟೆಲ್ ಮಾಣಿ, ಮುನಿಸಿ ಪಾಲಿಟಿಯ ಜವಾನ, ಪ್ರವಾಸಿ ಮಂದಿರದ ಅಡಿಗೆಯ ಆಳು, ಊರ ಹೊರಗಿನ ಹಟ್ಟಿಯಲ್ಲಿ ಬದುಕುವ ಹರಿಜನ, ದಿನಗೂಲಿಯವ, ಹಜಾಮ, ಬೂಟ್‌ಪಾಲೀಶ್ ಮಾಡುವವ, ಹೀಗೆ ಬಗೆಬಗೆಯ ಬಡ ಜನರು ಗೌಡರನ್ನು ಬಲ್ಲವರು ತಮ್ಮ ಬಂಧುವಿನಂತೆ ಹತ್ತಿರದವನಂತೆ, ಆತ್ಮೀಯನಂತೆ, ಖಾಸಗೀ ಸ್ನೇಹಿತನಂತೆ ಗೌಡರನ್ನು ಕಂಡ ನೆನಪನ್ನು ನೆನಪಿಸಿಕೊಳ್ಳುತ್ತಾರೆ.

ಮಧ್ಯಮ ವರ್ಗ, ಕೆಳಮಧ್ಯಮ ವರ್ಗ ಹಾಗೂ ಹಿಂದುಳಿದ ವರ್ಗಗಳ ಅನೇಕ ಮುಗ್ದ ಹಳ್ಳಿಯ ಬಡ ಜನರಿಗೆ ಗೌಡರು ಒಂದು ಶಕ್ತಿಯಾಗಿದ್ದರು. ಗೌಡರು ಹೇಳಿದರು ಪಾರ್ಟಿಸೇರಿದೆ, ಗೌಡರು ಹೇಳಿದರು ಜೈಲಿಗೆ ಹೋದೆ, ಗೌಡರು ಹೇಳಿದರು ಉಪವಾಸ ಮಾಡಿದೆ, ಗೌಡರು ಹೇಳಿದರು ಚುನಾವಣೆಗೆ ನಿಂತೆ, ಹೀಗೆ ಬಗೆಬಗೆಯಲ್ಲಿ ಗೌಡರನ್ನು ಅವಲಂಭಿಸಿದ ಜನ ಅವರ ಮಾತನ್ನು ವೇದವಾಕ್ಯವೆಂದು ಸ್ವೀಕರಿಸಿದ್ದರು. ಗೌಡರು ನಮ್ಮವರು, ನಮ್ಮ ಒಳ್ಳೆಯದಕ್ಕೆ ಹೋರಾಟ ಮಾಡುತ್ತಿದ್ದಾರೆ. ಯಾವ ಸ್ವಾರ್ಥಕ್ಕಾಗಿಯೂ ಹೋರಾಡುತ್ತಿಲ್ಲ ಎಂಬ ನಂಬಿಕೆ ಅವರಲ್ಲಿ ದೃಢವಾಗಿತ್ತು. ಅವರಿಗೆಲ್ಲ ಗೌಡರು ಹೇಳಿದ್ದೇ ಸಿದ್ಧಾಂತವಾಗಿತ್ತು.

ಗೌಡರು ಯಾವಾಗಲೂ ಭ್ರಷ್ಠತೆಗೆ ಅವಕಾಶ ನೀಡಿದವರಲ್ಲ. ತಮ್ಮ ಬಳಿ ಬಂದ ಯಾರಿಗೂ ಯಾರಿಂದಲೂ ಭ್ರಷ್ಠತೆಗೆ ಕೈ ಚಾಚಿದವರಲ್ಲ. ಇದನ್ನು ಗೊತ್ತಿದ್ದ ಜನ "ಛೇ ಗೌಡರನ್ನು ಕೇಳಲಾಗುವುದಿಲ್ಲ ಮಾರಾಯ, ಅವರು ಇಂಥದೆಲ್ಲಾ ಮಾಡಿಸುವವರಲ್ಲ. ಅವರು ದೊಡ್ಡ ಜನ" ಎಂದು ಹಿಂದೆ ಸರಿಯುತ್ತಿದ್ದರು.

ಪಕ್ಷ ಸಿದ್ಧಾಂತಗಳನ್ನೂ ಮೀರಿ ನಿಂತು ಜನತೆಯನ್ನು ಪ್ರೀತಿಸಿದವರು, ಪ್ರೀತಿಸುತ್ತಲೇ ಅವರನ್ನು ತಿದ್ದಲು ಹೆಣಗಿದವರು. ಆಡಂಬರವಿರಲಿ, ಸರಳವಿರಲಿ ಎಲ್ಲಾ ವಿವಾಹಗಳಿಗೂ ಹೋಗಿರುವುದುಂಟು. ಮದುವೆಗಳಲ್ಲಿ ನೂರಾರು ಜನ ಗ್ರಾಮೀಣರನ್ನು ಭೇಟಿಯಾಗುವುದು, ಅವರ ಕಷ್ಟಸುಖಗಳನ್ನು ವಿಚಾರಿಸುವುದು, ಅತ್ಯಂತ ಸರಳ ವ್ಯಕ್ತಿಯಾಗಿ ಅವರೊಂದಿಗೆ ಬೆರೆಯುವುದು, ತಮಾಷೆ ಮಾಡುವುದು, ನಗುವುದು, ನಗಿಸುವುದು, ಒಗಟು ಹೇಳಿಸುವುದು, ಪದ ಹಾಡಿಸುವುದು, ಸಮಯ ಬಂದಾಗ, ಹೃದಯ ಹದವಾದಾಗ ತಮ್ಮ ಅಭಿಪ್ರಾಯ ಹೇಳಿ ಜನರನ್ನು ತಿದ್ದುವುದು, ಮುಂತಾದ ಜನಹಿತ ಹಾಗೂ ಜನಪ್ರೀತಿ ಕಾರ್ಯಗಳಿಂದ ಗೌಡರು ಇನ್ನಷ್ಟು ಹತ್ತಿರವಾಗಿದ್ದರು.

ಗೌಡರದು ಅಗಾದ ನೆನಪಿನ ಶಕ್ತಿ, ಒಮ್ಮೆ ಒಬ್ಬರನ್ನು ನೋಡಿದರೆ ಮುಗಿಯಿತು. ಮತ್ತೆಂದೆಂದೂ ಮರೆಯುತ್ತಿರಲಿಲ್ಲ. ಅವರ ಕೌಟುಂಬಿಕ ಸಂಗತಿಗಳಿಂದ ಹಿಡಿದು ಅವರ ಮಕ್ಕಳ ಬಗ್ಗೆ, ಉದ್ಯೋಗದ ಬಗ್ಗೆ, ಆರೋಗ್ಯದ ಬಗ್ಗೆ, ಮದುವೆ ಮುಂತಾದ ಎಲ್ಲಾ ವಿಷಯಗಳನ್ನು ಗಮನದಲ್ಲಿರಿಸಿಕೊಂಡು ವಿಚಾರಿಸುತ್ತಿದ್ದರು.

ಗೌಡರಿಗೆ ಅನೇಕ ಕವಿಗಳ–ಕಲಾವಿದರ–ಸಾಹಿತಿಗಳ ನಿಕಟ ಸಂಪರ್ಕವಿತ್ತು. ಜಾನಪದ ಕಲೆಯಂತೂ ಅವರಿಗೆ ಪ್ರಿಯವಾಗಿತ್ತು. ಜೈಮಿನಿ ಭಾರತದ ಕೆಲವು ಭಾಗಗಳನ್ನು ಗೌಡರು ಶ್ರೋತೃಗಳ ಹೃದಯ ತಟ್ಟುವಂತೆ ಓದುತ್ತಿದ್ದರು. ಗದುಗಿನ ಭಾರತ, ಭಗವದ್ಗೀತೆ, ಉಪನಿಷತ್ತುಗಳನ್ನು ಉದ್ದರಿಸುತ್ತಿದ್ದರು. ನಮ್ಮ ಸಾಹಿತ್ಯದ ಪರಿಚಯವೂ ಅವರಿಗಿತ್ತು. ಗೋಪಾಲಕೃಷ್ಣ ಅಡಿಗರ ಭೂಮಿಗೀತವನ್ನು ಅವರು ಅಭ್ಯಾಸಮಾಡಿ ನವ್ಯ ಸಾಹಿತ್ಯದ ಅಗ್ರಗಣ್ಯರ ವಿಮರ್ಶಕರ ಜೊತೆ ಚರ್ಚಿಸುತ್ತಿದ್ದದ್ದೂ ಉಂಟು. ಗೌಡರ ಸ್ಫುಟವಾದ, ಸರಳ, ಸುಂದರವಾದ ಆಡುಭಾಷೆಯನ್ನು ಎಲ್ಲರಿಗೂ ಮುಟ್ಟುವಂತೆ ಆಡುತ್ತಿದ್ದರು. ಭಾಷಣವಿರಲಿ, ಖಾಸಗಿ ಮಾತುಕತೆಯಿರಲಿ ಗೌಡರ ಮಾತಿನ ರೀತಿ ಒಂದೇ ಬಗೆಯದು. ಅವರ ಕೈಬರಹವೂ ಹಾಗೆಯೇ ಮುತ್ತು ಪೋಣಿಸಿದಂಥ ಅಕ್ಷರಗಳು (ಅನುಬಂಧ 4). ಇವೆಲ್ಲಾ ಕಾರಣಗಳಿಂದಾಗಿ ಗೌಡರು ರಾಜಕೀಯ ವ್ಯಕ್ತಿಗಳ ಜೊತೆಗೆ ಬುದ್ಧಿಜೀವಿಗಳ ಒಲುಮೆಗೂ ಪಾತ್ರವಾಗಿದ್ದರು.

ಮಾಂಸಹಾರಿಗಳಾದ ಒಕ್ಕಲಿಗರಾಗಿ ಜನ್ಮವೆತ್ತಿದ್ದರೂ ಸಹ ಗೌಡರು ಮಾಂಸಾಹಾರ ತಿನ್ನುತ್ತಿರಲಿಲ್ಲ ಹೀಗಾಗಿ ಗೌಡರನ್ನು ಬ್ರಾಹ್ಮಣರೂ ಸಹ ಪ್ರೀತಿಸಿ ಗೌರವಿಸುತ್ತಿದ್ದರು. ಈ ಕಾರಣಗಳಿಂದಾಗಿಯೇ ಅನೇಕ ಬ್ರಾಹ್ಮಣರ ಮನೆಗಳಲ್ಲೂ ಗೌಡರಿಗೆ ಮುಕ್ತ ಅವಕಾಶವಿರುತ್ತಿತ್ತು. ಅಲ್ಲಿಯೇ ತಿಂದೂ, ಎಲ್ಲರೂ ಅವರೊಂದಿಗೆ ಬೆರೆತು ಆ ಕುಟುಂಬದ ಸದಸ್ಯರೆಲ್ಲರೊಂದಿಗೆ ಇವರು ಒಬ್ಬರಾಗಿಬಿಡುತ್ತಿದ್ದರು.

ಗೌಡರು ದೂರದೃಷ್ಟಿಯುಳ್ಳ ವಾಸ್ತವವಾದಿ ಸುಂದರ ಸುಮಾಜದ, ಅಂತರ ರಹಿತ ಸಮಾಜದ ಕನಸುಕಂಡವರು. ಅನಿಷ್ಠ ಶಕ್ತಿಗಳ ವಿರುದ್ಧ ಕೆಂಡಕಾರಿದವರು. ಒಮ್ಮೆ ಕಾಗೋಡು ಸತ್ಯಾಗ್ರಹಕ್ಕೆ ನಿಜವಾದ ಕಾರಣವೇನೆಂಬುದನ್ನು ಅವರು ಹೃದಯ ಪೂರ್ವಕವಾಗಿ ಹೇಳುತ್ತಿದ್ದರು. ರೈತ ಸಮಸ್ಯೆಗಿಂತ ಮಿಗಿಲಾಗಿ ಮಾನವೀಯತೆಗೆ ಕಳಂಕ ಬರುವ ಕ್ರೌರ್ಯ, ಹಿಂಸೆ, ಅಮಾನುಷ ವರ್ತನೆಗೆ ಆತ ಬಂಡಾಯ ಹೂಡಿದ್ದ. ಆ ಜಮೀನ್ದಾರರು ಒಕ್ಕಲ ಮಕ್ಕಳು ಒಂದು ಒಳ್ಳೆಯ ಬಟ್ಟೆ, ಚಪ್ಪಲಿ ಹಾಕಿಕೊಳ್ಳುವಂತಿರಲಿಲ್ಲ. ಹೆಂಗಸರು ರವಿಕೆಯನ್ನೂ ತೊಡುವಂತಿರಲಿಲ್ಲ ಒಂದು ರೀತಿಯ ಗುಲಾಮತನದ ಸಂಕೇತವಾಗಿತ್ತು. ಇದು ನನ್ನ ಹೋರಾಟದ ಚಾಲನೆಗೆ ಇಂಬುಕೊಟ್ಟ ತಿರುಳ ಎಂದು ತುಂಬಾ ಮಾರ್ಮಿಕವಾಗಿ ನುಡಿಯುತ್ತಿದ್ದರು.

ಕನ್ನಡ ನಾಡು ನುಡಿಯ ಬಗ್ಗೆ ಗೌಡರಿಗೆ ಎಲ್ಲಿಲ್ಲದ ಆತ್ಮಾಭಿಮಾನ. ಕರ್ನಾಟಕದ ಏಕೀಕರಣಕ್ಕಾಗಿ ಏಕಾಂಗಿಯಾಗಿ ಹೋರಾಡಿದ ಧೀರ ಈ ಗೋಪಾಲ ಗೌಡರು. ಏಕೀಕರಣದ ಮಸೂದೆಯನ್ನು ಶಾಸನಸಭೆಯಲ್ಲಿ ಮಂಡಿಸಿದಾಗ ಅದರ ಸಮರ್ಥನೆಗೆ ಗೌಡರು ಮಾಡಿದ ಭಾಷಣ ಕರ್ನಾಟಕದ ಇತಿಹಾಸದ ಒಂದು ಮಹಾ ಮೈಲಿಗಲ್ಲು, ಅಂಥು ಗೌಡರ ಏಕೀಕರಣದ ಮಸೂದೆಯ ಬಗ್ಗೆ ಭಾಷಣಕ್ಕೆ ಅವಕಾಶ ಸಿಕ್ಕಿತ್ತು. ಏಕೀಕರಣದ ಮಸೂದೆ ಸಮರ್ಥನೆಗೆ ತನ್ನ ವಾಕ್–ಬಿಲ್ಲು–ಬಾಣಗಳಿಂದ ಸಿದ್ದನಾಗಿ ಎದ್ದು ನಿಂತರು. ಕನ್ನಡ ನಾಡಿನ ಇತಿಹಾಸ, ವಿಸ್ತೀರ್ಣ, ಕಲೆ, ಸಾಹಿತ್ಯ ಸಂಗೀತ ಎಲ್ಲದರ ಸಮೃದ್ಧ ವಿವರಗಳನ್ನೊಳಗೊಂಡ ಗೋಪಾಲಗೌಡರ ಚಾರಿತ್ರಾರ್ಹ ಚಿರಸ್ಮರಣೀಯ ಭಾಷಣ. ಭಾಷಾವಾರು ಪ್ರಾಂತ್ಯ ತತ್ವಗಳನ್ನು ಗಾಂಧೀಜಿಯವರೆ ಒಪ್ಪಿದ್ದರೆಂಬುದನ್ನು ನೆನಪಿಗೆ ತಂದರು. ಒಂದೇ ತಾಯಿನುಡಿ ಆಡುವವರು ಒಟ್ಟಿಗೆ ಕೂಡಿದರೆ, ಕೂಡಿ ಬದುಕಿದರೆ, ಜನ ಸಾಮಾನ್ಯರ ಬಾಳು ಹಸನಾದೀತು ಎಂದು ತಾತ್ವಿಕ ಸಮರ್ಥನೆ. ಅಂದು ಗೌಡರ ಭಾಷಣ ಕೇಳುತ್ತಿದ್ದವರು ನೃಪತುಂಗ, ಕೃಷ್ಣ ದೇವರಾಯರ ಕಾಲದ ಕಲೆ, ಸಾಹಿತ್ಯ, ಸಂಗೀತ ವೈಭವದ ಕನಸು ಚಿತ್ರವತ್ತಾಗಿ ಕಾಣುತ್ತಿದ್ದಂತೆ ಇತ್ತು. ಗೋಪಾಲ ಗೌಡರ ವಾದ ಸಮರ್ಥನೆಯಿಂದ ಅಂದಿನ ಶಾಸನ ಸಭೆಯ ವಾತಾವರಣವೇ ಬದಲಾಗಿ ಕನ್ನಡ ನಾಡು ಒಂದಾಯಿತೆಂದರೆ ಉತ್ಪ್ರೇಕ್ಷೆಯಾಗಲಾರದು. ಏಕೀಕರಣಕ್ಕಾಗಿ ಜೀವನವೆಲ್ಲ ಶ್ರಮಿಸಿದ್ಧ ಶ್ರೀ ಎಸ್. ನಿಜಲಿಂಗಪ್ಪನವರು ಗೋಪಾಲಗೌಡರನ್ನು ಬಾಚಿ ತಬ್ಬಿ ಬೆನ್ನು ತಟ್ಟಿದ ದೃಶ್ಯ ಚಿರಸ್ಮರಣೀಯ (ಜೀವಂತ ಜ್ವಾಲೆ– 110–111). ಇದು ಗೌಡರ ಜೀವನದಲ್ಲಿಯೇ ಸಾಧಿಸಿದ ವಿಜಯದ ಮತ್ತೊಂದು ಮೈಲಿಗಲ್ಲು. ಕನ್ನಡ ಹಿತವನ್ನು ಸಾಧಿಸಿದ ಕನ್ನಡಿಗನೊಬ್ಬನ ಆತ್ಮೀಯ ಸಾಧನೆಯಿದು.

ಗೌಡರು ಜನರ ಹಿತ ಕಾಯುವ ಕಾರ್ಯದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಂತವರು. ದಲಿತರ, ಬಡವರ ಧ್ವನಿಯಾಗಿ ಪ್ರಭಾವಿತರಾಗಿದ್ದರು. ಸಾಮಾನ್ಯ ಜನ ಪ್ರೀತಿಯಿಂದ ಗೋಪಾಲಗೌಡರ ಹೆಸರು ಹೇಳಿದರೆ ರಾಜಕಾರಣದಲ್ಲಿ ದೊಡ್ಡವರು ಎನಿಸಿಕೊಂಡವರು ಆ ಹೆಸರು ಕೇಳಿಬೆಚ್ಚಿಬೀಳುತ್ತಿದ್ದರು. ಕಸುಬು ರಾಜಾಕರಣಿಗಳ

ಪಾಲಿಗೆ ಗೋಪಾಲಗೌಡ ಕೆಟ್ಟ ಕನಸು; ಸಂಜೆ ಹೊತ್ತು ಮಕ್ಕಳು ಕಾಣದ ದೆವ್ವಕ್ಕೆ ಹೆದರುವ ಹಾಗೆ ಗೋಪಾಲಗೌಡರ ಹೆಸರಿಗೇ ಹೆದುರುತ್ತಿದ್ದರು. ಗೌಡರ ರಾಜಕೀಯ ಪ್ರತಿಸ್ಪರ್ಧಿಗಳಾರು ಅವರ ವೈಯಕ್ತಿಕ ಮತ್ತು ರಾಜಕೀಯ ಪ್ರಾಮಾಣಿಕತೆ ಬಗ್ಗೆ ಕೆಟ್ಟ ಮಾತನ್ನು ಆಡಿದವರಲ್ಲ. ಇಂಥ ಪ್ರಸಂಗ ನಮ್ಮ ದೇಶದ ಹೊಲಸು ರಾಜಕೀಯದಲ್ಲಿ ಒಂದು ಪವಾಡ. ಮುಂಗೋಪ ಅಸಹನೆ ಗೋಪಾಲಗೌಡರಲ್ಲಿ ಇತ್ತು. ಕಣ್ಣಿಗೆ ಮಂಜಿನಗಡ್ಡೆಯಂತೆ ಇದ್ದ ಮನುಷ್ಯ ಇದ್ದಕ್ಕಿದ್ದ ಹಾಗೆ ಉರಿಯುವ ಕೊಳ್ಳಿಯಾಗುತ್ತಿದ್ದ. ಇದಕ್ಕೆ ನಿಜವಾದ ಕಾರಣ ನಮ್ಮ ದೇಶದಲ್ಲಿ ಕ್ರಾಂತಿಯಾಗಬೇಕು. ಎನ್ನುವ ಅವರ ಅತ್ಯಂತ ಆತುರ. ತಮ್ಮ ತತ್ವ ನಿಷ್ಠೆಯ ವಿಷಯದಲ್ಲಿ ಅವರು ಎಂದೂ ಯಾರೊಂದಿಗೂ ಯಾವ ಕಾರಣಕ್ಕಾಗಿಯೂ ರಾಜಿಮಾಡಿಕೊಳ್ಳಲಿಲ್ಲ. ರಾಜಷಾಹಿಗಳ ವಿರುದ್ಧ ಅವರ ಕೋಪ ಇತ್ತು. ಅವರು ಸಾಹಿತಿಗಳನ್ನು ಬಹಳ ಪ್ರೀತಿಸುತ್ತಿದ್ದರು. ನೀವು ಸಾಹಿತಿಗಳು ನಿಮ್ಮ ಮಾತಿಗೆ ಜನ ಬೆಲೆಕೊಡುತ್ತಾರೆ ಹಾಗಿರುವಾಗ ಒಂದು ಕಡೆ ರಾಜಷಾಹಿ ವಿರುದ್ಧ ಮಾತನಾಡಿ ಮತ್ತೊಂದು ಕಡೆ ಅವರನ್ನು ಹೊಗಳಿದರೆ ನಮ್ಮ ದಡ್ಡಜನ ನೀವು ಹೊಗಳಿದನ್ನ ಜ್ಞಾಪಕ ಇಟ್ಟುಕೊಳ್ಳುತ್ತಾರೆ; ಬೈದಿದ್ದನ್ನು ಮರೆತುಬಿಡುತ್ತಾರೆ. ಆದ್ದರಿಂದ ಈ ಕೆಟ್ಟಪದ್ಧತಿಗಳ ಬಗ್ಗೆ ಯಾವತ್ತು ನೀವು ಒಳ್ಳೆಯ ಮಾತುಗಳನ್ನು ಆಡಬಾರದು. ಸತ್ತ ಮೇಲಷ್ಟೇ ಅದಕ್ಕೆ ಬೊಜ್ಜಮಾಡಬೇಕು. ನೀವು ಸಾಹಿತಿಗಳು ಭಾರೀ ಅಪಾಯದ ಜನ ಅಷ್ಟೇ ಹುಂಬತನವೂ ನಿಮ್ಮಲ್ಲಿದೆ. ಅದಕ್ಕೆ ನಿಮ್ಮನ್ನು ಕಂಡರೆ ನನಗೆ ಎಷ್ಟು ಪ್ರೀತಿಯೋ ಅಷ್ಟೇ ಭಯ ಎಂಬುದಾಗಿ ಹೇಳುತ್ತಿದ್ದರು. ಗೋಪಾಲಗೌಡರ ಸಾಹಿತ್ಯ ಕ್ರಾಂತಿಗೆ ಸಾಧನವಾಗಬಲ್ಲದು ಎಂಬ ಗೌಡರ ಶ್ರದ್ಧೆ ಲೆನಿನ್‌ಗೆ ಸಾಹಿತಿಗಳ ಬಗಗೆ ಇದ್ದ ಶ್ರದ್ಧೆಯಂತಹದ್ದು. ಅದಕ್ಕಾಗಿ ಅವರು ಸಾಹಿತ್ಯವನ್ನು ಓದುತ್ತಿದ್ದರು. ಶಕ್ತಿ ಇದ್ದಂತಹ ಸಾಹಿತಿಗಳ ಬಗೆಗೆ ತಾವೇ ಹೋಗುತ್ತಿದ್ದರು. ಗೋಪಾಲಗೌಡರಿಂದ ಬಹಳ ಪ್ರಚಾರ ಪಡೆದವರು ಗೋಪಾಲಕೃಷ್ಣ ಅಡಿಗರು. ಅವರ 'ನೆಹರು ಇನ್ನು ನಿವೃತ್ತರಾಗುವುದಿಲ್ಲ' ಎನ್ನುವ ಪಧ್ಯ ಗೌಡರ ನಾಲಿಗೆಯಲ್ಲಿ ಸದಾ ಗುನುಗುತ್ತಿತ್ತು. ಗೋಪಾಲಗೌಡರ ವ್ಯಂಗ್ಯ ಎಷ್ಟು ನವಿರೋ ಅಷ್ಟೇ ಹರಿತವಾಗಿತ್ತು. ಗೋಪಾಲಗೌಡರು ಕೆಮ್ಮಣ್ಣು ಗುಂಡಿಯಲ್ಲಿ ಒಮ್ಮೆ ವಿಶ್ರಾಂತಿಗಾಗಿ ತಂಗಿದ್ದ ದಿನವೇ ರಾಜ್ಯದ ಮುಖ್ಯ ಮಂತ್ರಿಗಳು ಅಲ್ಲಿಗೆ ಬಂದರು. ಗೌಡರಿಗೆ ವಿಷಯಗೊತ್ತಾಗಿ ಅವರು ಮುಖ್ಯ ಮಂತ್ರಿಗಳಿದ್ದಲ್ಲಿ ಹೋಗಿ ಮಾತನಾಡಿದರು. ನಂತರ ಮುಖ್ಯ ಮಂತ್ರಿಗಳು ಗೌಡರಿಗೆ ನೀವೇಕೆ ಕಷ್ಟಪಡಬೇಕು. ಬಡತನ ಯಾಕೆ ಅನುಭವಿಸಬೇಕು. ನಮ್ಮ ಪಕ್ಷಕ್ಕೆ ಬನ್ನಿ, ಮಂತ್ರಿ ಪದವಿ ಕೊಡುತ್ತೇವೆ ಎಂದರಂತೆ. ಇದರಿಂದ ಕೆಂಡಮಂಡಲವಾದ ಗೌಡರು ನೀವು ನಮ್ಮ ಮಾನ್ಯ ಮಂತ್ರಿಗಳು ಎಂಬ ಕಾರಣಕ್ಕೆ ಇಷ್ಟುಹೊತ್ತು ಗೌರವ ಕೊಟ್ಟದ್ದೇನೆ. ಇಂಥ ಹೊಲಸು ಮಾತು ಹೇಳಲು ನಿಮಗೆ ನಾಚಿಕೆಯಾಗಬೇಕು. ಇನ್ನೊಮ್ಮೆ ನನ್ನ ಹತ್ತಿರ ಇಂಥ ಮಾತನ್ನು ಹೇಳಿದರೆ ಬೇರೆ ರೀತಿಯಲ್ಲಿ ಉತ್ತರ ಕೊಡಬೇಕಾದೀತು ಎಂದು ಕಠೋರವಾಗಿ ನುಡಿದಿದ್ದರಂತೆ. ಇದು ಗೋಪಾಲಗೌಡರ ನಿಜವಾದ ಬದುಕು. ಬಯಸಿದ್ದರೆ ಸಚಿವರಾಗಿರಬಹುದಿತ್ತು, ಅಂತಹ ರಾಜಕೀಯ ಪ್ರಭಾವ ಅವರಲ್ಲಿತ್ತು. ಶ್ರೀಮಂತಿಕೆಯಲ್ಲಿ ಮೆರೆಯಬಹುದಿತ್ತು, ಅಂತಹ ಆಗರ್ಭ ಶ್ರೀಮಂತರ ಸ್ನೇಹ ಅವರಿಗಿತ್ತು. ಆದರೆ

ಅವುಗಳಲ್ಲಿ ಯಾವುದನ್ನು ಬಯಸದೆ ಶುದ್ಧ ರಾಜಕೀಯ ಜೀವನಕ್ಕೆ ಜೀವಂತ ಸಾಕ್ಷಿಯಾಗಿ ಬದುಕಿದರು. ಮಲೆನಾಡಿನ ಲಕ್ಷ ಲಕ್ಷ ಬಡಜನರ ಹೃದಯಗಳಲ್ಲಿ ಕ್ರಾಂತಿಯ ಕನಸಾಗಿ ಬದುಕ್ಕಿದ್ದಾರೆ ಎನ್ನುವುದಾಗಿ ಗೋಪಾಲಗೌಡರ ಬಗೆಗೆ ತ.ರಾ.ಸು.ರವರು ನೆನಪಿಸಿಕೊಳ್ಳುತ್ತಾರೆ (ಜೀವಂತ ಜ್ವಾಲೆ 143–149).

ಗೌಡರು ದರಖಾಸ್ತು ಸಮಿತಿ ಸಭೆ, ವಿದ್ಯಾರ್ಥಿವೇತನ ನೀಡಿಕೆ ಕುರಿತು ಸಭೆಗಳಿಗೆ ಬೆಂಗಳೂರಿನಿಂದ ತೀರ್ಥಹಳ್ಳಿಗೆ ಬಂದು ಚಿಕ್ಕ ಕಾರ್ಯಕ್ರಮಗಳಲ್ಲಿ ಭಾಗಿಯಾಗುತ್ತಿದ್ದರು. ಯಾವುದೇ ಸಂದರ್ಭವನ್ನು ಕೂಡ ತಪ್ಪಿಸಿಕೊಳ್ಳದೆ ಅದಕ್ಕೆ ಸೂಕ್ತ ನ್ಯಾಯದೊರಕಿಸಿ ಕೊಡುವಲ್ಲಿ ಗೌಡರು ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದರು. ಒಮ್ಮೆ ಡಾ. ಹೆಚ್.ಸಿ. ವಿಷ್ಣುಮೂರ್ತಿಯವರು ಗೌಡರನ್ನು 'ಈ ಚೋಟಾಮೋಟಾ ಮೀಟಿಂಗ್‌ಗಳಿಗೆಲ್ಲ ಅಲ್ಲಿಂದ ಬಂದು ಹೋಗಿ ದಣಿಯುತ್ತೀರಿ' ಎಂದು ಕೇಳಿದಾಗ ಗೌಡರು. 'ಅರ್ಹರಿಗೆ ವಂಚನೆಯಾಗಿ ಅಪಾತ್ರರಿಗೆ ಲಾಭವಾಗುವುದು ನನಗೆ ಇಷ್ಟವಿಲ್ಲ, ಬಡ ಹುಡುಗನೊಬ್ಬನಿಗೆ ಸಿಗುವ ವಿದ್ಯಾರ್ಥಿವೇತನ ಅವನಿಗೆ ಸಿಕ್ಕರೆ, ನಿರ್ಗತಿಕ ಬಡವನೊಬ್ಬನಿಗೆ ಸ್ವಲ್ಪ ಜಮೀನು ದಕ್ಕಿ ಅವನ ಜೀವನ ಹಸನಾಗುವುದಾದರೆ ನನ್ನ ದಣಿವು ಸಾರ್ಥಕವಲ್ಲವೆ? ಎಂದು ಉತ್ತಿರಿಸಿದ್ದರು. ಜೀವನವನ್ನೇ ಜನಹಿತಕ್ಕಾಗಿಯೇ ಮುಡಿಪಾಗಿಟ್ಟಿದ್ದರು. ಈ ಸಂದರ್ಭದಲ್ಲಿ ತಮ್ಮ ಆರೋಗ್ಯವನ್ನು ಸಹ ಲೆಕ್ಕಿಸದೆ ತನ್ನ ಪರಿಶ್ರಮ, ದಣಿವು ಎಲ್ಲವೂ ಕೂಡ ಜನಹಿತಕ್ಕಾಗಿಯೇ ಎಂಬ ಉದಾರ ಮನೋಭಾವನೆಯನ್ನು ಗೌಡರು ಹೊಂದಿದ್ದರು. ಗೌಡರು ತಮ್ಮ ದಿನಚರಿಯಲ್ಲಿ ಏನನ್ನೂ ಮುಚ್ಚಿಡದೆ ಪಾರದರ್ಶಕೀಯವಾಗಿ ತೆರೆದ ಹೃದಯದ ಪಾಡು, ಪಟ್ಟ ಬವಣೆಗಳನ್ನು ಕಣ್ಣಿಗೆ ಕಾಣುವಷ್ಟು ನಿಚ್ಚಳವಾಗಿ ಬರೆದಿಟ್ಟಿದ್ದಾರೆ. ತಮಗಿದ್ದ ಎಲ್ಲಾ ದೈಹಿಕ, ಆರ್ಥಿಕ, ಸಮಾಜಿಕ ತೊಂದರೆ, ಇತಿಮಿತಿಗಳ ನಡುವೆಯೂ ಗೌಡರು ಸಮಾಜವಾದಿ ಸಂಘಟನೆಗೆ ಪಟ್ಟಶ್ರಮ; ಸಮಾಜವಾದಿ ಹೊರಾಟಗಳಿಗೆ ಜೀವತುಂಬಲು ಯತ್ನಿಸಿ ಪ್ರಾಮಾಣಿಕತೆಯನ್ನು ಮೆರೆಸಿದ ಬಗೆಯನ್ನು ಸಿಕ್ಕ ಕೆಲವೇ ಕೆಲವು ದಿನಚರಿಯ ತುಣುಕುಗಳನ್ನು ನೋಡಿದಾಗ ಗಮನಕ್ಕೆ ಬರುತ್ತದೆ.

ಜಮೀನ್ದಾರಿ ದಬ್ಬಾಳಿಕೆ, ಜೀತಪದ್ಧತಿ, ಸಾಮಾಜಿಕ, ದೈಹಿಕ ಹಲ್ಲೆ, ಅಸ್ಪೃಶ್ಯತೆ, ಮುಂತಾದ ಸಮಾಜದ ಕೊಳಕುಗಳನ್ನು ತಮ್ಮ ವಾಕ್ ಚಾತುರ್ಯದ ಮೂಲಕ ಜನಜಾಗೃತಿಗೊಳಿಸಿ ಪ್ರತಿಭಟನೆಯ ಉಸಿರನ್ನು ಅವರಲ್ಲಿ ಬಿತ್ತಿ, ಸಾಮಾಜಿಕ ಅಂಧಕಾರವನ್ನು ಕಿತ್ತೆಸೆಯುವಲ್ಲಿ ಗೌಡರ ಪ್ರಯತ್ನ ಅಭೂತಪೂರ್ವವಾದುದು.

ಉಳುವವನಿಗೆ ಭೂಮಿ, ಇನಾಂರದ್ದಿಯಾತಿ, ರಾಜಧನ ರದ್ದತಿ, ರಾಜ್ಯದಹೆಸರು 'ಕರ್ನಾಟಕ', ಜೀತಪದ್ಧತಿ ನಿರ್ಮೂಲನಾ ಶಾಸನ, ಹಿಂದುಳಿದವರಿಗೆ ಮೀಸಲಾತಿ ಹೀಗೆ ಬಹಳ ಪ್ರಮುಖವಾದ ಮತ್ತು ಇತಿಹಾಸದ ಪುಟಗಳಲ್ಲಿ ಸುವರ್ಣ ಅಕ್ಷರಗಳಲ್ಲಿ ಬರೆಯಬಹುದಾದ ಉತ್ತಮ ಕಾರ್ಯಗಳನ್ನು ಈ ಜನಸಾಮಾನ್ಯರಿಗೆ ನೀಡಿ ಅವರ ನೆನಪಾಗಿ ಅಸ್ತಂಗತವಾದ ಗೌಡರು ಇಂದಿಗೂ ಚಿರಂಜೀವಿಯಾಗಿ ಜನಮನದ ನೆನಪಲ್ಲಿ ಉಳಿದಿದ್ದಾರೆ.

ಗೋಪಾಲಗೌಡರ ಮನದ ತುಮುಲ ಅವರ ಕೃತಿ ಮತ್ತು ಬರವಣಿಗೆಯಲ್ಲಿ ಗಮನಿಸಬಹುದಾಗಿತ್ತು. ಹುಟ್ಟಿನೊಂದಿಗೇ ಹುಟ್ಟಿದ ಮತೀಯ ಹಾಲಾಹಲದಿಂದ ಎರಡೂ ರಾಷ್ಟ್ರಗಳಲ್ಲಿ ನರಮೇಧ ನಿರಾತಂಕವಾಗಿ ನಡೆಯಿತು. "ನನ್ನ ಹೆಣದ ಮೇಲೆ ಭಾರತದ ವಿಭಜನೆ ಸಾಧ್ಯ" ಎಂದು ನುಡಿದಿದ್ದ ಗಾಂಧೀಜಿ "ರಾಷ್ಟ್ರಪಿತ" ಧೃತರಾಷ್ಟ್ರನಂತೆ ಈ ಕುರುಕ್ಷೇತ್ರವನ್ನು ನೋಡಲಾಗದೆ ಕ್ಷಣಕಾಲ ಕಣ್ಣುಮುಚ್ಚಿದ ಕಣ್ಣೀರು ಮಿಡಿದ. ಗದ್ಗದಿತ ವೀಕ್ಷಕನಾದ "ಮೋಹನ ನೌಕೆಯಂತೆ ರಕ್ತಸಾಗರದ ಮೇಲೆ ನವಖಾಲಿಗೆ ಸಾಗಿದ ಊರು–ಮನೆ, ಬಂಧು–ಬಳಗ, ಗಂಡ–ಹೆಂಡತಿ, ಮಕ್ಕಳು–ಮರಿ ಕಳೆದುಕೊಂಡ ದುಃಖವನ್ನು ಒರೆಸಲೆತ್ನಿಸಿದ. ಕೊನೆಗೆ ಒಂದು ದಿನ ಸಂಜೆ ತಾನೆ ಮತೀಯ ಸೌಹಾರ್ಧಕ್ಕಾಗಿ ಮಾನವತೆಯ ಮೇಲ್ಮೈಗಾಗಿ ಗೀತೆ, ಕುರಾನು, ಬೈಬಲ್ ಪ್ರಾರ್ಥನಾ ಸಮಯ ಮತಾಂಧನ ಗುಂಡಿಗೆ ಎದೆಯೊಡ್ಡಿ ಹೇ ರಾಮ! ಎಂದು ಕುಸಿದು ಬಿದ್ದು ದೆಹಲಿಯಲ್ಲಿ ಅಸುನೀಗಿದ ಬಿರ್ಲಾ ಭವನದಲ್ಲಿ ಅವನ ನೆತ್ತರಿನಿಂದ ದಾಹ ನೀಗಿಸಿಕೊಂಡ ಈ ಧರೆ ಪಾವನ!

ತಂದೆ ಏನು ಮಾಡಿದರೂ "ಹರ" ಎನ್ನದೆ ತಾನು ಸತ್ಯವೆಂದು ನಂಬಿದ ಹರಿಯನ್ನೇ ಜಪಿಸಿ ಪ್ರಹ್ಲಾದ ಪಟ್ಟಪಾಡೂ ಒಂದು ಸತ್ಯಾಗ್ರಹವೆ. ತನಗೆ ನ್ಯಾಯವೆಂದು ತೋರಿದುದನ್ನು ತಿಳಿಯದವರಿಗೆ ತಿಳಿಸಿಹೇಳುವ "ನನ್ನ ಜನ್ಮಸಿದ್ಧ ಹಕ್ಕನ್ನು ನೀವು ಮೊಟಕು ಮಾಡಲಾರಿರಿ" ಎಂದು ನ್ಯಾಯಾಲಯಕ್ಕೆ ನಿರ್ಭಯವಾಗಿ ತಿಳಿಸಿ, ವಿಚಾರ ಸ್ವಾತಂತ್ರ್ಯವಿಲ್ಲದೆ ಬದುಕುವುದಕ್ಕಿಂತ ಹೆಮ್‌ಲಾಕ್ ಕುಡಿದು ಸಾಯುವುದೇ ಮೇಲೆಂದು ಅವರು ಕೊಟ್ಟ ವಿಷದ ಬಟ್ಟಲನ್ನು ಪೂರ್ಣಕುಡಿದು ಪ್ರಾಣಬಿಟ್ಟ ಸಾಕ್ರೆಟೀಸ್ ಮತ್ತೊಬ್ಬ ಸತ್ಯಾಗ್ರಹಿ. ಮಗದೊಬ್ಬ ಹೆನ್ರಿ ಡೇವಿಸ್ ಥೋರೋ. 20ನೇ ಶತಮಾನಕ್ಕೆ ಕಾಲಿಡುತ್ತಲೇ ತೀರಿಹೋದ ರಸ್ಕಿನ್, ಅವರ ವಿಚಾರಗಳಿಗೆ ಮಾರುಹೋದ ಗಾಂಧೀ, ಆತನೇ ಮುಂದೆ ಆದ ಮಹಾತ್ಮ. ಈ ಎಲ್ಲಾ ಸತ್ಯಾಗ್ರಹಿಗಳ, ದಾರ್ಶನಿಕರ, ಮಾರ್ಕ್ಸ್‌ನ ಆಚಾರ ವಿಚಾರಗಳನ್ನು ಮೈಗೂಡಿಸಿಕೊಂಡಿದ್ದ ಭಾರತದ ಇತಿಹಾಸದ ಹೊಸ್ತಿಲಲ್ಲಿ ಕಣ್ಣುಜ್ಜಿದ ನನ್ನ ರಾಜಕೀಯ ಗುರು ಡಾ. ರಾಮಮನೋಹರ ಲೋಹಿಯಾ, ನಾನು ಶರಣು ಹೋಗಿರುವುದು ಈ ಮಹಾಮಹಿಮರಿಗೆ, ಅವರ ವಿಚಾರಕ್ಕೆ ಈ ಶತಮಾನದ ಹೆಬ್ಬಯಕೆ ವ್ಯಕ್ತಿ ಸ್ವಾತಂತ್ರ ಸಹಿತ ಸಂಭವ. ಸಮಾನತೆ, ಅಧಿಕಾರದ ವಿಕೇಂದ್ರೀಕರಣ, ಸುಭೀಕ್ಷೆ, ಶಾಂತಿ "ಸರ್ವರಿಗೂ ಸಮಪಾಲು ಸರ್ವರಿಗೂ ಸಮಬಾಳು" ನೀಡುವ ಸಮಾಜವಾದ ಗುರಿ. ಅಹಿಂಸಾತ್ಮಕವಾಗಿಯೇ ಕ್ರಾಂತಿಯನ್ನು ಸಾಧಿಸುವುದು ಮಾರ್ಗ. ಇದು ನಾವು ತುಳಿಯಬೇಕಾದ ಹಾದಿ (ಕಸ್ತೂರಿ ವಸಂತ ಸಂಚಿಕೆ ಮೇ–1970). ಮಹಾತ್ಮರ ಆದರ್ಶಗಳು, ಅವರು ನಡೆದ ಮಾರ್ಗ ಅನುಸರಿಸಿದ ವಿಧಾನ ಹಾಗೂ ಆಶ್ರಯಿಸಿದ ಧ್ಯೇಯಗಳು ಗೌಡರಿಗೆ ಒಂದು ರೀತಿಯಲ್ಲಿ ಸ್ಫೂರ್ತಿಯ ಸೆಲೆಯಾಗಿ ಅವರನ್ನು ಕಾಪಾಡಿದೆ. ಅದೇ ಮಹತ್ತರವಾದ ಆದರ್ಶಪ್ರಾಯ ಸಮಾಜ ನಿರ್ಮಾಣ ಮಾಡುವುದು ಮಹಬಲರಿಗೆ ಶಕ್ತಿ ತುಂಬುವ ಹಾಗೂ ಜೀವನದ

ಮಾರ್ಗತೋರಿ ತನ್ನ ಕಾಲಮೇಲೆ ತಾನುನಿಂತು ಯಾರ ಹಂಗೂ ಇಲ್ಲದೆ ಸಶಕ್ತ ಬಾಳನ್ನು ಬಾಳುವ ಮಾರ್ಗ ತೋರಿಸುವ ಕಳಕಳಿ ಗೌಡರ ಬರವಣಿಗೆ ಮತ್ತು ಭಾಷಣಗಳಲ್ಲಿ ಕಾಣಬಹುದಾಗಿದೆ.

"ಎತ್ತರವಾದ ಗಂಭೀರ ನಿಲುವಿನ ಗೌಡರು ನಕ್ಕರೆ ಮುಖ ವಿಚಿತ್ರವಾಗಿ, ಸುಂದರವಾಗಿ ಅರಳಿ ಕೆನ್ನೆಯ ಮೇಲೆ ಗುಳಿ ಬೀಳುತ್ತಿತ್ತು. ಸಾಹಿತ್ಯ ಅವರ ನೆಚ್ಚಿನ ವಸ್ತು. ಮಲೆನಾಡು ಪ್ರೀತಿಯ ವಿಷಯ. ಗೋಪಾಲ್ ಮಹಾದುಗುಡದ, ಸಿಟ್ಟಿನ, ಪ್ರೀತಿಯ, ಪೂರ್ವಾಗ್ರಹಗಳ ಮನುಷ್ಯ. ಅವರ ವ್ಯಕ್ತಿತ್ವ, ಅನಿರೀಕ್ಷಿತ ವಿಚಾರ, ಆಳವಾದ ಚಿಂತನೆಗೆ ಹೇಳಿ ಮಾಡಿಸಿದಂತಿತ್ತು. ಒಂದೇ ಕಡೆ ಕೂತು ನಿಧಾನಕ್ಕೆ ಮಾತಾಡುತ್ತಿದ್ದ ಗೋಪಾಲ್ ಆಳದಲ್ಲಿ ಮಹಾ ಚಡಪಡಿಕೆಯ, ವಿಚಿತ್ರ ಸಿಡಿಮದ್ದುಗಳ ವ್ಯಕ್ತಿ...... ತೀರ್ಥಹಳ್ಳಿಯಲ್ಲಿನ ಅವರ ಮಾತಿನ ಚಾತುರ್ಯ, ರಾಜಕೀಯ, ಸಾಹಿತ್ಯ, ಸಾಮಾನ್ಯ ಜನರ ಕಾಳಜಿಗಳು, ಎಲ್ಲರನ್ನು ಒಗ್ಗೂಡಿಸಿ ನಿರೂಪಿಸುತ್ತಿದ್ದ ವೈಖರಿ, ಎಲ್ಲವೂ ನನ್ನಲ್ಲಿ ಖುಷಿ, ಆತಂಕ ಕಸಿವಿಸಿ ಹುಟ್ಟಿಸಿದವು. ಎಂಬುದಾಗಿ ಪಿ. ಲಂಕೇಶ್‌ರವರು ಅಕ್ಕರೆಯ ಮೂರ್ತಿ ಎಂಬ ಲೇಖನದಲ್ಲಿ ಗೋಪಾಲಗೌಡರ ಬಗ್ಗೆ ಬರೆಯುತ್ತಾರೆ (ಶಾಂತವೇರಿ ಗೋಪಾಲಗೌಡರ ನೆನಪಿನ ಸಂಪುಟ 11).

ಗೌಡರು ನನಗೆ ಮತ್ತು ಅವರ ಗೆಳೆಯರಿಗೆ ಬರೆದ ಪತ್ರಗಳಲ್ಲಿ ಕನ್ನಡದ ಬಗ್ಗೆ ಅವರ ಅಭಿಮಾನ ವ್ಯಕ್ತವಾಗುತ್ತದೆ. ಮೈಸೂರು ರಾಜ್ಯವನ್ನು ಕರ್ನಾಟಕ ಎಂದು ನಾಮಕರಣ ಮಾಡುವ ಮೊದಲೇ ತಮ್ಮ ಮೊಹರುಗಳಲ್ಲಿ ಕರ್ನಾಟಕ ಎಂದು ಬಳಸುತ್ತಿದ್ದರು." ಎನ್ನುವುದಾಗಿ ಪತ್ನಿ ಸೋನಕ್ಕ ಬಾಳಸಂಗಾತಿ ಎಂಬ ಲೇಖನದಲ್ಲಿ ಹೇಳುತ್ತಾರೆ (ಶಾಂತವೇರಿ ಗೋಪಾಲಗೌಡರ ನೆನಪಿನ ಸಂಪುಟ–26).

ಗೋಪಾಲಗೌಡರ ಜೀವನ ಎಷ್ಟು ಸರಳವಾಗಿತ್ತೆಂದರೆ ಹೆಗಲಲ್ಲಿ ಒಂದು ಚೀಲ, ಚೀಲದಲ್ಲಿ ಹೊದೆಯಲು ಶಾಲು, ಒಂದು ಜೊತೆ ಬಟ್ಟೆ ಕಾರ್ಯಕರ್ತರ ಮನೆಯಲ್ಲೇ ಇಳಿಯುವುದು, ಇರುವ ಊಟವನ್ನೇ ಪರಮಾನ್ನಮಾಡಿಕೊಂಡು ಮುಂದಿನ ಊರಿಗೆ ಹೊರಡುವುದು. ಖರ್ಚಿಗೆ ಹಣ ಕೇಳುವಂತಿಲ್ಲ. ಅವರಾಗಿ ಒತ್ತಾಯಪಡಿಸಿದರೆ ಮುಂದಿನ ಊರಿಗೆ ಟಿಕೇಟ್ ತೆಗೆಸಿಕೊಡಿ ಎಂದು ಕೇಳುವುದು. ತಮ್ಮ ಬಟ್ಟೆಯನ್ನು ತಾವೇ ತೊಳೆದುಕೊಳ್ಳುತ್ತಿದ್ದರು. ಎನ್ನುವುದಾಗಿ ಎಂ. ನಾಗಪ್ಪ 'ನನ್ನ ಮಾರ್ಗದರ್ಶನ' ಎಂಬ ಲೇಖನದಲ್ಲಿ ಬರೆಯುತ್ತಾರೆ (ಶಾಂತವೇರಿ ಗೋಪಾಲಗೌಡರ ನೆನಪಿನ ಸಂಪುಟ–29).

ಒಮ್ಮೆ ರಾಯಚೂರಿನಲ್ಲಿ ಪ್ರವಾಸ ಮಂದಿರದಲ್ಲಿ ತಂಗಿದ್ದೆವು. ಗೌಡರ ಬಟ್ಟೆಗಳು ಕೊಳೆಯಾಗಿರುವುದನ್ನು ನೋಡಿ ಅವರ ಬಟ್ಟೆಗಳನ್ನು ದೋಬಿಗೆ ಕೊಟ್ಟು ಸಂಜೆ ತರಲು ಹೇಳಿದೆ. ಮಾರನೆಯ ದಿನ ಗೌಡರು ನನ್ನನ್ನು ಕುರಿತು, "ಸೇಟ್‌ಜಿ, ನಿಮ್ಮ ಸಂಗಡ ಇರುವಾಗ ಶುಭ್ರವಾದ ಬಟ್ಟೆಯಲ್ಲಿರಬೇಕೆಂಬುದನ್ನು ನಾನು ಬಲ್ಲೆ. ಬಸ್ಸು, ರೈಲಿನಲ್ಲಿ ಪ್ರಯಾಣ ಮಾಡುವುದರಿಂದ ನನ್ನ ಬಟ್ಟೆ ಕೊಳಕಾಗುತ್ತಿವೆ ಅಂತ ಕಾಣುತ್ತೆ. ಆದರೆ ನನ್ನ ಬಟ್ಟೆಯನ್ನು ನಾನೇ ಒಗೆದು,

ತಲೆದಿಂಬಿನ ಕೆಳಗೆ ಮಡಿಸಿಟ್ಟುಕೊಂಡರೆ ಇಸ್ತ್ರಿ ಆಗುತ್ತೆ. ಇನ್ನು ಮೇಲೆ ದೋಬಿಗೆ ನನ್ನ ಬಟ್ಟೆಗಳನ್ನು ಕೊಡಬೇಡಿ" ಎಂದರು. ಯಾಕೆಂದು ಕೇಳಿದಕ್ಕೆ ನನ್ನ ಹತ್ತಿರ ಇರುವುದು ನಾಲ್ಕು ಜೊತೆ ಬಟ್ಟೆ ಮಾತ್ರ. ಅದು ಖಾದಿಯ ಬಟ್ಟೆ. ದೋಬಿಗೆ ಕೊಟ್ಟರೆ ಅದು ಬೇಗ ಹರಿಯುತ್ತದೆ. ಅದಕ್ಕಾಗಿ ನಾನು ದೋಬಿಗೆ ಕೊಡುವುದಿಲ್ಲ ಎಂದು ಹೇಳಿದರು– ಅಜೀಜ್ ಸೇಟ್ ತಮ್ಮ ಶತಮಾನದ ರಾಜಕಾರಣಿ ಎಂಬ ಲೇಖನದಲ್ಲಿ ಬರೆದಿದ್ದಾರೆ (ಶಾಂತವೇರಿ ಗೋಪಾಲಗೌಡರ ನೆನಪಿನ ಸಂಪುಟ–34).

ಮಾತುಗಾರಿಕೆಯಲ್ಲಿ ತನ್ನದೇ ಆದ ಧೀರ ಗಂಭೀರ ರೀತಿ ಚೊಕ್ಕವಾದ, ಭಾಷೆ, ತಿಳಿಯಾದ ಹಾಸ್ಯ, ಚುಚ್ಚುವ ವ್ಯಂಗ್ಯ, ದಿಟ್ಟ ಪ್ರತಿಪಾದನೆ ದಾಕ್ಷಿಣ್ಯವಿಲ್ಲ. ಸಂಕೋಚವೂ ಇಲ್ಲ. ಹೇಳುವುದನ್ನು ಹೇಳಿಯೇ ತೀರಬೇಕು ಎಂಬ ಹಟ. "ಇಂಥ ವಾಚಾಳಿ ಅಪರೂಪ" ಎನ್ನುವುದಾಗಿ ಖಾದ್ರಿ ಶಾಮಣ್ಣ ಕ್ರಾಂತಿ ತಳಮಳ ಎಂಬ ಲೇಖನದಲ್ಲಿ ಹೇಳುತ್ತಾರೆ. ಸಾಮಾನ್ಯವಾಗಿ ರಾಜಕಾರಣಿಗಳಲ್ಲಿ ಕಾಣದ ಕೆಲ ಲಕ್ಷಣಗಳು ಗೌಡರಲ್ಲಿ ಇತ್ತು. ನಯ, ವಿನಯ, ಸತ್ಕಾರ ಪ್ರವೃತ್ತಿ ಮಲೆನಾಡಿನವರಿಗೆ ಹೇಳಿಕೊಡಬೇಕೆ?. ತನ್ನ ಕಿಸೆಯಲ್ಲಿ ಒಂದೇ ರೂಪಾಯಿ ಇದ್ದರೂ ಇತರರಿಗಾಗಿ ಅದನ್ನೂ ವೆಚ್ಚ ಮಾಡಲು ಎಂದೂ ಹಿಂಜರಿಯಲಿಲ್ಲ. ಅಂತೆಯೇ ಜೀವನದ ಸೊಗಸೆಲ್ಲಕ್ಕೂ ಅವರಲ್ಲಿ ಸ್ವಾಗತವಿತ್ತು. ಅದಕ್ಕೆ ಬೇಕಾದ ಅಭಿರುಚಿಯಿತ್ತು. ಸಂಗೀತ, ಸಾಹಿತ್ಯ, ಉದಾತ್ತ ತತ್ವ ಚಿಂತನೆ, ಲಘುವಾದ ಹರಟೆ, ಪಾಪ್ ಸಂಗೀತ ಎಲ್ಲಕ್ಕೂ ಅವರಲ್ಲಿ ಎಡೆ ಇತ್ತು. ಅವರ ಶುಭ್ರ ಉಡಿಗೆ, ತೊಡಿಗೆ, ನೀವಿದ ಕಚ್ಚೆ, ಸರಳವಾದ ಖಾದಿ ಅಂಗಿ ಅವರ ಸ್ಫಟಿಕ ಮನಸ್ಸಿಗೆ ಸಾಕ್ಷಿಯಾಗಿದ್ದವು ಎನ್ನುವುದಾಗಿ ಖಾದ್ರಿ ಶಾಮಣ್ಣ ಕ್ರಾಂತಿಯ ತಳಮಳ ಎಂಬ ಲೇಖನದಲ್ಲಿ ಗೋಪಾಲ ಗೌಡರ ಬಗ್ಗೆ ಬರೆಯುತ್ತಾರೆ (ಶಾಂತವೇರಿ ಗೋಪಾಲಗೌಡರ ನೆನಪಿನ ಸಂಪುಟ 37–38).

ಕುಮಾರವ್ಯಾಸನ ಕಾವ್ಯದ ಉದಾಹರಣೆ ನೀಡುತ್ತಾ "ಬೇರು ನೀರುಂಡಾಗ ತಣಿಯುವೆ ಭೂರುಹದ ಶಾಖೋಪ ಶಾಖೆಗಳು" ಎಂದು ರಾಜಕಾರಣದಲ್ಲಿ ವಿಧಾನ ಸಭಾ ಸದಸ್ಯನ ಕರ್ತವ್ಯದ ಬಗ್ಗೆ ತಿಳಿಸಿಕೊಡುವ ಪ್ರಯತ್ನವನ್ನು ಗೌಡರು ಮಾಡುತ್ತಿದ್ದರು. ಎನ್ನುವುದಾಗಿ. ಕೆ.ವಿ. ಸುಬ್ಬಣ್ಣ ಗೋಪಾಲಗೌಡರಿಗೆ ಸ್ಮಾರಕ ಎಂಬ ಲೇಖನದಲ್ಲಿ ಬರೆದಿದ್ದಾರೆ (ಶಾಂತವೇರಿ ಗೋಪಾಲಗೌಡರ ನೆನಪಿನ ಸಂಪುಟ–40).

''ಅವನೂ ಎಲ್ಲರಂತೆ ಸಾಮಾನ್ಯ ಹುಡುಗ. ನೋಡುವುದಕ್ಕೆ ಸ್ವಲ್ಪ ಲಕ್ಷಣವಾಗಿ ಇತರ ಹುಡುಗರಿಗಿಂತ ಮುಖದಲ್ಲಿ ಹೆಚ್ಚು ಕಳೆ, ಕಣ್ಣು ತೀಕ್ಷ್ಣವಾಗಿತ್ತು. ಯೌವನಕ್ಕೆ ಅನುಗುಣವಾದ ಉತ್ಸಾಹ, ಭಾವೋದ್ರೇಕ, ಸ್ಪೂರ್ತಿ ಆತನ ಕಣ್ಣುಗಳಲ್ಲಿ ಉಕ್ಕುತ್ತಿದ್ದಂತೆ ತೋರುತ್ತಿತ್ತು. ಆತನನ್ನು ನೋಡಿದರೆ ಹುಷಾರಿ ಹುಡುಗ ಎನಿಸುತ್ತಿತ್ತು. ಹಿರಿಯರ ವಿಷಯ ತಿಳಿದಿದ್ದುದರಿಂದ ವಿನೀತನಾದರೂ ಆತ್ಮೀಯತೆಯಿಂದ ಮಾತನಾಡುತ್ತಿದ್ದ. ನಿರ್ಭಯವಾಗಿ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಿದ್ದ. ದೇಶದಲ್ಲಿ ಎಲ್ಲರೂ ಸಮಾನರು, ಸಮನತೆ ಬೇಕು, ಧನಿಕ ಬಡವ ಎಂಬ ವ್ಯತ್ಯಾಸ ಹೋಗಬೇಕು.

ಯಾವಾಗಲೂ ಯಾವುದಾದರೊಂದು ಪುಸ್ತಕವನ್ನು ಹಿಡಿದೇ ಇರುತ್ತಿದ್ದ......''– ಗೊರೂರು ರಾಮಸ್ವಾಮಿ ಅಯ್ಯಂಗಾರ್. ''ಎತ್ತರದ ನಿಲುವು, ಹಸನ್ಮುಖ, ಕಚ್ಚೆ–ಪಂಚೆಯನ್ನು ಮುಂದೆ ಕುಚ್ಚುಬಿಟ್ಟು ಉಡುತ್ತಿದ್ದರು. ಉತ್ತಮ ವಾಗ್ಮಿಗಳು......''– ಪು.ತಿ.ನ. ''ಶಾಂತವೇರಿ ಗೋಪಾಲಗೌಡರು ಮಲೆನಾಡಿನ ಸುತ್ತಲಿನಲ್ಲಿ ಸ್ವಂತ ಭೂಮಿ ಇಲ್ಲದೇ ಪರರ ಭೂಮಿಯನ್ನು ಕೃಷಿ ಮಾಡಿ, ಕಷ್ಟ ಕಾರ್ಪಣ್ಯಗಳಿಂದ ಜೀವಿಸುತ್ತಿರುವ ಒಕ್ಕಲುಗಳನ್ನು ಒಂದುಗೂಡಿಸಿ ಅವರಿಂದ ಚಳುವಳಿ ನಡೆಸಿ ಅವರಲ್ಲಿ ಆತ್ಮವಿಶ್ವಾಸ ಮೂಡುವಂತೆ, ದೀರ್ಘಕಾಲ ದುಡಿದ ಜನಪ್ರಿಯ ವ್ಯಕ್ತಿಯಾಗಿದ್ದರು......''– ಶಿವರಾಮಕಾರಂತ.

''ಅತ್ಯಂತ ಬಡಕುಟುಂಬದಿಂದ ಬಂದಿದ್ದ ಗೋಪಾಲಗೌಡರ ವ್ಯಕ್ತಿತ್ವ ತುಂಬಾ ಸುಂದರವಾದದ್ದು ಮತ್ತು ಸುಸಂಸ್ಕೃತವಾದದ್ದು. ಊಟಮಾಡುವುದಾಗಲಿ, ಬಟ್ಟೆ ತೊಡುವುದಾಗಲಿ, ಮಾತಾಡುವುದಾಗಲಿ, ಬರವಣಿಗೆ ಮಾಡುವುದಾಗಲಿ ಎಲ್ಲದರಲ್ಲೂ ಅಚ್ಚುಕಟ್ಟು ಇರುತ್ತಿತ್ತು. ಹೀಗಾಗಿ ಅವರ ಇಡೀ ಜೀವನವೇ ವಿಶಿಷ್ಟವಾಗಿತ್ತು'' – ಕಾಗೋಡು ತಿಮ್ಮಪ್ಪ.

'ಉಳುವವನೆ ನೆಲದೊಡೆಯ' ಚಳುವಳಿಯಲ್ಲಿ ಭಾಗವಹಿಸಿ ಕೂಸಿನೊಂದಿಗೆ ಜೈಲಿನಲ್ಲಿದ್ದೆ, ಉಳುವವನೆ ನೆಲದೊಡೆಯ ಅಂತ ಘೋಷಣೆ ಕೂಗುತ್ತಾ ಮೆರವಣಿಗೆಯಲ್ಲಿ ಹೊರಟಿದ್ದೆವು. ನಮ್ಮ ಮೆರವಣಿಗೆ ಮಧ್ಯೆ ಗೋಪಾಲಗೌಡರು ವೇಷ ಮರೆಸಿಕೊಂಡು ಬರುತ್ತಿದ್ದರು. ಅವರು ಮೆರವಣಿಗೆಯಲ್ಲಿ ಇದ್ದದ್ದು ನಮಗೂ ಗೊತ್ತಿರಲಿಲ್ಲ – ಚಿನ್ನಮ್ಮ ಆರಗ.

''ಗೌಡರು ನಾನೂ ಒಂದೇ; ನಮ್ಮಂಗೆ ಅವರಿಗೂ ಏನೂ ಇರಲಿಲ್ಲ, ನಾವಿಬ್ಬರೂ ಬಡವರು, ಒಂದು ಸಿಗರೇಟು ಸೇದೋಕೆ ಕಾಸಿಲ್ಲದೆ, ನಮ್ಮ ಮುಖನೋಡಿ ಬಸ್‌ಚಾರ್ಜ್ ಕೊಡೋಕೆ ಜೇಬಿಗೆ ಕೈಹಾಕೋದು, ಆದರೆ ಅವರ ಜೇಬಿನಲ್ಲಿ ದುಡ್ಡು ಇರುತ್ತಾ ಇರಲಿಲ್ಲ. ನನ್ನ ಹತ್ತಿರಾನು ದುಡ್ಡು ಇರ್ತಾ ಇರಲಿಲ್ಲ''– ತುದಿಗದ್ದೆ ಮಿಣುಕಮ್ಮ.

''ಗೌಡರನ್ನು ಒಕ್ಕಲಿಗರ ಹಾಸ್ಟೆಲ್ ಉದ್ಘಾಟನೆಗೆ ಬರಬೇಕೆಂದು ಕೇಳಲು ಹೋದಾಗ 'ನಾನು ಬರಬೇಕಂದ್ರೆ ಒಕ್ಕಲಿಗರ ಹಾಸ್ಟೆಲ್ ಅನ್ನೋದನ್ನು ಮೊದಲು ಬಲಾಯಿಸಿ, ಅದನ್ನು ಸಾರ್ವಜನಿಕ ಹಾಸ್ಟೆಲ್ ಅಂತಮಾಡಿ' ಆಗ ಬರ್ತೀನಿ ಎಂದು ದಿಟ್ಟವಾಗಿ ಹೇಳಿಕಳಿಸಿದರು''– ಪ್ರಕಾಶ್‌ಶೆಟ್ಟಿ.

''ಗೌಡರ ಭಾಷಣ ಅಂದರೆ ಅದೊಂದು ಯಕ್ಷಗಾನದ ಹಾಗೆ, ವ್ಯಂಗ್ಯ, ತಮಾಷೆ, ಸಾಹಿತ್ಯ, ಕಲೆ, ರಾಜಕಾರಣ ಎಲ್ಲವೂ ಇರುತ್ತಿತ್ತು''– ಜವಳಿ ನಾಗೇಂದ್ರನಾಥ್.

“ಗೋವಾ ವಿಮೋಚನಾ ಸರ್ವ ಪಕ್ಷೀಯ ಚಳುವಳಿಗೆ ಶ್ರೀ ಗೋಪಾಲಗೌಡರೇ ಮೂರ್ತ ಸ್ವರೂಪ ಕೊಟ್ಟವರು” – ಎಸ್.ಆರ್. ಬೊಮ್ಮಾಯಿ.

“ಹಣ ಇಲ್ಲದ ಈ ದೇಶದಲ್ಲಿ ನನ್ನಂತವರು ಚುನಾವಣೆಗೆ ನಿಲ್ಲೋದು ಕಷ್ಟ. ಅಮ್ಮಾವರು ಎರಡು ಎಮ್ಮೆ ತೆಗೆಸಿಕೊಟ್ಟರೆ ರಾಜಕೀಯ ಬಿಟ್ಟು ಹಾಲುಮಾರಿಕೊಂಡು ಜೀವನ ಮಾಡುತ್ತೀನಿ; “ನನ್ನ ಜುಬ್ಬ ಹರಿದು ಹೋಗಿದೆ ಎರಡು ಜೊತೆ ಜುಬ್ಬ ಮಂಜೂರು ಮಾಡುತ್ತಾರೇನೋ ಅಮ್ಮಾವರು ನೋಡಬೇಕು.” ಈ ಮಾತುಗಳು ಗೌಡರು ಎದುರಿಸುತ್ತಿದ್ದ ಆರ್ಥಿಕ ಸಮಸ್ಯೆ ಹಾಗೂ ಕೌಟುಂಬಿಕ ಬಡತನ ಮತ್ತು ಶ್ರದ್ಧಾ ಜೀವನದ ಪರಿಕಲ್ಪನೆಗಳನ್ನು ವಿವರಿಸುತ್ತದೆ. ಗೌಡರ ರಾಜಕೀಯ ಜೀವನದ ಇನ್ನೊಂದು ಮುಖದ ದರ್ಶನವನ್ನು ಗೌಡರ ಈ ಮಾತುಗಳು ಜಗತ್ತಿಗೆ ತೋರಿಸಿಕೊಡುತ್ತವೆ.

ಮೊದಲಿನಿಂದಲೂ ಜನಹಿತ ಕಾರ್ಯದಲ್ಲಿ ತೊಡಗಿಸಿಕೊಂಡ ಗೌಡರಿಗೆ ತನ್ನ ವೈಯಕ್ತಿಕ, ಸಾಂಸಾರಿಕ ಜೀವನದ ಬಗ್ಗೆ ಯೋಚಿಸಲು ಸಮಯವಿರಲಿಲ್ಲ. ಸರ್ವರಿಗೂ ಸಮಬಾಳು, ಸಮಪಾಲು ದೊರಕಿಸಕೊಡುವ ಆದರ್ಶದ ಬೆನ್ನುಹತ್ತಿದ ಗೌಡರಿಗೆ ಸಂಸಾರ ಎಲ್ಲಿ ತನ್ನ ಆದರ್ಶಗಳಿಗೆ ತಡೆಯೊಡ್ಡಬಹುದು ಎಂಬ ಆತಂಕ ಕಾಡಿತ್ತು. ಸ್ವಾರ್ಥ ಸಾಧನೆಗೆ ತನ್ನ ಬದುಕಿನ ಸಿದ್ಧಾಂತಗಳನ್ನು ಬಲಿಕೊಡಲು ಗೌಡರಿಗೆ ಇಷ್ಟವಿರಲಿಲ್ಲ. ಹೀಗಾಗಿ ಅವರು ಸಾಂಸಾರಿಕ ಜೀವನಕ್ಕೆ ಹಿಂಜರಿಯುತ್ತಿದ್ದರು. ಮದುವೆಯ ಬಗ್ಗೆ ಗೌಡರ ಅಭಿಪ್ರಾಯವೆಂದರೆ “ಮದುವೆಯಾದರೆ, ಮನೆಮಠ ಮಾಡಬೇಕು, ಆಸ್ತಿ ಮಾಡಬೇಕು ಅಂತ ಆಸೆ ಆಗುತ್ತೆ. ಆದ್ದರಿಂದ ಮದುವೆ ಬೇಡ”. ಕೊನೆಗೂ ಆತ್ಮೀಯರ ಹಾಗೂ ಹಿತೈಷಿಗಳ ಒತ್ತಾಯಕ್ಕೆ ಮಣಿದು ತಡವಾಗಿ ಗೌಡರು ಸೋನಕ್ಕರವರನ್ನು ಮದುವೆಯಾದರು.

ತಮ್ಮ ಬದುಕಿನ ರೀತಿನೀತಿಗಳು ಹಾಗೂ ಸಿದ್ಧಾಂತಗಳ ಆದರ್ಶದ ಮೂಲಕ ಸಮಾಜದಲ್ಲಿ ತಮ್ಮದೇ ಆದ ಛಾಪು ಮೂಡಿಸಿದ ವ್ಯಕ್ತಿ ಗೋಪಾಲಗೌಡರು. ಬಡವರ, ಶ್ರೀಮಂತರ ನಡುವೆ ಬದುಕಿದ್ದರೂ ಸಹ ತಾವೆಂದೂ ಶ್ರೀಮಂತಿಕೆಯ ಬೆನ್ನುಹತ್ತಿದವರಲ್ಲ. ಬಡತನವನ್ನು ಹಾಗೂ ಅದರ ಸಂಕಷ್ಟಗಳನ್ನು ಪ್ರಾಯೋಗಿಕವಾಗಿ ಬಲ್ಲ ಗೌಡರು ಯಾವಾಗಲೂ ಬಡವರ ಪಕ್ಷಪಾತಿಯಾಗಿರುತ್ತಿದ್ದರು. ನ್ಯಾಯ ಸಮ್ಮತಿಯ ಸಂದರ್ಭದಲ್ಲಿ ಆತ್ಮೀಯರನ್ನೂ ಕೂಡ ಲೆಕ್ಕಿಸದೆ ನಿಷ್ಠೂರವಾಗಿ ನುಡಿಯುತ್ತಿದ್ದರು. ರಾಜ್ಯ ಹಿತ, ಸಮಾಜ ಹಿತ ಬಯಸಿದ ಗೌಡರು ಜನಸಾಮಾನ್ಯರಲ್ಲಿ ಸಾಮಾನ್ಯ ವ್ಯಕ್ತಿಯಾಗಿ ಬೆರೆತು ಜನಾನುರಾಗಿಯಾದರು. ಸಮಾಜದ ಅನಿಷ್ಟಗಳ ವಿರುದ್ಧ ಶೋಷಿತರನ್ನು ಸಂಘಟಿಸಿ ಅನ್ಯಾಯದ ವಿರುದ್ಧ ಧ್ವನಿಯೆತ್ತುವಂತೆ ಮಾಡಿದರು. ಸ್ವಾಭಿಮಾನದ ಕಿಚ್ಚನ್ನು ಬಿತ್ತುವ ಮೂಲಕ ಅಭಿಮಾನದ ಸೆಲೆಯನ್ನು ನಾಡಿನ ಜನರಲ್ಲಿ ಮೂಡಿಸಿದರು. ನಮ್ಮವನೇ, ನಮ್ಮ ಕುಟುಂಬದ ಸದಸ್ಯನೇ ಎನ್ನುವಷ್ಟರ ಮಟ್ಟಿಗೆ ಅಪ್ಯಾಯಮಾನವಾದ ಪ್ರೀತಿಯನ್ನು ಪಡೆದುಕೊಂಡಿದ್ದರು. ಈ ಎಲ್ಲಾ ಕಾರಣಗಳಿಂದಾಗಿ ಬಡವರು, ಶೋಷಿತರು,

ಅಪಮಾನಿತರು, ಶ್ರೀಮಂತರು, ಮೇಲ್ವರ್ಗದವರು, ಸಾಹಿತಿಗಳು, ತತ್ವಚಿಂತಕರು ಹಾಗೂ ರಾಜಕಾರಣಿಗಳು ಮತ್ತು ಅಧಿಕಾರಿಗಳ ಪಾಲಿಗೆ ಗೌಡರು ಒಬ್ಬ ಆದರ್ಶ, ಪ್ರಜ್ಞಾವಂಥ ಹಾಗೂ ನೈತಿಕ ರಾಜಕಾರಣಿ. ಅಬಲರಿಗೆ ಸ್ವಾಭಿಮಾನದ ಧ್ವನಿ. ನೈತಿಕ ರಾಜಕಾರಣಿಗಳ ಆದರ್ಶದ ಕನಸು. ಅಭಿವೃದ್ಧಿ ಕನಸು ಹೊಂದಿದ ಸಚ್ಚಾರಿತ್ರ್ಯ ಹೊಂದಿದ ನಾಗರೀಕರಿಗೆ ಮುಂದಾಳು. ತಮ್ಮ ಶಕ್ತಿಯನ್ನೇ ಮರೆತ ದುರ್ಬಲರಿಗೆ ಜೀವನದ ಶಕ್ತಿಯನ್ನು ಉದ್ದೀಪನಗೊಳಿಸುವ ರುವಾರಿ ಹೀಗೆ ಗೋಪಾಲಗೌಡರು ಅಂತಃಶಕ್ತಿಯಾಗಿ, ವ್ಯಕ್ತಿ ಶಕ್ತಿಯಾಗಿ ಈ ನಾಡಿಗೆ ಪರಿಚಿತರಾಗಿದ್ದಾರೆ. ಹಾಗಾಗಿ ಇಂದೂ ಕೂಡ ಅವರು ಒಡನಾಡಿದ ರಾಜ್ಯದ, ರಾಷ್ಟ್ರದ ಎಲ್ಲಾ ಭಾಗಗಳಲ್ಲಿ ಅದರಲ್ಲೂ ಮಲೆನಾಡಿನ ಹೃದಯ ಭಾಗಗಳಲ್ಲಿ ಗೋಪಾಲಗೌಡರು ಪೂಜಿಸುವ ಶಕ್ತಿಯಾಗಿ ಮನೆ ಮನೆಗಳಲ್ಲಿ ರಾರಾಜಿಸುತ್ತಿದ್ದಾರೆ. ಗೌಡರನ್ನು ಆತ್ಮೀಯವಾಗಿ ನೆನಪಿಸಿಕೊಳ್ಳುತ್ತಿದ್ದಾರೆ. ಈ ಎಲ್ಲಾ ಅಧ್ಯಯನದ ಅಂಶಗಳು ಪ್ರೀತಿ ಪಾತ್ರರ ಅನಿಸಿಕೆಗಳು ಗೋಪಾಲಗೌಡರ ವ್ಯಕ್ತಿ ಚಾರಿತ್ರ್ಯಕ್ಕೆ ಹಿಡಿದ ಕನ್ನಡಿಯಾಗಿದೆ. ಹೀಗೆ ಜನರ ಕಣ್ಣಲ್ಲಿ ಗೋಪಾಲಗೌಡರು ಶಕ್ತಿಯಾಗಿ ಹೊರಹೊಮ್ಮಿದ್ದಾರೆ.

ಅಧ್ಯಾಯ – 5

ಜನತೆಯ/ಜನಪದ ಶಕ್ತಿಯಾಗಿ ಗೋಪಾಲಗೌಡ

ಗೋಪಾಲಗೌಡರು ಸಮಾಜದ ಕಟ್ಟಕಡೆಯ ವ್ಯಕ್ತಿಯ ಬಗ್ಗೆ ವಿಶೇಷ ಕಾಳಜಿ ಹೊಂದಿದವರಾಗಿದ್ದರು. ಇದಕ್ಕೆ ವ್ಯತಿರಿಕ್ತವಾದ ಸನ್ನಿವೇಶ ಹಾಗೂ ಅಂಶಗಳನ್ನು ಅವರು ತೀವ್ರವಾಗಿ ವಿರೋಧಿಸುತ್ತಿದ್ದರು. ಇದಕ್ಕೆ ಪೂರಕವೆಂಬಂತಹ ಘಟನೆಯನ್ನು ಅಮ್ಮೆಂಬಳ ಆನಂದ(ಶಾಂತವೇರಿ ಗೋಪಾಲಗೌಡ ನೆನಪಿನ ಸಂಪುಟ–189)ರಲ್ಲಿ ಹೀಗೆ ನೆನಪಿಸಿಕೊಳ್ಳುತ್ತಾರೆ. "ಅಧಿಕಾರಿಗಳನ್ನು ಮಣಿಸುವ ಎದೆಗಾಗಿಕೆ ಗೋಪಾಲಗೌಡರಿಗಿತ್ತು, ಮಾತ್ರವಲ್ಲದೆ ಅರಸೊತ್ತಿಗೆಯ ವಿರುದ್ಧವೂ ಅವರು ಕೆರಳಿದ್ದರು. ಮೈಸೂರು ಅರಸರ ಜಂಬೂಸವಾರಿಯನ್ನು ಅವರ ವಿರೋಧಿಸಿ ತುಂಬಿದ ಜನಜಂಗುಳಿಯ ಮಧ್ಯೆ ಸತ್ಯಾಗ್ರಹ ಹುಡಿದ್ದು, ಬಂಧನಕ್ಕೊಳಗಾಗಿ ಮುಂದಿನ ದಿನಗಳಲ್ಲಿ ಅಂಬಾರಿಯ ಮೇಲೆ ಅರಸರು ಸವಾರಿ ಮಾಡುವುದು ನಿಂತು ಹೋಯಿತು. ಈ ಘಟನೆಯ ಮೂಲಕ ವ್ಯಕ್ತಿ ಆರಾಧಕತೆಯನ್ನು ಖಂಡಿಸುವುದರ ಜೊತೆಗೆ ಸಾಮಾನ್ಯ ಜನರ ಆಶೋತ್ತರಗಳಿಗೆ ಸ್ಪಂಧಿಸುವ ಬಗ್ಗೆ ಗಂಭೀರ ಚಿಂತನೆಗೆ ಚಾಲನೆ ನೀಡಿದರು.

ಒಮ್ಮೆ ತಾವು ಪ್ರಯಾಣಿಸುತ್ತಿದ್ದ ರೈಲಿನಲ್ಲಿ ಒಂದು ಚಿಕ್ಕ ಹುಡುಗ ಚಳಿಯಿಂದ ಮುದುಡಿ ಕುಳಿತಿದ್ದನ್ನು ಗಮನಿಸಿದ ಗೌಡರು ತನ್ನೊಂದಿಗೆ ಬಂದಿದ್ದ ಶಿಷ್ಯ ಕೋಣಂದೂರು ಲಿಂಗಪ್ಪರವರನ್ನು ಕರೆದು ಆತನಿಗೆ ನನ್ನ ಬೆಡ್‌ಶೀಟ್ ಕೊಡು ಎಂದು ಹೇಳಿ ಕೊಡಿಸಿದ್ದರು. ಸ್ವಲ್ಪ ಸಮಯದ ನಂತರ ಪುನಃ ಆ ಹುಡುಗನ ಕಡೆಗೆ ನೋಡಿದಾಗ ಆತ ಇನ್ನೂ ಚಳಿಯಿಂದ ಮುದುಡಿ ಮಲಗಿಕೊಂಡಿದ್ದ. ಇದನ್ನು ಗಮನಿಸಿದ ಅವರು ಪುನಃ ತಮ್ಮ ಶಿಷ್ಯ ಲಿಂಗಪ್ಪರವರಿಂದ ತಮ್ಮ ಶಾಲನ್ನು ತೆಗೆದುಕೊಂಡು ತಾವೆ ಆ ಮಗುವಿಗೆ ಹೊದಿಸಿ ಮಲಗಿಸಿದರು. ಇದು ಅವರ ಪ್ರೀತಿಯ ಅಂತಃ ಕರಣ ಮುಖದ ಒಂದು ದರ್ಶನವಷ್ಟೆ.

ಗೌಡರು ಯಾವುದೇ ವ್ಯಕ್ತಿ ಅಥವಾ ಪಕ್ಷದ ಕಾರ್ಯಕ್ಕಿಂತಲೂ ಜನಹಿತ ಕಾರ್ಯಕ್ಕೆ ಹಾಗೂ ತಾವು ಅಲಂಕರಿಸಿದ ಹುದ್ದೆಗೆ ಗೌರವ ತಂದುಕೊಡುವ ನಿಟ್ಟಿನಲ್ಲಿ ಪ್ರಯತ್ನಿಸುತ್ತಿದ್ದರು. ಹೀಗಾಗಿ ಹುದ್ದೆಗಿಂತ ಗೌಡರೆಂದರೆ ಆ ಹುದ್ದೆಗೆ ಹೆಚ್ಚಿನ ಮರ್ಯಾದೆ ಸಲ್ಲುತ್ತಿತ್ತು. ತಮ್ಮ ಒಡಂಬಡಿಕೆಯ ಸಲಿಗೆಯಿಂದ ಸಹಾಯ ಪಡೆಯಲು ಬಂದಾಗ ಅರ್ಹತೆಯಿದ್ದವರಿಗೆ ಸಹಾಯಮಾಡಿ ತಮ್ಮ ಅಧಿಕಾರದ ದುರುಪಯೋಗದ ಸಂದರ್ಭದಲ್ಲಿ ಆತ್ಮೀಯರನ್ನೂ ಸಹ ತಮ್ಮ ವ್ಯಂಗ್ಯ ಹಾಗೂ ಕಟು ಟೀಕೆಗಳಿಂದ ಛೇಡಿಸುತ್ತಿದ್ದರು. ಕಾರ್ಯಕರ್ತರ ಸಭೆಯಲ್ಲಿ ಒಬ್ಬರು ಎದ್ದುನಿಂತು ನಮ್ಮೂರಿನಲ್ಲಿ ಮೋರಿ ಮಾಡಿಸಲು ಕೇಳಿಕೊಂಡಿದ್ದು ಇನ್ನೂ ಆ ಕೆಲಸ ಆಗಿಲ್ಲವೆಂದು ಗೌಡರನ್ನು ಕೇಳಿಕೊಂಡ, ಅದಕ್ಕೆ ಪ್ರತಿಯಾಗಿ ಗೌಡರು ನಾನು ನಿಮ್ಮ ಊರಿಗೆ ಮೋರಿ ಮಾಡಿಸಲು ಬಂದವನಲ್ಲಾ, ನಾನು ಒಟ್ಟು ಕರ್ನಾಟಕದ

ಪ್ರತಿನಿಧಿ. ಕರ್ನಾಟಕದಲ್ಲಿ ಎಲ್ಲಿ ಏನಾಗಬೇಕೆಂಬುವುದರ ಬಗ್ಗೆ ಗಮನ ಕೊಡಬೇಕಾಗಿದೆ. ಇಲ್ಲಿ ಮೋರಿ ಆಗದಿರುವ ಬಗ್ಗೆ ನೀವೇನು ಕ್ರಮ ಕೈಗೊಂಡಿದ್ದೀರಿ? ಸಂಬಂಧಪಟ್ಟ ಇಲಾಖೆಯವರನ್ನು ವಿಚಾರಿಸಿದ್ದೀರಾ? ಆ ಇಲಾಖೆಯವರು ನೀವು ಹೇಳಿದ ಕೆಲಸವನ್ನು ಮಾಡದಿದ್ದಲ್ಲಿ, ನನಗೆ ಹೇಳಿ, ಆಗ ನಾನು ಹೇಳಿ ಮಾಡಿಸ್ತೀನಿ. ನಿಮ್ಮಿಂದಲೇ ಆಗುವ ಕೆಲಸಕ್ಕೆ ನನಗೆ ಹೇಳಬೇಡಿ. ಎಂಬುವುದಾಗಿ ಹೇಳಿ ಕಾರ್ಯಕರ್ತರಲ್ಲಿ ಜವಾಬ್ದಾರಿಯ ಅರಿವನ್ನು ಮೂಡಿಸಿದ್ದರು. 1952ರ ಎರಡನೇ ಚುನಾವಣೆಯಲ್ಲಿ ಗೋಪಾಲಗೌಡರು ಕಾಂಗ್ರೆಸ್ಸಿನ ಎಂ.ಆರ್. ಬದರಿನಾರಾಯನ್ ವಿರುದ್ಧ ಸ್ಪರ್ಧಿಸಿ ಸೋತಿದ್ದರು. ಆಗಿನ ಸರ್ಕಾರದಲ್ಲಿ ಕಡಿದಾಳ ಮಂಜಪ್ಪನವರು ಕಂದಾಯ ಮಂತ್ರಿಗಳಾಗಿದ್ದರು. ಗೋಪಾಲಗೌಡರ ಕಡುಬಡತನದ ಸ್ಥಿತಿ ಅರಿತಿದ್ದ ಅವರ ಆಪ್ತರೊಬ್ಬರು ಅವರಿಗೆ ಏನಾದರೂ ಸಹಾಯ ಮಾಡುವಂತೆ ಕಡಿದಾಳ್ ಮಂಜಪ್ಪನವರಿಗೆ ಕೋರಿಕೊಂಡರು. ಇದಕ್ಕೆ ಒಪ್ಪಿದ ಕಡಿದಾಳ್ ಮಂಜಪ್ಪನವರು ನಾಳೆಯ ಕೆಳಗೆ 5–6 ಎಕರೆ ಜಮೀನು ಕೊಡಿಸಬಹುದು. ಗೋಪಾಲಗೌಡರಿಂದ ಅರ್ಜಿ ಹಾಕಿಸಿ ಎಂದರು. ಗೋಪಾಲಗೌಡರ ಸ್ನೇಹಿತರು ಅವರ ಹತ್ತಿರ ಬಂದು ತಮಗಲ್ಲದಿದ್ದರೂ ತಮ್ಮ ಕುಟುಂಬಕ್ಕಾದರೂ ಸಹಾಯವಾಗುತ್ತದೆ. ಅರ್ಜಿಹಾಕಿ ಅಂತ ಗೌಡರಿಗೆ ದುಂಬಾಲು ಬಿದ್ದರು. ಅದಕ್ಕೆ ಗೌಡರು ನೋಡಿ, ನನ್ನೊಬ್ಬನಿಗೆ ನಾಲೆ ಕೆಳಗೆ ಆರು ಎಕರೆ ಕೊಡುವ ಬದಲು, ಅದೇ ಜಮೀನನ್ನು ಆರು ಜನ ಬಡವರಿಗೆ ಕೊಡೋಕೆ ನಿಮ್ಮ ಮಂತ್ರಿಗಳಿಗೆ ಹೇಳಿ. ಅದರಿಂದ ಆರು ಜನ ಬಡ ಕುಟುಂಬಗಳಾದರೂ ಬದುಕುಳಿಯುತ್ತವೆ. ನಾವೇನೂ ಸ್ವಂತ ಸಾಗುವಳಿ ಮಾಡುವವನಲ್ಲ. ನನಗೇಕೆ ಜಮೀನು. ಉಳುವವನೆ ಹೊಲದೊಡೆಯನಾಗಬೇಕೆಂಬುದು ನನ್ನ ಹೋರಾಟ, ನಾನು ಹೀಗೆ ಉಳಿಮೆ ಮಾಡದೆ ಒಡೆಯನಾಗಲು ನನಗೆ ನೈತಿಕ ಹಕ್ಕಿಲ್ಲ ಎಂಬುದಾಗಿ ತಮ್ಮ ನಿಷ್ಠೂರ ಮಾತುಗಳಿಂದ ಕಡಿದಾಳು ಮಂಜಪ್ಪನವರು ತಮಗೆ ನೀಡಿದ ಆಹ್ವಾನವನ್ನು ತಿರಸ್ಕರಿಸಿದರು.

ಕೆಂಗಲ್ ಹನುಮಂತಯ್ಯನವರು ಮುಖ್ಯ ಮಂತ್ರಿಯಾಗಿದ್ದ ಸಂದರ್ಭದಲ್ಲಿ ಎಲ್ಲಾ ಶಾಸಕರಿಗೂ ನಿವೇಶನಕೊಡಲು ಮುಂದಾದರು. ಅದರಂತೆ ಗೋಪಾಲಗೌಡರಿಗೂ ಕೊಡಲು ಮುಂದಾದಾಗ ಗೌಡರು ಈ ರಾಜ್ಯದಲ್ಲಿ ಮೊದಲು ಎಲ್ಲರಿಗೂ ನಿವೇಶನ ಕೊಡಿ, ಎಲ್ಲಿರಿಗೂ ಕೊಟ್ಟು ಉಳಿದ ಮೇಲೆ ನನ್ನ ಪಾಲಿಗೆ ಬಂದ ನಿವೇಶನವನ್ನು ಅಲ್ಲಿಡಿ. ಯಾವಾಗಲಾದರೂ ತೆಗೆದುಕೊಳ್ಳುತ್ತೇನೆಂದು ತಮ್ಮ ಹಿತವನ್ನು ಕಡೆಗಣಿಸಿ ಯಾವಾಗಲೂ ಜನಹಿತದತ್ತ ಯೋಚಿಸುತ್ತಿದ್ದ ಧೀಮಂತ ವ್ಯಕ್ತಿಯೊಬ್ಬರ ಮಾರ್ಧನಿಯಿದು.

ದಿನಾಂಕ:08–12–1950ರಲ್ಲಿ ಸಾಗರ ತಾಲ್ಲೂಕು ಶಿರವಂತೆ ಗ್ರಾಮದಲ್ಲಿ ತೀರ್ಥಹಳ್ಳಿಯ ಹೆಚ್.ಹೆಚ್. ಮಂಜಪ್ಪಗೌಡರು, ಎಚ್ ಗಣಪತಿಯಪ್ಪ ಹಾಗೂ ಅದೇ ಗ್ರಾಮದ ಭೂಮಾಲಿಕರಾದ ಎಚ್.ಎಲ್. ವೀರಭದ್ರಪ್ಪ ಗೌಡರೊಂದಿಗೆ ಗೇಣಿ ರೈತರ ಸಭೆಗೆ ಹೋಗಿದ್ದರು. ಗೌಡರು ಮಾತು ಆರಂಭಿಸಿ ಸನ್ಮಾನ್ಯ ಸಭಾಧ್ಯಕ್ಷರೆ, ಶೋಷಣೆಗೆ ಒಳಗಾದ ಗೇಣಿ ರೈತರೆ, ಶೋಷಕರ ಪ್ರತೀಕವಾದ ಸಭೆಯಲ್ಲಿ ಉಪಸ್ಥಿತರಿರುವ ಭೂಮಾಲಿಕರ ಪ್ರತಿನಿಧಿ

ಶ್ರೀ ಎಚ್.ಎಲ್ ವೀರಭದ್ರಪ್ಪ ಗೌಡರೇ, ಎಂದಾಗ ಇಡೀ ಸಭೆ ಸ್ತಬ್ದವಾಯಿತು. ಆಗ ಕೋಪದಿಂದ ಎಚ್.ಎಲ್ ವೀರಭದ್ರಪ್ಪ ಗೌಡರು "ಏನ್ರಿ ಇದು! ನನ್ನ ಮನೆಯಲ್ಲಿಯೇ ಈಗ ಉಂಡು ಬಂದು, ನನಗೆ ಅವಮಾನ ಮಾಡುವುದೇ? ಅದಕ್ಕೆ ಗೋಪಾಲಗೌಡರಿಂದ ಬೇಸರ ಮಾಡಿಕೊಳ್ಳಬೇಡಿ, ನಾನು ಈ ಊರಿಗೆ ಬಂದಿದ್ದು, ನಿಮ್ಮ ಮನೆಯಲ್ಲಿ ಬಂದು, ನಿಮ್ಮಗಳನ್ನು ಹೊಗಳಿಹೋಗುವುದಕ್ಕಲ್ಲ, ಗೇಣಿದಾರರ ಬೇಡಿಕೆಗಳನ್ನು ಹೇಳುವುದಕ್ಕೆ ಅವರ ಬೇಡಿಕೆಯಲ್ಲಿ, ಮೂರು ಸೇರಿನ ಕೊಳಗದಲ್ಲಿಯೇ ಗೇಣಿ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳಲಾಗಿದೆ. ನೀವು ಮೂರುವರೆ ಸೇರಿನ ಕೊಳಗದಲ್ಲಿ ಗೇಣಿ ಪಡೆದಿದ್ದೀರಿ. ನಮ್ಮ ರೈತರಿಂದ ಹೆಚ್ಚಾಗಿ ಅಳೆಯಿಸಿಕೊಂಡಿರುವ ಬತ್ತದಲ್ಲಿ, ಆ ಅಕ್ಕಿಯಲ್ಲಿ ಸ್ವಲ್ಪಭಾಗವನ್ನು ಮಾತ್ರ ನಾನು ಇಂದು ನಿಮ್ಮ ಮನೆಯಲ್ಲಿ ಉಂಡು ಬಂದಿದ್ದೇನೆ" (ಶಾಂತವೇರಿ ಗೋಪಾಲಗೌಡರ ನೆನಪು ಸಂಪುಟ–212). ಎಂಬುದಾಗಿ ನುಡಿದು ದುರ್ಬಲರ, ಅಶಕ್ತರ ಪರವಾಗಿ ನಿಲ್ಲುವ ಎದೆಗಾರಿಕೆಯನ್ನು ಗೌಡರು ಹೊಂದಿದ್ದರು. ಶ್ರೀಮಂತರ ಒಡನಾಟವಿದ್ದರೂ ಆಯ್ಕೆ ಸಂದರ್ಭದಲ್ಲಿ ಸಮಾಜದ ಕಟ್ಟಕಡೆಯ ವ್ಯಕ್ತಿಯನ್ನು ಆಯ್ಕೆಮಾಡಿಕೊಳ್ಳುವ ಮೃದು ಹೃದಯದ ವ್ಯಕ್ತಿಯಾಗಿದ್ದರು.

ಪ್ರಾಥಮಿಕ ಶಿಕ್ಷಣದ ಬಗ್ಗೆ ಸರ್ಕಾರ ತುರ್ತು ಗಮನ ನೀಡಿ ಸುಧಾರಿಸುವ ನಿಟ್ಟಿನಲ್ಲಿ ಪ್ರಯತ್ನಿಸಬೇಕೆಂದು ಆಗ್ರಹಿಸುತ್ತಾ ಗೌಡರು – "ಚಿಕ್ಕಂದಿನ ವಿದ್ಯೆ ಪೊರೆಗಂ ಚೂಡಾರತ್ನ" ಎನ್ನುವುದಾಗಿ ಬಾಲ್ಯ ಶಿಕ್ಷಣದ ಪ್ರಾಮುಖ್ಯತೆಯ ಬಗ್ಗೆ ಒಪ್ಪಿಕೊಳ್ಳುತ್ತಾರೆ. ಶಿಕ್ಷಕ ವೃತ್ತಿ ಎಂಥವರಿಗೆ ಸಾಧ್ಯ ಎನ್ನುವುದನ್ನು ಅವರು ಹೇಳುತ್ತಾ ಮಕ್ಕಳ ಹಸುವಿನಂಥ ಮನಸ್ಸನ್ನು ಅರ್ಥಮಾಡಿಕೊಳ್ಳುವಂಥವರು, ಆ ಮಕ್ಕಳ ಕೋಮಲ ಬುದ್ಧಿ ವಿಕಾಸವಾಗುವಂತೆ, ಅವರನ್ನು ಹೆದರಿಸದೇ ಚಿಕ್ಕಮಕ್ಕಳಿಗೆ ಅವರ ಮನಸ್ಸನ್ನರಿತುಕೊಂಡು ಪಾಠ ಹೇಳತಕ್ಕಂಥ ಚೈತನ್ಯವಿರುವವರು, ಅಂದರೆ, ಮನಃಶ್ಯಾಸ್ತ್ರವನ್ನು ಬಲ್ಲಂಥ, ಹೆಚ್ಚಿನ ಪ್ರಪಂಚ ಜ್ಞಾನವುಳ್ಳವರನ್ನು ಶಿಕ್ಷಕ ವೃತ್ತಿಗೆ ಆಯ್ಕೆ ಮಾಡಿಕೊಳ್ಳಬೇಕೆಂದು ಸ್ಪಷ್ಟವಾಗಿ ಆಗಲೇ ತಿಳಿಸಿದ್ದರು.

ಎರಡನೇ ಚುನಾವಣೆಯಲ್ಲಿ ಸೋತ ಸಂದರ್ಭದಲ್ಲಿ ಒಮ್ಮೆ ಅವರಿಗೆ ಪ್ರಾಥಮಿಕ ಶಾಲೆಯ ಪಠ್ಯಪುಸ್ತಕಗಳು ನೋಡಲು ಸಿಕ್ಕವು. ಅವುಗಳಲ್ಲಿ ಒಂದು ಕನ್ನಡ ಗೊತ್ತಿಲ್ಲದ ತಮಿಳಿನವರು ಬರೆದ ಪುಸ್ತಕ. ಅದನ್ನು ಗೌಡರು ಓದಿ ಇಡೀ ಪುಸ್ತಕದ ಪ್ರತಿ ಸಾಲಿನಲ್ಲಿ ಇರುವ ತಪ್ಪುಗಳನ್ನು ಪಟ್ಟಿಮಾಡಿ ಪ್ರಜಾವಾಣಿ ಪತ್ರಿಕೆಗೆ ತಮ್ಮ ಟೀಕೆ ಸಹಿತ ಕಳುಹಿಸಿದ್ದರು. ಅವರ ಲೇಖನ ಎರಡು ದಿನ ಪ್ರಜಾವಾಣಿಯ ಮಧ್ಯ ಪುಟದಲ್ಲಿ ಪ್ರಕಟವಾಯಿತು. ಇದನ್ನು ಆಗಿನ ಮುಖ್ಯಮಂತ್ರಿ ಬಿ.ಡಿ. ಜತ್ತಿಯವರು ಓದಿನೋಡಿ ಕೂಡಲೇ ಆ ಪುಸ್ತಕವನ್ನು ರದ್ದುಮಾಡಿ ಮಿತ್ರರೊಡನೆ ಮಾತನಾಡುತ್ತಾ "ಗೌಡರಿಗೆ ಪ್ರಾಥಮಿಕ ಶಾಲೆಯ ಮಕ್ಕಳ ಪುಸ್ತಕ ಒದಲು ಪುರುಸೊತ್ತು ಹೇಗೆ ಸಿಕ್ಕಿತು? ಎಂದು

ಕೇಳಿದ್ದರಂತೆ" ಕೋಣಂದೂರು ಲಿಂಗಪ್ಪನವರು 'ನೆನಪುಗಳಲ್ಲಿ ಮೂಡುವ ಶಾಂತವೇರಿ' ಎಂಬ ಲೇಖನದಲ್ಲಿ ಉದಾಹರಿಸಿದ್ದಾರೆ (ಶಾಂತವೇರಿ ಗೋಪಾಲಗೌಡರ ನೆನಪಿನ ಸಂಪುಟ 75–76).

ಪಠ್ಯಪುಸ್ತಕಗಳ ವಿಚಾರದಲ್ಲಿ ದೇಶದ ಎಲ್ಲಾ ಜವಾಬ್ದಾರಿಯುತ ಜನರ ವಿವೇಚನೆಗೆ ಒಳಗಾಗಬೇಕಾಗಿರುತ್ತದೆ. 10 ಪುಸ್ತಕಗಳನ್ನು ತಂದು ಅದರಲ್ಲಿರುವ ಪಾಠಗಳನ್ನು ಹಿಂದು ಮುಂದುಮಾಡಿ ಒಂದು ಪುಸ್ತಕ ಮಾಡಬಹುದು. ಅದು ಸರಿಯಾದ ಕ್ರಮವೇ? ಮೂಲ ವಿಷಯ ಸಂಶೋದನೆ ಮಾಡಿ ಯಾರು ಪುಸ್ತಕ ಬರೆದಿಲ್ಲ. ಪುಟ ಹೆಸರು, ಅನುಕ್ರಮ ಚಿತ್ರ ಬದಲಾಯಿಸಿ, ಪುಸ್ತಕಮಾಡಿ, ಪ್ರಕಾಶನ ಮಾಡಿದವರ ಹತ್ತಿರ ಕೈವಾಡ, ಮಾರಾಟಗಾರರ ಬಳಿ ಕೈವಾಡ ನಡೆಸುತ್ತಾರೆ. ಒಂದು ವ್ಯವಸ್ಥಿತವಾದ ರೀತಿಯಲ್ಲಿ ಇದೆಲ್ಲಾ ನಡೆಯುತ್ತಿಲ್ಲ. ಅಕ್ರಮವು ನಡೆಯುತ್ತಿದೆ. ಎಂದು ವ್ಯಸನದಿಂದ ಹೇಳಬೇಕಾಗಿದೆ. ಇದನ್ನು ಕಡಿಮೆ ಮಾಡಬೇಕು. ಪಠ್ಯಪುಸ್ತಕಗಳ ರಾಷ್ಟ್ರೀಕರಣ ಮಾಡುವುದಾಗಿ ಹೇಳುತ್ತೀರಿ, ಜನ ಜೀವನ ಉತ್ತಮಗೊಳಿಸುವುದಕ್ಕೆ ದೋಷ ರಹಿತ ಪಠ್ಯಪುಸ್ತಕಗಳ ವ್ಯವಸ್ಥೆ ಮಾಡಿದರೆ ಒಳ್ಳೆಯದು. ಇಲ್ಲದಿದ್ದರೆ ಜಗತ್ತಿಗೆ ಸಮಾಜಕ್ಕೆ ದೊಡ್ಡ ಅಪಾಯ. ಪಠ್ಯಪುಸ್ತಕಗಳ ಪರಿಷ್ಕರಣೆ ಮಾಡುವಾಗ ಒಂದು ಗೊತ್ತಾದ ಕಾರ್ಯಕ್ರಮಗಳನ್ನು ಅನುಸರಿಸಿಕೊಂಡು ಬರಬೇಕು. ಎಂಬುದಾಗಿ ದಿನಾಂಕ:07–09–1963ರ ತಮ್ಮ ಶಾಸನಸಭಾ ಭಾಷಣದಲ್ಲಿ ಪಠ್ಯಪುಸ್ತಕಗಳ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ (ಶಾಂತವೇರಿ ಗೋಪಾಲಗೌಡರ ನೆನಪಿನ ಸಂಪುಟ 413–414). ಇಂಗ್ಲೀಷ್ ಭಾಷೆಯ ಬಗ್ಗೆ. ಸಾಮ್ರಾಜ್ಯ ಶಾಹಿಯ ಭಾಷೆಯಾದ ಇದನ್ನು ಜನ ಭಾಷೆಯ ಬದಲಾಗಿ ಶಿಕ್ಷಣ ಮಾಧ್ಯಮದಲ್ಲಿ ಬಳಕೆಯಾಗುವುದರ ವಿರುದ್ಧ ನೈತಿಕ ವಿರೋದವನ್ನು ವ್ಯಕ್ತಪಡಿಸಿದ್ದರು. ಕರ್ನಾಟಕದಲ್ಲಿ ಕನ್ನಡ ಶಿಕ್ಷಣದ ಮಾಧ್ಯಮವಾಗಬೇಕು. ಎಳೆಯ ಮಕ್ಕಳಿಗೆ ಮಾತೃಭಾಷಾ ಶಿಕ್ಷಣ ನೀಡಬೇಕು ಎನ್ನುತ್ತಲೇ ಇತರ ಭಾಷೆಗಳ ಬಗ್ಗೆಯೂ ಸಹ ಸಹಮತ ಹೊಂದಿದವರಾಗಿದ್ದರು.

ತೆರಿಗೆ ನೀತಿಯ ಬಗ್ಗೆ ತಮ್ಮದೇ ಆದ ನಿಲುವನ್ನು ಪ್ರಕಟಿಸಿದ್ದಾರೆ. ತೆರಿಗೆ ಹಾಕದೇ ಸರ್ಕಾರ ನಡೆಸಬೇಕೆನ್ನುವುದು ವಿರೋಧಪಕ್ಷದ ಸದಸ್ಯರ ಅಭಿಪ್ರಾಯವಲ್ಲ. ಹಾಕುವಾಗ ಯಾವ ರೀತಿ ಹಾಕಬೇಕು, ಯಾವ ತೆರಿಗೆ ಸರ್ವಮಾನ್ಯ, ಯಾರ ಮೇಲೆ ಬೀಳುತ್ತದೆ ಎನ್ನುವುದು ಚರ್ಚೆಮಾಡತಕ್ಕ ವಿಷಯ. ದೇಶದ ಆರ್ಥಿಕ ಸ್ಥಿತಿಯನ್ನು ಜನಜೀವನದ ಮಟ್ಟವನ್ನು ಅರ್ಥಮಾಡಿಕೊಂಡು ಹಾಕಬೇಕು.

"ಭೂಮಿ ಮಾರತಕ್ಕ, ಕೊಳ್ಳತಕ್ಕ, ವಸ್ತು ಆಗಬಾರದು. ಯಾರು ಕೃಷಿ ಮಾಡುತ್ತಾರೋ ಅವರಿಗೆ ಎಷ್ಟು ಕೃಷಿ ಮಾಡುವುದಕ್ಕೆ ಸಾಮರ್ಥ್ಯವಿದೆಯೋ ಅಷ್ಟುಮಾತ್ರ ಭೂಮಿ ಕೊಡಬೇಕು. ಯಾವೊತ್ತು ಕೃಷಿ ಮಾಡುವುದಕ್ಕೆ ಅವರಿಂದ ಸಾಧ್ಯವಾಗುವುದಿಲ್ಲವೋ ಅವೊತ್ತು ಆ ಭೂಮಿ ಅವರ ಕೈಯಲ್ಲಿರಬಾರದು. ಸರ್ಕಾರಕ್ಕೆ ಸೇರಬೇಕು. ಇತರರು ಯಾರು

ಅಲ್ಲಿ ಕೃಷಿ ಮಾಡತಕ್ಕವರು. ರೈತರು ಇರುತ್ತಾರೋ ಅವರಿಗೆ ಕೊಡಬೇಕು. ಎನ್ನುವುದಾಗಿ ಭೂಮಿಯ ಬಗ್ಗೆ ಅಭಿಪ್ರಾಯಿಸುತ್ತಾರೆ.

ಬೀಡಿ ಕಟ್ಟುವವರ, ಅಗರಬತ್ತಿ ತಯಾರಿಸುವವರ, ಬೆಂಕಿ ಪೊಟ್ಟಣ ತಯಾರಿಸುವವರ ಕೆಲಸಕ್ಕೆ ಸಹಜವಾದ ವೇತನವನ್ನು ಕೊಡಲು ಮಾಲೀಕರು ಒಪ್ಪುತ್ತಿಲ್ಲ. ಈ ಬಗ್ಗೆ ಗೃಹಕೈಗಾರಿಕೆಗೆ ಸಂಬಂಧಪಟ್ಟಂತೆ ಅವುಗಳನ್ನು ನಿಯಂತ್ರಿಸುವ ಕಾನೂನುಗಳನ್ನು ಮಾಡಲು ಸರ್ಕಾರಕ್ಕೆ ಸಾಧ್ಯವಾಗಿಲ್ಲ. ಫ್ಯಾಕ್ಟರಿ ಆಕ್ಟ್, ಇಂಡಸ್ಟ್ರೀಯಲ್ ಆಕ್ಟ್, ಮಿನಿಮಾ ವೇಟಸ್ ಆಕ್ಟ್, ಮುಂತಾದವುಗಳನ್ನು ಜಾರಿಗೆ ತರುವತ್ತ ಸರ್ಕಾರದ ಗಮನ ಹರಿಸಬೇಕಿದೆ. ಜೈಲಿನಲ್ಲಿನ ರಾಜಕೀಯ ಕೈದಿಗಳನ್ನು ಗೌರವದಿಂದ ನೋಡಿಕೊಳ್ಳಬೇಕು. ಜೈಲು ಸುಧಾರಣೆಯಾಗಬೇಕು. ಗಂಗಾಧರ ನಮೋಶಿಯವರು ಜೈಲಿನಲ್ಲಿ ಗೃಹ ಸಚಿವರು ಭೇಟಿನೀಡಿದ ಸಂದರ್ಭದಲ್ಲಿ ಕಕ್ಕಸ್ಸು ತೊಳೆಯುತ್ತಿರುವುದನ್ನು ಗಮನಿಸಿರುವುದನ್ನು ಉದಾಹರಿಸಿ ತಮ್ಮ ಮಾತನ್ನು ಸಮರ್ಥಿಸಿಕೊಳ್ಳುತ್ತಾರೆ ಹಾಗೂ ತಾವು ಜೈಲಿನಲ್ಲಿ ರಾಜಕೀಯ ಖೈದಿಯಾಗಿ ಹೋದಾಗ ಶಿವಮೊಗ್ಗ ಜೈಲಿನಲ್ಲಿ ಆಹಾರ ವ್ಯವಸ್ಥೆಯ ವಿರುದ್ಧ ಐದು ದಿನ ಉಪವಾಸ ಸತ್ಯಾಗ್ರಹ ನಡೆಸಿರುವದನ್ನು ಸಮರ್ಥಿಸಿಕೊಳ್ಳುತ್ತಾರೆ.

ಮಾನ್ಯ ರಾಜ್ಯಪಾಲರು ಈ ಸದನದ ಚರಿತ್ರೆಯಲ್ಲೇ ಮೊದಲನೇ ಬಾರಿ ತಮ್ಮ ಭಾಷಣವನ್ನು ಕನ್ನಡದಲ್ಲಿ ಮಾಡಿ ಒಂದು ಸತ್ ಸಂಪ್ರದಾಯವನ್ನು ಹಾಕಿಕೊಟ್ಟಿದ್ದಾರೆ. ಅಲ್ಲದೇ ಕನ್ನಡ ನಾಡು ಮತ್ತು ಕನ್ನಡ ನುಡಿಗೆ, ಗೌರವ, ಆದರ ಮತ್ತು ಅಭಿಮಾನವನ್ನು ತೋರಿಸಿದ್ದಾರೆ. ಇನ್ನು ಕನ್ನಡ ರಾಜ್ಯ ಭಾಷೆಯಾಗಬೇಕು. ಕನ್ನಡ ವ್ಯವಹಾರ ಭಾಷೆಯಾಗಬೇಕು. ಕನ್ನಡ ಶಿಕ್ಷಣ ಮಾಧ್ಯಮವಾಗಬೇಕು. ಎನ್ನುವ ಒಂದು ಸಿದ್ಧಾಂತವನ್ನು ಸಾಮಾನ್ಯವಾಗಿ ನಾವೆಲ್ಲರೂ ಒಪ್ಪಿಕೊಂಡಿದ್ದೇವೆ. ಅಲ್ಲದೇ ಕನ್ನಡ ರಾಜ್ಯಭಾಷೆ ಆಗಬೇಕು ಎನ್ನವುದರ ಬಗ್ಗೆ ನಾವು ಒಂದು ಮಸೂದೆಯನ್ನು ಕೂಡ ಇಲ್ಲಿ ಅಂಗೀಕಾರ ಮಾಡಿದ್ದೇವೆ. ಈ ಕಾರಣಕ್ಕೆ ಕರ್ನಾಟಕ ಎಂಬ ಹೆಸರನ್ನು ನಾಮಕರಣ ಮಾಡಬೇಕು. ಇದರ ಬಗ್ಗೆ ನಿರ್ಣಯ ಕೂಡ ಈ ಸಭೆಯಲ್ಲಿ ಬಂದು ಚರ್ಚೆಯಾಯಿತು. ಅದನ್ನು ಮತಕ್ಕೆ ಹಾಕುವ ಸಂದರ್ಭದಲ್ಲಿ ಮಾನ್ಯ ಮುಖ್ಯ ಮಂತ್ರಿಗಳಾದ ಶ್ರೀ ನಿಜಲಿಂಗಪ್ಪನವರು ಮಧ್ಯಪ್ರವೇಶಿಸಿ ಆ ವಿಷಯವನ್ನು ನನಗೆ ಬಿಡಿ, ಆನಂತರ ಕೆಲಸವನ್ನು ನಾನು ಮಾಡುತ್ತೇನೆ ಎಂದು ಹೇಳಿದ್ದಾರೆ. ಎಂಬುದಾಗಿ ಕನ್ನಡ ಪರ ಕಳಕಳಿಯನ್ನು ಜನತೆ ಮತ್ತು ಜನ ಭಾಷೆಗಳ ಬಗೆಗಿನ ಆತಂಕವನ್ನು ದಿನಾಂಕ:26–02–1968ರ ತಮ್ಮ ಶಾಸನ ಸಭಾ ಭಾಷಣದಲ್ಲಿ ವ್ಯಕ್ತಪಡಿಸುತ್ತಾರೆ (ಶಾಂತವೇರಿ ಗೋಪಾಲಗೌಡರ ನೆನಪಿನ ಸಂಪುಟ 454–455).

ಡಾ. ಲೋಹಿಯಾ ಅವರು ವರ್ಣ ಮತ್ತು ವರ್ಗ ಎನ್ನುವುದಕ್ಕೆ 'ಕ್ಯಾಸ್ಟ್ ಈಸ್ ಆನ್ ಇಮ್ಮೊಬೈಲ್ ಕ್ಲಾಸ್, ಕ್ಲಾಸ್ ಈಸ್ ಎ ಮೊಬೈಲ್ ಕ್ಲಾಸ್' ಎಂದು ಹೇಳಿದ್ದಾರೆ. ಇತ್ತೀಚೆಗೆ ನಾನು ಒಂದು ಸಾರಿ ಯಳಂದೂರಿಗೆ

ಹೋಗಿದ್ದೆ. ಅಲ್ಲಿ ಸವರ್ಣ ಹಿಂದುಗಳು ಮತ್ತು ಹರಿಜನರು ಜೊತೆಯಲ್ಲಿ ಇದ್ದುದನ್ನು ನೋಡಿ ನನಗೆ ಆಶ್ಚರ್ಯ ಆಯಿತು ಮತ್ತು ಅಲ್ಲಿ ಹರಿಜನರಿಗೆ ಭೂಮಿಕಾಣಿ ಇದ್ದುದನ್ನು ನೋಡಿದೆ. ಸಮಾಜದಲ್ಲಿ ವರ್ಗರಹಿತ ಹಾಗೂ ವರ್ಣರಹಿತ ಪ್ರಬುದ್ಧತೆ ಇರಬೇಕು. ಈ ದಿಸೆಯಲ್ಲಿ ಯಳಂದೂರು ಗ್ರಾಮದ ವ್ಯವಸ್ಥೆಯನ್ನು ಮೆಚ್ಚಿಕೊಳ್ಳುತ್ತಾ ಇನ್ನೂ ಆ ವ್ಯವಸ್ಥೆಗೆ ಬಾರದ ಸಮಾಜದ ರೀತಿ ನೀತಿಗಳ ಬಗ್ಗೆ ಸಂಕಟಪಡುತ್ತಾರೆ. ಹರಿಜನರು ಜಮೀನ್ದಾರನ ಮನೆಯಲ್ಲಿ ಜೀತ ಮಾಡುವುದರ ಜೊತೆಗೆ ಅವರ ಮನೆಗೆ ಹರಿಜನರ ಕುಟುಂಬಗಳನ್ನು ಬಳುವಳಿಯಾಗಿ ಕಳುಹಿಸುತ್ತಿದ್ದರು, ಎಂದು ಹೇಳುತ್ತಾರೆ. ಹರಿಜನರು ಜಮೀನುದಾರನ ಮನೆಯಲ್ಲಿ ಜೀತಕ್ಕೆ ಇದ್ದುಕೊಂಡು ಅವರಿಗೆ ಗುಲಾಮನಾಗಿ ಇರುತ್ತಿದ್ದರು. ಗುಲಾಮ ಎಂದರೆ ಯಾರಿಗೆ ಯಜಮಾನನನ್ನು ಬದಲಾಯಿಸುವ ಅಧಿಕಾರ ಇರುವುದಿಲ್ಲವೋ ಅವನನ್ನು ಗುಲಾಮ ಎಂದು ಹೇಳುತ್ತಾರೆ. ಕೆಲವು ಸಾರ್ವಜನಿಕ ಸ್ಥಳಗಳಲ್ಲಿ ಹರಿಜನರಿಗೆ ಪ್ರವೇಶವಿಲ್ಲ ದೇವಸ್ಥಾನಗಳಲ್ಲಿ ಅವರಿಗೆ ಪ್ರವೇಶ ಇಲ್ಲ. ಮಹಾತ್ಮ ಗಾಂಧಿಯವರು ಮಾಡಿದಂತಹ ಚಳುವಳಿಗಳು ಮತ್ತು ಬಸವಣ್ಣನವರು ಮಾಡಿದಂತಹ ಚಳುವಳಿ ಹಾಗೆಯೇ ಉಳಿದಿದೆ. ಡಾ॥ ಅಂಬೇಡ್ಕರ್ ರವರು ಬಹಳ ವಾದ ಮಾಡಿ ಹರಿಜನರಿಗೆ ವಿಶೇಷವಾದ ಸೌಲಭ್ಯವನ್ನು ಕಲ್ಪಿಸಿದ್ದಾರೆ. ಡಾ. ಲೋಹಿಯಾ ಅವರು ಸಮಾನ ಅವಕಾಶಗಳನ್ನು ಕಲ್ಪಸಿಕೊಡದಿದ್ದರೆ ವಿಶೇಷ ಸವಲತ್ತನ್ನು ಸೌಲಭ್ಯವನ್ನು ಸರ್ಕಾರದವರು ಒದಗಿಸಿಕೊಡಬೇಕು ಎಂದು ಹೇಳಿದ್ದಾರೆ. 100ಕ್ಕೆ 90 ಜನಗಳಿಗೆ ಅನ್ನ, ಬಟ್ಟೆಗಳಿಲ್ಲದೆ ಅವರು ದರಿದ್ರಾವಸ್ಥೆಯಲ್ಲಿದ್ದರೆ ಅದು ಬಹಳ ಕಷ್ಟವಾಗುತ್ತದೆ. ಹರಿಜನರನ್ನು ಮುಟ್ಟಿದರೆ ಸ್ನಾನ ಮಾಡಬೇಕು, ಅವರ ಜೊತೆಯಲ್ಲಿ ಮಾತನಾಡಿದರೆ ಸ್ನಾನ ಮಾಡಬೇಕು ಎನ್ನುವ ಮಟ್ಟಕ್ಕೆ ಸಮಾಜ ಹೋಗುವುದಾದರೆ ಅದನ್ನು ತೊಡೆದುಹಾಕಬೇಕು ಎನ್ನುವ ಪ್ರಾಮಾಣಿಕ ಕಾಳಜಿಯನ್ನು ಗೌಡರು ಜಾತಿ ಮತ್ತು ವರ್ಗ ರಹಿತ ಸಮಾಜದ ಬಗ್ಗೆ ದಿನಾಂಕ:25–03–1969ರ ತಮ್ಮ ಶಾಸನ ಸಭಾ ಭಾಷಣದಲ್ಲಿ ವ್ಯಕ್ತಪಡಿಸಿದ್ದಾರೆ (ಶಾಂತವೇರಿ ಗೋಪಾಲಗೌಡರ ನೆನಪಿನ ಸಂಪುಟ 460–462).

ಮೂರು ಚುನಾವಣೆಗಳಲ್ಲಿ ಗೆದ್ದು 15 ವರ್ಷಗಳ ಶಾಸಕರಾಗಿದ್ದರೂ ಸಹ ಯಾವ ಸನ್ಮಾನ ಸಭೆಗಳಲ್ಲಿ ಭಾಗವಹಿಸುತ್ತಿರಲಿಲ್ಲ. ಬಡವರೂ, ತಿರಸ್ಕೃತರು, ಅವಮಾನಿತ ಜನಗಳ ಬಗ್ಗೆ ಅಪಾರ ಕಾಳಜಿಯನ್ನಿಟ್ಟುಕೊಂಡಿದ್ದ ಗೌಡರು ಅವರಿಗೆ ರಾಜಕೀಯ ಪ್ರಾತಿನಿಧ್ಯ ದೊರಕಿಸಲು ಪ್ರಯತ್ನಿಸಿದರು. ಕಲೆ, ಸಾಹಿತ್ಯ, ಇತಿಹಾಸ, ಸಂಗೀತ ಮುಂತಾದ ವಿಷಯಗಳಲ್ಲಿ ಅಪಾರ ಪಾಂಡಿತ್ಯ ಪಡೆದಿದ್ದ ಇವರು ಜೀವನದುದ್ದಕ್ಕೂ ಲೇಖಕರ ಮತ್ತು ಕಲಾವಿದರ ಸಂಪರ್ಕದಲ್ಲಿಯೇ ಇದ್ದವರು.

"ಇವೊತ್ತಿನ ರೈತರು ಯಾರು ಭೂಮಿಯ ಮೇಲೆ ಉಳುತ್ತಿದ್ದಾರೋ, ಅವರು ಯಾವ ಪದ್ಧತಿಯ ಅಡಿಯಲ್ಲೇ ಬರಲಿ, ಸರ್ಕಾರದ ಅಡಿಯಲ್ಲೇ ಇರಲಿ, ಜೋಡಿ–ಇನಾಂತಿಗಳ ಜೋಡಿದಾರರ ಅಥವಾ ಇನಾಂತಿದಾರರ ಅಡಿಯಲ್ಲೇ ಇರಲಿ ನೇರವಾಗಿ ಜಮೀನು ಹಿಡಿದು ಬೇಸಾಯ ಮಾಡುವ ರೈತರೆಷ್ಟು, ಎಂಬ ರೈತಾಪಿ ಸರ್ವೆ ಮಾಡಬೇಕು. ಅವರು

ಯಾರು ಯಾರಿಗೆ ಗೇಣಿ, ಗುತ್ತಿಗೆ ಅಥವಾ ಇನ್ನಾವ ಬೇರೆ ಸಾಗುವಳಿ ಮಾಡುತ್ತಾರೆ, ಸರ್ಕಾರಕ್ಕೆ ಕೊಡುತ್ತಾರೆಯೇ? ಖಾಸಗೀ ಜನರಿಗೆ ಕೊಡುತ್ತಾರೆಯೇ? ಅಥವಾ ಧರ್ಮ ಸಂಸ್ಥೆಗಳಿಗೆ ಕೊಡುತ್ತಿದ್ದಾರೆಯೇ? ಅವರ ಜೀವನ ಪರಿಸ್ಥಿತಿ ಹೇಗಿದೆ ಈ ರೀತಿಯಾಗಿ ಎಲ್ಲಾ ರೈತರ ಒಂದು ಸರ್ವೆ ಮಾಡಿಕೊಂಡರೆ ನಾವು ಮೊದಲನೆಯ ಹೆಜ್ಜೆಯಿಟ್ಟಂತಾಗುತ್ತದೆ. ಅನಂತರ ಅವರ ದೃಷ್ಠಿಯಿಂದಲೇ ಹೆಚ್ಚಾಗಿ ಎಲ್ಲಾ ಸಮಸ್ಯೆಗಳನ್ನು ನೋಡಬೇಕು. ಈ ಸಂದಭದಲ್ಲಿ ಇನಾಂದಾರರ ಅಥವಾ ಜೋಡಿದಾರರ ಅಥವಾ ಜಮೀನ್ದಾರರ ದೃಷ್ಠಿ ಮರೆಯಬೇಕಾಗಿಲ್ಲ. ಆದರೆ ಮೊದಲು ರೈತರನ್ನು ತೆಗೆದುಕೊಂಡು ಪ್ರಾರಂಭ ಮಾಡಬೇಕಾಗುತ್ತದೆ. ಆಗ ಅವರ ಅನಾನುಕೂಲತೆಗಳನ್ನು ಪರಿಹಾರ ಮಾಡಿಕೊಂಡು ಆನಂತರ ಒಬ್ಬನಿಗೆ ಎಷ್ಟು ಜಮೀನಿರಬೇಕು, ಪರಮಾವಧಿಯೆಂದರೆ ಎಷ್ಟಿರಬೇಕು. ಎಂಬುದನ್ನು ಗೊತ್ತು ಮಾಡಿಕೊಳ್ಳಬೇಕು. ಆದಾದ ಮೇಲೆ ಭೂಮಿಯನ್ನು ಅದರಂತೆ ಪುನಃ ಹಂಚಿಕೆ ಮಾಡಬೇಕು". ಎಂಬುದಾಗಿ ದಿನಾಂಕ:01–04–1953ರ ತಮ್ಮ ಶಾಸನ ಸಭೆಯ ಭಾಷಣದಲ್ಲಿ ಭೂಮಿಯ ಬಗ್ಗೆ ಹಾಗೂ ಅದರ ಬಳಕೆಯ ಬಗ್ಗೆ ಜನರ ಗಮನವನ್ನು ತರಲು ಪ್ರಯತ್ನಿಸಿದ್ದಾರೆ. (ಶಾಂತವೇರಿ ಗೋಪಾಲಗೌಡರ ನೆನಪಿನ ಸಂಪುಟ 321–325).

ಅಸ್ಪೃಶ್ಯರ ಬಗ್ಗೆ ಗೌಡರಿಗೆ ವಿಶೇಷವಾದ ಅನುಕಂಪ. ಸಮಾಜ ಅವರನ್ನು ನಡೆಸಿಕೊಳ್ಳುವ ರೀತಿ ಗೌಡರನ್ನು ಕೆರಳಿಸಿತ್ತು. ಅವರು ಹರಿಜನರ ಬಗ್ಗೆ ತಮ್ಮ ಮಾನವೀಯ ಕಳಕಳಿಯನ್ನು ಹಲವಾರು ಬಾರಿ ತೋಡಿಕೊಂಡು ಅವರ ಉದ್ಧಾರಕ್ಕೆ ಸರ್ಕಾರದ ಕ್ರಮಗಳ ಬಗ್ಗೆ ಎಚ್ಚರಿಸಿದ್ದರು. ಈ ದೇಶದಲ್ಲಿ ಬರೀ ಶ್ರೀಮಂತ, ಬಡವ ಎನ್ನುವ ಭೇದಭಾವ ಮಾತ್ರವಲ್ಲ, ವರ್ಣಬೇಧ, ಜಾತಿಬೇದ, ಎನ್ನುವುದು ಸಾವಿರಾರು ವರ್ಷಗಳಿಂದ ಇದೆ. ಷೆಡ್ಯೂಲ್ ಕ್ಯಾಸ್ಟ್ ಪಟ್ಟಿಯನ್ನು ತಯಾರು ಮಾಡುವುದಕ್ಕೆ ಕೇಂದ್ರ ಸರ್ಕಾರದವರು ಒಂದು ಕಮಿಷನ್ ನೇಮಕ ಮಾಡಿದ್ದರು. ಇದರಲ್ಲಿ ಅಸ್ಪೃಶ್ಯತೆಗೆ ಒಳಗಾಗಿರತಕ್ಕವೆಂದು ಒಂದು ಪಟ್ಟಿಮಾಡಿ, ಅಕ್ಷರಭ್ಯಾಸ ಇಲ್ಲದೆ ಇರುವವರು ಮತ್ತು ಮನೆಯೊಳಗಡೆ ಬರಬಾರದು ಎಂದು ಇರುವವರು ಯಾರು ಇದ್ದಾರೆಯೋ ಅವರದು, ಹಾಗೇ ಯಾರೂ ಸಾಮಾಜಿಕವಾಗಿ ಯಾವುದೇ ಒಂದು ಮಟ್ಟಕ್ಕೆ ಬಂದಿಲ್ಲವೋ ಅಂಥವರನ್ನು ಒಂದು ಪಟ್ಟಿಮಾಡುವುದಾದರೆ ಅವರ ಬೇಡಿಕೆಗಳನ್ನು ಈಡೇರಿಸುವುದಕ್ಕೆ ಸಾಧ್ಯವಾಗಬಹುದೆಂದು ನನಗೆ ಅನ್ನಿಸುತ್ತದೆ. ಹರಿಜನರನ್ನು ಮುಟ್ಟಿದರೆ ಸ್ನಾನ ಮಾಡಬೇಕು, ಅವರ ಜೊತೆಯಲ್ಲಿ ಮಾತನಾಡಿದರೆ ಮೈಲಿಗೆಯಾಗುತ್ತದೆ ಎನ್ನುವ ಮಟ್ಟಕ್ಕೆ ಸಮಾಜ ಹೋಗುವುದಾದರೆ ಅನಿಷ್ಟ ಪದ್ಧತಿಯನ್ನು ಕಾನೂನು ಬದ್ಧವಾಗಿ ತೊಡೆದುಹಾಕಬೇಕು. ಕೆಳಗೆ ಬಿದ್ದಿರತಕ್ಕವರಿಗೆ, ದೀನದಲಿತರಿಗೆ ವಿಶೇಷವಾದ ವಿದ್ಯಾಭ್ಯಾಸ ಸೌಕರ್ಯವನ್ನು ಒದಗಿಸಿಕೊಡಬೇಕು. ಶಿಕ್ಷಣ ವಿಲ್ಲದೆ ಸ್ವಾಭಿಮಾನ ಹುಟ್ಟದು, ಗುಲಾಮಗಿರಿ ಭಾವನೆ ತೊಲಗದು. ಸ್ವಾಭಿಮಾನ ಜಾಗೃತವಾಗದ ಜನ–ಜನಾಂಗದಿಂದ ಸಾಮಾಜಿಕ ಆರ್ಥಿಕ ಅನ್ಯಾಯದ ವಿರುದ್ಧ ಬಂಡುಹೂಡಲು ಸಾಧ್ಯವಿಲ್ಲ. ಮಾನವ ಹಕ್ಕುಗಳನ್ನು ದೊರಕಿಸಿಕೊಳ್ಳುವಲ್ಲಿ ಸಫಲರಾಗಲು ಎಲ್ಲರೂ ಈ ಜಾತಿ ಮತ ಮತ್ತು ವರ್ಗಗಳ ಕೊಳಚೆಯಿಂದ ಹೊರಬಂದು ಸಮಾನತೆಯ ಸಮಾಜವನ್ನು ಕಟ್ಟಬೇಕು ಎಂಬುದು ನನ್ನ ಹಿರಿದಾದ ಆಶಯ.

ಇತ್ತೀಚೆಗೆ ನಾನು ಪತ್ರಿಕೆಯಲ್ಲಿ ನೋಡುತ್ತಿದ್ದೇನೆ. ಸಜೀವವಾಗಿ ಹರಿಜನರನ್ನು ಸುಡುವುದು, ಕೊಲ್ಲುವುದು, ಇಂಥದ್ದೆಲ್ಲಾ ನಡೆಯುತ್ತಿದೆ. ಇಂಥಾದ್ದೆಲ್ಲಾ ಒಂದು ಉತ್ತಮ ಜನಾಂಗದ ರಾಷ್ಟ್ರದಲ್ಲಿ ನಡೆಯಬಾರದು, ಇದನ್ನು ಸರ್ಕಾರ ತಡೆಗಟ್ಟದಿದ್ದರೆ ದೇಶದಲ್ಲಿ ಇದೇ ರೀತಿ ಹರಿಜನರ ಬಗ್ಗೆ ಕೃತ್ಯಗಳು ನಡೆಯುವುದಾದರೆ ಭೀಮಸೇನೆಯಂತಹ ಸೇನೆಗಳು ಹೊರಗೆ ಬಂದು ದೇಶದಲ್ಲಿ ಮಹಾಕ್ರಾಂತಿ, ರಕ್ತಕ್ರಾಂತಿಯಾಗುತ್ತದೆ. ಕೆಲವು ಶಾಲೆಗಳಲ್ಲಿ ಹಿಂದುಳಿದ ಹುಡುಗರನ್ನೇ ಹಿಂದಿನ ಬೆಂಚಿನಲ್ಲಿ ಕೂರಿಸುತ್ತಾರೆ. ಎಂಬುದಾಗಿ ಗೋಪಾಲಗೌಡರು ಡಾಕ್ಟರ್ ಬಾಬಾ ಸಾಹೇಬ ಅಂಬೇಡ್ಕರ್ ಅವರ ಎಪ್ಪತ್ತೊಂಬತ್ತನೆ ಹುಟ್ಟುಹಬ್ಬದಲ್ಲಿ ಹೊರಬಂದ 1969ರ ವಿಶೇಷ ಸಂಚಿಕೆಗಾಗಿ ನೀಡಿದ ಲೇಖನದಲ್ಲಿ ಬರೆಯುತ್ತಾರೆ.

ಆಂತರಿಕ ಭಾವ–ಬದುಕನ್ನು ಪ್ರತಿಬಿಂಬಿಸುವ ಶುಭ್ರವಾದ ಬಿಳಿಯ ಖಾದಿ ಜುಬ್ಬ, ಅಚ್ಚುಕಟ್ಟಾಗಿ ಉಟ್ಟ ಕಚ್ಚೆಪಂಚೆ, ಧೀರೋದಾತ್ತ ನಡೆ, ನಿರ್ಭಯ ನುಡಿ, ಎದ್ದು ತೋರುವ ಜಾನತ್ಯ, ಅರಿತವರಿಗೆ ಅತ್ಯಂತ ಸಾತ್ವಿಕ ವ್ಯಕ್ತಿ. ಅರಿಯದವರಿಗೆ ಹಮ್ಮು–ಬಿಮ್ಮಿನ ಮನುಷ್ಯ. ವಿದ್ವತ್ತಿನಿಂದ ಮಾಗಿದ ವಿನಯವಂತಿಕೆ ಗೌಡರದ್ದು. ಅನ್ಯಾಯವನ್ನು ಖಂಡಿಸುವಲ್ಲಿ ಎದುರಾಳಿಯ ಮೇಲೆ ನೇರ ದಾಳಿ ಮಾಡುವ ಕ್ಷಾತ್ರಗುಣ, ಸತ್ಯವನ್ನು ಸಾದರಪಡಿಸುವ ನಿರ್ಭಯತೆ. ಜಡ್ಡುಗಟ್ಟಿದ ಮೌಢ್ಯ, ಹುರುಳಿಲ್ಲದ ಸಂಪ್ರದಾಯಗಳ ವಿರೋಧಿ, ಪ್ರಗತಿಪರ ದೋರಣೆಯ ಧ್ಯೇಯವಾದಿ, ಹೋರಾಟ ಅವರ ತಾರಕ ಮಂತ್ರ. ಸರಳತೆ ಅವರ ಹಿರಿಮೆ. ಪ್ರಾಮಾಣಿಕತೆ ಅವರ ಉಸಿರು. ಆತ್ಮವಿಶ್ವಾಸ–ಮುಕ್ತತೆ ಅವರ ಜೀವಾಳ. ಅರಿತು ಆಧರಿಸುವ ಅಂತಃಕರಣ, ಸಂಕೋಚವನ್ನು ತೊಳೆದುಹಾಕುವ ಆತ್ಮೀಯತೆ. ಅಂತರಂಗಕ್ಕೆ ಕ್ಷೇಮಭಾವಕ್ಕೂ ತಂದುಕೊಡುವ ಸಹವಾಸ. ಮಾತಿನಿಂದ ಸಮ್ಮೋಹನವನ್ನು ನಿರ್ಮಿಸುವ ಗಾರುಡಿಗ. ಆಲಿಸುವವರ ತಲೆದೂಗಿಸುವ ಮಾಂತ್ರಿಕ ಶಕ್ತಿ, ಆಶೆಗಳನ್ನು ಚಿಗುರೊಡೆಯಲು ಬಿಡದ ವಿರಕ್ತ. ಶ್ರೀಸಾಮಾನ್ಯರನ್ನು ಅನನ್ಯವಾಗಿ ಪ್ರೀತಿಸಿದ ಔದಾರ್ಯ ಸೇವಾ ಮನೋಭಾವ ಅವರ ಗುರಿ. ಸಮಾಜವಾದವನ್ನು ಅನುಷ್ಠಾನಕ್ಕೆ ತರುವಲ್ಲಿ ತುತ್ತ ತುದಿಗೇರುವ ಹಂಬಲ. ಪರಿಶುದ್ಧ ಜೀವನ ಮೌಲ್ಯಗಳನ್ನು ಪ್ರಚೋದಿಸುವ ದೊಡ್ಡ ಮನಸ್ಸಿನ ಧೀಮಂತ ನೇತಾರ. ಅಧಿಕಾರ ವಿಲ್ಲದೆಯೇ ಜನಮನದ ಗದ್ದುಗೆಗೇರಿದ ಅತಿ ವಿರಳ ವ್ಯಕ್ತಿ. ನಾಡುನುಡಿಯ ಉತ್ಕಟಾಭಿಮಾನದಿಂದ ನಿಸ್ವಾರ್ಥತೆಯಿಂದ ದುಡಿದು ದಣಿದ ತ್ಯಾಗಜೀವಿ. ದೂರದೃಷ್ಠಿಯ ರಾಜಕೀಯ ಮುತ್ಸದ್ಧಿ. ನಡೆ–ನುಡಿ, ಕೃತಿ–ಸಾಧನೆಗಳಿಂದ ಪರಿಶುದ್ಧ ರಾಜಕಾರಣಿ ಹೇಗೆ ಬಾಳಬೇಕೆಂಬುದನ್ನು ಆದರ್ಶದ ಮೇಲ್ಪಂಕ್ತಿ ಹಾಕಿಕೊಟ್ಟ ನಾಡಿನ ಕೈ ದೀವಿಗೆ.

ಹುಟ್ಟಿನಿಂದ ಸಾವಿನವರೆಗೂ ಸ್ವಾಭಿಮಾನದ ಸಂಕೇತವಾಗಿ, ಆದರ್ಶ ರಾಜಕಾರಣಿಯಾಗಿ ಮಾನವತೆಯ ಮೂರ್ತಿಯಾಗಿ ಬದುಕಿದ ಗೌಡರ ಬದುಕು ನಿಜಕ್ಕೂ ಆದರ್ಶಪ್ರಾಯವೇ ಸರಿ. ಬದುಕಿನುದ್ದಕ್ಕೂ ಸಮಾಜದಲ್ಲಿ ಬೇರೆ ಬೇರೆ ವ್ಯವಸ್ಥೆಗಳಲ್ಲಿ ನಲುಗಿದ ಶೋಷಿತರ ಪರವಾಗಿ ಹೋರಾಡಿ ತಾನೂ ಕೂಡ ಒಬ್ಬ ಪ್ರಾಮಾಣಿಕ ಬಡವನಾಗಿಯೇ

ಉಳಿದ ಪಕೀರ. ವ್ಯಕ್ತಿ ಅಥವಾ ವರ್ಗ ಶ್ರೀಮಂತರ, ಅಧಿಕಾರಿ ಶಾಹಿಗಳ ದಬ್ಬಾಳಿಕೆಗೆ ಒಳಗಾದಾಗ ಅವರ ಆತ್ಮ ಶಕ್ತಿಯಾಗಿ, ಜೀವನದ ದೀವಿಗೆಯಾಗಿ ಅವರ ಕೈಹಿಡಿದು ಮುನ್ನೆಡೆಸಿದ ಒಂದು ಶಕ್ತಿ ಗೋಪಾಲಗೌಡರು. ತಮ್ಮ ಮುಂದೆ ಸಂಕಟ ಎಂದು ನೋಂದು ಬಂದವರನ್ನು ಸಂತೈಸಿ ಪರಿಹಾರದ ಮಾರ್ಗಸೂಚಿಸಿ, ಸಂದರ್ಭಬಂದಲ್ಲಿ ಅವರ ಜೊತೆಯಲ್ಲಿ ತಾವೂ ಕೂಡ ಆ ಸಮಸ್ಯೆಯನ್ನು ತಮ್ಮ ಸಮಸ್ಯೆಯೆಂದೇ ಭಾವಿಸಿ ಪ್ರತಿಭಟಿಸಲು ಮುಂದಾಗುತ್ತಿದ್ದರು. ತಮ್ಮ ನೇರ ಮಾತು, ನಿಷ್ಠೂರ ನಡೆ ಹಾಗೂ ಸಿದ್ದಾಂತಗಳಿಂದ ಆಪ್ತರಲ್ಲಿ ಕೆಲವೊಮ್ಮೆ ತುಂಬಾ ಕಠಿಣ ಹೃದಯದ ವ್ಯಕ್ತಿ ಎನ್ನುವಷ್ಟರ ಮಟ್ಟಿಗೆ ನ್ಯಾಯಪರವಾಗಿ ಬಾಳಿದ ಜೀವ ಗೋಪಾಲಗೌಡರದ್ದು. ದೀನದಲಿತರ ಆಶಾಕಿರಣವಾಗಿ ಜನತೆಯ ಶಕ್ತಿಯಾಗಿ ಗೋಪಾಲಗೌಡರು ಇಂದೂ ಕೂಡ ಜನಮನದಲ್ಲಿ ನೆಲೆಸಿದ್ದಾರೆ.

ವ್ಯಕ್ತಿಯಾಗಿ ಗೋಪಾಲಗೌಡರ ಜೀವನ ಕ್ರಮವನ್ನು ಅಧ್ಯಯನ ಮಾಡುವುದರ ಮೂಲಕ ಒಂದು ಶಕ್ತಿಯಾಗಿ ಹೊರಹೊಮ್ಮಿದ ಸಂಗತಿಗಳನ್ನು ಹಾಗೂ ಅದಕ್ಕೆ ಪುಷ್ಠಿ ನಿಡಿದ ಸಂದರ್ಭಗಳನ್ನು ಈ ಅಧ್ಯಯನದಲ್ಲಿ ಅಣಿಗೊಳಿಸಲಾಗಿದೆ. ಇದರ ಮೂಲಕ ಸಾಂಪ್ರದಾಯಿಕ ಬದುಕಿನ ವಿವಿಧ ಮಜಲುಗಳನ್ನು ಕಂಡುಕೊಳ್ಳಲು ಪ್ರಯತ್ನಿಸಲಾಗಿದೆ. ಒಬ್ಬ ವ್ಯಕ್ತಿಯ ಪ್ರಾಮಾಣಿಕ ಸದಾಶಯಗಳು ಹೇಗೆ ಒಂದು ವ್ಯವಸ್ಥೆಯ ರಾಜಕೀಯ ಇಚ್ಛಾ ಶಕ್ತಿಯಾಗಬಲ್ಲದು ಎಂಬುದನ್ನು ಕಂಡುಕೊಳ್ಳಲು ಪ್ರಯತ್ನಿಸಲಾಗಿದೆ. ಗೌಡರ ಜೀವನದ ಸಂದರ್ಭಗಳಲ್ಲಿ ಜನಪದದ ಮಹತ್ವ ಹಾಗೂ ಅವರ ರಾಜಕೀಯ ಜೀವನದಲ್ಲಿ ಸಾಂಪ್ರದಾಯಿಕ ಅಂಶಗಳ ಪ್ರಭಾವದ ಅಂಶಗಳನ್ನು ಈ ಅಧ್ಯಯನದಲ್ಲಿ ಕಂಡುಕೊಳ್ಳಲಾಗಿದೆ. ಸಾಂಪ್ರದಾಯಿಕ ಮತ್ತು ಜಾನಪದದ ಸೆಲೆ ಗೌಡರನ್ನು ಅಂದೂ, ಇಂದೂ ಮತ್ತು ಮುಂದೂ ಕೂಡ ಒಂದು ಶಕ್ತಿಯಾಗಿ ಪರಿವರ್ತಿಸಿದ ನೆಲೆಗಳನ್ನು ಪತ್ತೆಹಚ್ಚಲು ಸಾಕಷ್ಟು ಪ್ರಯತ್ನಗಳನ್ನು ಮಾಡಲಾಗಿದೆ. ಮುಂದಿನ ದಿನಗಳಲ್ಲಿ ಗೋಪಾಲಗೌಡರ ಜೀವನದ ಪರಿಕಲ್ಪನೆಗಳಿಗೆ ವಿವಿಧ ವಿಷಯಗಳ ಆಂತರಿಕ ಸಂಬಂಧದ ಮಹತ್ವವನ್ನು ಅಧ್ಯಯನ ಮಾಡುವ ಸದಾಶಯಕ್ಕೆ ಇಂಬು ನೀಡುವ ಆಶಯ ಈ ಅಧ್ಯಯನದ ಮೂಲಕ ಕಂಡುಕೊಳ್ಳಲಾಗಿದೆ.

ಅನುಬಂಧ – 1

ಶಾಂತವೇರಿ ಗೋಪಾಲಗೌಡ : ಬದುಕಿನ ಹೆಜ್ಜೆಗಳು

1923 :–

ಮಾರ್ಚ್ 14 ಜನನ, ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿ ತಾಲ್ಲೂಕು ಆರಗ ಗ್ರಾಮಕ್ಕೆ ಹೊಂದಿಕೊಂಡಿರುವ ಶಾಂತವೇರಿಯಲ್ಲಿ. ತಂದೆ : ಕೊಲ್ಲೂರಯ್ಯ ಗೌಡ, ಗೇಣಿದಾರ ರೈತ ಕುಟುಂಬ. ತಾಯಿ : ಶೇಷಮ್ಮ, ಅಣ್ಣ : ಎಸ್. ಧರ್ಮಯ್ಯ ಗೌಡ, ಅಕ್ಕ : ಸಿದ್ಧಮ್ಮ. ಆರಗದಲ್ಲಿ ಪ್ರಾಥಮಿಕ ಮತ್ತು ಮಾಧ್ಯಮಿಕ ವಿದ್ಯಾಭ್ಯಾಸ. ಶಿಕಾರಿಪುರದಲ್ಲಿ ರೆವಿನ್ಯೂ ಇನ್‌ಸ್ಪೆಕ್ಟರಾಗಿದ್ದ ಅಣ್ಣ ಎಸ್. ಧರ್ಮಯ್ಯಗೌಡರ ಜೊತೆಯಿದ್ದು ಲೋಯರ್ ಸೆಕೆಂಡರಿ ವಿದ್ಯಾಭ್ಯಾಸ.

1941 ;–

ತೀರ್ಥಹಳ್ಳಿಯ ಸರ್ಕಾರಿ ಪ್ರೌಢ ಶಾಲೆಯ ವಿದ್ಯಾರ್ಥಿ; ಸ್ವಾತಂತ್ರ ಚಳವಳಿಗೆ ಪ್ರವೇಶ, ಕೆಲವು ಒಡನಾಡಿಗಳ ಜೊತೆಗೆ ಪೋಸ್ಟ್‌ಡಬ್ಬ ಕೀಳುವುದು, ತೀರ್ಥಹಳ್ಳಿ–ಕೊಪ್ಪ ರಸ್ತೆಯ ಟೆಲಿಗ್ರಾಫ್ ವೈರ್‌ಗಳನ್ನು ಕತ್ತರಿಸುವುದರ ಮೂಲಕ ಸ್ವಾತಂತ್ರ್ಯ ಚಳವಳಿಯಲ್ಲಿ ನೇರವಾಗಿ ಭಾಗವಹಿಸಿದ್ದು.

1942 :–

ಎಸ್.ಎಸ್.ಎಲ್.ಸಿ ವಿದ್ಯಾರ್ಥಿ: ಕ್ವಿಟ್ ಇಂಡಿಯಾ ಚಳವಳಿಯಲ್ಲಿ ಭಾಗವಹಿಸಿದ್ದು, ಸ್ವಾತಂತ್ರ್ಯ ಹೋರಾಟಗಾರರ ಬಂಧನವನ್ನು ವಿರೋಧಿಸಿ, ತೀರ್ಥಹಳ್ಳಿಯ ಶ್ರೀರಾಮ ಮಂದಿರದಲ್ಲಿ ಸಾರ್ವಜನಿಕರನ್ನು ಉದ್ದೇಶಿಸಿ ಮೊದಲ ರಾಜಕೀಯ ಭಾಷಣ.

ನವೆಂಬರ್ ತಿಂಗಳ ಎರಡನೆಯ ವಾರದಲ್ಲಿ, ಟೆಲಿಗ್ರಾಫ್ ವೈರ್ ಕತ್ತರಿಸಿದ ಆಪಾದನೆಯ ಮೇರೆಗೆ ಪೋಲೀಸರಿಂದ ದಸ್ತಗಿರಿ. ಶಿವಮೊಗ್ಗ ಸಬ್‌ಜೈಲ್‌ನಲ್ಲಿ ಸೆರೆವಾಸ. ಜೈಲಿನಲ್ಲಿ ಗೊರೂರು ರಾಮಸ್ವಾಮಿ ಅಯ್ಯಂಗಾರ್, ಭಾಷ್ಯಂ, ಮರಿಯಪ್ಪ, ಎಸ್. ಸಿದ್ದಯ್ಯ ಮುಂತಾದವರ ಸಂಪರ್ಕ. ಶಿವಮೊಗ್ಗದಲ್ಲಿ ಹರಿಜನರೊಡನೆ ದೇವಾಲಯ ಪ್ರವೇಶಕ್ಕೆ ಪ್ರಯತ್ನ; ಆರಗದಲ್ಲಿ ವಿರಕ್ತಮಠದ ಆವರಣದಲ್ಲಿ ಹರಿಜನರಿಗಾಗಿ ರಾತ್ರಿ ಶಾಲೆಗಳನ್ನು ನಡೆಸಿದ್ದು.

1944 :–

ಪ್ರೌಢ ಶಾಲಾ ವಿದ್ಯಾಭ್ಯಾಸ ಮುಗಿಸಿದ್ದು; ಶಿವಮೊಗ್ಗದಲ್ಲಿ ಜ್ಯೂನಿಯರ್ ಇಂಟರ್‌ಮೀಡಿಯಟ್‌ಗೆ ಸೇರಿದ್ದು.

1946 :–

ನಂಜನಗೂಡಿನಲ್ಲಿ ನಡೆದ ವಿದ್ಯಾರ್ಥಿ ಕಾಂಗ್ರೆಸ್ ಸಮಾವೇಶದಲ್ಲಿ ಭಾಗವಹಿಸಿದ್ದು.

1947 :–

ಶಿವಮೊಗ್ಗದಲ್ಲಿ ವಿದ್ಯಾರ್ಥಿ ಕಾಂಗ್ರೆಸ್ ಸಮಾವೇಶದ ಸಂಘಟನೆ; ಜಯಪ್ರಕಾಶ್ ನಾರಾಯಣ ಮತ್ತು ಕಮಲಾದೇವಿ ಚಟ್ಟೋಪಾಧ್ಯಾಯ ಸಮಾವೇಶದಲ್ಲಿ ಭಾಗವಹಿಸಿದ್ದರು.

ಶಿವಮೊಗ್ಗ ಒಕ್ಕಲಿಗರ ವಿದ್ಯಾರ್ಥಿನಿಲಯದಲ್ಲಿ ವ್ಯವಸ್ಥಾಪಕನಾಗಿ ಸೇರಿದ್ದು; ಸಾರ್ವಜನಿಕ ವಿದ್ಯಾರ್ಥಿನಿಲಯದ ರೀತಿಯಲ್ಲಿ ಅದನ್ನು ಪರಿವರ್ತಿಸಲು ಪ್ರಯತ್ನಗಳನ್ನು ನಡೆಸಿದ್ದು.

ಸ್ವಾತಂತ್ರ್ಯ ಚಳವಳಿಯಲ್ಲಿ ತೀವ್ರವಾಗಿ ಪಾಲ್ಗೊಂಡಿದ್ದು, ಶಿವಮೊಗ್ಗದ ರಾಮಣ್ಣಶ್ರೇಷ್ಠಿ ಪಾರ್ಕಿನಲ್ಲಿ ಹಲವಾರು ವೇಷಗಳಲ್ಲಿ ಬಂದು ಸಾರ್ವಜನಿಕ ಭಾಷಣ; ಅನೇಕ ಸಂದರ್ಭಗಳಲ್ಲಿ ಭೂಗತರಾಗಿ ಹೋರಾಟ ಮುಂದುವರಿಕೆ.

ಮೈಸೂರು ರಾಜ್ಯದಲ್ಲಿ ಜವಾಬ್ದಾರಿ ಸರ್ಕಾರದ ರಚನೆಗಾಗಿ ಹೋರಾಟ; ಬಂಧನ.

1946 :–

ರಾಷ್ಟ್ರೀಯ ಕಾಂಗ್ರೆಸ್‌ನಿಂದ ಸಮಾಜವಾದಿಗಳ ಗುಂಪು ಹೊರಬಂದು ಸಮಾಜವಾದಿ ಪಕ್ಷದ ರಚನೆ.

ಕಾಂಗ್ರೆಸ್ ಸದಸ್ಯತ್ವವನ್ನು ತೊರೆದು ಸಮಾಜವಾದಿ ಪಕ್ಷದೊಂದಿಗೆ ಸಕ್ರಿಯವಾಗಿ ತೊಡಗಿಸಿಕೊಂಡಿದ್ದು.

ಶಿವಮೊಗ್ಗದಲ್ಲಿ ಕರ್ನಾಟಕ ರಾಜ್ಯ ಸಮಾಜವಾದಿ ಪಕ್ಷದ ಪ್ರಥಮ ಸಮಾವೇಶದ ಸಂಘಟನೆ; ಅಶೋಕ ಮೆಹತಾ ಅವರಿಂದ ಸಮಾವೇಶ ಉದ್ಘಾಟನೆ.

ಹಿಂದ್‌ಕಿಸಾನ್ ಪಂಚಾಯತ್ ವತಿಯಿಂದ ತೀರ್ಥಹಳ್ಳಿಯಲ್ಲಿ ರೈತ ಸಮಾವೇಶದ ಸಂಘಟನೆ. ರಾಮನಂದನ್ ಮಿಶ್ರ ಮತ್ತು ಕಮಲಾದೇವಿ ಚಟ್ಟೋಪಾಧ್ಯಾಯ ರೈತ ಸಮಾವೇಶದಲ್ಲಿ ಭಾಗವಹಿಸಿದ್ದರು.

1949 :-

ಜುಲೈ 7 ಮತ್ತು 8 ರಂದು ದಾವಣಗೆರೆಯಲ್ಲಿ ನಡೆದ ಕರ್ನಾಟಕ ಏಕೀಕರಣ ಸಮ್ಮೇಳನದಲ್ಲಿ ಭಾಗವಹಿಸಿದ್ದು; ನೇತಾಜಿ ಸುಭಾಷ್‌ಚಂದ್ರಬೋಸರ ಅಣ್ಣ ಶರತ್‌ಚಂದ್ರ ಬೋಸರಿಂದ ಸಮ್ಮೇಳನ ಉದ್ಘಾಟನೆ. ಕರ್ನಾಟಕ ರಾಜ್ಯ ಏಕೀಕರಣ ಸಂಘಟನೆಯ ಪ್ರಚಾರ ಸಮಿತಿಗೆ ಅಧ್ಯಕ್ಷ.

1951 :-

ಏಪ್ರಿಲ್ 18 ರಂದು ಸಾಗರ ತಾಲ್ಲೂಕು ರೈತ ಸಂಘದಿಂದ ಕಾಗೋಡು ರೈತ ಸತ್ಯಾಗ್ರಹ ಆರಂಭ. ನೂರಾರು ರೈತರ ಬಂಧನ. ಅಸಹಾಯಕ ಸ್ಥಿತಿಯಲ್ಲಿದ್ದ ರೈತಸಂಘಕ್ಕೆ ಸಮಾಜವಾದಿ ಪಕ್ಷದ ಬೆಂಬಲ. ಇದರಿಂದಾಗಿ ಚಳವಳಿ ತೀವ್ರಗೊಂಡಿತು.

ಮೇ 18 ರಂದು ಸಮಾಜವಾದಿ ಪಕ್ಷದ ಜಿ. ಸದಾಶಿವರಾಯರಿಂದ ಕಾಗೋಡು ಗ್ರಾಮದಲ್ಲಿ ಸತ್ಯಾಗ್ರಹ, ಪೋಲಿಸರಿಂದ ಬಂಧನ. ಗೋಪಾಲಗೌಡರು ಪೋಲಿಸ್ ವಾರೆಂಟ್‌ನಿಂದ ತಪ್ಪಿಸಿಕೊಂಡು ಸತ್ಯಾಗ್ರಹಕ್ಕಾಗಿ–ಭೂಗತರಾಗಿದ್ದುಕೊಂಡು–ರೈತರ ಸಂಘಟನೆ ಮಾಡಿದ್ದು.

ಜೂನ್ 13 ರಂದು ಕಾಗೋಡು ಗ್ರಾಮಕ್ಕೆ ಡಾ. ರಾಮಮನೋಹರ ಲೋಹಿಯಾ ಅವರ ಭೇಟಿ; ಸತ್ಯಾಗ್ರಹದಲ್ಲಿ ಪಾಲ್ಗೊಂಡು ಪೋಲೀಸರಿಂದ ಬಂಧನ.

ಜುಲೈ 3 ರಂದು ಕಾಗೋಡು ಕಾಗೋಡು ಪಕ್ಕದ ಗ್ರಾಮವೊಂದರಲ್ಲಿ ಮಂಡಗಳಲೆಯ ಹೊಸೂರು ರಾಮನಾಯ್ಕರ ಜೊತೆಯಲ್ಲಿ ಬಂಧನ; ಸಾಗರ ಜೈಲಿಗೆ ರವಾನೆ.

ಸೆಪ್ಟೆಂಬರ್ 21 ರಂದು ಜಯಪ್ರಕಾಶ್ ನಾರಾಯಣ್‌ರವರು ಸಾಗರಕ್ಕೆ ಬಂದು ಕಾಗೋಡು ಸತ್ಯಾಗ್ರಹವನ್ನು ಬೆಂಬಲಿಸಿ ಸಾರ್ವಜನಿಕ ಭಾಷಣ ಮಾಡಿದರು.

1952 :-

ಮೈಸೂರು ವಿಧಾನಸಭೆಗೆ ಮೊದಲ ಸಾರ್ವತ್ರಿಕ ಚುನಾವಣೆ. ವಿಧಾನಸಭೆಯ 99 ಸ್ಥಾನಗಳ ಪೈಕಿ ಸಮಾಜವಾದಿ ಪಕ್ಷ 50 ಸ್ಥಾನಗಳಿಗೆ ಸ್ಪರ್ಧಿಸಿತು. ಗೋಪಾಲಗೌಡರಿಂದ ಸಾಗರ–ಹೊಸನಗರ ಚುನಾವಣೆಗೆ ಸ್ಪರ್ಧೆ. ಕಾಂಗ್ರೆಸ್‌ನ ಎ.ಆರ್. ಬದರಿನಾರಾಯಣ ಅಯ್ಯಂಗಾರರ ವಿರುದ್ಧ ಜಯಗಳಿಸಿ ವಿಧಾನಸಭೆಯ ಪ್ರವೇಶ.

ಜೂನ್ 18 : ಶಾಸನ ಸಭಾಧ್ಯಕ್ಷತೆಗೆ ಸಾಂಕೇತಿಕ ಸ್ಪರ್ಧೆ.

1954 :–

ಕರ್ನಾಟಕ ಏಕೀಕರಣಕ್ಕಾಗಿ ರಾಜ್ಯದ ಉದ್ದಗಲಕ್ಕೂ ಪ್ರವಾಸ; ಏಕೀಕರಣವನ್ನು ಪ್ರತಿಪಾದಿಸಿ ಶಾಸನ ಸಭೆಯಲ್ಲಿ ಅನೇಕ ಸಾರಿ ಭಾಷಣ.

1955 :–

ಹೈದರಾಬಾದಿನಲ್ಲಿ ನಡೆದ ಅಖಿಲ ಭಾರತ ಸಮಾಜವಾದಿ ಪಕ್ಷದ ಸಂಸ್ಥಾಪನಾ ಸಭೆಯಲ್ಲಿ ಭಾಗವಹಿಸಿದ್ದು; ಪಕ್ಷದ ರಾಷ್ಟ್ರೀಯ ಕಾರ್ಯಕಾರಿ ಸಮಿತಿಗೆ ಆಯ್ಕೆ.

1956 ;–

ನವೆಂಬರ್ 1 ರಂದು ಕರ್ನಾಟಕ ಏಕೀಕರಣ.

ಶಾಸನ ಸಭೆಯಲ್ಲಿ ರಾಜ್ಯಪಾಲರ ಇಂಗ್ಲೀಷ್ ಭಾಷಣದ ಪ್ರತಿಯನ್ನು ಹರಿದುತುಳಿದಿದ್ದು.

1957 :–

ರಾಜ್ಯ ವಿಧಾನಸಭೆಗೆ ಎರಡನೆಯ ಮಹಾಚುನಾವಣೆ. ತೀರ್ಥಹಳ್ಳಿ ಕ್ಷೇತ್ರದಿಂದ ಸ್ಪರ್ಧೆ. ಕಾಂಗ್ರೆಸ್ ಅಭ್ಯರ್ಥಿ ಎ.ಆರ್. ಬದರಿನಾರಾಯಣ ಅಯ್ಯಂಗಾರರ ವಿರುದ್ಧ ಸೋಲು.

ರಾಜ್ಯದಲ್ಲಿ ಸಮಾಜವಾದಿ ಪಕ್ಷ ಕಟ್ಟಲು ಅವಿರತ ಶ್ರಮ. ರಾಜ್ಯಾದ್ಯಂತ ಪ್ರವಾಸ.

ಸಮಾಜವಾದಿ ಪಕ್ಷದಿಂದ ಅಖಿಲ ಭಾರತ ಮಟ್ಟದಲ್ಲಿ ಹದಿನೆಂಟು ಅಂಶಗಳ ಚಳುವಳಿ ಆರಂಭ.

ಕರ್ನಾಟಕದಲ್ಲಿ ಸಮಾಜವಾದಿ ಯುವಜನ ಸಭಾ ಸ್ಥಾಪನೆ.

1958 :–

ರಾಜ್ಯಾದ್ಯಂತ ಕಾನೂನುಭಂಗ ಚಳವಳಿಯ ಸಂಘಟನೆ. ನೂರಾರು ಸತ್ಯಾಗ್ರಹಿಗಳ ಬಂಧನ.

1960 :–

ಗೋವಾ ವಿಮೋಚನಾ ಚಳವಳಿಗಾಗಿ ಸಂಘಟನೆ; ಸರ್ವಪಕ್ಷೀಯ ಚಳವಳಿಗೆ ಚಾಲನೆ ನೀಡಿ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದು.

ಸಮಾಜವಾದಿ ಪಕ್ಷದ 'ಮಾರ್ಗದರ್ಶಿ' ಪತ್ರಿಕೆ ಪ್ರಕಟಣೆ.

ಜೂನ್ 1 : ಸಮಾಜವಾದಿ ಪಕ್ಷದಿಂದ ಕಾನೂನು ಭಂಗ ಚಳವಳಿಗೆ ಚಾಲನೆ ನೀಡಿದ್ದು; ಸಾವಿರಾರು ಕಾರ್ಯಕರ್ತರ ಬಂಧನ.

ಜೂನ್ 19, ರಾಮನಗರ ತಾಲ್ಲೂಕು ಉರಗಹಳ್ಳಿ ಇನಾಂ ರೈತರ ಭೂಹಕ್ಕಿನ ಹೋರಾಟದ ಸಭೆ.

1962 :–

ರಾಜ್ಯ ವಿಧಾನಸಭೆಗೆ ಮೂರನೆಯ ಮಹಾಚುನಾವಣೆ : ತೀರ್ಥಹಳ್ಳಿ ಕ್ಷೇತ್ರದಿಂದ ವಿಧಾನಸಭೆಗೆ ಸ್ಪರ್ಧೆ; ಚುನಾವಣೆಯಲ್ಲಿ ಜಯ. ಎರಡನೇ ಬಾರಿಗೆ ವಿಧಾನಸಭೆಯ ಪ್ರವೇಶ.

ಶಿವಮೊಗ್ಗ ಜಿಲ್ಲೆಯ ಸಾಗರದಲ್ಲಿ ರಾಜ್ಯ ಸಮಾಜವಾದಿ ಪಕ್ಷದ ಸಮಾವೇಶದ ಸಂಘಟನೆ.

1964 :–

ಮಾರ್ಚ್ 2 ರಂದು ಧಾರವಾಡದ ಟ್ಯಾಗೋರ್ ಹಾಲ್‌ನಲ್ಲಿ ಹುಬ್ಬಳ್ಳಿಯ ವಕೀಲರಾದ ಡಿ.ಎಲ್. ಪಾಟೀಲರ ಮಗಳು ಸೋನಕ್ಕ ಅವರೊಡನೆ ಮದುವೆ.

1967 :–

ಮಗಳು ಇಳಾಗೀತ ಹುಟ್ಟಿದ್ದು.

ರಾಜ್ಯ ವಿಧಾನಸಭೆಗೆ ನಾಲ್ಕನೇ ಮಹಾಚುನಾವಣೆ, ತೀರ್ಥಹಳ್ಳಿ ಕ್ಷೇತ್ರದಿಂದ ಚುನಾವನೆಗೆ ಸ್ಪರ್ಧೆ; ಚುನಾವಣೆಯಲ್ಲಿ ಜಯ. ಮೂರನೇ ಭಾರಿಗೆ ವಿಧಾನಸಭೆಯ ಪ್ರವೇಶ.

ಅಕ್ಟೋಬರ್ 12 : ಡಾ. ರಾಮಮನೋಹರ ಲೋಹಿಯಾ ಅವರ ನಿಧನ; ಕೇಂದ್ರ ಪಾರ್ಲಿಮೆಂಟರಿ ಬೋರ್ಡ್‌ನ ಅಧ್ಯಕ್ಷರಾಗಿ ಆಯ್ಕೆ.

ರಾಜ್ಯದಲ್ಲಿ ಭೂ ಆಕ್ರಮಣ ಚಳವಳಿಗೆ ಚಾಲನೆ.

1968 :–

ಮಗ ರಾಮಮನೋಹರ ಹುಟ್ಟಿದ್ದು.

ಚಿಕ್ಕಮಗಳೂರಿನಲ್ಲಿ ಕೋಮುಘರ್ಷಣೆಯಿಂದಾಗಿ ಸಾವು–ನೋವು ಪರಿಸ್ಥಿತಿಯನ್ನು ಅಧ್ಯಯನ ಮಾಡಿ ಸಮಾಜವಾದಿ ಪಕ್ಷಕ್ಕೆ ವರದಿ ಸಲ್ಲಿಸಿ, ಕೋಮುವಾದಿಗಳನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಂಡದ್ದು; ಇದರಿಂದಾಗಿ ಇವರಿಗೆ ಕೋಮುವಾದಿಗಳಿಂದ ಬೆದರಿಕೆಗಳೂ ಬಂದವು.

1971 :–

ಕಾಂಗ್ರೆಸ್ ಪಕ್ಷದ ಆಂತರಿಕ ತಿಕ್ಕಾಟಗಳಿಂದ ಮುಖ್ಯಮಂತ್ರಿ ವೀರೇಂದ್ರ ಪಾಟೀಲರ ರಾಜೀನಾಮೆ. ವಿರೋಧ ಪಕ್ಷಗಳಿಂದ ಸಮ್ಮಿಶ್ರ ಸರ್ಕಾರ ರಚನೆಗೆ ತೀವ್ರ ಪ್ರಯತ್ನ. ಸಮ್ಮಿಶ್ರ ಸರ್ಕಾರದ ನಾಯಕತ್ವಕ್ಕೆ ಗೋಪಾಲಗೌಡರೇ ಅರ್ಹವ್ಯಕ್ತಿ ಎನ್ನುವ ಒಟ್ಟಾಭಿಪ್ರಾಯ. ಆದರೆ, ಅನೇಕ ಕಾರಣಗಳಿಂದ ಈ ಪ್ರಯತ್ನ ವಿಫಲ.

ನವೆಂಬರ್ 1 : ಶಿವಮೊಗ್ಗ ನಗರಸಭೆಯ ಆಶ್ರಯದಲ್ಲಿ ಏರ್ಪಡಿಸಿದ್ದ ರಾಜ್ಯೋತ್ಸವ ಸಮಾರಂಭದಲ್ಲಿ ಭಾಗವಹಿಸಿದ್ದು. ಜಾರ್ಜ್ ಫರ್ನಾಂಡಿಸ್, ಜೆ.ಎಚ್. ಪಟೇಲ್ ಮತ್ತು ಕೆ.ಜಿ. ಮಹೇಶ್ವರಪ್ಪ ಇದೇ ಸಭೆಯಲ್ಲಿ ಭಾಗವಹಿಸಿದ್ದರು; ಗೋಪಾಲಗೌಡರ ಕೊನೆಯ ಸಾರ್ವಜನಿಕ ಸಭೆ.

ನವೆಂಬರ್ 24 : ಅನಾರೋಗ್ಯದಿಂದ ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ದಾಖಲು.

1972 :–

ಜೂನ್ 9 ರಂದು ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ನಿಧನ.


ಅನುಬಂಧ – 2



ತರುಣ ಶಾಂತವೇರಿ ಗೋಪಾಲಗೌಡ



ಪತ್ನಿ ಸೋನಕ್ಕ ಹಾಗೂ ಮಕ್ಕಳು ಇಳಾಗೀತಾ,ರಾಮಮನೋಹರ ರವರೊಂದಿಗೆ



ತಾಯಿ ಶೇಷಮ್ಮ



ಗೋಪಾಲಗೌಡರು ಓದಿದ ವಿದ್ಯಾರ್ಥಿನಿಲಯ



ಗೋಪಾಲಗೌಡರು ಓದಿದ ಪ್ರಾಥಮಿಕ ಶಾಲೆ, ಆರಗ





ಗೋಪಾಲಗೌಡರು ಶಿಕ್ಷಕರಾಗಿದ್ದ ಆರಗದ ಮಾಧ್ಯಮಿಕ ಶಾಲೆ



ಲಾಲ್ ಬಹದ್ದೂರ್ ಶಾಸ್ತ್ರಿ, ಮುಲ್ಲಾ ಗೋವಿಂದರೆಡ್ಡಿ ಜೊತೆಗೆ



ಗುರು ರಾಮಮನೋಹರ ಲೋಹಿಯಾರೊಂದಿಗೆ



ರವಳಪ್ಪ, ಡಾ,ಲೋಹಿಯಾ, ಶ್ರೀಮತಿ ಪೊನ್ನಮಳ್ ಮತ್ತಿತರೊಂದಿಗೆ




ಕೆ.ಕೃಷ್ಣಗೋಪಾಲ್,ಅಣ್ಣ ದೇಶಪಾಂಡೆ,ಶಿವಣ್ಣ,ಎಸ್.ವೆಂಕಟರಾಂ,ಕೆ.ಜಿ.ಮಹೇಶ್ವರಪ್ಪ,ಜಿ.ಎನ್
ನಾಗರಾಜ್,ಡಾ.ಲೋಹಿಯಾ,ಶ್ರೀಕಂಠ ಶರ್ಮ,ಖಾದ್ರಿ ಶಾಮಣ್ಣ,ಜೆ.ಎಚ್ ಪಟೇಲ್ ಅವರುಗಳೊಂದಿಗೆ



ಕಾಗೋಡು ಸತ್ಯಾಗ್ರಹ : ಪೋಲಿಸರ ನಿರೀಕ್ಷೆಯಲ್ಲಿ



ಪೋಲಿಸರ ಚಕ್ರವ್ಯೂಹದಲ್ಲಿ ಕಾಗೋಡು ರೈತರು



ಮೈಸೂರು-ಮಹಾರಾಷ್ಟ್ರ ಗಡಿ ಸಮಸ್ಯೆ :ರಾಷ್ಟ್ರಾಧ್ಯಕ್ಷ ಗಿರಿಯವರೊಂದಿಗೆ ಚರ್ಚೆ



ಮಂಡ್ಯದ ಸಭೆ : ಎಸ್. ವೆಂಕಟರಾಮ್, ಎಸ್. ಎಮ್. ಕೃಷ್ಣರವರೊಂದಿಗೆ

ಅನುಬಂಧ – 3

ಕಾಗೋಡು ರೈತ ಹೋರಾಟದ ಒಂದು ಕರಪತ್ರ

ಕಾಗೋಡು
ರೈತ
ದಿನಾಚರಣೆ!

ರೈತರ
ಐತಿಹಾಸಿಕ
ಹೋರಾಟ!!

ಸರ್ಕಾರದ ಮೊದಲನೇ ಸೋಲು!

ರೈತರು ಭೂಮಿಯನ್ನು ಉಳುತ್ತಿದ್ದಾರೆ!!

ಜಮೀನ್ದಾರರ ದೌರ್ಜನ್ಯ ? ಸರ್ಕಾರದ ದಬ್ಬಾಳಿಕೆ ಮತ್ತು ಹಿತ ಶತೃಗಳ ಪಿತೂರಿಯ ವಿರುದ್ಧ ಕಾಗೋಡಿನಲ್ಲಿ ಸಂಸ್ಥಾನ ಸೋಷಿಯಲಿಸ್ಟ್ ಪಾರ್ಟಿ ಮತ್ತು ರೈತವರ್ಗದ ಏಕೀಕೃತ ಪ್ರಚಂಡ ಹೋರಾಟ!!

ಸಂಸ್ಥಾನ ಸೋಷಿಯಲಿಸ್ಟ್ ಪಾರ್ಟಿಯ ಪ್ರಧಾನ ಕಾರ್ಯದರ್ಶಿ ಶ್ರೀಗಳಾದ ಜಿ. ಸದಾಶಿವರಾವ್, ಚಿತ್ರದುರ್ಗದ ಜಿಲ್ಲಾ ಕಾರ್ಯದರ್ಶಿ ಕೆ. ವೀರಭದ್ರಪ್ಪ, ಎಂ. ಎ. ಎಲ್. ಎಲ್. ಬಿ.ಎಸ್. ಜಿ. ಗೋವಿಂದಪ್ಪ ಬಿ.ಎ., ಎಲ್‌ಎಲ್‌ಬಿ. ಮುನ್ಸಿಪಲ್ ಕೌನ್ಸಿಲರ್, ಶಿವಮೊಗ್ಗಾ ಸಾಗರ ತಾಲ್ಲೂಕು ರೈತ ಕಾರ್ಯದರ್ಶಿ ಹೆಚ್. ಗಣಪತಿಯಪ್ಪ. ಎಸ್. ರಾಮಯ್ಯ ಕಾರ್ಯದರ್ಶಿ ತೆರಿಗೆದಾರರ ಸಂಘ, ಪಾಟೀಲ್ ಬಿ.ಎ., ಎಲ್.ಎಲ್.ಬಿ. ಹುಚ್ಚಪ್ಪ ಮತ್ತಿತರ ೮೬ ಜನರ ಬಂಧನ.

ತಾ ೨-೬-೧೯೫೧ ನೇ ಶನಿವಾರ ಮಧ್ಯಾಹ್ನ ೩ ಘಂಟೆಗೆ
ಹೊಸನಗರದ ಗಾಂಧಿ ಮೈದಾನದಲ್ಲಿ

ಸಾಥಿ ಕೌರ್ಗಡಿ ಶೇಷಗಿರಿಯಪ್ಪನವರ

ಅಧ್ಯಕ್ಷತೆಯಲ್ಲಿ

ಸಾಥಿ ಗೋಪಾಲಗೌಡ ಶಾಂತವೇರಿ, ಸ.ಸ. ಕುಮಟ, ವೈ.ಹೆಚ್. ವಾಲದ್
ಮತ್ತಿತರ ಮುಖಂಡರು ಸಭೆಯನ್ನುದ್ದೇಶಿಸಿ ಭಾಷಣ ಮಾಡುವರು
ಸಾರ್ವಜನಿಕರು ಸಹಕರಿಸಬೇಕಾಗಿ ವಿನಂತಿ

ರೈತನ ಉಳುಮೆಯ ಹಕ್ಕಿನ ಜಯವಾಗಲಿ

ಕ್ರಾಂತಿ ಜಯವಾಗಲಿ **ಕಾಗೋಡು ರೈತರಿಗೆ ಜಯವಾಗಲಿ**

ಸಾಗರ
೧-೬-೧೯೫೧

ಜಿ.ಆರ್.ಜಿ. ನಗರ್ ಕಾರ್ಯದರ್ಶಿ
ಸೋಷಿಯಲಿಸ್ಟ್ ಪಾರ್ಟಿ ಸಾಗರ ಶಾಖೆ

ಗಜಾನನ ಪ್ರಿಂಟಿಂಗ್ ಪ್ರೆಸ್

ಅನುಬಂಧ — 4

ಶ್ರೀಮಾನ್ ಕೆ. ಎಂ. ಪುಟ್ಟಪ್ಪನವರಿಗೆ,

ತಮ್ಮ ಆದರದ ಆಹ್ವಾನ ತಲ್ಪಿತು. ನಾನು ತುಂಬಾ ಆಭಾರಿ. ಅದೇ ದಿನಾಂಕ ೧ ಮತ್ತು ೨ ಬೆಂಗಳೂರಿನಲ್ಲಿ ಕಾ. ಪ್ರಾಂತ ಸಂಯುಕ್ತ ಸೋಷಲಿಸ್ಟ್ ಘಟಕದ ಕಾರ್ಯಕಾರೀ ಸಮಿತಿಯು ಸೇರುತ್ತದೆ. ಕಾರ್ಯದರ್ಶಿಯಾಗಿರುವುದರಿಂದ ನಾನು ಅಲ್ಲಿರಲೇ ಬೇಕಾಗಿದೆ. ಶಿಷ್ಟ ಮಂಡಳಿಯಂತೂ ಶೀಘ್ರ ದೊರಕಲಿ ಬಾರದು. ಆದ್ದರಿಂದ ದಯವಿಟ್ಟು ಕ್ಷಮಿಸಿ.

ತಮ್ಮ ಆದರ್ಶ ಮುಂದಾಳ್ತನದಲ್ಲಿ ಕೆಲಸಕ್ಕೆ ಶಿಷ್ಟ ಮಂಡಳಿಯು ಜಯಪ್ರದವಾಗಿ ಮಾಡಲಿ; ಮೈಸೂರಿನ ಸಂಸ್ಥಾನದ ಮಹಾರಾಜರಿಲ್ಲದ ಪ್ರಜಾಸತ್ತಾತ್ಮಕ ಪ್ರಾಂತ ನಿರ್ಮಾಣವಾಗಿ ಎಲ್ಲರೂ ಕೂಡಿ ಕನ್ನಡ ನಾಡಾಗಲಿ ಎಂದು ಹಾರೈಸಿ, ಶಿಷ್ಟ ಮಂಡಳಿಗೆ ಪೂರ್ಣ ಯಶಸ್ಸನ್ನು ಕೋರುತ್ತೇನೆ. ಹೋಗಿ ಬನ್ನಿ. ಕನ್ನಡತ್ವ ಕೈಲಾಸವ ತನ್ನಿ.


ಇತಿ ತಮ್ಮವ,

ಗೋಪಾಲಗೌಡ, ಶಾಂತವೇರಿ

೨೮-೮-೪೯
ಶಿವಮೊಗ್ಗ

ಅನುಬಂಧ — 5

MAP OF TIRTHAHALLI TALUK



ಅನುಬಂಧ – 6

ಆಕರ ಗ್ರಂಥಗಳು

ಡಾ. ತೀ.ನಂ. ಶಂಕರನಾರಾಯಣ,	2004 ಜನಪದ ನಡೆ–ನುಡಿ, ಕನ್ನಡ ಭಾರತಿ.
	ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ, ಶಿವಮೊಗ್ಗ.
ಡಾ. ಸಣ್ಣರಾಮ (ಪ್ರ.ಸಂ),	2008 ಕನ್ನಡ ಭಾರತಿ ಹಳೆ ವಿದ್ಯಾರ್ಥಿಗಳ ಸಂಘ(ರಿ)
ಡಾ. ಡಿ.ಜಿ ರಮೇಶ್,	ಮತ್ತು ಅಭಿಮಾನಿ ಬಳಗ, ಶಂಕರಘಟ್ಟ, ಶಿವಮೊಗ್ಗ.
ಡಾ. ಕೆ. ಅಂಜನಪ್ಪ,	
ಡಾ. ಸಿ. ಶಿವಲಿಂಗಪ್ಪ (ಸಂ),	
ಡಾ. ಎಸ್.ಸಿ. ವಿಷ್ಣುಮೂರ್ತಿ (ಸಂ),	1999, ಗೋಪಾಲಗೌಡ ಶಾಂತವೇರಿ ಅಂತರಂಗ–ಬಹಿರಂಗ.
ಕೋಣಂದೂರು ಲಿಂಗಪ್ಪ (ಸಂ),	1971, ಶಾಸನ ಸಭೆಯಲ್ಲಿ ಶಾಂತವೇರಿ ಸಮಾಜವಾದಿ
	ಯುವಜನ ಸಭಾ, ಕರ್ನಾಟಕ ಶಾಖೆ, ಮೈಸೂರು.
ದೇವಂಗಿ ಟಿ. ಚಂದ್ರಶೇಖರ,	1979, ಶಾಂತವೇರಿ ಗೋಪಾಲಗೌಡರು,
	ಐ.ಬಿ.ಹೆಚ್ ಪ್ರಕಾಶನ ಬೆಂಗಳೂರು.
ಕೋಣಂದೂರು ವೆಂಕಪ್ಪಗೌಡ (ಸಂ),	1981, ಜೀವಂತ ಜ್ವಾಲೆ; ಶಾಂತವೇರಿ ಗೋಪಾಲಗೌಡ
	ಸ್ಮಾರಕ ಗ್ರಂಥ, ಯಶಸ್ವಿ ಪ್ರಕಾಶನ, ಬೆಂಗಳೂರು.
ಎಚ್.ಸಿ. ವಿಷ್ಣುಮೂರ್ತಿ,	1982 ಗೋಪಾಲಗೌಡ ಶಾಂತವೇರಿ; ನೆನಪುಗಳು
	ಅನನ್ಯ ಪ್ರಕಾಶನ, ಮೈಸೂರು.
ಎಚ್.ಸಿ. ವಿಷ್ಣುಮೂರ್ತಿ (ಸಂ),	1982 ಗೋಪಾಲಗೌಡರ ಡೈರಿ, ಪತ್ರಗಳು ಇತ್ಯಾದಿ.
	ಭಾಗ 1, ಅನನ್ಯ ಪ್ರಕಾಶನ, ಮೈಸೂರು.
ಡಾ. ಕಾಳೇಗೌಡ ನಾಗವಾರ,	ಶಾಂತವೇರಿ ಗೋಪಾಲಗೌಡ ನೆನಪಿನ ಸಂಪುಟ,
ಜಿ.ವಿ. ಆನಂದಮೂರ್ತಿ (ಸಂ),	ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.